ವಿಶ್ವವಾಣಿ
ವಿಶ್ವಾಸವೇ ವಿಶ್ವ

ತಾಯಿಯಾಗಲಿದ್ದಾರೆ ಭಾವನಾ !

ಕನ್ನಡ ಚಿತ್ರರಂಗದ ಖ್ಯಾತ ನಟಿ ಭಾವನಾ ಐವಿಎಫ್ ಮೂಲಕ ತಾಯಿಯಾಗಲು ನಿರ್ಧರಿಸಿದ್ದಾರೆ. ''ಈಗ ನನಗೆ 40 ವರ್ಷ. ನಾನು ಅವಳಿ ಮಕ್ಕಳೊಂದಿಗೆ ಆರು ತಿಂಗಳ ಗರ್ಭಿಣಿಯಾಗಿದ್ದೇನೆ. ನನ್ನ ಒಡಹುಟ್ಟಿದವರು ಪ್ರೀತಿ ಮತ್ತು ಹೆಮ್ಮೆಯಿಂದ ನನ್ನ ಬೆಂಬಲಕ್ಕೆ ನಿಂತಿದ್ದಾರೆ. ಕಲೆ, ಸಂಗೀತ, ಸಂಪ್ರದಾಯ ಮತ್ತು ಅಂತ್ಯವಿಲ್ಲದ ಪ್ರೀತಿಯಿಂದ ತುಂಬಿದ ಮನೆಗೆ ಎರಡು ಪುಟ್ಟ ಜೀವಗಳನ್ನು ಸ್ವಾಗತಿಸಲು ನಾನು ತಯಾರಿ ನಡೆಸುತ್ತಿದ್ದೇನೆ'' ಎಂದು ಅವಿವಾಹಿತೆಯಾಗಿರುವ ಭಾವನಾ ಎಕ್ಸ್ ಪೋಸ್ಟ್ ಹಂಚಿಕೊಂಡಿದ್ದಾರೆ.

ಸೊಂಪಾದ ಪುಟಗಳು

ಯುದ್ಧ ಭೂಮಿಯಲ್ಲಿ ಮೋದಿಯವರ ತಾಕತ್!
ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ 6

ವೈದ್ಯನು ನಾರಾಯಣ ಆಗುವ ಬಗೆ ಹೇಗೆ?
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ 7

ದಾರಿದೀಪೋಕ್ತಿ



ನೀವು ಯಾವ ವೇಗದಲ್ಲಿ ಹೋಗುತ್ತೀರಿ ಎನ್ನುವುದಕ್ಕಿಂತ ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೀರಿ ಎಂಬುದು ಮುಖ್ಯ. ಸಾಗುತ್ತಿರುವುದು ಸರಿಯಾದ ಹಾದಿ ಎಂದು ಖಚಿತವಾದ ಬಳಿಕ ವೇಗವನ್ನು ಹೆಚ್ಚಿಸಿಕೊಳ್ಳಬಹುದು.

ವಕ್ರತುಂಡೋಕ್ತಿ

ಗ್ರಾಹಕ ಗೂಬೆ ಅಲ್ಲ, ನಿಮ್ಮ ಪತ್ನಿಯೂ ಆಗಿರಬಹುದು.

ಹೈಕಮಾಂಡ್‌ಗೆ ದೂರು, ಶಾಸಕರ ಜತೆ ಸುರ್ಜೇವಾಲಾ ಸಭೆ ಮೊಟಕು

ಉಸ್ತುವಾರಿ ಸಭೆಗೆ ಆಕ್ಷೇಪ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಶಾಸಕರೊಂದಿಗೆ ರಾಜ್ಯ ಉಸ್ತುವಾರಿಯ ಪ್ರತ್ಯೇಕ ಸಭೆಗೆ ಪಕ್ಷದಲ್ಲಿಯೇ ತೀವ್ರ ಅಸಮಾಧಾನ ವ್ಯಕ್ತವಾದ ಬೆನ್ನಲ್ಲೇ ಇನ್ನು ಮುಂದೆ ಈರೀತಿಯ ಸಭೆಗಳನ್ನು ನಡೆಸದಿರಲು ತೀರ್ಮಾನಿಸಲಾಗಿದೆ.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕಳೆದ ವಾರ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಮೂರು ದಿನಗಳ ಕಾಲ ಹಳೇ ಮೈಸೂರು ಭಾಗದ ಅಸಮಾಧಾನಿತ ಶಾಸಕರೊಂದಿಗೆ ಸಭೆ ನಡೆಸಿದ್ದರು. ಆರಂಭದಲ್ಲಿ ಈ ಸಭೆಯಿಂದ ಪಕ್ಷ ಸಂಘಟನೆಗೆ ಲಾಭವಾಗಲಿದೆ ಎಂದೇ ಹೇಳಿದ್ದ ಅನೇಕರು, ಮೂರು ದಿನ ಕಳೆಯುವಲ್ಲಿ ಈ ಸಭೆಗಳು ಪಕ್ಷದಲ್ಲಿರುವ ಸಮಸ್ಯೆ ಬಗೆಹರಿಸುವುದಕ್ಕಿಂತ ಹೆಚ್ಚಿಸುತ್ತವೆ ಎನ್ನುವ ಅಸಮಾಧಾನವನ್ನು ಹೊರಹಾಕಿದ್ದಾರೆ.

ಸುರ್ಜೇವಾಲ ಅವರನ್ನು ಭೇಟಿಯಾಗಿರುವ ಬಹುತೇಕ ಶಾಸಕರು ಒಂದಿಲ್ಲೊಂದು ಸಚಿವರ ವಿರುದ್ಧ 'ದೂರು' ಸಲ್ಲಿಸಿದ್ದಾರೆ. ಉಸ್ತುವಾರಿ ಈ ದೂರುಗಳನ್ನು ಸ್ವೀಕರಿಸಿ, ಶಾಸಕರ ಬೇಡಿಕೆಗೆ ಸ್ಪಂದಿಸಲು ಸಚಿವರಿಗೆ ಸೂಚನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದ್ದಾರೆ. ಆದರೆ ಶಾಸಕರ ಎಲ್ಲ ಬೇಡಿಕೆಗಳು ಈಡೇರಿಸುವುದು ಕಷ್ಟದ ಕೆಲಸವಾಗಿರುವುದರಿಂದ, ಸುರ್ಜೇವಾಲ ಅವರ ಈ ಎಚ್ಚರಿಕೆಗೆ ಸಚಿವರು ಅಸಮಾಧಾನ ಹೊರಹಾಕಿದ್ದಾರೆ. ಇದರಿಂದಾಗಿ ಪಕ್ಷದಲ್ಲಿ ಈಗಾಗಲೇ ಇರುವ ಗೊಂದಲಗಳು ಮತ್ತಷ್ಟು ಹೆಚ್ಚಾಗಿವೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಗೊಂದಲ ನಿವಾರಣೆ ಕೆಲಸ ಮಾಡಬೇಕಿದ್ದ ಸುರ್ಜೇವಾಲ ಅವರು, ಗೊಂದಲಗಳನ್ನು ಹೆಚ್ಚಿಸುವುದಕ್ಕೆ ರಾಜ್ಯಕ್ಕೆ ಆಗಮಿಸಿದಂತಿದೆ. ಇದರಿಂದ ಈವರೆಗೆ ಪಕ್ಷದಲ್ಲಿರುವ 'ಅಸಮಾಧಾನ' ಮತ್ತಷ್ಟು ಸ್ಫೋಟವಾಗುವ ಸಾಧ್ಯತೆಯಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ಎರಡನೇ ಸಭೆಯನ್ನು ನಡೆಸಬಾರದು ಎನ್ನುವ ಸ್ಪಷ್ಟ ಆಗ್ರಹವನ್ನು ಹಲವು ಹಿರಿಯ ಸಚಿವರು ಮಾಡಿದ್ದಾರೆ. ಇದೇ ವಿಷಯವನ್ನು ಹೈಕಮಾಂಡ್ ಗಮನಕ್ಕೂ ತಂದಿದ್ದಾರೆ. ಈ ಒತ್ತಡದ ಬೆನ್ನಲ್ಲೇ ಎರಡನೇ ಹಂತದ ಸಭೆಯನ್ನು ಸುರ್ಜೇವಾಲ ಅವರು ಕೈಬಿಟ್ಟು ದೆಹಲಿಗೆ ತೆರಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಭೆ ಕೈಬಿಟ್ಟ ಸುರ್ಜೇವಾಲ: ಮೊದಲ ಹಂತದಲ್ಲಿ 40 ಶಾಸಕರ ಸಭೆಯ ಬಳಿಕ ಸುರ್ಜೇವಾಲಾ 2ನೇ ಹಂತದಲ್ಲಿಯೂ ಸಭೆ ನಡೆಸಲು ಮುಂದಾಗುತ್ತಿದ್ದಂತೆ ಹಲವು ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಎಲ್ಲವೂ ಸರಿಯಿರುವಾಗ ಈ ರೀತಿ ಸಭೆ ನಡೆಸಿ ಗೊಂದಲ ಸೃಷ್ಟಿಸುವುದು ಸರಿಯಲ್ಲ. ಹಿರಿಯ ಶಾಸಕರು, ನಾಯಕರು ಪಕ್ಷದಲ್ಲಿರುವ ಸಮಯದಲ್ಲಿ ಈ ರೀತಿಯ ಸಣ್ಣಪುಟ್ಟ ಮನಸ್ತಾಪ, ಗೊಂದಲಗಳು ಸಾಮಾನ್ಯ. ಅದನ್ನು ರಾಜ್ಯ ನಾಯಕತ್ವದ ಮೂಲಕವೇ ಸರಿಪಡಿಸುವ ಕೆಲಸ ಮಾಡಬೇಕೇ ಹೊರತು, ಉಸ್ತುವಾರಿಗಳು ಕೂತು ಸಭೆ ನಡೆಸಬಾರದು. ಈ ರೀತಿ ಸಭೆ ನಡೆಸಿದರೆ, ಭವಿಷ್ಯದಲ್ಲಿ ಎಲ್ಲವನ್ನೂ ದೆಹಲಿಯಿಂದಲೇ ನಿಭಾಯಿಸಬೇಕಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೆಲ ನಾಯಕರು ನೀಡಿದ್ದಾರೆ.

ಇದರೊಂದಿಗೆ ಶಾಸಕರೊಂದಿಗೆ ಪ್ರತ್ಯೇಕ ಸಭೆ ನಡೆಸಿರುವ ಸುರ್ಜೇವಾಲ ಅವರ ಬಳಿ ಬಹುತೇಕ ಶಾಸಕರು ಸಚಿವ ಸ್ಥಾನಕ್ಕೆ ಬೇಡಿಕೆ ಸಲ್ಲಿಸಿದ್ದಾರೆ. ಕೇಳಿದ ಎಲ್ಲರಿಗೂ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ. ಒಂದು ವೇಳೆ ಅವರಿಗೆ ನೀಡಿದರೆ, ಮತ್ತೊಂದು ಗುಂಪು ವಿರೋಧಿಸುತ್ತದೆ. ಆದ್ದರಿಂದ ಈ ರೀತಿಯ ಸಭೆಯ ಅಗತ್ಯವಿಲ್ಲ. ಇದರೊಂದಿಗೆ ಶಾಸಕರು ಸಲ್ಲಿಸುವ ಎಲ್ಲ ಬೇಡಿಕೆಗಳನ್ನು ಸಲ್ಲಿಸಲು ಯಾವುದೇ ಒಂದು ಸರಕಾರದಿಂದ ಸಾಧ್ಯವಿಲ್ಲ ಎಂದು ಮನದಟ್ಟು ಮಾಡಿಕೊಡಲಾಗಿದೆ.

ಕೆ.ಸಿ.ವೇಣುಗೋಪಾಲ್‌ಗೆ ದೂರು

ಹಳೇ ಮೈಸೂರು ಭಾಗದ ಶಾಸಕರ ಸಭೆಯ ಬೆನ್ನಲ್ಲೇ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಮಧ್ಯ ಕರ್ನಾಟಕ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಲು ಸಿದ್ಧತೆ ಆರಂಭಿಸಿದ್ದರು. ಇದನ್ನು ಹಲವು ನಾಯಕರು ವಿರೋಧಿಸಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರಿಗೆ ದೂರು ಸಲ್ಲಿಸಿದ್ದರು. ಸುರ್ಜೇವಾಲ ಅವರು ಈ ರೀತಿ ಪದೇಪದೆ ಪ್ರತ್ಯೇಕ ಸಭೆಗಳನ್ನು ನಡೆಸಿದರೆ ಪಕ್ಷ ಸಂಘಟನೆಗೆ ತೀವ್ರ ಸಮಸ್ಯೆಯಾಗುತ್ತದೆ ಎಂದು ಆರೋಪಿಸಿದ್ದಾರೆ ಎಂದು ಖಚಿತ ಮೂಲಗಳು ತಿಳಿಸಿವೆ.

ಪ್ರತ್ಯೇಕ ಸಭೆಗೆ ವಿರೋಧವೇಕೆ?

- ಉಸ್ತುವಾರಿ ಪ್ರತ್ಯೇಕ ಸಭೆ ನಡೆಸಿದರೆ ಸರಕಾರದ ವಿರುದ್ಧ ತಪ್ಪು ಸಂದೇಶ
- ಶಾಸಕರ ಜತೆ ಪ್ರತ್ಯೇಕ ಸಭೆ ನಡೆದಾಗ ಅಸಮಾಧಾನ ಪ್ರದರ್ಶನ ಸಹಜ
- ಎಲ್ಲರಿಗೂ ದೂರು ನೀಡಲು ಅವಕಾಶವಿತ್ತರೆ ಪಕ್ಷದ ಒಗ್ಗಟ್ಟಿಗೆ ಧಕ್ಕೆ
- ಸಿಎಂ, ಡಿಸಿಎಂ ನಡೆಸಬೇಕಾದ ಸಭೆ ಉಸ್ತುವಾರಿ ನಡೆಸುವುದು ಸರಿಯಲ್ಲ.
- ಹೈಕಮಾಂಡ್‌ಗೆ ದೂರು ನೀಡುವ ಸಂಪ್ರದಾಯಕ್ಕೆ ನಾಂದಿ ಆರೋಪ

ಜುಲೈ 8ರವರೆಗೆ ಬಂಧಿಸದಂತೆ ಹೈಕೋರ್ಟ್ ಆದೇಶ

ರವಿಗೆ ಹೈ ರಿಲೀಫ್

ಬೆಂಗಳೂರು: ಸರಕಾರ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ವಿರುದ್ಧ ಆಕ್ಷೇಪಾರ್ಹ ಪದ ಬಳಿಕೆ ಆರೋಪ ಪ್ರಕರಣಕ್ಕೆ ಸಂಬಂಧ ಬಿಜೆಪಿ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್‌ಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ.

ಎಫ್ಐಆರ್ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ಹೈಕೋರ್ಟ್, ಜುಲೈ 8ರ ವರೆಗೆ ಬಲವಂತದ ಕ್ರಮ ಕೈಗೊಳ್ಳದಂತೆ ಮಧ್ಯಂತರ ಆದೇಶ ಹೊರಡಿಸಿದೆ. ಅಲ್ಲದೇ ತನಿಖೆಗೆ ಸಹಕರಿಸಲು ರವಿಕುಮಾರ್‌ಗೆ ಕೋರ್ಟ್ ಖಡಕ್ ಸೂಚನೆ ನೀಡಿದೆ. ಇದೇ ವೇಳೆ ರಾಜಕಾರಣಿಗಳು ಬಳಸುವ ಭಾಷೆ ಕೆಳಮಟ್ಟಕ್ಕಿಳಿದಿದೆ ಎಂದು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರ ಏಕಸದಸ್ಯ ಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ಮತ್ತೊಂದೆಡೆ ರವಿಕುಮಾರ್ ಅವರಿಗೆ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ನೀಡಿದೆ. ಪ್ರಕರಣ ಸಂಬಂಧ ರವಿಕುಮಾರ್ ಅವರು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನಲ್ಲಿ ನಿರೀಕ್ಷಣಾ ಜಾಮೀನು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ಕೋರ್ಟ್, ರವಿಕುಮಾರ್‌ಗೆ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಜೂನ್ 8ರ ವರೆಗೆ ಬಂಧಿಸದಂತೆ ಆದೇಶ ನೀಡಿರುವ ಕೋರ್ಟ್ ತನಿಖೆಗೆ ಸಹಕರಿಸುವಂತೆ ರವಿಕುಮಾರ್‌ಗೆ ಅವರಿಗೆ ಸೂಚನೆ ನೀಡಿದೆ.

ವಾದ-ಪ್ರತಿವಾದ ಹೇಗಿತ್ತು?: ರವಿಕುಮಾರ್ ಪರವಾಗಿ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಂಡಿಸಿದ್ದು, ವಿಧಾನಸೌಧದ ಮುಂದೆ ಎನ್.ರವಿಕುಮಾರ್ ಪ್ರತಿಭಟನೆ ನಡೆಸುತ್ತಿದ್ದರು. ಆ ವೇಳೆ ಮುಖ್ಯಮಂತ್ರಿಗಳು, ಸರಕಾರ ಸ್ಪಂದಿಸುತ್ತಿಲ್ಲವೆಂಬ ಅರ್ಥದಲ್ಲಿ ಹೇಳಿಕೆ ನೀಡಿದ್ದಾರೆ. ಆದರೆ, ಇದಕ್ಕೆ ರಾಜಕೀಯ ಪ್ರೇರಿತವಾಗಿ ಆರೋಪ ಹೊರಿಸಲಾಗಿದೆ ಎಂದು ಕೋರ್ಟ್‌ಗೆ ತಿಳಿಸಿದರು. ವಿಡಿಯೋ ಕ್ಲಿಪ್‌ನಲ್ಲಿ ಏನಿದೆ ಎಂದು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಪ್ರಶ್ನೆಗೆ ಅರುಣ್ ಶ್ಯಾಮ್ ವಿಡಿಯೋ ಕ್ಲಿಪ್ ಹಾಕಿ ತೋರಿಸಿ ದರು. ಆದರೆ, ಇದಕ್ಕೆ ಎಸ್‌ಪಿಪಿ ಬಿ.ಎ.ಬೆಳ್ಳಿಯಪ್ಪ ಆಕ್ಷೇಪಿಸಿದ್ದು, ಅರ್ಜಿದಾರರು ಸಲ್ಲಿಸಿದ ವಿಡಿಯೋ ಕ್ಲಿಪ್ ಪರಿಗಣಿಸಬಾರದು ಎಂದರು.

ಸ್ವಪಕ್ಷದಲ್ಲೇ ಅಪಸ್ವರ

ರವಿಕುಮಾರ್ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಿದ್ದರೂ, ಬಿಜೆಪಿ ನಾಯಕರೇ ರವಿಕುಮಾರ್ 'ಪದ' ಪ್ರಯೋಗಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಸದಾನಂದ ಗೌಡ ಅವರು, ಜವಾಬ್ದಾರಿಯುತ ಸ್ಥಾನದಲಿರುವ ರವಿಕುಮಾರ್ ಹೇಳಿಕೆ ನೀಡುವಾಗ ಎಚ್ಚರಿಕೆವಹಿಸಬೇಕು ಎಂದಿದ್ದರೆ, ಬಿಜೆಪಿ ಶಾಸಕ ಸುರೇಶ್ ಗೌಡ, ರವಿಕುಮಾರ್ ಮಾತನಾಡಿದ್ದು ಸರಿಯಲ್ಲ. ಕೋಪದಲ್ಲಿ ಮಾತನಾಡಿ ಗೊಂದಲ ಮಾಡಿಕೊಳ್ಳಬಾರದು. ರವಿಕುಮಾರ್ ಮಾತನಾಡಿದರೆ ಅವರೇ ಸ್ಪಷ್ಟನೆ ಕೊಡಬೇಕು ಎಂದು ಹೇಳಿದರು.

ಬಾಗಲಕೋಟೆ, ದಾವಣಗೆರೆ ಜಿಲ್ಲಾ ಘಟಕಗಳ ಸಮಸ್ಯೆ ಇತ್ಯರ್ಥಕ್ಕೆ ಸಭೆ

ಬಣ ಬಡಿದಾಟಕ್ಕೆ ಪ್ರಲ್ಹಾದ್ ಜೋಶಿ ಮದ್ದು

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿನ ಗುಂಪುಗಾರಿಕೆ, ಭಿನ್ನಮತ ಸದ್ಯಕ್ಕೆ ಸರಿಯಾಗುವ ಲಕ್ಷಣ ಕಾಣುತ್ತಿಲ್ಲ. ರಾಜ್ಯಾಧ್ಯಕ್ಷರ ಹುದ್ದೆ ಸಂಬಂಧಿತ ಅಸಮಾಧಾನ ಸರಿಯಾಗುತ್ತಿದೆ ಎನ್ನುವ ಹೊತ್ತಿನಲ್ಲಿಯೇ ಜಿಲ್ಲಾ ಮಟ್ಟದ ಒಳಜಗಳ ತಾರಕ್ಕೇರಿದ್ದು, ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಿದರು.

ಬಿಜೆಪಿಯ ಬಾಗಲಕೋಟೆ ಮತ್ತು ದಾವಣಗೆರೆ ಜಿಲ್ಲಾ ಘಟಕಗಳ ಸಮಸ್ಯೆ ಪರಿಹಾರ ಸಂಬಂಧ ಸ್ಥಳೀಯ ಮುಖಂಡರ ಜತೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಮಾಜಿ ಸಚಿವ ಸಿ.ಟಿ. ರವಿ ಸೇರಿದಂತೆ ಮುಖಂಡರುಗಳು ಜಿಲ್ಲಾ ಬಿಜೆಪಿ ಮುಖಂಡರುಗಳ ಜತೆ ಚರ್ಚೆ ನಡೆಸಿ ಭಿನ್ನಮತ ಶಮನಕ್ಕೆ ಪ್ರಯತ್ನ ನಡೆಸಿದರೂ, ಯಾವುದೇ ಫಲ ನೀಡಲ್ಲ ಎನ್ನಲಾಗಿದೆ.

ಬಾಗಲಕೋಟೆಯಲ್ಲಿ ಮಾಜಿ ಶಾಸಕ ವೀರಣ್ಣ ಚರಂತಿಮಠ ಮತ್ತು ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ್ ಬಣಗಳು ಸೃಷ್ಟಿಯಾಗಿದ್ದು, ಇವರಿಬ್ಬರ ನಡುವಿನ ಜಟಾಪಟಿ ಸರಿಪಡಿಸಲು ಸಭೆ ನಡೆಸಲಾಗಿದೆ.

→ 4

ಕೇಂದ್ರದ ಸಚಿವರು, ಹಿರಿಯರಾದ ಜೋಶಿ ಅವರು ನಮ್ಮ ಪಕ್ಷದೊಳಗೆ ಕೆಲವು ಜಿಲ್ಲೆಗಳಲ್ಲಿ ಇದ್ದ ಆಂತರಿಕ ಸಮಸ್ಯೆ ಪರಿಹರಿಸು ತ್ತಿದ್ದಾರೆ. ಸಣ್ಣಪುಟ್ಟ ಸಮಸ್ಯೆ ಪರಿಹರಿಸುವಂತೆ ನಾನೇ ಮನವಿ ಮಾಡಿದ್ದೆ. ಅದರಂತೆ ಸಮಯ ಕೊಟ್ಟು ಸಮಸ್ಯೆ ತಿಳಿಗೊಳಿಸುವ ಕೆಲಸ ಮಾಡುತ್ತಿದ್ದಾರೆ.
-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಜಾರಿ ನಿರ್ದೇಶನಾಲಯದಿಂದ 34.12 ಕೋಟಿ ರು. ಮೌಲ್ಯದ ಆಸ್ತಿ ಜಪ್ತಿ

ನಟಿ ರನ್ಯಾ ರಾವ್ ಆಸ್ತಿ ಮುಟ್ಟುಗೋಲು

ಬೆಂಗಳೂರು: ದುಬೈನಿಂದ ಚಿನ್ನಕಳ್ಳ ಸಾಗಣೆ ಪ್ರಕರಣದಲ್ಲಿ ಬಂಧಿತರಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟಿ ರನ್ಯಾರಾವ್ ಅವರಿಗೆ ಸೇರಿದ 34.12 ಕೋಟಿ ರು. ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ ಜಪ್ತಿ ಮಾಡಿದೆ.

ಹಣ ಅಕ್ರಮ ಅರ್ಗಾವಣೆ ಪ್ರಕರಣದಡಿ ಬಂಧಿತರಾಗಿರುವ ರನ್ಯಾಗೆ ಸೇರಿದ ಬೆಂಗಳೂರಿನ ವಿಕ್ಟೋರಿಯಾ ಲೇಔಟ್‌ನಲ್ಲಿ ಮನೆ, ಅರ್ಕಾವತಿ ಬಡಾವಣೆಯಲ್ಲಿ ನಿವೇಶನ, ತುಮಕೂರಿನಲ್ಲಿ ಕೈಗಾರಿಕಾ ನಿವೇಶನ, ಆನೇಕಲ್ ತಾಲೂಕಿನಲ್ಲಿ ಕೃಷಿ ಜಮೀನನ್ನು ಜಪ್ತಿ ಮಾಡ ಲಾಗಿದೆ. ಚಿನ್ನ ಕಳ್ಳ ಸಾಗಣೆಗೆ ಸಂಬಂಧಿಸಿದಂತೆ ದಾಖಲಾಗಿರುವ ದೂರಿನಡಿ ಸಿಬಿಐ ಮತ್ತು ರೆವೆನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಒಪ್ಪಿಗೆ ಮೇರೆಗೆ ಜಾರಿ ನಿರ್ದೇಶನಾಲಯವು ಪ್ರಕರಣ ದಾಖಲಿಸಿಕೊಂಡಿದೆ.

ರನ್ಯಾರಾವ್ ಅವರನ್ನು ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಾರ್ಚ್ 3 ರಂದು ದುಬೈನಿಂದ ಹಿಂದಿರುಗುವಾಗ ಬಂಧಿಸಲಾಗಿತ್ತು. ಕಸ್ಟಮ್ಸ್ ಅಧಿಕಾರಿಗಳು ಇವರನ್ನು ತಪಾಸಣೆ ನಡೆಸಿದಾಗ 12.56 ಕೋಟಿ ರು. ಮೌಲ್ಯದ 14.2 ಕೆ.ಜಿ.ಚಿನ್ನ ವಶಕ್ಕೆ ಪಡೆಯಲಾಗಿತ್ತು. ಚಿನ್ನ ಸಾಗಣೆ ಹಾಗೂ ಮಾರಾಟಕ್ಕೆ ನೆರವು ನೀಡಿದ್ದ ಆರೋಪದ ಮೇರೆಗೆ ರಾಜು ಹಾಗೂ ಸಾಹಿಲ್ ಜೈನ್ ಅವರನ್ನು ಬಂಧಿಸಲಾಗಿತ್ತು. ಸದ್ಯ ಮೂವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಪ್ರವೀಣ್ ನೆಟ್ಟಾರು ಹತ್ಯೆ: ಆರೋಪಿ ಸೆರೆ

ಮಡಿಕೇರಿ: ಪ್ರವೀಣ್ ನೆಟ್ಟಾರು ಹತ್ಯೆ ಆರೋಪಿಗಳಿಗೆ ಆಶ್ರಯ ಕೊಟ್ಟಿದ್ದ ಕೊಡಗಿನ ಸೋಮವಾರಪೇಟೆ ತಾಲೂಕಿನ ಅಬ್ದುಲ್ ರೆಹಮಾನ್ ಕಲ್ಕಂದೂರು ಎಂಬಾತನನ್ನು ಕೇರಳ ವಿಮಾನ ನಿಲ್ದಾಣದಲ್ಲಿ ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ. ತಲೆ ಮರೆಸಿಕೊಂಡಿದ್ದ ಕೊಡಗಿನ ಆರೋಪಿ ಅಬ್ದುಲ್ ರೆಹಮಾನ್ ಎಂಬಾತನು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಬೆಳ್ಳಾರೆಯಲ್ಲಿ ನಡೆದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಪ್ರಮುಖ ಆರೋಪಿಗಳಿಗೆ ಆಶ್ರಯ ನೀಡಿದ್ದ. ಪ್ರವೀಣ್ ನೆಟ್ಟಾರು ಹತ್ಯೆ ಬಳಿಕ ವಿದೇಶಕ್ಕೆ ತೆರಳಿ ಕತಾರ್‌ನ ದೋಹಾದಲ್ಲಿ ಈತ ತಲೆಮರೆಸಿಕೊಂಡಿದ್ದ. ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಪರಾರಿಯಾಗಿ ತಲೆಮರೆಸಿಕೊಂಡಿದ್ದ ಎಲ್ಲಾ ಆರೋಪಿಗಳಿಗಾಗಿ ಲುಕ್‌ಔಟ್ ನೋಟಿಸ್ ಕೂಡ ಜಾರಿ ಮಾಡಲಾಗಿತ್ತು. ಅಬ್ದುಲ್ ರೆಹಮಾನ್ ನಿಷೇಧಿತ ಪಿಎಫ್‌ಐ ಸಂಘಟನೆಯ ಕಾರ್ಯದರ್ಶಿಯಾಗಿದ್ದ. ರೆಹಮಾನನ್ನು ವಶಕ್ಕೆ ಪಡೆದಿರುವ ಎನ್ ಐ ಎ ಅಧಿಕಾರಿಗಳು ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ತನಿಖೆಗಾಗಿ ಮತ್ತೆ ತಮ್ಮ ವಶಕ್ಕೆ ಪಡೆದುಕೊಂಡಿದ್ದಾರೆ.

ವಿಜಯ್ ಟಿವಿಕೆ ಪಕ್ಷದ ಸಿಎಂ ಅಭ್ಯರ್ಥಿ

ಚೆನ್ನೈ: ತಮಿಳುನಾಡು ವಿಧಾನಸಭೆ ಚುನಾವಣೆಗೆ ಭರ್ಜರಿ ತಯಾರಿ ಶುರುವಾಗಿದ್ದು, ನಟ-ರಾಜಕಾರಣಿ ದಳಪತಿ ವಿಜಯ್ ಅವರನ್ನು ತಮಿಳಗ ವೆಟ್ರಿ ಕಳಗಂ ಪಕ್ಷದ ಅಧಿಕೃತ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸಲಾಗಿದೆ. ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಕುರಿತು ನಿರ್ಣಯ ಅಂಗೀಕರಿಸಿದ್ದು, ಡಿಎಂಕೆ ಇಲ್ಲವೇ ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ತಿಳಿಸಲಾಗಿದೆ.

4 ಹುಲಿ ಸಾವು: ಡಿಸಿಎಫ್ ಸೇರಿ 3 ಅಧಿಕಾರಿಗಳ ಅಮಾನತಿಗೆ ಆದೇಶ

ಮೂವರ ತಲೆದಂಡ

ಬೆಂಗಳೂರು: ಮಲೆ ಮಹದೇಶ್ವರ ಬೆಟ್ಟದಲ್ಲಿ ಐದು ಹುಲಿಗಳ ಅಸಹಜ ಸಾವಿನ ಪ್ರಕರಣದಲ್ಲಿ ಕರ್ತವ್ಯ ಲೋಪ ಮತ್ತು ನಿರ್ಲಕ್ಷ್ಯ ತೋರಿದ ಡಿಸಿಎಫ್ ಚಕ್ರಪಾಣಿ ಮತ್ತು ಮೂವರು ಅಧಿಕಾರಿಗಳನ್ನು ಅಮಾನತು ಮಾಡಲು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ್ ಖಂಡ್ರೆ ಶಿಫಾರಸು ಮಾಡಿದ್ದಾರೆ.

ಉನ್ನತ ಮಟ್ಟದ ವಿಚಾರಣಾ ಸಮಿತಿಯ ಪ್ರಾಥಮಿಕ ವರದಿ ಸ್ವೀಕರಿಸಿ, ಪರಾಮರ್ಶಿಸಿದ ಸಚಿವರು, ಹುಲಿಗಳ ಅಸಹಜ ಸಾವಿನ ಪ್ರಕರಣದಲ್ಲಿ ಮೇಲ್ನೋಟಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಕರ್ತವ್ಯಲೋಪ ಕಂಡುಬಂದಿರುವ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಈ ಶಿಫಾರಸು ಮಾಡಿದ್ದಾರೆ.

ಸುಮಾರು 11 ವರ್ಷದ ತಾಯಿ ಹುಲಿ ಮತ್ತು 10 ರಿಂದ 11 ತಿಂಗಳ 4 ಮರಿ ಹುಲಿಗಳ ಸಾವಿಗೆ ಹುಲಿ ದಾಳಿ ಮಾಡಿ ಕೊಂದ ಹಸುವಿನ ಮೃತದೇಹದೊಳಗೆ ಸೇಡು ತೀರಿಸಿಕೊಳ್ಳಲು ಸಿಂಪಡಿಸಲಾದ ರಾಸಾಯನಿಕ ಸಂಯುಕ್ತ ಕಾರಣ ಎಂಬುದು ಪ್ರಾಥಮಿಕ ತನಿಖಾ ವರದಿಯಿಂದ ತಿಳಿದು ಬಂದಿದೆ. ಗಸ್ತು ಸಿಬ್ಬಂದಿಯ ಕಾರ್ಯಕ್ಷಮತೆಯ ಮೇಲೆ ಸಂಬಂಧಿತ ವಲಯದ ಎಸಿಎಫ್, ಆರ್‌ಎಫ್‌ಒ ಮತ್ತು ಡಿಆರ್‌ಎಫ್‌ಒ ನಿಗಾ ಇಡುವಲ್ಲಿ ಸಂಪೂರ್ಣ ವಿಫಲವಾಗಿದ್ದು, ಅರಣ್ಯ ರಕ್ಷಣೆಯ ತಮ್ಮ ಮೂಲಭೂತ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿರುತ್ತಾರೆ ಎಂದು ತಿಳಿಸಿರುವ ಈಶ್ವರ್ ಖಂಡ್ರೆ, ಮೂರು ಸಿಬ್ಬಂದಿಯನ್ನು ಅಮಾನತು ಮಾಡಿ ಇಲಾಖಾ ವಿಚಾರಣೆ ನಡೆಸಲು ಸೂಚನೆ ನೀಡಿದ್ದಾರೆ. → 4

ರಾಜ್ಯದ ತಜ್ಞರ ಸಮಿತಿ ಶಿಫಾರಸು

ಶಾಲಾ ಮಕ್ಕಳ ಚೆಕಪ್

ಬೆಂಗಳೂರು: ಶಾಲೆಗಳಲ್ಲಿ 15 ವರ್ಷದೊಳಗಿನ ಮಕ್ಕಳಿಗೆ ಹೃದಯ ತಪಾಸಣೆ ಮಾಡುವಂತೆ ರಾಜ್ಯ ಸರಕಾರ ನೇಮಿಸಿದ್ದ ತಜ್ಞರ ಸಮಿತಿ ಸಲಹೆ ನೀಡಿದೆ. ರಾಜ್ಯದಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದವರ ಸಂಖ್ಯೆ ಹೆಚ್ಚಾಗುತ್ತಿದ್ದಂತೆ ಸರಕಾರ ಸಾವಿಗೆ ಕಾರಣ ಪತ್ತೆ ಹಚ್ಚಲು ತಜ್ಞರ ಸಮಿತಿಯನ್ನು ರಚನೆ ಮಾಡಿತ್ತು. ಜಯದೇವ ಆಸ್ಪತ್ರೆ ನಿರ್ದೇಶಕ ಡಾ. ರವೀಂದ್ರನಾಥ್, ರಾಜೀವ್ ಗಾಂಧಿ ಆಸ್ಪತ್ರೆ ನಿರ್ದೇಶಕ ಶಶಿಭೂಷಣ್, ನಿಮ್ಹಾನ್ಸ್ ನಿರ್ದೇಶಕ ಡಾ. ಪ್ರಚೇತ್ ರಘುವೀರ್, ಬಿಎಂಆರ್‌ಸಿಐ ಮೆಡಿಸನ್ ವಿಭಾಗ ಮುಖ್ಯಸ್ಥ ಡಾ. ರವಿ, ನಿಮ್ಹಾನ್ಸ್‌ನ ಅಸೋಸಿಯೇಟ್ ಪ್ರೊಫೆಸರ್ ಡಾ. ರವಿ ಅವರನ್ನು ಒಳಗೊಂಡ ಸಮಿತಿ ಹಲವು ಶಿಫಾರಸುಗಳನ್ನು ಮಾಡಿದೆ.

→ 4

ತಜ್ಞರ ವರದಿಯಲ್ಲಿ ಏನಿದೆ?

ಹೃದಯಾಘಾತಕ್ಕೆ ಕೋವಿಡ್ ಲಸಿಕೆ ಕಾರಣವಾಗಿಲ್ಲ. ಕೋವಿಡ್ ಬಂದು ಹೋದ 3 ವರ್ಷದ ಬಳಿಕ ಹೃದಯ ಸಮಸ್ಯೆ ಕಾಣಿಸಿದೆ. ನಿದ್ರಾಹೀನತೆ, ಸುಸ್ತು, ಉಸಿರಾಟ ಸಮಸ್ಯೆ, ಅತಿಯಾದ ಬೊಜ್ಜಿನಿಂದ ಹೃದಯದ ಕಾರ್ಯಕ್ಷಮತೆ ಕಡಿಮೆಯಾಗಿದೆ. ಹೃದಯಾಘಾತದಿಂದ ಮೃತಪಟ್ಟವರ ಮರಣೋತ್ತರ ಪರೀಕ್ಷೆ ಮಾಡಬೇಕು. ಕಡ್ಡಾಯವಾಗಿ ಸಾರ್ವಜನಿಕ ಧೂಮಪಾನ ನಿಷೇಧಿಸಬೇಕು. ಅಪಾಯಕಾರಿ ನೋವು ನಿವಾರಕ ಔಷಧಿಗೆ ಕಡಿವಾಣ ಹಾಕಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ನಾಡಿನಾದ್ಯಂತ ಜನಮನ್ನಣೆ ಗಳಿಸುತ್ತಿರುವ ಹೊಸ ಪತ್ರಿಕೆ 'ಪ್ರವಾಸಿ ಪ್ರಪಂಚ' ಹೊಸ ಪ್ರತಿಭೆಗಳನ್ನು ಹುಡುಕುತ್ತಿದೆ!
HIRING MARKETING EXECUTIVE
ರಾಜ್ಯದಾದ್ಯಂತ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
WANTED MARKETING MANAGER
ಕೊಡಗು, ಚಿಕ್ಕಮಗಳೂರು ಮತ್ತು ವಿಜಯನಗರ ಜಿಲ್ಲೆಗಳಿಗೆ ಮಾರ್ಕೆಟಿಂಗ್ ಮ್ಯಾನೇಜರ್ ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
hr@vishwavani.news
63623 93988
ಪ್ರವಾಸಿ ಪ್ರಪಂಚ
ವಿಹಾರವೇ ವಿಶ್ವ!

ಆಪರೇಷನ್ ಸಿಂಧೂರ್ ವೇಳೆ 3 ವೈರಿಗಳಿದ್ದರು ಎಂದ ಲೆ. ಜನರಲ್

ಪಾಕ್‌ಗೆ ಚೀನಾ, ಟರ್ಕಿ ಸಕ್ರಿಯ ಸಹಾಯ

ದೆಹಲಿ: 'ಆಪರೇಷನ್ ಸಿಂಧೂರ್' ವೇಳೆ ಭಾರತ ಸೇನೆ ಪಾಕಿಸ್ತಾನವಲ್ಲದೆ ಚೀನಾ ಮತ್ತು ಟರ್ಕಿಯ ಸೇನಾ ತಂತ್ರವನ್ನೂ ಎದುರಿಸಬೇಕಾಯಿತು ಎಂದು ಭೂಸೇನೆಯ ಉಪ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್. ಸಿಂಗ್ ಶುಕ್ರವಾರ ತಿಳಿಸಿದ್ದಾರೆ. ಭಾರತಕ್ಕೆ ತೊಂದರೆ ನೀಡುವ ಸಲುವಾಗಿ ಪಾಕಿಸ್ತಾನವನ್ನು ಬಳಸಿಕೊಂಡ ಚೀನಾ ನಾಲ್ಕು ದಿನಗಳ ಸಂಘರ್ಷದ ಅವಧಿಯಲ್ಲಿ ನೆರೆ ರಾಷ್ಟ್ರಕ್ಕೆ ಸಾಧ್ಯವಿರುವ ಎಲ್ಲಾ ರೀತಿಯ ನೆರವು ನೀಡಿತ್ತು ಎಂದು ಅವರು ಹೇಳಿದ್ದಾರೆ.

ಭಾರತೀಯ ವಾಣಿಜ್ಯೋದ್ಯಮ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಲೆಫ್ಟಿನೆಂಟ್ ಜನರಲ್, ತನ್ನ ವಿವಿಧ ಶಸಾಸ್ತ್ರಗಳನ್ನು ಪರೀಕ್ಷಿಸಲು ಭಾರತ ಮತ್ತು ಪಾಕ್ ಸಂಘರ್ಷವನ್ನು ಲೈವ್ ಲ್ಯಾಬ್ ರೀತಿ ಬಳಸಿಕೊಂಡ ಚೀನಾ, ಪಾಕಿಸ್ತಾನಕ್ಕೆ ಲೈವ್ ಅಪ್‌ಡೇಟ್ ನೀಡುತಿತ್ತು ಎಂದು ಹೇಳಿದರು.

ಟರ್ಕಿ ಕೂಡಾ ಚೀನಾದಂತೆಯೇ ಪಾಕಿಸ್ತಾನಕ್ಕೆ ನೆರವು ನೀಡಿದೆ. ಡಿಜಿಎಂಒ ಮಟ್ಟದ ಮಾತುಕತೆಗಳು ನಡೆಯುತ್ತಿರುವಾಗ, ನಮ್ಮ ಪ್ರಮುಖ ಯುದ್ಧ ವಿಮಾನಗಳ ಬಗ್ಗೆ ಪಾಕ್ ಚೀನಾದಿಂದ ಲೈವ್ ಅಪ್‌ಡೇಟ್‌ಗಳನ್ನು ಪಡೆದಿತ್ತು ಎಂದು ಅವರು ತಿಳಿಸಿದರು.

ಚೀನಾ-ಪಾಕಿಸ್ತಾನಕ್ಕೆ ತಕ್ಕ ಎದಿರೇಟು ನೀಡಲು ದೃಢವಾದ ವಾಯು ರಕ್ಷಣಾ ವ್ಯವಸ್ಥೆಯ ಅಗತ್ಯವಿದೆ ಎಂದು ಪ್ರತಿಪಾದಿಸಿದ ರಾಹುಲ್ ಆರ್ ಸಿಂಗ್, ಈ ಬಾರಿ ನಾವು ಹೆಚ್ಚಿನದಾಗಿ ಗಮನ ಹರಿಸಲು ಸಾಧ್ಯವಾಗಲಿಲ್ಲ. ಆದರೆ ಮುಂದಿನ ಬಾರಿ ನಾವು ಸಿದ್ಧರಾಗಿರಬೇಕು. ನಮಗೆ ದೃಢವಾದ ವಾಯು ರಕ್ಷಣಾ ವ್ಯವಸ್ಥೆ ಬೇಕು ಎಂದು ಅವರು ಹೇಳಿದರು.

ಪಾಕ್‌ನ ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಿಖರವಾದ ದಾಳಿ ನಡೆದ ಭಾರತೀಯ ಸಶಸ್ತ್ರ ಪಡೆಗಳನ್ನು ಶ್ಲಾಘಿಸಿದ ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್ ಸಿಂಗ್, ಆಪರೇಷನ್ ಸಿಂಧೂರ್‌ನಿಂದ ಕೆಲವು ಪಾಠ ಕಲಿತಿದ್ದೇವೆ. ನಾಯಕತ್ವದಿಂದ ಬಂದ ಕಾರ್ಯತಂತ್ರದ ಸಂದೇಶ ಸ್ಪಷ್ಟವಾಗಿತ್ತು. ಮಾನವ ಗುಪ್ತಚರ ಮತ್ತು ತಂತ್ರಜ್ಞಾನ ಬಳಸಿ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ದಾಳಿ ಯೋಜಿಸಲಾಗಿತ್ತು. ಹೀಗಾಗಿ 21 ಉಗ್ರರ ಮೂಲಸೌಕರ್ಯಗಳನ್ನು ಟಾರ್ಗೆಟ್ ಮಾಡಲಾಗಿತ್ತು. ಅದರಲ್ಲಿ ಒಂಬತ್ತು ಉಗ್ರರ ನೆಲೆ ಧ್ವಂಸಗೊಳಿಸಲಾಗಿದೆ ಎಂದು ತಿಳಿಸಿದರು.

ಧಿಡೀರನೆ ಯುದ್ಧ ಸ್ಥಗಿತಗೊಳಿಸಿದ ಬಗ್ಗೆ ಮಾತನಾಡಿದ ಅವರು ನಮ್ಮ ಉದ್ದೇಶ ಈಡೇರಿದಾಗ ಅದನ್ನು ನಿಲ್ಲಿಸಬೇಕು. ಇಲ್ಲವೇ ಕಡಿಮೆ ಮಾಡಬೇಕು. ಯುದ್ಧ ಆರಂಭಿಸುವುದು ಸುಲಭ. ಆದರೆ ನಿಲ್ಲಿಸುವುದು ಬಹಳ ಕಷ್ಟ ಎಂದು ಲೆಫ್ಟಿನೆಂಟ್ ಜನರಲ್ ರಾಹುಲ್ ತಿಳಿಸಿದರು.

ನಮಗೆ ಒಂದು ಗಡಿ ಮತ್ತು ಇಬ್ಬರು ಎದುರಾಳಿಗಳಿದ್ದರು, ವಾಸ್ತವವಾಗಿ ಮೂವರಿದ್ದರು. ಎದುರಾಳಿಯಾಗಿದ್ದ ಪಾಕಿಸ್ತಾನಕ್ಕೆ ಚೀನಾ ಎಲ್ಲಾ ರೀತಿಯ ಬೆಂಬಲ ನೀಡುತಿತ್ತು. ಪಾಕಿಸ್ತಾನದ ಶೇ. 81 ರಷ್ಟು ಮಿಲಿಟರಿ ಸರಕುಗಳು ಚೀನಾದವು. ಇತರ ಶಸಾಸ್ತ್ರಗಳೊಂದಿಗೆ ತನ್ನ ಸಶಸ್ತ್ರಗಳನ್ನು ಪರೀಕ್ಷಿಸಲು ಚೀನಾಕ್ಕೆ ಸೇನಾ ಸಂಘರ್ಷ ಲೈವ್ ಲ್ಯಾಬ್‌ನಂತಿತ್ತು.
-ಲೆಫ್ಟಿನೆಂಟ್ ಜನರಲ್ ರಾಹುಲ್ ಆರ್. ಸಿಂಗ್

ಫನ್‌ತರಂಗ

- ರಘುಪತಿ ಶೃಂಗೇರಿ -

ಜಾವೆಲಿನ್ ಥ್ರೋ ಪಟು ನೀರಜ್ ಚೋಪ್ರಾಗೆ ಗೌರವ ಸಲ್ಲಿಸಿದ ಸಿಎಂ
ಸುದ್ದಿ

ದೇವನಹಳ್ಳಿ ರೈತರೊಂದಿಗೆ ಸಿಎಂ ಸಭೆ ಅಪೂರ್ಣ

1,777 ಎಕರೆ ಭೂ ಸ್ವಾಧೀನ ಕೈಬಿಡಲು ಆಗ್ರಹಿಸಿ ಪ್ರತಿಭಟನೆ | ಜು.15ಕ್ಕೆ ಮರು ಸಭೆ ನಡೆಸಲು ತೀರ್ಮಾನ

ಬೆಂಗಳೂರು: ಹಲವು ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ದೇವನಹಳ್ಳಿ ರೈತರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸಿದ ಸಭೆ ಅಪೂರ್ಣಗೊಂಡಿದ್ದು, ಜು.15ಕ್ಕೆ ಮತ್ತೊಮ್ಮೆ ಸಭೆ ನಡೆಸಲು ತೀರ್ಮಾನಿಸಲಾಗಿದೆ.

ಭೂಸ್ವಾಧೀನ ವಿರುದ್ಧ ಹೋರಾಟ ನಡೆಸುತ್ತಿರುವ ದೇವನಹಳ್ಳಿ ರೈತರು ಇಂದು ವಿಧಾನಸೌಧದಲ್ಲಿ ನಡೆದ ಸಿಎಂ ನೇತೃತ್ವದ ಸಭೆಗೆ ತಾವು ಬೆಳೆದ ಹಣ್ಣು, ಹಂಪಲು, ತರಕಾರಿ, ಹೂವುಗಳೊಂದಿಗೆ ಆಗಮಿಸಿರುವುದು ಗಮನ ಸೆಳೆಯಿತು. ಉದ್ದೇಶಿತ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕಿಗೆ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1,777 ಎಕರೆ 2 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು 2021ರ ಆ.27ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿತ್ತು. ಇದಾದ ಮೇಲೆ 2022ರ ಫೆ.15ರಂದು ಈ ಸಂಬಂಧ ಆದೇಶ ಹೊರಡಿಸಲಾಗಿತ್ತು. ಇದರ ವಿರುದ್ಧ ದೇವನಹಳ್ಳಿ ತೀವ್ರ ಹೋರಾಟ ನಡೆಸುತ್ತಿದ್ದಾರೆ. ಭೂ ಸ್ವಾಧೀನ ಕೈಬಿಡುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಸಂಬಂಧ ಸಿಎಂ ನೇತೃತ್ವದಲ್ಲಿ ವಿಧಾನಸೌಧದಲ್ಲಿ ಸಭೆ ನಡೆಸಲಾಯಿತು. ಈ ವೇಳೆ ರೈತರು ತಾವು ಬೆಳೆದ ತರಕಾರಿ, ಹಣ್ಣು, ಹಂಪಲು, ಹೂವಿನೊಂದಿಗೆ ಮುಖ್ಯಮಂತ್ರಿಗಳನ್ನು ಭೇಟಿಯಾದರು.

> **ನಾವು ಪ್ರಜಾಪ್ರಭುತ್ವದಲ್ಲಿ ಮತ್ತು ಸಂವಾದದಲ್ಲಿ ನಂಬಿಕೆಯಿರುವವರು. ಪ್ರತಿಭಟನೆಗೆ ಯಾವುದೇ ಅಡ್ಡಿಪಡಿಸಿಲ್ಲ. ಪ್ರತಿಭಟನೆಯನ್ನು ಹತ್ತಿಕ್ಕುವ ಪ್ರಯತ್ನ ಸರಕಾರ ಮಾಡಿಲ್ಲ. ನಾನೂ ರೈತ ಸಂಘದಲ್ಲಿದ್ದವನು.**
> – ಸಿದ್ದರಾಮಯ್ಯ ಸಿಎಂ

ಏರೋಸ್ಪೇಸ್ ಪಾರ್ಕ್‌ಗಾಗಿ ನಡೆದಿರುವ ಭೂಸ್ವಾಧೀನ ಪ್ರಕ್ರಿಯೆ ಕೈ ಬಿಡುವಂತೆ ಆಗ್ರಹಿಸಿ ಸಿಎಂ ಸಿದ್ದರಾಮಯ್ಯ ಅವರನ್ನು ರೈತರ ನಿಯೋಗ ಭೇಟಿ ಮಾಡಿತು.

ರೈತರ ಸಭೆ ಬಳಿಕ ಮಾತನಾಡಿದ ಸಿಎಂ ಸಿದ್ದರಾಮಯ್ಯ, ದೇವನಹಳ್ಳಿ, ಚನ್ನರಾಯಪಟ್ಟಣ ಹೋರಾಟಗಾರರ ಸಭೆ ಕರೆದಿದ್ದೆ. ಅನೇಕ ರೈತಪರ ಹೋರಾಟಗಾರರು ಭಾಗವಹಿಸಿದ್ದರು. ಭೂಸ್ವಾಧೀನ ಸಂಬಂಧ ಅಂತಿಮ ಅಧಿಸೂಚನೆಯಾಗಿದೆ. ಆದ್ದರಿಂದ ಕಾನೂನಾತ್ಮಕ ಸಮಸ್ಯೆಯಿದೆ. ಆದ್ದರಿಂದ ಸಮಯ ಬೇಕೆಂದು ಹೇಳಿದ್ದೇನೆ. ಆದ್ದರಿಂದ ಜು.15ರಂದು ರೈತರ ಜತೆ ಮತ್ತೆ ಸಭೆ ನಡೆಸಲಾಗುವುದು ಎಂದರು.

10 ದಿನದಲ್ಲಿ ಸ್ಪಷ್ಟ ತೀರ್ಮಾನ: ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವುದಕ್ಕೆ ಸಂಬಂಧಿಸಿದಂತೆ ಕೆಲವು ಕಾನೂನು ತೊಡಕುಗಳಿದ್ದು, ಅದನ್ನು ಸರಿಪಡಿಸಿಕೊಳ್ಳುವ ಸಲಹೆಯನ್ನು ಕಾನೂನು ತಜ್ಞರು ನೀಡಿದ್ದಾರೆ. ಈಗಾಗಲೇ ಏಪ್ರಿಲ್ ತಿಂಗಳಲ್ಲಿ ಅಂತಿಮ ನೋಟಿಫಿಕೇಶನ್ ಆಗಿರುವ ಕಾರಣ ಅದರ ಸಾಧಕ-ಬಾಧಕಗಳ ಕುರಿತು ಚರ್ಚೆ ನಡೆಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ 10 ದಿನಗಳ ಕಾಲಾವಕಾಶ ಅಗತ್ಯವಿದೆ. ಈ ಕಾಲಾವಧಿಯಲ್ಲಿ ಸರಕಾರಕ್ಕೆ ಒಂದು ಸ್ಪಷ್ಟ ನಿರ್ಧಾರಕ್ಕೆ ಬರಲು ಸಾಧ್ಯವಿದೆ ಎಂದು ತಿಳಿಸಿದರು.

ಕಾನೂನು ಕಾಯಿದೆ ವಿರುದ್ಧವಾಗಿ ಸರಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ನಿಯಮಾನುಸಾರ ಅಂತಿಮ ನೋಟಿಫಿಕೇಶ್ ಆಗಿರುವ ಕಾರಣ, ಅದರ ಕಾನೂನು ಅಂಶಗಳನ್ನು ಪರಿಶೀಲಿಸುವ ಅಗತ್ಯವಿದೆ. ಈ ಕುರಿತು ಪೂರ್ವಭಾವಿ ಸಭೆ ನಡೆಸಿದ್ದೇವೆ. ಇಂದೇ ಸರಕಾರದ ನಿಲುವು ಪ್ರಕಟಿಸಲು ಸಾಧ್ಯವಿಲ್ಲ. 10 ದಿನಗಳ ಬಳಿಕ ಮತ್ತೆ ಸಭೆ ನಡೆಸಿ ಸರಕಾರದ ನಿಲುವು ಸ್ಪಷ್ಟಪಡಿಸಲಾಗುವುದು ಎಂದು ಸಿಎಂ ಹೇಳಿದರು.

15ರ ತನಕ ಪ್ರತಿಭಟನೆ ನಿಲ್ಲಿಸಲ್ಲ

ಸರಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಕ್ಕಿದೆ. ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಮೊದಲು ಕಾನೂನು ಅಂಶಗಳನ್ನು ನೋಡಬೇಕು. ಬಿಜೆಪಿ ಸರಕಾರ ಮೊದಲ ಅಧಿಸೂಚನೆ ಹೊರಡಿಸಿ ಗಾಯ ಮಾಡಿದೆ. ಗಾಯ ವಾಸಿ ಮಾಡುತ್ತೇವೆ ಅನ್ನುವ ನೀವೇ ಈಗ ಗಾಯ ಹೆಚ್ಚು ಮಾಡುತ್ತಿದ್ದೀರಿ ಎಂದು ಹೇಳಿದ್ದೇವೆ. ಇದು ಈಗ ರಾಜ್ಯದ ಹೋರಾಟವಾಗಿ ಉಳಿದಿಲ್ಲ. ಈಗ ರಾಷ್ಟ್ರೀಯ ಹೋರಾಟವಾಗಿದೆ. ರೈತರ ಭೂಮಿ ರೈತರಿಗೆ ಸಿಗುವ ನಂಬಿಕೆ ನಮಗೆ ಇದೆ. ಎಲ್ಲಾ ರಾಷ್ಟ್ರೀಯ ನಾಯಕರು ಈ ಹೋರಾಟದಲ್ಲಿ ಇದ್ದಾರೆ. ಹಾಗಾಗಿ ಭೂಮಿ ರೈತರಿಗೆ ವಾಪಾಸ್ ಕೊಡಲಿದ್ದಾರೆ. ದೇವನಹಳ್ಳಿ ರೈತರ ಭೂಮಿ ಅವರಿಗೆ ಕೊಡಬೇಕು. ಜು.15ರ ತನಕ ಪ್ರತಿಭಟನೆ ನಡೆಯುತ್ತದೆ ಎಂದು ರೈತರ ಬೆಂಬಲಕ್ಕೆ ನಿಂತಿರುವ ನಟ ಪ್ರಕಾಶ್ ರಾಜ್ ಹೇಳಿದರು.

ಕಾಂಗ್ರೆಸ್, ಡಿಕೆಶಿ ವಿರುದ್ಧದ ಪ್ರಕರಣಕ್ಕೆ ಹೈ ತಡೆ

ಬೆಂಗಳೂರು: ಬಿಜೆಪಿ ನೇತೃತ್ವದ ಈ ಹಿಂದಿನ ರಾಜ್ಯ ಸರಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಜಾಹೀರಾತು ನೀಡುವ ಮೂಲಕ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ದಾಖಲಿಸಲಾಗಿರುವ ಮಾನಹಾನಿ ಮೊಕದ್ದಮೆ ಪ್ರಕರಣದಲ್ಲಿ ಕಾಂಗ್ರೆಸ್ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ಶುಕ್ರವಾರ ತಡೆ ನೀಡಿದೆ.

ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಎಸ್.ಕೇಶವ ಪ್ರಸಾದ್ ಸಲ್ಲಿಸಿರುವ ಖಾಸಗಿ ದೂರಿನ ಅನ್ವಯ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಕಾಂಗ್ರೆಸ್ ಮತ್ತು ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿದ್ದು, ಪ್ರಕರಣಕ್ಕೆ ತಡೆ ನೀಡಿ ವಿಚಾರಣೆಯನ್ನು ಜುಲೈ 29ಕ್ಕೆ ಮುಂದೂಡಿದೆ. ಡಿ.ಕೆ.ಶಿವಕುಮಾರ್ ಅವರನ್ನು ಹಿರಿಯ ವಕೀಲ ಕೆ.ಶಶಿಕಿರಣ್ ಶೆಟ್ಟಿ ಮತ್ತು ಸೂರ್ಯ ಮುಕುಂದರಾಜ್, ಕೆಪಿಸಿಸಿಯನ್ನು ವಕೀಲರಾದ ಎಸ್.ಎ.ಅಹ್ಮದ್ ಮತ್ತು ಸಂಜಯ್ ಯಾದವ್ ಪ್ರತಿನಿಧಿಸಿದ್ದರು.

ಜುಲೈ 29ಕ್ಕೆ ವಿಚಾರಣೆ ಮುಂದೂಡಿದ ಹೈಕೋರ್ಟ್

ಕಮಿಷನ್ ಆರೋಪಿಸಿ ಜಾಹೀರಾತು ನೀಡಿದ್ದ ಕಾಂಗ್ರೆಸ್

ಏನಿದು ಪ್ರಕರಣ?

ಕಳೆದ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಬಿಜೆಪಿ ವಿರುದ್ಧ ಭ್ರಷ್ಟಾಚಾರವನ್ನು ಪ್ರಧಾನ ಅಸ್ತ್ರವಾಗಿಸಿದ್ದ ಕಾಂಗ್ರೆಸ್ 2023ರ ಮೇ 5ರಂದು ಎಲ್ಲಾ ಪ್ರಮುಖ ಪತ್ರಿಕೆಗಳ ಮುಖಪುಟದಲ್ಲಿ ಭ್ರಷ್ಟಾಚಾರ ದರ ಪಟ್ಟಿ ಎಂಬ ಹೆಸರಿನ ಅಡಿ ವಿವಿಧ ಹುದ್ದೆಗಳಿಗೆ ಬಿಜೆಪಿ ಲಂಚ ನಿಗದಿಪಡಿಸಿದೆ ಎಂದು ಆರೋಪಿಸಿ ಜಾಹೀರಾತು ನೀಡಿತ್ತು. ಅಲ್ಲದೇ, ಕರೋನಾ ಸಾಮಗ್ರಿಗಳ ಪೂರೈಕೆ, ಲೋಕೋಪಯೋಗಿ ಗುತ್ತಿಗೆಗಳು, ಮಠಗಳಿಗೆ ಅನುದಾನ, ಶಾಲೆಗಳಿಗೆ ಮೊಟ್ಟೆ ಪೂರೈಕೆ, ರಸ್ತೆ ಕಾಮಗಾರಿಗಳಲ್ಲಿ ಶೇ.25 ರಿಂದ 30 ರಷ್ಟು ಕಮಿಷನ್ ಪಡೆಯಲಾಗುತ್ತಿದೆ. ಪತ್ರಿಕೆಗಳಿಗೆ ನೀಡಿದ ಜಾಹೀರಾತಿನ ಕೊನೆಯಲ್ಲಿ ಶೇ. 40 ಕಮಿಷನ್ ನ (ಬಿಜೆಪಿ) ಸರಕಾರವು ರು.1.5 ಲಕ್ಷ ಕೋಟಿಯನ್ನು ಕಳೆದ ನಾಲ್ಕು ವರ್ಷಗಳಲ್ಲಿ ಲೂಟಿ ಮಾಡಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು. ಇದರ ವಿರುದ್ಧ ದೂರು ದಾಖಲಿಸಿದ್ದ ಬಿಜೆಪಿಯು, ಡಬಲ್ ಎಂಜಿನ್ ಸರಕಾರಕ್ಕೆ ಬದಲಾಗಿ ಟ್ರಬಲ್ ಎಂಜಿನ್ ಸರಕಾರ ಎಂದು ಹೇಳುವ ಮೂಲಕ ಬಿಜೆಪಿಯ ವರ್ಚಸ್ಸಿಗೆ ಕಾಂಗ್ರೆಸ್ ಹಾನಿ ಮಾಡಿದೆ. ಚುನಾವಣೆಯಲ್ಲಿ ಗೆಲುವಿಗೆ ಅಡ್ಡಿಪಡಿಸಲಾಗಿದೆ. ಕೊನೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿ ಎಂದು ಆರೋಪಿಗಳು ಕೇಳಿದ್ದಾರೆ. ಸುಳ್ಳು ಜಾಹೀರಾತು ನೀಡಲು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ರಾಹುಲ್ ಗಾಂಧಿ ಅವರು ನೇರ ಕಾರಣವಾಗಿದ್ದಾರೆ ಎಂದು ಆರೋಪಿಸಿತ್ತು.

ಮಲಯಾಳಂ ನಿರ್ದೇಶಕನ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಮಲಯಾಳಂ ಚಿತ್ರರಂಗದ ಖ್ಯಾತ ನಿರ್ದೇಶಕ ರಂಜಿತ್ ಬಾಲಕೃಷ್ಣನ್ ವಿರುದ್ಧದ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ. ಕೇರಳದ ರಂಜಿತ್ ಬಾಲಕೃಷ್ಣನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ನ್ಯಾಯಪೀಠ, ಈ ಆದೇಶ ನೀಡಿದೆ. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ಅಸ್ವಾಭಾವಿಕ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದಾಗಿ ಅರ್ಜಿದಾರರ (ರಂಜಿತ್) ವಿರುದ್ಧ ದೂರು ನೀಡಿರುವ ವ್ಯಕ್ತಿ ಆರೋಪಿಸಿದ್ದಾರೆ. ಅಲ್ಲದೆ, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ತಾಜ್ ಹೋಟೆಲ್‌ನಲ್ಲಿ 2012ರಲ್ಲಿ ಈ ಘಟನೆ ನಡೆದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಆದರೆ, ಈ ಹೋಟೆಲ್ 2016ರಿಂದ ಕೆಲಸ ಪ್ರಾರಂಭಿಸಿದೆ. ಈ ಅಂಶ ಸಾರ್ವಜನಿಕವಾಗಿ ಗೊತ್ತಿರುವ ವಿಷಯವಾಗಿದೆ.

ಅಲ್ಲದೇ, ಘಟನೆ 2012ರಲ್ಲಿ ನಡೆದಿದೆ ಎಂಬುದಾಗಿ ದೂರಿನಲ್ಲಿ ವಿವರಿಸಿದ್ದಾರೆ. ಇದು ನಡೆದು 12 ವರ್ಷಗಳು ಕಳೆದಿವೆ. 2024ರಲ್ಲಿ ದೂರು ದಾಖಲಿಸಿದ್ದು, ದೂರು ನೀಡಲು ಸಂತ್ರಸ್ತರು ಹನ್ನೆರಡು ವರ್ಷ ತೆಗೆದುಕೊಂಡಿದ್ದಾರೆ. ಅದಕ್ಕೆ ಸೂಕ್ತ ಕಾರಣಗಳನ್ನು ವಿವರಿಸಿಲ್ಲ. ಇದೊಂದು ಅಂಶವೇ ಇದನ್ನು ಸುಳ್ಳು ಆರೋಪ ಎಂಬುದನ್ನು ಸಾಬೀತುಪಡಿಸುತ್ತದೆ. ಈ ಎಲ್ಲಾ ವಿಚಾರಗಳನ್ನು ಪರಿಶೀಲಿಸಿದರೆ ಅರ್ಜಿದಾರರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸುಳ್ಳೆಂಬುದು ಗೊತ್ತಾಗುತ್ತದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಐಪಿಸಿ 377(ಅಸ್ವಾಭಾವಿಕ ಲೈಂಗಿಕ ಕ್ರಿಯೆ) ಮತ್ತು ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 66ಇ ಅಡಿಯಲ್ಲಿ ದಾಖಲಿಸಿರುವ ಪ್ರಕರಣ ರದ್ದುಪಡಿಸಬೇಕು ಎಂದು ಕೋರಿದ್ದರು.

ಪರಸಂಗಕ್ಕೆ ಬೇಸತ್ತು ಗಂಡನ ಹತ್ಯೆ

ಮನೆ ಕೆಲಸದವಳ ಜತೆ ಅಕ್ರಮ ಸಂಬಂಧ ಹಿನ್ನೆಲೆ ಟೆಕ್ಕಿ ಪತಿ ಕೊಲೆ

ಬೆಂಗಳೂರು: ಮನೆ ಕೆಲಸದವಳ ಜತೆ ಅಕ್ರಮ ಸಂಬಂಧ ಹೊಂದಿದ್ದಕ್ಕೆ ಪತ್ನಿಯೇ ಪತಿಯನ್ನು ಕೊಲೆ ಮಾಡಿದ ಘಟನೆ ಸುದ್ದಗುಂಟೆ ಪಾಳ್ಯದಲ್ಲಿ ನಡೆದಿದೆ.

ಭಾಸ್ಕರ್(41) ಕೊಲೆಯಾದ ವ್ಯಕ್ತಿ. ಭಾಸ್ಕರ್ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಟೆಕ್ಕಿಯಾಗಿ ಕೆಲಸ ಮಾಡುತ್ತಿದ್ದರು. ಶೃತಿ ಪತಿಯನ್ನು ಕೊಲೆ ಮಾಡಿದ್ದು ಪೊಲೀಸರು ಈಗ ಬಂಧಿಸಿದ್ದಾರೆ. ಮನೆಗೆಲಸದವಳ ಜತೆ ಭಾಸ್ಕರ್ ಹೆಚ್ಚು ಸಲುಗೆಯಿಂದ ಇದ್ದರು. ಈ ಕಾರಣಕ್ಕೆ ಸಾಕಷ್ಟು ಬಾರಿ ಗಂಡ- ಹೆಂಡತಿ ನಡುವೆ ಕಲಹ ಉಂಟಾಗಿತ್ತು. ಎರಡು ದಿನದ ಹಿಂದೆ ರಾತ್ರಿ ಇದೇ ಕಾರಣಕ್ಕೆ ಗಲಾಟೆ ಶುರುವಾಗಿತ್ತು. ಗಲಾಟೆ ವೇಳೆ ಗಂಡನ ಮುಖಕ್ಕೆ ಬಲವಾಗಿ ಶೃತಿ ಹೊಡೆದಿದ್ದಳು. ಇದರಿಂದ ಸ್ಥಳದಲ್ಲಿಯೇ ಭಾಸ್ಕರ್ ಮೃತಪಟ್ಟಿದ್ದರು. ಗಂಡನ ಕೊಂದು ಪೊಲೀಸರ ಮುಂದೆ ಶೃತಿ ಕಥೆ ಕಟ್ಟಿದ್ದಳು. ಗಂಡ ಕುಡಿದು ಬಂದು ಬಾತ್ ರೂಮಿನಲ್ಲಿ ಬಿದ್ದು ಗಾಯಗೊಂಡಿದ್ದರು. ನಾನು ಅವರಿಗೆ ಸ್ನಾನ ಮಾಡಿಸಿ ಮಲಗಿಸಿದ್ದ ವೇಳೆ ಮೃತಪಟ್ಟಿದ್ದಾರೆ ಎಂದು ಹೇಳಿದ್ದಳು.

ಮೊದಲನೇ ಪತ್ನಿಗೆ ವಿಚ್ಛೇದನ ಕೊಟ್ಟಿದ್ದ ಭಾಸ್ಕರ್ ಶೃತಿಯನ್ನು ಮದುವೆಯಾಗಿದ್ದರು. ಮದುವೆಯಾಗಿ ಇಬ್ಬರು ಮಕ್ಕಳಿದ್ದರೂ ಮನೆ ಕೆಲಸದವಳ ಜತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದು ಶೃತಿ ಕೋಪಕ್ಕೆ ಕಾರಣವಾಗಿತ್ತು. ಸಂಬಳ ಅಲ್ಲದೇ ಮನೆ ಬಾಡಿಗೆಯಿಂದಲೇ ತಿಂಗಳಿಗೆ 1.15 ಲಕ್ಷ ರು. ಆದಾಯ ಬರುತ್ತಿತ್ತು. ಬಂದ ಹಣವನ್ನು ಭಾಸ್ಕರ್ ಅಕ್ರಮ ಸಂಬಂಧ ಹೊಂದಿದ್ದ ಮಹಿಳೆಗೆ ನೀಡುತ್ತಿದ್ದರು. ಕಳೆದ ಒಂದು ತಿಂಗಳಿನಿಂದ ಭಾಸ್ಕರ್ ನಿವಾಸಕ್ಕೆ ಬಾರದೇ ಸ್ನೇಹಿತೆಯ ಮನೆಯಲ್ಲೇ ಇರುತ್ತಿದ್ದರು. ಎರಡು ದಿನದ ಹಿಂದೆ ಮನೆಗೆ ಬಂದಾಗ ಪತ್ನಿ ಶೃತಿ ಈ ವಿಚಾರವನ್ನು ಪ್ರಸ್ತಾಪಿಸಿದ್ದಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆದಿದೆ. ಗಲಾಟೆ ವಿಕೋಪಗೆ ತಿರುಗಿ ಶೃತಿ ಪತಿಯನ್ನೇ ಹತ್ಯೆ ಮಾಡಿದ್ದಾಳೆ.

ಅಸಲಿ ಕಾರಣ ಬಿಚ್ಚಿಟ್ಟ ಮರಣೋತ್ತರ ಪರೀಕ್ಷೆ

ಅಸಹಜ ಸಾವು ಪ್ರಕರಣದ ಕಾರಣ ಭಾಸ್ಕರ್ ಮೃತದೇಹವನ್ನು ಪೊಲೀಸರು ಮರಣೋತ್ತರ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದರು. ಮರಣೋತ್ತರ ಪರೀಕ್ಷೆ ನಡೆಸಿದಾಗ ಮುಖ ಮತ್ತು ದೇಹಕ್ಕೆ ಯಾವುದೋ ವಸ್ತುವಿನಿಂದ ಹೊಡೆದಿರುವುದು ಪತ್ತೆಯಾಗಿತ್ತು. ಕೂಡಲೇ ಪೊಲೀಸರು ಶೃತಿಯನ್ನು ವಿಚಾರಣೆಗೆ ಒಳಪಡಿಸಿದ್ದು, ಅಸಲಿ ಸತ್ಯ ಬಹಿರಂಗವಾಗಿದೆ. ಪತಿಯನ್ನು ಕೊಲೆ ಮಾಡಿದ ಬಳಿಕ ಕಥೆ ಕಟ್ಟುವುದಕ್ಕೆಂದೇ ಮೃತದೇಹವನ್ನು ಸ್ನಾನ ಮಾಡಿಸಿ ಮಲಗಿಸಿದ್ದ ವಿಚಾರವೂ ಬಹಿರಂಗವಾಗಿದೆ. ಇದೀಗ ಅಸಹಜ ಸಾವು ಪ್ರಕರಣವನ್ನು ಕೊಲೆ ಪ್ರಕರಣವಾಗಿ ಪರಿವರ್ತಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸಾಲ ವಾಪಸ್ ಕೇಳಿದ್ದಕ್ಕೆ ಮನೆಗೆ ಬೆಂಕಿ

ಬೆಂಗಳೂರು: ಕೊಟ್ಟ ಸಾಲದ ಹಣ ವಾಪಸ್ ಕೇಳಿದ್ದಕ್ಕೆ ಮನೆಗೆ ಬೆಂಕಿ ಇಟ್ಟಿರುವ ಘಟನೆ ಬೆಂಗಳೂರಿನ ವಿವೇಕ ನಗರದ 2ನೇ ಮುಖ್ಯ ರಸ್ತೆಯಲ್ಲಿ ನಡೆದಿದೆ.

ಸುಬ್ರಮಣಿ ಎಂಬಾತ ವೆಂಕಟರಮಣಿ ಎಂಬವರ ಮನೆಗೆ ಬೆಂಕಿಯಿಟ್ಟಿದ್ದಾನೆ. ವೆಂಕಟರಮಣಿ ಅವರ ಪುತ್ರ ನೀಡಿರುವ ದೂರಿನನ್ವಯ ವಿವೇಕನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸುಬ್ರಮಣಿಯ ಸಹೋದರಿ ಪಾರ್ವತಿ ತನ್ನ ಮಗಳ ಮದುವೆಗಾಗಿ ವೆಂಕಟರಮಣಿಯ ಬಳಿ 5 ಲಕ್ಷ ರು. ಹಣ ಪಡೆದಿದ್ದಳು. 7-8 ವರ್ಷಗಳಾದರೂ ಸಹ ಪಡೆದುಕೊಂಡಿದ್ದ ಹಣ ಮರಳಿ ನೀಡಿರಲಿಲ್ಲ. ಹಣ ಕೊಡುವಂತೆ ಕೇಳಿದಾಗ ವೆಂಕಟರಮಣಿಯ ಮನೆಯ ಬಳಿ ಪಾರ್ವತಿ ಮತ್ತು ಆಕೆಯ ಪುತ್ರಿ ಬಂದು ಜೀವ ಬೆದರಿಕೆ ಹಾಕಿದ್ದರಂತೆ. ಇದೇ ವಿಚಾರಕ್ಕೆ ಸಿಟ್ಟಾದ ಆರೋಪಿ, ಜುಲೈ 1ರಂದು ಸಂಜೆ 5 ಗಂಟೆಗೆ ವೆಂಕಟರಮಣಿ ಮತ್ತು ಅವರ ಮಗ ಮನೆಯಲ್ಲಿದ್ದಾಗ ಬಂದು ಬಾಗಿಲ ಬಳಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ. ಮನೆಯ ಮುಂಭಾಗ ಮತ್ತು ಕಿಟಕಿ ಸುಟ್ಟು ಹೋಗಿದೆ. ಮನೆಯಲ್ಲಿದ್ದವರು ಪಾರಾಗಿದ್ದಾರೆ. ಆರೋಪಿಯ ಕೃತ್ಯ ಮನೆಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ವೆಂಕಟರಮಣಿ ಪುತ್ರ ನೀಡಿರುವ ದೂರಿನನ್ವಯ ಸುಬ್ರಮಣಿ, ಸಹೋದರಿ ಪಾರ್ವತಿ, ಪುತ್ರಿ ಮಹಾಲಕ್ಷ್ಮಿ ವಿರುದ್ಧ ವಿವೇಕ ನಗರ ಪೊಲೀಸ್ ಠಾಣೆಗೆ ಪ್ರಕರಣ ದಾಖಲಾಗಿದೆ.

ವಿರಾಮ
ಪ್ರತಿ ಭಾನುವಾರ

ಬ್ಯಾಂಕ್ ಆಫ್ ಬರೋಡ / बैंक ऑफ़ बड़ौदा / Bank of Baroda

ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ
ನಂ. 274, ಮೊದಲ ಮಹಡಿ, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು 560066 ದೂರವಾಣಿ ಸಂಖ್ಯೆ: 080-28451915/28452286
ಇ-ಮೇಲ್: vjwhit@bankofbaroda.co.in

ಲಾಕರ್ ಓಪನ್ ನೋಟಿಸ್

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ವೈಟ್‌ಫೀಲ್ಡ್ ಮುಖ್ಯ ರಸ್ತೆ ಶಾಖೆ

ಲಾಕರ್ ಹೊಂದಿರುವವರ ಹೆಸರು	ಲಾಕರ್ ಸಂಖ್ಯೆ	ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
ಜಯಂತಿ.ಎ.ಆರ್. ಕೋಂ ಎ.ವಿ.ರಾಮಮೋಹನ್ ಡೋರ್ ನಂ.500, ನೆಲ್ಲೂರಹಳ್ಳಿ ವೈಟ್‌ಫೀಲ್ಡ್, ಬೆಂಗಳೂರು–560066	8951AX0066	ರೂ. 11,210.50	24.07.2025 ಮಧ್ಯಾಹ್ನ 3.00
ಶ್ರೀನಿವಾಸ್ 2 ಶಶಿಕಲಾ ಎಸ್ ಡಿಆರ್ ವಿಳಾಸ: #323, ಇನ್ನರ್ ಸರ್ಕಲ್	8951BX0025	ರೂ. 9,964.00	24.07.2025 ಮಧ್ಯಾಹ್ನ 3.00

ದಿನಾಂಕ: 02.07.2025
ಸ್ಥಳ: ಬೆಂಗಳೂರು
ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಅರ್ಜಿ ಸಂಖ್ಯೆ ಯುಆರ್‌ಸಿ–2

ಭಾಗ–1ರ ಅಧ್ಯಾಯ 21ರಡಿ ನೋಂದಣಿ ಬಗ್ಗೆ ಸೂಚನೆ ನೀಡುವ ಬಗ್ಗೆ ಜಾಹೀರಾತು
[ಸೆಕ್ಷನ್ 374(ಬಿ)ರ ಕಂಪನಿ ಕಾಯಿದೆ, 2013ರ ನಿಯಮ 4(1)ರ ಕಂಪನಿಗಳಿಗೆ ಸಂಬಂಧಪಟ್ಟಂತೆ (ಅಧಿಕೃತ ನೋಂದಣಿಯಾಗಲು) ನಿಯಮಗಳು, 2014]

1. ಈ ಮೂಲಕ ಸೂಚನೆ ನೀಡುವುದೇನೆಂದರೆ, ಸೀಮಿತ ಬಾಧ್ಯತಾ ಪಾಲುದಾರಿಕಾ ಕಾಯಿದೆ, 2008 ರ ಅಡಿ ನೋಂದಾಯಿತವಾಗಿದ್ದು, ಷೇರುಗಳಿಂದ ನಿಯಮಿತವಾದ ಕಂಪನಿಯನ್ನಾಗಿ, ಸಿಆರ್‌ಸಿ ಯಿಂದ ಎಸ್‌ಆರ್‌ಎನ್‌ಎಬಿ5245312, ದಿನಾಂಕ 03ನೇ ಜುಲೈ, 2025ರಂದು ಅನುಮೋದಿತವಾಗಿದ್ದು, ಕಂಪನಿಗಳ ಕಾಯ್ದೆ 2013ರ ಚಾಪ್ಟರ್ 21ರ ಭಾಗ 1 ರ ಅಡಿಯಲ್ಲಿ **ಡಿ2ಎಸ್ ಬ್ಯುಸಿನೆಸ್ ಕನ್ಸಲ್ಟಿಂಗ್ ಎಲ್‌ಎಲ್‌ಪಿ" (ಎಲ್‌ಎಲ್‌ಪಿಐಎನ್:ಎಎಕ್ಯು–0567)** ಒಂದು ಪಾಲುದಾರಿಕಾ ಸಂಸ್ಥೆಯನ್ನು ಇಂದಿನಿಂದ ಹದಿನೈದು ದಿನಗಳ ನಂತರ ಹಾಗೂ ಮೂವತ್ತು ದಿನಗಳ ಒಳಗಾಗಿ **"ಡಿ2ಎಸ್ ಬ್ಯುಸಿನೆಸ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್"** ಎಂಬುದಾಗಿ ನೋಂದಣಿ ಮಾಡಬಹುದು ಎಂಬುದಾಗಿ **ರಿಜಿಸ್ಟ್ರಾರ್ ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಜಿಲ್ಲೆ ಗುರಂಗಾವ್ (ಹರ್ಯಾಣ), ಪಿನ್‌ಕೋಡ್ – 122050** ಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 366 ಉಪಪ್ರಕರಣ(2)ರ ಅನುಸಾರ ಅರ್ಜಿಯೊಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ.
2. **ಕಂಪನಿಯ ಮುಖ್ಯ ಉದ್ದೇಶಗಳು ಈ ರೀತಿಯಾಗಿವೆ.**
   1. **ಲೆಕ್ಕಪತ್ರ ಪುಸ್ತಕ ನಿರ್ವಹಣೆ, ಜಿಎಸ್‌ಟಿ (ಗೂಡ್ಸ್ ಮತ್ತು ಸರ್ವಿಸಸ್.ಕಾಮ್ ಟ್ಯಾಕ್ಸ್ ಆದಾಯ ತೆರಿಗೆ, ಕಾಂಪ್ಲಯನ್ಸ್, ಹಣಕಾಸು ಸಲಹೆಗಳು, ಕನ್ಸಲ್ಟಿಂಗ್, ಶಿಕ್ಷಣ, ವೃತ್ತಿ ಮಾರ್ಗದರ್ಶನ, ವಿಷಯ ಅಭಿವೃದ್ಧಿ ಮತ್ತು ಇತರೆ ಸಂಬಂಧಿತ ಸೇವೆಗಳ ಕ್ಷೇತ್ರಗಳಲ್ಲಿ ವ್ಯವಹಾರವನ್ನು ನಡೆಸುವುದು.**
   2. **ಭಾರತದಲ್ಲಿ ಅಥವಾ ಬೇರೆಡೆ ಹೇಳಲಾದ ಸೇವೆಗಳನ್ನು ನಿರ್ವಹಿಸಲು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ನಿರ್ವಹಿಸಲು ಸ್ಥಳಗಳಲ್ಲಿ ತರಬೇತಿ ಮತ್ತು ನಿರ್ವಹಣಾ ಸೇವೆಗಳನ್ನು ಒದಗಿಸಲು.**
3. ಪ್ರಸ್ತಾವಿತ ಕಂಪನಿಯ ಕರಡು ಪತ್ರ ಮತ್ತು ನಿರ್ಧರಿತ ಆರ್ಟಿಕಲ್ ಆಫ್ ಅಸೋಸಿಯೇಶನ್‌ನ ನಕಲನ್ನು **ರಿಜಿಸ್ಟರ್ಡ್ ಕಚೇರಿ: 296/268, 2ನೇ ಮಹಡಿ, ಧರ್ಮಛತ್ರ ರಸ್ತೆ, ಚಿಕ್ಕಬಳ್ಳಾಪುರ–562101, ಕರ್ನಾಟಕ, ಭಾರತ** ಇಲ್ಲಿ ಪರಿಶೀಲಿಸಬಹುದು.
4. ಈ ಅರ್ಜಿಯನ್ನು ಆಕ್ಷೇಪಿಸುವ ಯಾವುದೇ ವ್ಯಕ್ತಿಯು ತಮ್ಮ ಆಕ್ಷೇಪಣೆಯನ್ನು **ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8 ಸೆಕ್ಟರ್ –5, ಐಎಂಟಿ ಮಾನೇಸರ್, ಜಿಲ್ಲೆ – ಗುರಗಾಂವ್ (ಹರ್ಯಾಣ), ಪಿನ್ ಕೋಡ್ – 122050** ಈ ವಿಳಾಸಕ್ಕೆ ಈ ಸೂಚನೆ ಪ್ರಕಟವಾದ ಇಪ್ಪತ್ತೊಂದು ದಿನಗಳ ಒಳಗಾಗಿ ಲಿಖಿತ ಮೂಲಕ ಹಾಗೂ ಒಂದು ಪ್ರತಿಯನ್ನು ನೋಂದಾಯಿತ ಕಚೇರಿಗೆ ಕಳುಹಿಸಬಹುದಾಗಿದೆ.

ಅರ್ಜಿದಾರರ ಹೆಸರು(ಗಳು)
ಎಸ್ತೂರಿ ರಾಮಕೃಷ್ಣ ಗುಪ್ತ ರಾಘವೇಂದ್ರ
ಡಿಪಿಐಎನ್: 10246789
ಪದೋನ್ನತ ಪಾಲುದಾರ
ಥುಂಗಾ ಮಂಜುನಾಥ ದಿವ್ಯಶ್ರೀ
ಡಿಪಿಐಎನ್: 10246790
ಪದೋನ್ನತ ಪಾಲುದಾರ

ದಿನಾಂಕ : 05.07.2025
ಸ್ಥಳ : ಚಿಕ್ಕಬಳ್ಳಾಪುರ

ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
ನೋಂದಾಯಿತ ವಿಳಾಸ: 2ನೇ ಮಹಡಿ, ನಂ. 3, ಜೆವಿಟಿ ಟವರ್ಸ್, 8ನೇ ಎ ಮುಖ್ಯ ರಸ್ತೆ, ಸಂಪಂಗಿ ರಾಮ ನಗರ, ಹಡ್ಸನ್ ವೃತ್ತ, ಬೆಂಗಳೂರು, ಕರ್ನಾಟಕ, ಭಾರತ–560027. CIN : L66010KA1990PLC011409
Aadhar Housing Finance Ltd
GHAR BANEGA, TOH DESH BANEGA.

ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ 35ನೇ (ಮೂವತ್ತೈದನೇ) ವಾರ್ಷಿಕ ಮಹಾಸಭೆಯ ಸೂಚನೆ

1. ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ನ ("ದಿ ಕಂಪನಿ/ಸಭೆ") **35ನೇ (ಮೂವತ್ತೈದನೇ) ವಾರ್ಷಿಕ ಮಹಾಸಭೆಯು** (ಎಜಿಎಂ) **ದಿನಾಂಕ ಜುಲೈ 29, 2025ರ ಮಂಗಳವಾರದಂದು ಬೆಳಿಗ್ಗೆ 10.00 ಗಂಟೆಗೆ** (ಭಾರತೀಯ ಕಾಲಮಾನ) ವಿಡಿಯೋ ಕಾನ್ಫರೆನ್ಸಿಂಗ್ ('ವಿಸಿ')/ಇತರೆ ಆಡಿಯೊ ವಿಷುಯಲ್ ಮೀನ್ಸ್ ('ಒಎವಿಎಂ') ಮೂಲಕ ನಡೆಯಲಿದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (ಎಂಸಿಎ) ಕ್ರಮವಾಗಿ ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂ. 8ನೇ ಏಪ್ರಿಲ್ 2020, 13ನೇ ಏಪ್ರಿಲ್ 2020, 05 ಮೇ 2020 ಮತ್ತು 25ನೇ ಸೆಪ್ಟಂಬರ್, 2023 ಹಾಗೂ ಕಂಪನಿಗಳ ಕಾಯಿದೆ, 2013 ರಂತೆ ಅನ್ವಯವಾಗುವ ಎಲ್ಲಾ ನಿಯಂತ್ರಣಗಳು, ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ("ಸೆಬಿ") ಸುತ್ತೋಲೆ ಸುತ್ತೋಲೆ ಸಂ. ಎಸ್‌ಇಬಿಐ/ಹೆಚ್‌ಒ/ಸಿಎಫ್‌ಡಿ/ಸಿಎಫ್‌ಡಿ–ಪಿಒಡಿ2/ಪಿ/ಸಿಐಆರ್/2024/133 ದಿನಾಂಕ 3ನೇ ಅಕ್ಟೋಬರ್ 2024 ಮತ್ತು ಸುತ್ತೋಲೆ ಸಂ. ಎಸ್‌ಇಬಿಐ/ಹೆಚ್‌ಒ/ಡಿಡಿಹೆಚ್‌ಎಸ್/ಡಿಡಿಹೆಚ್‌ಎಸ್–ಪಿಒಡಿ1/ಪಿ/ಸಿಐಆರ್/2025/83 ದಿನಾಂಕ 5ನೇ ಜೂನ್ 2025 ನಿಯಂತ್ರಣಗಳು, ಎಂಸಿಎ ಮತ್ತು/ಅಥವಾ ಸೆಬಿಯಿಂದ ನೀಡಲಾದ ಇತರೆ ಅನ್ವಯವಾಗುವ ಸುತ್ತೋಲೆಗಳು (ಎಲ್ಲವನ್ನೂ ಒಟ್ಟಾಗಿ "ಸೂಕ್ತ ಸುತ್ತೋಲೆಗಳು" ಎನ್ನಲಾಗುವುದು) 35ನೇ ಎಜಿಎಂ ಸೂಚನೆಯಲ್ಲಿ ಹೇಳಲಾದ ವ್ಯವಹಾರಗಳನ್ನು ನಡೆಸಲಾಗುವುದು. ವಿಸಿ/ಒಎವಿಎಂ ಸೌಲಭ್ಯದ ಮೂಲಕ ಹಾಜರಾಗುವ ಸದಸ್ಯರನ್ನು ಕೋರಂ ಉದ್ದೇಶಕ್ಕಾಗಿ ಲೆಕ್ಕ ಹಾಕಲಾಗುವುದು.
2. ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ಎಜಿಎಂ ಸೂಚನೆಯನ್ನು ಹಾಗೂ ಹಣಕಾಸು ವರ್ಷ 2024–25ರ ವಾರ್ಷಿಕ ವರದಿಯನ್ನು ಕಂಪನಿ/ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ರವರಲ್ಲಿ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸಿದ ಸದಸ್ಯರಿಗೆ ಇ–ಮೇಲ್ ಮೂಲಕ ಶುಕ್ರವಾರ, 04ನೇ ಜುಲೈ 2025ರಂದು ಕಳುಹಿಸಲಾಗಿದೆ. ಕಂಪನಿಯ ಎಜಿಎಂ ಸೂಚನೆ ಹಾಗೂ 2024–25 ರ ವಾರ್ಷಿಕ ವರದಿಯ ಭೌತಿಕ ಪ್ರತಿಯನ್ನು ಸದಸ್ಯರ ಕೋರಿಕೆ ಮೇರೆ ಕಳುಹಿಸಿಕೊಡಲಿದೆ. ಸದಸ್ಯರು ಅಂತಹ ದಾಖಲೆಗಳನ್ನು ಪರಿಶೀಲನೆ ನಡೆಸಲು ಇಚ್ಚಿಸಿದಲ್ಲಿ ತಮ್ಮ ಪೋಲಿಯೋ ಸಂ./ಡಿಪಿಐಡಿ ಮತ್ತು ಕ್ಲೈಂಟ್ ಐಡಿಯನ್ನು **complianceofficer@aadharhousing.com** ಗೆ ಇ–ಮೇಲ್ ಕಳುಹಿಸಬಹುದು.
3. ಮೇಲೆ ಹೇಳಲಾದ ದಾಖಲೆಗಳು ಕಂಪನಿಯ ವೆಬ್‌ಸೈಟ್ **https://aadharhousing.com/disclosures-under-regulation-62-of-the-sebi-lodr-regulation-2015-pdf/annual-report** ರಲ್ಲಿ ಹಾಗೂ ಕ್ರಮವಾಗಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳು ಅಂದರೆ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ನ **www.bseindia.com** ಮತ್ತು **www.nseindia.com** ನಲ್ಲಿ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) **www.evoting.nsdl.com** ನಲ್ಲಿ ಸಹ ಲಭ್ಯವಿರುತ್ತದೆ.
4. ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಿದಂತೆ ದಾಖಲೆಗಳು ವಿದ್ಯುನ್ಮಾನ ರೀತಿಯಲ್ಲಿ ಪರಿಶೀಲನೆ ನಡೆಸಲು ಯಾವುದೇ ಶುಲ್ಕವಿಲ್ಲದೆ ಎಜಿಎಂ ಸೂಚನೆ ಪ್ರಸಾರವಾದ ದಿನದಿಂದ ಎಜಿಎಂ ದಿನಾಂಕದವರೆಗೆ ಸದಸ್ಯರಿಗೆ ಲಭ್ಯವಿರುತ್ತದೆ. ಸದಸ್ಯರು ಅಂತಹ ದಾಖಲೆಗಲನ್ನು ಪರಿಶೀಲನೆ ನಡೆಸಲು ಇಚ್ಚಿಸಿದಲ್ಲಿ ಅವುಗಳಿಗೆ **complianceofficer@aadharhousing.com** ಗೆ ಇ–ಮೇಲ್ ಕಳುಹಿಸಬಹುದು.
5. ರಿಮೋಟ್ ಇ–ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಇ–ಮತದಾನಕ್ಕೆ ಸೂಚನೆಗಳು

ಸೆಕ್ಷನ್ 108 ರ ಕಂಪನಿಗಳ ಕಾಯಿದೆ, 2013ಮತ್ತು ನಿಯಮ 20 ನ್ನು ಓದಿಕೊಂಡಂತೆ ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014 ಕಾಲಾನುಕಾಲಕ್ಕೆ ತಿದ್ದುಪಡಿಯಾದಂತೆ ನಿಯಂತ್ರಣ 44 ರ ಸೆಬಿ (ಎಲ್‌ಒಡಿಆರ್) ನಿಯಂತ್ರಣಗಳು, 2015 ರಂತೆ ಷೇರುದಾರರಿಗೆ 35ನೇ ಎಜಿಎಂ ಸಂದರ್ಭದಲ್ಲಿ ಎಲ್ಲಾ ನಡಾವಳಿಗಳ ಮೇಲೆ ತಮ್ಮ ಮತವನ್ನು ಎಲೆಕ್ಟ್ರಾನಿಕ್ ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಇ–ಮತದಾನ ಪದ್ದತಿಯ ಮೂಲಕ ಮತಚಲಾಯಿಸಲು 35ನೇ ಎಜಿಎಂ ಸೂಚನೆಯಲ್ಲಿ ತಿಳಿಸಿದಂತೆ ಅವಕಾಶ ಮಾಡಿಕೊಡಲಾಗಿದೆ. ರಿಮೋಟ್ ಇ–ಮತದಾನ ಮತ್ತು ಎಜಿಎಂ ಸಂದರ್ಭದಲ್ಲಿ ಇ–ಮತದಾನದ ಪ್ರಕ್ರಿಯೆಗಳನ್ನು 35ನೇ ಎಜಿಎಂ ಸೂಚನೆಯಲ್ಲಿ ನೀಡಲಾಗಿದೆ. ಷೇರುದಾರರ ಇ–ಮತದಾನದ ಅರ್ಹತೆಗೆ ಕಟ್ ಆಫ್ ದಿನಾಂಕ ಮಂಗಳವಾರ, 22ನೇ ಜುಲೈ 2025 ಆಗಿರುತ್ತದೆ. ರಿಮೋಟ್ ಇ–ಮತದಾನ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ.

ರಿಮೋಟ್ ಇ–ಮತದಾನದ ಆರಂಭ : ಶುಕ್ರವಾರ, 25ನೇ ಜುಲೈ 2025 ರಂದು ಬೆಳಿಗ್ಗೆ 9.00 ಗಂಟೆ
ರಿಮೋಟ್ ಇ–ಮತದಾನ ಮುಕ್ತಾಯ : ಸೋಮವಾರ, 28ನೇ ಜುಲೈ 2025 ರಂದು ಸಂಜೆ 5.00 ಗಂಟೆ

6. ಕಟ್ ಆಫ್ ದಿನಾಂಕ ಅಂದರೆ ಮಂಗಳವಾರ, ಜುಲೈ 2025 ರವರೆಗೆ ಒಬ್ಬ ವ್ಯಕ್ತಿಯ ಹೆಸರು ಕಂಪನಿಯ ಸದಸ್ಯರ ಪಟ್ಟಿಯಲ್ಲಿ ದಾಖಲಾಗಿ, ಅಥವಾ ಡೆಪಾಸಿಟರಿಗಳು ಲಾಭದಾಯಕ ಮಾಲೀಕರ ಪಟ್ಟಿಯಲ್ಲಿದ್ದರೆ, ಅಂಥವರು, ರಿಮೋಟ್ ಇ–ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಇನ್ಸ್ಟಾಪೋಲ್ ಮೂಲಕ ಮತದಾನದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.
7. ಇ–ಮೇಲ್ ವಿಳಾಸ ನೋಂದಾಯಿಸುವುದು/ಅಪ್‌ಡೇಟ್ ಮಾಡುವ ವಿಧಾನ : ಎ) ಸದಸ್ಯರು ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿದ್ದು, ಕಂಪನಿಯೊಂದಿಗೆ ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದೆ / ಅಪ್‌ಡೇಟ್ ಮಾಡದೆ ಇದ್ದಲ್ಲಿ, ಅವರು ಇ–ಮೇಲ್ ವಿಳಾಸ ಮತ್ತು ಕೆವೈಸಿ ವಿವರಗಳನ್ನು ನೋಂದಾಯಿಸಲು ಕೋರಲಾಗಿದ್ದು, ವಿವರಗಳನ್ನು ನಮೂನೆ ಐಎಸ್‌ಆರ್–1 ಜೊತೆಗೆ ವಿನಂತಿಯನ್ನು ಸೂಕ್ತ ದಾಖಲೆಗಳೊಂದಿಗೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಗೆ ಸಲ್ಲಿಸಲು ಕೋರಲಾಗಿದೆ. ನಮೂನೆ ಐಎಸ್‌ಆರ್–1 ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ವೆಬ್‌ಸೈಟ್ **https://ris.kfintech.com/clientservices/isc/isrforms.aspx** ಮತ್ತು ಕಂಪನಿಯ ವೆಬ್‌ಸೈಟ್ **https://aadharhousing.com/investor-relations/investor-service-request-and-shareholders-communication** ನಲ್ಲಿ ಲಭ್ಯವಿರುತ್ತದೆ. ಬಿ) ಸದಸ್ಯರು ಷೇರುಗಳನ್ನು ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿದ್ದು, ತಮ್ಮ ಇ–ಮೇಲ್ ಐಡಿಯನ್ನು ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ನೋಂದಾಯಿಸದೆ ಇದ್ದಲ್ಲಿ ಅಂಥವರು ತಮ್ಮ ಇ–ಮೇಲ್ ಐಡಿಯನ್ನು ತಮ್ಮ ಡಿಮ್ಯಾಟ್ ಖಾತೆಯನ್ನು ನಿರ್ವಹಿಸುವ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್ ಬಳಿ ನೋಂದಾಯಿಸಲು /ಅಪ್‌ಡೇಟ್ ಮಾಡಲು ಕೋರಲಾಗಿದೆ.
8. ರಿಮೋಟ್ ಇ–ಮತದಾನದ ಮೂಲಕ ಮತ ಚಲಾಯಿಸಿದ ಷೇರುದಾರರು ಎಜಿಎಂಗೆ ಹಾಜರಾಗಬಹುದು. ಆದರೆ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ. ನಿರ್ಣಯದ ಮೇಲಿನ ಮತವನ್ನು ಷೇರುದಾರರಿಂದ ಚಲಾಯಿಸಿದ ನಂತರ, ಅವನು/ಅವಳು ಅದನ್ನು ತರುವಾಯ ಬದಲಾಯಿಸಲು ಅಥವಾ ಪುನಃ ಮತ ಚಲಾಯಿಸಲು ಅನುಮತಿ ನೀಡಲಾಗುವುದಿಲ್ಲ.
9. ಯಾವುದೇ ವ್ಯಕ್ತಿ ನೋಟೀಸ್ ಕಳುಹಿಸಿದ ನಂತರ ಅಂದರೆ ಕಟ್ ಆಫ್ ದಿನಾಂಕ ಅಂದರೆ ಮಂಗಳವಾರ 22ನೇ ಜುಲೈ 2025ರ ನಂತರ ಷೇರುಗಳನ್ನು ಪಡೆದು ಸದಸ್ಯರಾದಲ್ಲಿ ಅಂಥವರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳಿಗಾಗಿ evoting@nsdli.com ಅಥವಾ complianceofficer@aadharhousing.com ಗೆ ವಿನಂತಿಯನ್ನು ಕಳುಹಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆಯಬಹುದು. ಆದಾಗ್ಯೂ, ಈಗಾಗಲೇ ಎನ್‌ಎಸ್‌ಡಿಎಲ್ ನೊಂದಿಗೆ ರಿಮೋಟ್ ಇ–ಮತದಾನಕ್ಕಾಗಿ ನೋಂದಾಯಿಸಿಕೊಂಡಿದ್ದರೆ, ಅಂಥವರು ಈಗಿರುವ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಬಳಸಿ ಮತದಾನ ಮಾಡಬಹುದು.
10. ಇ–ವೋಟಿಂಗ್ ಸೌಲಭ್ಯ ಮತ್ತು / ಅಥವಾ ವಿಸಿ/ಒಎವಿಎಂ ಸೌಲಭ್ಯದ ಮೂಲಕ ಎಜಿಎಂಗೆ ಹಾಜರಾಗುವ ಬಗ್ಗೆ ವಿವರಗಳು 35ನೇ ಎಜಿಎಂ ಸೂಚನೆಯಲ್ಲಿ ಲಭ್ಯವಿರುತ್ತದೆ. ಯಾವುದೇ ಪ್ರಶ್ನೆಗಳು ಅಥವಾ ಸಮಸ್ಯೆಗಳಿದ್ದಲ್ಲಿ ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (ಎಫ್‌ಎಕ್ಯು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು "ಡೌನ್‌ಲೋಡ್" ವಿಭಾಗದಲ್ಲಿ ವೆಬ್‌ಸೈಟ್ www.evoting@nsdl.com ನಿಂದ ಡೌನ್‌ಲೋಡ್ ಅಥವಾ ಕರೆಮಾಡಿ: 022–4886 7000 ಅಥವಾ ವಿನಂತಿಯನ್ನು ಶ್ರೀ ಫಲ್ಗುಣಿ ಚಕ್ರಬರ್ತಿ, ಸಹಾಯಕ ವ್ಯವಸ್ಥಾಪಕರು, ಎನ್‌ಎಸ್‌ಡಿಎಲ್, 3ನೇ ಮಹಡಿ, ನಮನ್ ಚೇಂಬರ್, ಪ್ಲಾಟ್ ಸಿ–32, ಜಿ ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ, ಮುಂಬಯಿ, ಮಹಾರಾಷ್ಟ್ರ–400 051, evoting@nsdl.com ಗೆ ಕಳುಹಿಸಬಹುದು. ಇವರು ವಿದ್ಯುನ್ಮಾನ ರೀತಿಯಲ್ಲಿ ನಡೆಯುವ ಇ–ಮತದಾನ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಲಿರುವರು. ಸದಸ್ಯರು ಕಂಪನಿಯ ಕಾಂಪ್ಲಯನ್ಸ್ ಅಧಿಕಾರಿಗೆ complianceofficer@aadharhousing.com ಗೆ ಸಹ ಬರೆಯಬಹುದು.
11. ಸದಸ್ಯರು ಎಜಿಎಂ ಸೂಚನೆಯನ್ನು ಅದರಲ್ಲೂ ನಿರ್ದಿಷ್ಟವಾಗಿ 35ನೇ ಎಜಿಎಂ ಗೆ ಹಾಜರಾಗುವ ಸೂಚನೆಗಳು, ರಿಮೋಟ್ ಇ–ಮತದಾನದ ಮೂಲಕ ಮತಚಲಾಯಿಸುವುದು ಅಥವಾ ಎಜಿಎಂ ಸಂದರ್ಭದಲ್ಲಿ ಇನ್ಸ್ಟಾ ಪೋಲ್ ಮೂಲಕ ಮತದಾನದ ಬಗ್ಗೆ ಎಜಿಎಂ ಸೂಚನೆಯ ಟಿಪ್ಪಣಿಯಲ್ಲಿ ನೀಡಲಾದ ವಿವರಗಳನ್ನು ಜಾಗರೂಕತೆಯಿಂದ ಓದಿ ತಿಳಿದುಕೊಳ್ಳಲು ವಿನಂತಿಸಲಾಗಿದೆ.
12. ಕಂಪನಿಯ ನಿರ್ದೇಶಕರ ಮಂಡಳಿಯು 35ನೇ ಎಜಿಎಂ ಸಂಧರ್ಭದಲ್ಲಿ ಎಜಿಎಂ ಸೂಚನೆಯಲ್ಲಿ ಹೇಳಲಾದ ವ್ಯವಹಾರಗಳನ್ನು ನಡೆಸಲು, ಎಜಿಎಂ ಸಂದರ್ಭದ ಇ–ವೋಟಿಂಗ್/ರಿಮೋಟ್ ಇ–ವೋಟಿಂಗ್‌ನ್ನು ಪರಿಶೀಲಿಸಿ, ಮುಕ್ತ ಹಾಗೂ ಪಾರದರ್ಶಕ ರೀತಿಯಲ್ಲಿ ನಡೆಸಲು ಶ್ರೀ ಆಶಿಷ್ ಭಟ್, ಎಸಿಎಸ್–19639, ಸಿಒಪಿ ನಂ. 7023, ಮಾಲೀಕರು, ಮೆ॥ ಆಶಿಷ್ ಕೆ ಭಟ್ ಆಂಡ್ ಅಸೋಸಿಯೇಟ್ಸ್, ಪ್ರಾಕ್ಟೀಸಿಂಗ್ ಕಂಪನಿ ಕಾರ್ಯದರ್ಶಿ ಇವರನ್ನು ತಪ್ಪಿದಲ್ಲಿ ಶ್ರೀ ರಾಯ್ ಜಾಕೋಬ್, ಎಫ್‌ಸಿಎಸ್–9017, ಸಿಒಪಿ ನಂ. 8220, ಮಾಲೀಕರು, ಮೆ॥ ರಾಯ್ ಜಾಕೋಬ್ ಆಂಡ್ ಕೊ, ಕಂಪನಿ ಕಾರ್ಯದರ್ಶಿಗಳು ಇವರನ್ನು ನೇಮಿಸಿದೆ.
13. ವಾರ್ಷಿಕ ವರದಿ ಬಗ್ಗೆ ಯಾವುದೇ ವಿಚಾರಣೆಗಳಿದ್ದಲ್ಲಿ, ಸದಸ್ಯರು ಕೆಫಿನ್ ಗೆ ಇ–ಮೇಲ್ ಐಡಿ complianceofficer@aadharhousing.com ಇವರಿಗೆ ಬರೆಯಬಹುದು

ಆಧಾರ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಹರ್ಷದ ಪಾಠಕ್
ಕಂಪನಿ ಕಾರ್ಯದರ್ಶಿ ಮತ್ತು ಕಾಂಪ್ಲಯನ್ಸ್ ಅಧಿಕಾರಿ
ಎಸಿಎಸ್:19534

ಸ್ಥಳ: ಮುಂಬಯಿ
ದಿನಾಂಕ: 04ನೇ ಜುಲೈ 2025

---

happiest minds
The Mindful IT Company
Born Digital . Born Agile

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್
ನೋಂದಾಯಿತ ಕಛೇರಿ: 53/1–4, ಹೊಸೂರು ಮುಖ್ಯ ರಸ್ತೆ, ಮಡಿವಾಳ, (ಮಡಿವಾಳ ಪೊಲೀಸ್ ಠಾಣೆ ನಂತರ) ಬೆಂಗಳೂರು – 560 068, ಕರ್ನಾಟಕ, ಭಾರತ
ಕಂಪನಿಯ **CIN: L72900KA2011PLC057931**
ದೂರವಾಣಿ: +91 80 6196 0300, ಫ್ಯಾಕ್ಸ್: +91 80 6196 0700
ಇಮೇಲ್: investors@happiestminds.com; ವೆಬ್‌ಸೈಟ್: www.happiestminds.com

ವಿಡಿಯೋ ಕಾನ್ಫರೆನ್ಸ್ (ವಿಸಿ) ಮೂಲಕ ನಡೆಯಲಿರುವ 14ನೇ ವಾರ್ಷಿಕ ಸಾಮಾನ್ಯ ಸಭೆ (ಎಜಿಎಂ) ಮತ್ತು ಇ–ವೋಟಿಂಗ್ ಬಗ್ಗೆ ಸಾರ್ವಜನಿಕ ಸೂಚನೆ

1. ಸದಸ್ಯರ ಗಮನಕ್ಕೆ: ಎಜಿಎಮ್ ಸೂಚನೆಯಲ್ಲಿ ಸೂಚಿಸಲಾದ ವ್ಯವಹಾರಗಳನ್ನು ನಡೆಸುವ ಸಲುವಾಗಿ ಕಂಪನಿಯ 14ನೇ ಎಜಿಎಮ್ ಅನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಮಂಡಳಿ ಹೊರಡಿಸಿರುವ ವಿವಿಧ ಸುತ್ತೋಲೆಗಳಿಗೆ (ಒಟ್ಟಾರೆಯಾಗಿ "ಸುತ್ತೋಲೆಗಳು" ಎಂದು ಉಲ್ಲೇಖಿಸಲಾಗುತ್ತದೆ) ಅನುಸಾರವಾಗಿ ವಿ.ಸಿ. ಮೂಲಕ, ಮಂಗಳವಾರ, 29ನೇ ಜುಲೈ 2025 ರಂದು ಸಂಜೆ 4.00 ಗಂಟೆಗೆ (ಭಾ.ಕಾ.) ವಿದ್ಯುನ್ಮಾನ ವಿಧಾನದಲ್ಲಿ ನಡೆಯುವ ಮತದಾನದ ("ಇ–ವೋಟಿಂಗ್") ಮೂಲಕ ನಡೆಸಲಾಗುವುದು.
2. ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ/ಡಿಪಾಸಿಟರಿ ಪಾರ್ಟಿಸಿಪೆಂಟರೊಂದಿಗೆ ನೋಂದಾಯಿಸಿಕೊಂಡಿರುವ ಎಲ್ಲ ಸದಸ್ಯರಿಗೂ ಎಜಿಎಮ್ ಸೂಚನೆಯ ಮತ್ತು 2024–25 ಸಾಲಿನ ಸಮಗ್ರ ವಾರ್ಷಿಕ ವರದಿಯ ವಿದ್ಯುನ್ಮಾನ ಪ್ರತಿಗಳನ್ನು ಜೊತೆಗೆ ಇ–ವೋಟಿಂಗ್‌ಗಾಗಿ ಲಾಗಿನ್ ಆಗಲು ಹಾಗೂ ಎಜಿಎಮ್ ನಲ್ಲಿ ಭಾಗವಹಿಸಲು ಅಗತ್ಯವಾದ ಅಧಿಕಾರಗಳನ್ನು ವಿ.ಸಿ. ಮೂಲಕ ಕಳುಹಿಸಲಾಗಿದೆ. ಎಜಿಎಮ್ ಸೂಚನೆಯನ್ನು ಕಳುಹಿಸಿದ ನಂತರ ಆದರೆ ಅಂತಿಮ ದಿನಾಂಕವಾದ ಬುಧವಾರ, 23ನೇ ಜುಲೈ 2025 ರಂದು ಅಥವಾ ಅದಕ್ಕೆ ಮೊದಲು ಸದಸ್ಯರಾದವರು ಕಂಪನಿಯ ವೆಬ್‌ಸೈಟ್ https://www.happiestminds.com/investors/agm-and-annual-report/, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್‌ನ https://www.bseindia.com/ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ https://www.nseindia.com/ ಹಾಗೂ ಕಂಪನಿಯ ಆರ್.ಟಿ.ಎ. ಆಗಿರುವ ಕೆಫಿನ್ ಟೆಕ್ನಾಲಜಿಸ್ ಲಿಮಿಟೆಡ್‌ನ https://evoting.kfintech.com/ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುವ ಎಜಿಎಮ್ ಸೂಚನೆ ಮತ್ತು 2024–25 ಸಾಲಿನ ಸಮಗ್ರ ವಾರ್ಷಿಕ ವರದಿಗಳನ್ನು ನೋಡಬಹುದು.
3. ಇ–ವೋಟಿಂಗ್ ಸೌಲಭ್ಯವು ಶನಿವಾರ, 26ನೇ ಜುಲೈ 2025 ಬೆಳಗ್ಗೆ 9.00ರಿಂದ (ಭಾ.ಕಾ.) ಸೋಮವಾರ, 28ನೇ ಜುಲೈ 2025ರ ಸಂಜೆ 5.00ರವರೆಗೆ (ಭಾ.ಕಾ.) ಲಭ್ಯವಿರುತ್ತದೆ.
4. ಇ–ವೋಟಿಂಗ್ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದಂತಹ ಸದಸ್ಯರೂ ಎಜಿಎಮ್‌ನಲ್ಲಿ ಭಾಗವಹಿಸಬಹುದಾದರೂ ಸಭೆಯಲ್ಲಿ ಮತ್ತೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಡಿಪಾಸಿಟರಿ ಪಾರ್ಟಿಸಿಪೆಂಟರು ನಿರ್ವಹಿಸುವ ಸದಸ್ಯರ ನೋಂದಣಿ ಅಥವಾ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ಅಂತಿಮ ದಿನಾಂಕವಾದ 23ನೇ ಜುಲೈ 2025ರಂತೆ ಹೆಸರು ದಾಖಲಾಗಿರುವ ವ್ಯಕ್ತಿಗಳು ಮಾತ್ರ ಇ–ವೋಟಿಂಗ್ ಮತ್ತು ಮತದಾನದ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ. ಮೇಲೆ ತಿಳಿಸಲಾದ ದಿನಾಂಕ ಮತ್ತು ಸಮಯದ ನಂತರ ಇ–ಮತದಾನಕ್ಕೆ ಅವಕಾಶವಿರುವುದಿಲ್ಲ ಮತ್ತು ಸದರಿ ಅವಧಿಯ ನಂತರ ಆರ್‌ಟಿಎ, ಇ–ಮತದಾನ ಮಾಡ್ಯೂಲನ್ನು ನಿಷ್ಕ್ರಿಯಗೊಳಿಸುತ್ತದೆ/ನಿರ್ಬಂಧಿಸುತ್ತದೆ.
5. ಸದಸ್ಯರು ಲಾಗಿನ್ ಅಧಿಕಾರಗಳನ್ನು ಬಳಸಿಕೊಂಡು ಆರ್‌ಟಿಎ ಒದಗಿಸಿರುವ https://emeetings.kfintech.com/ ವೇದಿಕೆಯಲ್ಲಿ ವಿಸಿ ಮೂಲಕ ಎಜಿಎಮ್ ಗೆ ಹಾಜರಾಗಬಹುದು. ವಿ.ಸಿ. ವೇದಿಕೆಯ ಭಾಗವಾಗಿ ಇ–ವೋಟಿಂಗ್ ಸೌಲಭ್ಯವನ್ನೂ ಒದಗಿಸಲಾಗುತ್ತದೆ.
6. ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಎಜಿಎಮ್ ಸೂಚನೆಯಲ್ಲಿರುವ ಟಿಪ್ಪಣಿಗಳನ್ನು ನೋಡಿ. ಇ–ವೋಟಿಂಗ್ ಸೌಲಭ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಕುಂದುಕೊರತೆಗಳಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ: ಶ್ರೀ ಉಮೇಶ್ ಪಾಂಡೆ, ಮ್ಯಾನೇಜರ್, ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲೆನಿಯಮ್ ಟವರ್ ಬಿ, ಪ್ಲಾಟ್ 31 ಮತ್ತು 32, ಫೈನಾನ್ಷ್ಯಲ್ ಡಿಸ್ಟ್ರಿಕ್ಟ್, ನಾನಕ್ರಾಮಗುಡ, ಸೆರಿಲಿಂಗಂಪಲ್ಲಿ ಮಂಡಲ್, ಹೈದರಾಬಾದ್ – 500 032; ರಂಗಾರೆಡ್ಡಿ, ತೆಲಂಗಾಣ, ಭಾರತ; ಇಮೇಲ್:einward.ris@kfintech.com; ಶುಲ್ಕರಹಿತ ಸಂಖ್ಯೆ: 1– 800–309–4001.
7. ಕಂಪನಿಯ ರೆಕಾರ್ಡ್ ದಿನಾಂಕ ಅಂದರೆ ಜುಲೈ 18, 2025ರಂದು ಇಕ್ವಿಟಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ: ಮೂಲದಲ್ಲಿ ತೆರಿಗೆ ಕಡಿತ ("ಟಿಡಿಎಸ್") ಮಾಡಿ, ಪ್ರತಿ ಇಕ್ವಿಟಿ ಷೇರಿಗೆ (ಎಜಿಎಮ್ ನಲ್ಲಿ ಅನುಮೋದಿಸಿದ ನಂತರ) 3.50/– ರೂಗಳಂತೆ ಅಂತಿಮ ಡಿವಿಡೆಂಡನ್ನು ಆಗಸ್ಟ್ 05, 2025 ರಂದು ಅಥವಾ ನಂತರ ಪಾವತಿಸಲಾಗುತ್ತದೆ. ಟಿಡಿಸ್, ಮತ್ತು ಶೂನ್ಯ ಅಥವಾ ಕಡಿಮೆ ತೆರಿಗೆ ದರಕ್ಕಾಗಿ ಸಲ್ಲಿಸಬೇಕಾಗುವ ನಮೂನೆಗಳ ಕುರಿತು ವಿವರವಾದ ಮಾಹಿತಿಗಾಗಿ ಕಂಪನಿಯ ವೆಬ್‌ಸೈಟನ್ನು ಸಂದರ್ಶಿಸಿ: https://www.happiestminds.com/investors/disclosures/.

ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜಿಸ್ ಲಿಮಿಟೆಡ್ ಪರವಾಗಿ
(ಸಹಿ/–)
ಪ್ರವೀಣ್ ಕುಮಾರ್ ದರ್ಶನಕರ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

ದಿನಾಂಕ: ಜುಲೈ 04, 2025
ಸ್ಥಳ: ಬೆಂಗಳೂರು

PUBLIC NOTICE

Our client **Smt. B.C. Lakshmidevi** wife of Srinivas has lost the original registered sale deed dated 17-10-2006, document No. KEN-1-26019/2006-07, stored in CD.No. KEND338, registered in the office of Kengeri Sub-Registrar, in respect of site No. 4, old Katha No.58 new Katha No.58/P1, situated at, Ajjanahalli Village (Chandrappa Circle), Chikkanahalli Village Panchayath, Tavarekere Hobli, Bengaluru South Taluk, and in this regard she has filed a complaint before Tavarekere Police Station on 13-12-2017, vide Acknowledgment No. GSC No. PO0277170600809. If any person/s found the above said sale deed, they are requested to submit the same to the under signed or to the Tavarekere Police Station immediately and the same will be suitably rewarded.

Sd/-
Varnakara Reddy. K.B,
Advocate & Legal consultants,
No. 201, 2nd Floor, Brigade Links, 1st Main, Sheshadripuram, Bengaluru-560 020
Mob:9980565989

ಮಾನ್ಯ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ.697/2025

ಅರ್ಜಿದಾರರು: ಶ್ರೀಮತಿ ಗೌರಮ್ಮ ಬಿನ್ ಲೇಟ್ ಈರಭದ್ರೇಗೌಡ @ ವೀರಭದ್ರೇಗೌಡ ವಯಸ್ಸು 45 ವರ್ಷ ವಾಸ: ಅಜ್ಜೀಗೌಡನವಲಸೆ ಗ್ರಾಮ ಮರಳವಾಡಿ ಹೋಬಳಿ ಹಾರೋಹಳ್ಳಿ ತಾಲ್ಲೂಕು ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು. ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಅಜ್ಜೀಗೌಡನವಲಸೆ ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1, 2 ಮತ್ತು 6ನೇ ಅರ್ಜಿದಾರರ ತಾಯಿ, 3ನೇ ಅರ್ಜಿದಾರರ ಅತ್ತೆ, 4 ಮತ್ತು 5ನೇ ಅರ್ಜಿದಾರರ ಅಜ್ಜಿಯವರಾದ ಶ್ರೀಮತಿ ದೇವಮ್ಮ ಕೋಂ ಲೇಟ್ ಈರಭದ್ರೇಗೌಡ @ ವೀರಭದ್ರೇಗೌಡ ರವರು, ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಅಜ್ಜೀಗೌಡನವಲಸೆ ಗ್ರಾಮದಲ್ಲಿ ದಿನಾಂಕ 05.03.2011 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14/08/2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜುಲೈ 07ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಸಿದ್ಧಾರ್ಥ
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 21/06/2025

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ : 444/2025

ಅರ್ಜಿದಾರರು: 1. ಶ್ರೀಮತಿ, ದೇವಮ್ಮ @ ಚನ್ನಮ್ಮ ಬಿನ್ ಲೇಟ್. ಲಿಂಗೇಗೌಡ, ವಾಸ: ಮನೆ ನಂ.15, 7ನೇ ಕ್ರಾಸ್, 30ನೇ ಮುಖ್ಯ ರಸ್ತೆ, ಶ್ರೀ ಹರಿ ಕಲ್ಯಾಣ ಮಂಟಪದ ಹತ್ತಿರ, ಬನಶಂಕರಿ 3ನೇ ಹಂತ, ಬೆಂಗಳೂರು ದಕ್ಷಿಣ, ಬೆಂಗಳೂರು–56008. 2. ಶ್ರೀಮತಿ. ಜಯಮ್ಮ ಬಿನ್ ಲೇಟ್. ಲಿಂಗೇಗೌಡ, ವಾಸ : ಅನುಮಾನಹಳ್ಳಿ ಗ್ರಾಮ, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೇಕ್ಕಾಧಿಕಾರಿ, ಬೂದಿಗುಪ್ಪೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, (ರಾಮನಗರ)ಬೆಂಗಳೂರು ದಕ್ಷಿಣ ಜಿಲ್ಲೆ.

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಾಯಿಯಾದ "ಶ್ರೀಮತಿ. ಕಾಳಮ್ಮ ಕೋಂ ಲೇಟ್ ಲಿಂಗೇಗೌಡ ರವರು ಬೂದಿಗುಪ್ಪೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, (ರಾಮನಗರ) ಬೆಂಗಳೂರು ದಕ್ಷಿಣ ಜಿಲ್ಲೆ ಯಲ್ಲಿ ದಿನಾಂಕ:25/05/1985 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ. 31/07/2025 ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

2025 ಜುಲೈ 2ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹೆಚ್.ಡಿ.ಲಿಂಗರಾಜು, ವಕೀಲರು.
ವಕೀಲರು, ಕನಕಪುರ ಟೌನ್
ದಿನಾಂಕ: 02–07–2025
ಸ್ಥಳ: ಕನಕಪುರ

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ : 445/2025

ಅರ್ಜಿದಾರರು: 1. ಶ್ರೀಮತಿ, ದೇವಮ್ಮ @ ಚನ್ನಮ್ಮ ಬಿನ್ ಲೇಟ್. ಲಿಂಗೇಗೌಡ, ವಾಸ: ಮನೆ ನಂ.15, 7ನೇ ಕ್ರಾಸ್, 30ನೇ ಮುಖ್ಯ ರಸ್ತೆ, ಶ್ರೀ ಹರಿ ಕಲ್ಯಾಣ ಮಂಟಪದ ಹತ್ತಿರ, ಬನಶಂಕರಿ 3ನೇ ಹಂತ, ಬೆಂಗಳೂರು ದಕ್ಷಿಣ, ಬೆಂಗಳೂರು–56008. 2. ಶ್ರೀಮತಿ. ಜಯಮ್ಮ ಬಿನ್ ಲೇಟ್. ಲಿಂಗೇಗೌಡ, ವಾಸ : ಅನುಮಾನಹಳ್ಳಿ ಗ್ರಾಮ, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ಪ್ರಮಾಣ ನೋಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ 2. ಗ್ರಾಮ ಲೇಕ್ಕಾಧಿಕಾರಿ, ಬೂದಿಗುಪ್ಪೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, (ರಾಮನಗರ)ಬೆಂಗಳೂರು ದಕ್ಷಿಣ ಜಿಲ್ಲೆ.

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ಮತ್ತು 2ನೇ ಅರ್ಜಿದಾರರ ತಂದೆಯಾದ "ಶ್ರೀ. ಲಿಂಗೇಗೌಡ ಬಿನ್ ಲೇಟ್. ದೊಡ್ಡೀರೇಗೌಡ ರವರು ಬೂದಿಗುಪ್ಪೆ ಗ್ರಾಮ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು, (ರಾಮನಗರ) ಬೆಂಗಳೂರು ದಕ್ಷಿಣ ಜಿಲ್ಲೆ ಯಲ್ಲಿ ದಿನಾಂಕ:06/01/1986 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣಪತ್ರ ನೀಡಲು ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣದ ಬಗ್ಗೆ ಯಾರಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ. 31/07/2025 ರ ಬೆಳಿಗ್ಗೆ ಸರಿಯಾಗಿ 11:00 ಗಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದು ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

2025 ಜುಲೈ 2ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ,
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಹೆಚ್.ಡಿ.ಲಿಂಗರಾಜು, ವಕೀಲರು.
ವಕೀಲರು, ಕನಕಪುರ ಟೌನ್
ದಿನಾಂಕ: 02–07–2025
ಸ್ಥಳ: ಕನಕಪುರ

ಸಮಾಚಾರ ಸಣ್ಣದಲ್ಲ

ಕೆ.ಜೆ.ಜಲಜಾಕ್ಷಿ ಅಮಾನತು

ಬೆಂಗಳೂರು: ವಿಧಾನ ಪರಿಷತ್ತಿನ ಸಚಿವಾಲಯದಲ್ಲಿ ಸಂವಿಧಾನ ದಿನದ ಅಂಗವಾಗಿ ಭಾರತ ಸಂವಿಧಾನ ಪೀಠಿಕೆ ಓದುವ ಕಾರ್ಯಕ್ರಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವ ಚಿತ್ರ ಇಡದೆ ಅಗೌರವ ತೋರಿರುವ ಆರೋಪದ ಹಿನ್ನಲೆಯಲ್ಲಿ ಪರಿಷತ್ತಿನ ಉಪಕಾರ್ಯದರ್ಶಿ ಕೆ.ಜೆ.ಜಲಜಾಕ್ಷಿ ಅವರನ್ನು ಅಮಾನತು ಮಾಡಲಾಗಿದೆ. ವಿಧಾನಸೌಧದ ಸೆಂಟ್ರಲ್‌ನಲ್ಲಿ ನಡೆದ ಆಚರಣೆಯ ಸಂವಿಧಾನ ಪೀಠಿಕೆ ಓದುವ ಬೋಧನಾ ಕಾರ್ಯಕ್ರಮದಲ್ಲಿ ಸಚಿವಾಲಯದ ನೌಕರರು ಭಾಗವಹಿಸಿದ್ದರು. ಸರಕಾರದ ಸುತ್ತೋಲೆ ಅನ್ವಯ ಸಂವಿಧಾನದ ಪಿತಾಮಹ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಇಡದೇ ಇರುವುದನ್ನು ಗಮನಿಸಿದ ಪರಿಷತ್ತಿನ ವರದಿಗಾರ ಟಿ.ಸಿ.ಹನುಮಂತರಾಜು ಅವರು ಮೇಲಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಕೆ.ಜೆ.ಜಲಜಾಕ್ಷಿ ಅವರಿಗೆ ನೋಟಿಸ್ ನೀಡಲಾಗಿದ್ದು, ಸಮರ್ಪಕವಾದ ಉತ್ತರ ನೀಡಿರುವುದಿಲ್ಲ. ಸರಕಾರದ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಹಿನ್ನಲೆಯಲ್ಲಿ ಕೆ.ಜೆ.ಜಲಜಾಕ್ಷಿ ಅವರನ್ನು ಅಮಾನತು ಮಾಡಲಾಗಿದೆ.

ಜು.17ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು: ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ ಪ್ರದಾನ ಸಮಾರಂಭ ಜು.17 ರಂದು ಸಂಜೆ 5 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಡಮಾಡುವ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿಗೆ ಈ ಬಾರಿ ಪಂಡಿತರತ್ನ ಎ.ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಭಾಜನವಾಗಿದೆ. ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭಗವಾನ್ ಮಹಾವೀರ ಶಾಂತಿ ಪ್ರಶಸ್ತಿ ಮತ್ತು ಇಲಾಖೆಯ ವಿವಿಧ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸೊಗಡು ಸಂವಾದ ಕಾರ್ಯಕ್ರಮ ನಾಳೆ

ಬೆಂಗಳೂರು: ಸೊಗಡು ಸಂವಾದ ಕಾರ್ಯಕ್ರಮ ಭಾನುವಾರ ಬೆಳಗ್ಗೆ 9.30ಕ್ಕೆ ರಾಜರಾಜೇಶ್ವರಿ ನಗರದ ಸೊಗಡು ಸಂತೆಯಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ತಜ್ಞರೊಂದಿಗೆ ನಡೆದು ಪ್ರಕೃತಿಯಲ್ಲಿ ಲಭ್ಯವಿರುವ ಗಿಡಗಳು, ಹೂವುಗಳು, ಸ್ಥಳೀಯ ಸಸ್ಯ ವೈವಿಧ್ಯತೆಯೊಂದಿಗೆ ಸಂಪರ್ಕ ಸಾಧಿಸಲು, ಕಾಡು ಕಳೆಗಳನ್ನು ಅರ್ಥಮಾಡಿಕೊಳ್ಳಲು, ಸಮಗ್ರ ಯೋಗಕ್ಷೇಮ ಸಾಧಿಸಲು ಮತ್ತು ಅವುಗಳನ್ನು ಪೌಷ್ಟಿಕ ಆಹಾರ ಅಥವಾ ಗುಣಪಡಿಸುವ ಗಿಡಮೂಲಿಕೆಗಳಾಗಿ ಬಳಸುವದರ ಬಗ್ಗೆ ವಿಸ್ತಾರವಾಗಿ ಚರ್ಚೆ ನಡೆಸಲಾಗುವುದು. ಕಾರ್ಯಕ್ರಮದಲ್ಲಿ ಭಾಗವಹಿಸಲು 30 ಜನರಿಗೆ ಮಾತ್ರ ಅವಕಾಶವಿದ್ದು, ಆಸಕ್ತರು 9845707043 ಸಂಖ್ಯೆಗೆ ಕರೆ ಮಾಡಿ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್‌ಸಿ ಜನಾಂಗಕ್ಕೆ ಸರಕಾರದಿಂದ ಅನ್ಯಾಯ

ಬೆಂಗಳೂರು: ಪರಿಶಿಷ್ಟ ಜಾತಿಗಳ (ಎಸ್‌ಸಿ) ಜನಗಣತಿಯಲ್ಲಿ ಶೇ.50ಕ್ಕಿಂತ ಹೆಚ್ಚು ಜನರು ಭಾಗವಹಿಸಲು ಸಾಧ್ಯವೇ ಇಲ್ಲ ಎಂದು ರಾಜ್ಯ ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಜನಗಣತಿ ನಡೆಯುತ್ತಿದೆ. ಆಗುತ್ತಿರುವ ಅನಾಹುತಗಳ ಬಗ್ಗೆ ಮಾಧ್ಯಮಗಳು ತಿಳಿಸುತ್ತಿವೆ. ನಮ್ಮ ಮನೆಗೂ ಯಾರೂ ಬಂದಿಲ್ಲ. ಆದರೆ, ಸ್ಟಿಕರ್ ಅಂಟಿಸಿ ಹೋಗಿದ್ದಾರೆ. ಪರಿಶಿಷ್ಟ ಜಾತಿಯವರ ಮನೆಗೆ ಬಂದು ಸ್ಟಿಕರ್ ಅಂಟಿಸಿ ಹೋಗಿದ್ದರೆ ಅದನ್ನು ನಾವು ಒಪ್ಪಬಹುದಿತ್ತು. ಎಲ್ಲ ಮನೆಗಳಿಗೂ ಸ್ಟಿಕರ್ ಅಂಟಿಸಿಕೊಂಡು ಹೋಗುತ್ತಿದ್ದಾರೆ. ಆನ್‌ಲೈನ್‌ನಲ್ಲೂ ಅವಕಾಶ ಇದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಅಲ್ಲಿ ಪರಿಶಿಷ್ಟ ಜಾತಿ ಸರ್ಟಿಫಿಕೇಟ್ ನಂಬರ್ ಹೇಳಬೇಕು. ಬೇರೆ ಬೇರೆ ಮಾಹಿತಿ ಕೇಳುತ್ತದೆ. ಅದನ್ನು ಒದಗಿಸಲು ಸಾಧ್ಯವೇ ಇಲ. ಎಲ್ಲರೂ ವಿದ್ಯಾವಂತರಲ್ಲ. ಕೆಲವರಿಗೆ ಸರ್ಟಿಫಿಕೇಟ್ ಇದೆ. ಇನ್ನೂ ಕೆಲವರಿಗೆ ಇಲ್ಲ. ಇದು ಸರಕಾರದ ಕಣ್ಣೊರೆಸುವ ತಂತ್ರವೇ ಹೊರತು ಇದರಲ್ಲಿ ಸರಿಯಾದ ಅಂಕಿಅಂಶ ಸಿಗಲು ಸಾಧ್ಯವಿಲ್ಲ. ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಮಾಡುವ ಕೆಲಸ ಕಾಂಗ್ರೆಸ್ ಸರಕಾರ ಮಾಡುತ್ತಿದೆ ಎಂದರು. ಕೆಲವು ಸಚಿವರು ಅವರ ಸಚಿವ ಸ್ಥಾನದ ವಿಚಾರದಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಬಿಟ್ಟಿದ್ದಾರೆ. ಅವರು ಆರ್‌ಎಸ್‌ಎಸ್, ಬಿಜೆಪಿಯನ್ನು ನಿಂದಿಸಬೇಕು, ಸುಳ್ಳು ಸುದ್ದಿ ಹಬ್ಬಿಸಬೇಕು. ದಿನವೂ ಸುದ್ದಿಯಲ್ಲಿರಬೇಕೆಂಬ ಗೀಳಿಗೆ ಬಿದ್ದಿದ್ದಾರೆ. ಪ್ರಿಯಾಂಕ್ ಖರ್ಗೆ ಹುಟ್ಟಿದ ಮೇಲೆ ಆರೆಸ್ಸೆಸ್ ಹುಟ್ಟಿಲ್ಲ ಎಂಬುದನ್ನು ತಿಳಿದುಕೊಳ್ಳಲಿ. ಆರ್‌ಎಸ್‌ಎಸ್‌ಗೆ 100 ವರ್ಷ ಆಗುತ್ತಿದೆ. ನೆಹರೂ, ಇಂದಿರಾ ಗಾಂಧಿ, ನಿಮ್ಮ ತಂದೆಯಿಂದ ಏನೂ ಮಾಡಲು ಆಗಿಲ್ಲ. ಬಡವರು ನರೇಗದಡಿ ಕೆಲಸ ಮಾಡಿ ಹಣ ಬಂದಿಲ್ಲವೆಂದು ಆರು ತಿಂಗಳಿಂದ ಕಾಯುತ್ತಿದ್ದಾರಲ್ಲವೇ? ಅದನ್ನು ಕೊಡಿಸುವ ಯೋಗ್ಯತೆ ನಿಮಗಿದೆಯೇ ಎಂದು ಪ್ರಶ್ನಿಸಿದರು.

{ ಶಿವರಾಜ್ ತಂಗಡಗಿ } ಸಚಿವ

ಉತ್ತರ ಕರ್ನಾಟಕ ಭಾಗದ ಶಾಸಕ ಜತೆಗೆ ಉಸ್ತುವಾರಿ ರಣದೀಪ್ ಸುರ್ಜೇವಾಲ ಸೋಮವಾರದಿಂದ ಮಾತನಾಡಲಿದ್ದಾರೆ. ಸರಕಾರದಲ್ಲಿ, ಶಾಸಕರಲ್ಲಿ ಯಾವುದೇ ಅಸಮಾಧಾನವಿಲ್ಲ, ಸರಕಾರ ಸುಭದ್ರವಾಗಿದೆ. ಮನೆ ಎಂದ ಮೇಲೆ ಸಣ್ಣಪುಟ್ಟ ಭಿನ್ನಾಭಿಪ್ರಾಯ ಸಾಮಾನ್ಯ. ಹೈಕಮಾಂಡ್ ಎಲ್ಲವನ್ನೂ ಸರಿ ಮಾಡುತ್ತಾರೆ.

ಸಂಘ-ಸಂಸ್ಥೆಗಳ ಆರ್ಥಿಕ ಹೊರೆ ತಗ್ಗಿಸಲು ನಿಯಮ ಸಡಿಲಿಕೆ: ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್

ಸಿಎ ಸೈಟ್ ನವೀಕರಣ ಶುಲ್ಕ ಪಾವತಿಸಿದರೆ ಬಡ್ಡಿ ಮನ್ನಾ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಿಎ ನಿವೇಶನಗಳ ನವೀಕರಣಕ್ಕೆ ಬಾಕಿಯಿರುವ ಸಂಘ-ಸಂಸ್ಥೆಗಳಿಗೆ ಬಡ್ಡಿ ಮನ್ನಾ ಮಾಡುವ ಮಹತ್ವದ ನಿರ್ಧಾರ ಕೈಗೊಂಡಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಡಿಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಪ್ರತಿ 30 ವರ್ಷಗಳಿಗೊಮ್ಮೆ ಸಿಎ ನಿವೇಶನಗಳ ನವಿಕರಣ ಕಡ್ಡಾಯವಾಗಿದೆ. ಬಿಡಿಎ ವ್ಯಾಪ್ತಿಯಲ್ಲಿಒಟ್ಟು 1600ಕ್ಕೂ ಹೆಚ್ಚು ಸಿಎ ನಿವೇಶನ ಗಳಿದ್ದು, ಇದರಲ್ಲಿ 250 ಕ್ಕೂ ಹೆಚ್ಚು ನವೀಕರಣಕ್ಕೆ ಬಾಕಿ ಉಳಿದಿವೆ. ಈ ಹಿನ್ನೆಲೆಯಲ್ಲಿ ನಿಗದಿತ ಅವಧಿಯಲ್ಲಿ ನವೀಕರಣ ಶುಲ್ಕ ಪಾವತಿಸಿದರೆ, ನಿವೇಶನದಾರ ಸಂಘ-ಸಂಸ್ಥೆಗಳಿಗೆ ವಿಧಿಸುವ ಬಡ್ಡಿಯನ್ನು ಸಂಪೂರ್ಣ ಮನ್ನಾ ಮಾಡಲು ರಾಜ್ಯ ಸರಕಾರ ಅನುಮತಿ ನೀಡಿದೆ ಎಂದು ತಿಳಿಸಿದರು.

ಸಾರ್ವಜನಿಕ ಉಪಯುಕ್ತತಾ ನಿವೇಶನಗಳನ್ನು ಹೊಂದಿರುವ ಸಂಸ್ಥೆಗಳ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಲು, ರಾಜ್ಯ ಸರಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1989ಅನ್ನು ಸಡಿಲಿಸಲು ಆದೇಶಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ಪಡೆದಿರುವ ವಿವಿಧ ಸಂಘ, ಸಂಸ್ಥೆಗಳು ಪ್ರಾಧಿಕಾರ ಜು.5 ರಿಂದ 120 ದಿನಗಳ ಒಳಗೆ ಸಂಪೂರ್ಣ ಬಾಕಿ ಇರುವ ಗುತ್ತಿಗೆ ಮೊತ್ತ ಪಾವತಿಸಿದರೆ ನಿಯಮಗಳ ಪ್ರಕಾರ ಸಂಪೂರ್ಣ ಬಡ್ಡಿ ಮೊತ್ತ ಮನ್ನಾ ಮಾಡಲಾಗುವುದು ಎಂದು ತಿಳಿಸಿದರು.

ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು, ಧಾರ್ಮಿಕ ಸಂಸ್ಥೆಗಳು ಮತ್ತು ವಾಣಿಜ್ಯ ಸಂಸ್ಥೆಗಳು ಸೇರಿದಂತೆ ಹಲ ವಾರು ಪ್ರತಿಷ್ಠಿತ ಸಂಸ್ಥೆಗಳು ತಮ್ಮ ಗುತ್ತಿಗೆಗಳನ್ನು ನವೀಕ ರಿಸಲು ಮತ್ತು ಬಾಕಿಗಳನ್ನು ಪಾವತಿಸಲು ವಿಫಲವಾದ ಕಾರಣ ಪ್ರಾಧಿಕಾರದ ಮೇಲೆ ಆರ್ಥಿಕ ಒತ್ತಡ ಉಂಟಾ ಗಿದೆ. 30 ವರ್ಷಗಳ ಕಾಲ ನಿವೇಶನಗಳನ್ನು ಗುತ್ತಿಗೆ ನೀಡಿ ದ್ದರೂ, ಸಕಾಲದಲ್ಲಿ ಗುತ್ತಿಗೆ ಮೊತ್ತವನ್ನು ಪಾವತಿಸಲು ವಿಫಲವಾದ ಕಾರಣ ಅನೇಕ ಸಂಸ್ಥೆಗಳು 5 ಲಕ್ಷದಿಂದ 50 ಕೋಟಿ ರು.ಗಳ ವರೆಗೆ ಬಾಕಿ ಉಳಿಸಿಕೊಂಡಿವೆ. ಬಡ್ಡಿ ಹೊರೆಯಿಂದಾಗಿ ಮರುಪಾವತಿ ಅಸಾಧ್ಯವಾಗುತ್ತದೆ ಎಂದು ವಾದಿಸಿ ಅನೇಕ ಸಂಸ್ಥೆಗಳು ಪರಿಹಾರ ಕೋರಿವೆ. ಎಚ್ಚರಿಕೆಯಿಂದ ಪರಿಗಣಿಸಿದ ನಂತರ, ಅಸಲು ಮೊತ್ತ ವನ್ನು ಪೂರ್ಣವಾಗಿ ಪಾವತಿಸುವವರಿಗೆ ಬಡ್ಡಿ ಮನ್ನಾ ಮಾಡುವುದು ಉತ್ತಮ ಮಾರ್ಗ ಎಂದು ನಿರ್ಧರಿಸಲಾಗಿದೆ ಎಂದು ಪ್ರಾಧಿಕಾರ ಅಧ್ಯಕ್ಷರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮಣಿವಣ್ಣನ್ ಮತ್ತು ಪ್ರಾಧಿಕಾರದ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಚೇರಿಯಲ್ಲಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ.ಹ್ಯಾರಿಸ್ ಸುದ್ದಿಗೋಷ್ಠಿ ನಡೆಸಿದರು. ಪ್ರಾಧಿಕಾರದ ಆಯುಕ್ತ ಮಣಿವಣ್ಣನ್ ಉಪಸ್ಥಿತರಿದ್ದರು.

ಹೆಬ್ಬಾಳ ಮೇಲ್ಸೇತುವೆ ಕಾಮಗಾರಿಗೆ ವೇಗ ನೀಡಲಾಗಿದೆ. ಹಗಲು, ರಾತ್ರಿಯೆನ್ನದೆ ಕೆಲಸ ನಡೆಯುತ್ತಿದೆ. ಆಗಸ್ಟ್‌ನಲ್ಲಿ ಪೂರ್ಣಗೊಳ್ಳಲಿದ್ದು, ಆದಷ್ಟು ಬೇಗ ಸಾರ್ವಜನಿಕರಿಗೆ ಮುಕ್ತಗೊಳಿಸಲಾಗುವುದು. ಇನ್ನು, ಕೆ.ಆರ್.ಪುರದಿಂದ ತುಮಕೂರು ಕಡೆಗೆ ವಾಹನ ದಟ್ಟಣೆ ಹೆಚ್ಚಾಗಿದೆ. ಆದ್ದರಿಂದ ಈ ಮಾರ್ಗದಲ್ಲಿ ಕೆಳ ಸೇತುವೆ ನಿರ್ಮಿಸಲು ಯೋಚಿಸಲಾಗುತ್ತಿದೆ. ಶೀಘ್ರವೇ ಅಧ್ಯಯನ ನಡೆಸಿ ಸಮಗ್ರ ವರದಿಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಲಾಗುವುದು.
- ಎನ್.ಎ. ಹ್ಯಾರಿಸ್, ಬಿಡಿಎ ಅಧ್ಯಕ್ಷ

ಸಾರ್ವಜನಿಕ ಸಹಾಯ ಕೇಂದ್ರ ಸ್ಥಾಪನೆ

ಸಾರ್ವಜನಿಕರ ಕೋರಿಕೆ, ಮನವಿ, ದೂರುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಸಾರ್ವಜನಿಕ ಸಹಾಯ ಕೇಂದ್ರ ಆರಂಭಿಸಲಾಗಿದೆ. 9483166622 ಸಂಖ್ಯೆಗೆ ಕರೆ ಮಾಡುವ ಮೂಲಕ ಕೋರಿಕೆ, ಮನವಿ, ದೂರುಗಳನ್ನು ಸಲ್ಲಿಸಬಹುದು. ಸಾರ್ವಜನಿಕರಿಂದ ಸ್ವೀಕರಿಸಲಾಗುವ ಕೋರಿಕೆ, ಮನವಿ, ದೂರುಗಳನ್ನು ನಿಯಮಾನುಸಾರ ಪರಿಶೀಲಿಸಿ 30 ದಿನಗಳ ಒಳಗಾಗಿ ಪರಿಹಾರ ಒದಗಿಸಲಾಗುವುದು. ಒಂದು ವೇಳೆ 30 ದಿಗಳಲ್ಲಿ ಕೈಗೊಂಡಿರುವ ಪರಿಹಾರವು ಸಾರ್ವಜನಿಕರಿಗೆ ತೃಪ್ತಿಯಾಗದಿದ್ದಲ್ಲಿ ಅಂತಹ ಪ್ರಕರಣಗಳನ್ನು ಪ್ರತಿ ಗುರುವಾರದ ಮಧ್ಯಾಹ್ನ ವಲಯವಾರು ಸಾರ್ವಜನಿಕ ಸಮಕ್ಷಮ ದೂರು, ಮನವಿಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾನೂನು ರೀತ್ಯಾ ಸಭೆ ನಡೆಸಿ ಪರಿಹರಿಸಲಾಗುವುದು ಎಂದು ಎನ್.ಎ.ಹ್ಯಾರೀಸ್ ಹೇಳಿದರು.

ಐಎಎಸ್ ಅಧಿಕಾರಿಗಳ ಸಂಘ ಸಿಎಂ ವಿರುದ್ಧ ದೂರು ನೀಡಿಲ್ಲವೇಕೆ?

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಐಎಎಸ್ ಅಧಿಕಾರಿಗಳ ವಿರುದ್ಧ ಅವಮಾನವಾಗುವಂತೆ ನಡೆದುಕೊಂಡಾಗ ಐಎಎಸ್ ಅಧಿಕಾರಿಗಳ ಸಂಘ ಎಲ್ಲಿ ಹೋಗಿತ್ತು? ಆಗ ಅವರು ಯಾಕೆ ಮುಖ್ಯಮಂತ್ರಿಗಳ ವಿರುದ್ಧ ದೂರು ನೀಡಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರಶ್ನಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗಾವಿಯ ಬಹಿರಂಗ ಸಭೆಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗೆ ಕಪಾಳಕ್ಕೆ ಹೊಡೆಯಲು ಹೋದರಲ್ಲವೇ? ಆಗ ಈ ಸಂಘ ಎಲ್ಲಿ ಹೋಗಿತ್ತು? ಇದೇ ಸಿಎಂ ಇನ್ನೊಂದೆಡೆ ಸರಕಾರಿ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳನ್ನು ಏಯ್ ಎದ್ದೇಳು ಎಂದು ಅಪಮಾನ ಮಾಡಿದ್ದರು. ಆಗ ಐಎಎಸ್ ಸಂಘ ಎಲ್ಲಿ ಹೋಗಿತ್ತು ಎಂದು ಪ್ರಶ್ನಿಸಿದರಲ್ಲದೆ ಇದು ಕೂಡ ಚರ್ಚೆ ಆಗಲಿ. ಜನರು ಕೂಡ ಎಲ್ಲವನ್ನೂ ಗಮನಿಸುತ್ತಿ ದ್ದಾರೆ ಎಂದರು.

ಇಲಾಖೆಗಳಲ್ಲಿ ಸಂಬಳ ನೀಡಲಾಗದ ಪರಿಸ್ಥಿತಿ

ಮುಖ್ಯಮಂತ್ರಿ ಸ್ಥಾನಕ್ಕಾಗಿ ಬಹಳ ಜನ ಪ್ರಾರ್ಥನೆ ಹಾಗೂ ಪ್ರಯತ್ನ ಮಾಡುತ್ತಿದ್ದಾರೆ. ಸುರ್ಜೇವಾಲಾರನ್ನು ಕರೆಸಿ ಭೂಮಿ ಪೂಜೆ, ಗುದ್ದಲಿ ಪೂಜೆ ಮಾಡಿಸಲಿದ್ದಾರೆ. ಬರುವ ದಿನಗಳಲ್ಲಿ ಏನೇನಾ ಗುತ್ತೋ ಕಾದು ನೋಡಬೇಕಿದೆ. ಸಿದ್ದರಾಮಯ್ಯ ರಾಜೀನಾಮೆ ನೀಡಿದರೆ ಯಾರು ಮುಖ್ಯಮಂತ್ರಿ ಎಂಬುದು ನಮಗೆ ಮುಖ್ಯವಲ್ಲ.

ಕಾಂಗ್ರೆಸ್ ಸರಕಾರದ ಬಗ್ಗೆ ರಾಜ್ಯದ ಜನರು ಛೀಮಾರಿ ಹಾಕುತ್ತಿದ್ದಾರೆ. ಸಂಕಷ್ಟದಲ್ಲಿರುವ ರೈತರ ಬಗ್ಗೆ ಈ ಸರಕಾರಕ್ಕೆ ಕಾಳಜಿ ಇಲ್ಲ. ಸಿಎಂ ಯಾರು ಇದ್ದರೆಷ್ಟು? ಬಿಟ್ಟರೆಷ್ಟು. ಅಭಿವೃದ್ಧಿ ಆಗುತ್ತಿಲ್ಲ. ರಾಜ್ಯದ ಇತಿಹಾಸದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ಮೊದಲ ಬಾರಿಗೆ ಸರಕಾರಿ ನೌಕರರಿಗೆ ಸಂಬಳ ಕೊಡಲು ಸಾಧ್ಯ ಆಗುತ್ತಿಲ್ಲ. ಪೊಲೀಸ್ ಇಲಾಖೆಯಲ್ಲಿ ನಿಗದಿತ ದಿನದಂದು ವೇತನ ಕೊಡಲು ಸಾಧ್ಯ ಆಗುತ್ತಿಲ್ಲ. ನೀರಾವರಿ ಇಲಾಖೆಯಲ್ಲಿ 2-3 ತಿಂಗಳಿನಿಂದ ಸಂಬಳ ಸರಿಯಾಗಿ ಆಗುತ್ತಿಲ್ಲ. ಎಲ್ಲ ಇಲಾಖೆಗಳಲ್ಲೂ ಇದೇ ಪರಿಸ್ಥಿತಿ ಇದೆ ಎಂದರು.

ಪ್ರಿಯಾಂಕ್ ಖರ್ಗೆಗೆ ತಿರುಕನ ಕನಸು

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಆರ್‌ಎಸ್‌ಎಸ್ ನಿಷೇಧಿಸುವುದಾಗಿ ಹೇಳಿರುವ ಪ್ರಿಯಾಂಕ್ ಖರ್ಗೆ ಮೂರ್ಖತನದ ಹೇಳಿಕೆಗೆ ಪ್ರತಿಕ್ರಿಯೆ ಕೊಡಲಾಗುವುದಿಲ್ಲ. ಕೇಂದ್ರದಲ್ಲಿ ಮೋದಿ ಸರಕಾರವು ಮೂರನೇ ಬಾರಿ ಅಧಿಕಾರಕ್ಕೆ ಬಂದಿದೆ. ಅಲ್ಲದೆ ಜನಪ್ರಿಯತೆಯೂ ಜಾಸ್ತಿ ಆಗುತ್ತಿದೆ. ದೇಶವೂ ಅಭಿವೃದ್ಧಿ ಪಥದಲ್ಲಿ ಮುಂದೆ ಸಾಗುತ್ತಿದೆ. ಪುಕ್ಕಟ್ಟೆ ಭಾಷಣ ಮಾಡಿದರೆ ಭಾರತ 4ನೇ ದೊಡ್ಡ ಆರ್ಥಿಕ ಶಕ್ತಿ ಆಗಲು ಸಾಧ್ಯ ಇರಲಿಲ್ಲ. ಪ್ರಿಯಾಂಕ್ ಖರ್ಗೆ ರಾತ್ರಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ತಿರುಕನ ಕನಸು ಕಾಣುತ್ತಿದ್ದರೆ ಅದಕ್ಕೆ ನಮ್ಮ ಅಭ್ಯಂತರ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಪ್ರಧಾನಿ ಮೋದಿ ವಿರೋಧಿಸುವ ಭರದಲ್ಲಿ ದೇಶದ ಸಾಧನೆಗೆ ಅಪಮಾನ

ಸ್ವದೇಶಿ ಔಷಧಿ ತಂದ ವಿಜ್ಞಾನಿಗಳಿಗೆ ಕೈ ಅವಮಾನ

ಬೆಂಗಳೂರು: ಪ್ರಧಾನಿ ಮೋದಿ ಅವರನ್ನು ವಿರೋಧಿಸುವ ಭರದಲ್ಲಿ ದೇಶದ ಸಾಧನೆ ಹಾಗೂ ಸಂಶೋಧಕರು-ವಿಜ್ಞಾನಿಗಳ ಸಮೂಹವನ್ನೇ ಕಾಂಗ್ರೆಸ್ ಅವಮಾನಿಸುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಷಮೆ ಕೇಳಬೇಕು ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಪಕ್ಷ ಹಾಗೂ ಅದರ ನಾಯಕರು ಯಾವುದೇ ಆಧಾರವಿಲ್ಲದೆ ಕೋವಿಡ್ ವ್ಯಾಕ್ಸಿನ್ ಅನ್ನು ಅನುಮಾನಿಸುತ್ತಿದೆ. ಕೋಟ್ಯಂತರ ಜನರ ಜೀವ ಉಳಿಸಿದ ವಿಜ್ಞಾನಿಗಳ ಸಮುದಾಯಕ್ಕೆ ಅಪಮಾನವೆಸಗುತ್ತಿದೆ. ಮೋದಿ ಅವರ ಸಾಧನೆ ಸಹಿಸದೆ ರಾಜಕೀಯವಾಗಿ ವಿರೋಧಿಸುತ್ತಾರೆ ವಿರೋಧಿಸಲಿ. ಆದರೆ, ದೇಶ-ವಿದೇಶಿಗರ ಜೀವ ರಕ್ಷಿಸಿದ ಕೋವಿಡ್ ವ್ಯಾಕ್ಸಿನ್ ಅನ್ನೇ ಅನುಮಾನಿಸುತ್ತಿದ್ದಾರೆ. ವಿಜ್ಞಾನಿಗಳ ಸಮೂಹವನ್ನು ಅವಮಾನಿಸುತ್ತಿದ್ದು, ಸಿಎಂ ಹೇಳಿಕೆ ಖಂಡಿಸುತ್ತೇನೆ. ಕೋವಿಡ್ ವ್ಯಾಕ್ಸಿನ್‌ಗೂ ರಾಜ್ಯದಲ್ಲಿ ಸಂಭವಿಸುತ್ತಿರುವ ಹೃದಯಾಘಾತ ಪ್ರಕರಣಗಳಿಗೂ ಯಾವುದೇ ಸಂಬಂಧವಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಸ್ಪಷ್ಟಪಡಿಸಬೇಕು ಮತ್ತು ಈ ಕೂಡಲೇ ವಿಜ್ಞಾನಿಗಳ, ದೇಶದ ಜನರ ಕ್ಷಮೆ ಕೇಳಬೇಕು ಎಂದರು.

ಒಂದೂ ಸ್ವದೇಶಿ ವ್ಯಾಕ್ಸಿನ್ ತರಲಿಲ್ಲ

ದೇಶದಲ್ಲಿ ಕಾಂಗ್ರೆಸ್ ಪಕ್ಷ 60 ವರ್ಷ ಆಡಳಿತ ನಡೆಸಿದರೂ ಒಂದೇ ಒಂದು ಸ್ವದೇಶಿ ವ್ಯಾಕ್ಸಿನ್ ಸಿದ್ಧಪಡಿಸಲಿಲ್ಲ. ಇವರ ಕಾಲದಲ್ಲಿ ಎಲ್ಲದೂ ಆಮದು ಆಗುತ್ತಿತ್ತು. ವಿದೇಶಗಳಲ್ಲಿ ವ್ಯಾಕ್ಸಿನ್ ತಯಾರಿಸಿ ಹತ್ತಿಪ್ಪತ್ತು ವರ್ಷಗಳ ಬಳಿಕೆ ಭಾರತಕ್ಕೆ ತರಿಸಿಕೊಳ್ಳುತ್ತಿದ್ದರು. ಆದರೆ, ಕೋವಿಡ್ ವೇಳೆ ಮೋದಿ ಸರಕಾರ ಭಾರತದ ಸ್ವದೇಶಿ ವ್ಯಾಕ್ಸಿನ್ ಸಿದ್ಧಪಡಿಸಲು ಉತ್ತೇಜನ ನೀಡಿತು. ಇದಕ್ಕೆ ಹೆಮ್ಮೆ ಪಡಬೇಕು. ಅದು ಬಿಟ್ಟು ಅಪಮಾನಿಸುವುದು ಶೋಭೆ ತರುವಂತದ್ದಲ್ಲ. ಕೋವಿಡ್ ವೇಳೆ ಕೇಂದ್ರ ಸರಕಾರ ದೇಶೀಯ ವ್ಯಾಕ್ಸಿನ್ ಸಿದ್ಧಪಡಿಸಿ ದೇಶದ ಜನಕ್ಕೆ 240 ಕೋಟಿ ಡೋಸ್ ಕೊಟ್ಟಿದೆ. 110-120 ಕೋಟಿ ಜನ ವ್ಯಾಕ್ಸಿನ್ ಪಡೆದಿದ್ದಾರೆ. ಅಲ್ಲದೇ, 150 ದೇಶಗಳಿಗೆ ಭಾರತ ವ್ಯಾಕ್ಸಿನ್ ಪೂರೈಸಿದೆ. ಭಾರತದ ಈ ಸಾಧನೆಯನ್ನು ಮುಕ್ತವಾಗಿ ಪ್ರಶಂಸೆಪಡಬೇಕು. ಆದರೆ ಕಾಂಗ್ರೆಸ್ ಮಾಡುತ್ತಿರುವುದೇನು? ಎಂದು ಪ್ರಶ್ನಿಸಿದರಲ್ಲದೆ, ಇದು ದೇಶದ ಬಗ್ಗೆ ಕಾಂಗ್ರೆಸ್ಸಿಗಿರುವ ಮನಸ್ಥಿತಿ ತೋರ್ಪಡಿಸುತ್ತಿದೆ ಎಂದರು.

ಕಾಂಗ್ರೆಸ್‌ನಲ್ಲೇ ವಿರೋಧಿ ಅಲೆ

ರಾಜ್ಯದಲ್ಲಿ 5 ವರ್ಷ ನಾನೇ ಸಿಎಂ ಎನ್ನುವ ದಯನೀಯ ಸ್ಥಿತಿ ಸಿದ್ದರಾಮಯ್ಯರಿಗೆ ಎದುರಾಗಿದೆ. ಕಾಂಗ್ರೆಸ್‌ನಲ್ಲೇ ಸರಕಾರದ ವಿರೋಧಿ ಅಲೆ ಜೋರಾಗಿದೆ. ಶಾಸಕ ಬಿ.ಆರ್ .ಪಾಟೀಲ್, ಬಸವರಾಜ ರಾಯರೆಡ್ಡಿ ಸರಕಾರದ ಭ್ರಷ್ಟಾಚಾರ ತೆರೆದಿಟ್ಟರು. ಗೃಹ ಸಚಿವ ಪರಮೇಶ್ವರ್ ಸಿದ್ದರಾಮಣ್ಣ ಬಳಿ ದುಡ್ಡಿಲ್ಲ ಎಂದು ರಾಜ್ಯ ಸರಕಾರದ ಆರ್ಥಿಕ ದಿವಾಳಿತನ ಬಯಲಿಗೆಳೆದರು. ಶಾಸಕ ರಾಜು ಕಾಗೆ, ಎನ್.ವೈ.ಗೋಪಾಲಕೃಷ್ಣ ಒಂದು ಚರಂಡಿ ಅಭಿವೃದ್ಧಿ ಸಹ ಸಾಧ್ಯವಾಗಿಲ್ಲ ಎಂದು ಸರಕಾರದ ಅಭಿವೃದ್ಧಿ ಶೂನ್ಯ ಕಾರ್ಯ ವೈಖರಿ ಬಹಿರಂಗಪಡಿಸಿದರು. ಎದನ್ನೆಲ್ಲ ಮರೆಮಾಚಲು ಮೋದಿ ಸರಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ ಸಿಎಂ ಸಿದ್ದರಾಮಯ್ಯ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕಿಡಿಕಾರಿದರು.

ವೇತನ ಪರಿಷ್ಕರಿಸದಿದ್ದರೆ ಪ್ರತಿಭಟನೆ

ಬೆಂಗಳೂರು: ಸಾರಿಗೆ ನೌಕರರ ವೇತನ ಪರಿಷ್ಕರಿಸದಿದ್ದರೆ ಮುಂದಿನ ದಿನದಲ್ಲಿ ರಾಜ್ಯಾದ್ಯಂತ ಪ್ರತಿಭಟನೆ ನಡೆಸುವ ಎಚ್ಚರಿಕೆಯನ್ನು ಸಾರಿಗೆ ನಿಗಮಗಳ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ ನೀಡಿದೆ.

ಸಾರಿಗೆ ಇಲಾಖೆಗಳ ಆರ್ಥಿಕ ಸ್ಥಿತಿ ತೀವ್ರ ಸಮಸ್ಯೆಗೆ ಸಿಲುಕಲು ರಾಜ್ಯ ಸರಕಾರ ಜಾರಿಗೊಳಿಸಿರುವ ಶಕ್ತಿ ಯೋಜನೆಯಾಗಿದೆ. ಶಕ್ತಿ ಯೋಜನೆಯಿಂದ ಸಾರಿಗೆ ನಿಗಮಗಳಿಗೆ ಬರಬೇಕಿರುವ 2500 ಕೋಟಿ ರು. ಬಾಕಿ ಮೊತ್ತ ಬಂದರೆ ಸುಸ್ಥಿತಿಗೆ ಬರಲಿವೆ. ಆದ್ದರಿಂದ ರಾಜ್ಯ ಸರಕಾರ ಕೂಡಲೇ ಈ ಅನುದಾನವನ್ನು ಬಿಡುಗಡೆ ಮಾಡುವ ಜತೆಜತೆಗೆ ಸಾರಿಗೆ ನಿಗಮಗಳ ನೌಕರರ ನೇಮಕವನ್ನು ಪರಿಷ್ಕರಿಸಬೇಕು ಎಂದು ಆಗ್ರಹಿಸಿದರು.

ಈ ಹಿಂದೆ ಸಾರಿಗೆ ನೌಕರರು ಮುಷ್ಕರ ಮಾಡಿದಾಗ 38 ತಿಂಗಳ ಹರಿಯರ್ಸ್ ಕೂಡಲೇ ಬಿಡುಗಡೆ ಮಾಡುವುದರೊಂದಿಗೆ 2024ರ ಜನವರಿ1ರಿಂದ ಅನ್ವಯವಾಗುವಂತೆ ಶೇ.25ರಷ್ಟು ವೇತನವನ್ನು ಪರಿಷ್ಕರಣೆ ಮಾಡಬೇಕು. ಇದರೊಂದಿಗೆ ಕಾರ್ಮಿಕ ಇನ್ನುಳಿದ ಬೇಡಿಕೆಯನ್ನು ಈಡೇರಿಸಬೇಕು ಎಂದು ಪಟ್ಟು ಹಿಡಿದಿವೆ. ಈ ಮೊದಲು ಡಿ.31ಕ್ಕೆ ಸಾರಿಗೆ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಆ ವೇಳೆ ಪತ್ರ ಬರೆದಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಂಕ್ರಾಂತಿ ಬಳಿಕ ಎಲ್ಲಾ ಬೇಡಿಕೆಗಳಿಗೂ ಸ್ಪಂದಿಸುವುದಾಗಿ ಹೇಳಿದ್ದರು. ಆದರೆ ಅದು ಜಾರಿಯಾಗಲಿಲ್ಲ.

ಅದಾದ ಬಳಿಕ ಸಾರಿಗೆ ನಿಗಮಗಳ ಸಂಘಟನೆಗಳ ಪದಾಧಿಕಾರಿಗಳು ಮುಖ್ಯಮಂತ್ರಿಯವರ ಮನೆ ಎದುರು ಧರಣಿ ಆರಂಭಿಸಿದಾಗ ಏ.15 ರಂದು ಸುದೀರ್ಘ ಸಭೆ ನಡೆಸಲಾಯಿತು. ಅಲ್ಲಿ ಬೇಡಿಕೆಗಳನ್ನು ಮಂಡಿಸಿದ್ದೇವೆ ಎಂದು ಸಾರಿಗೆ ನಿಮಗಳ ಕಾರ್ಮಿಕ ಸಂಘಟನೆ ಮುಖಂಡರು ತಿಳಿಸಿದ್ದಾರೆ. ಬೇಡಿಕೆಗಳು ಈಡೇರುವ ನಿರೀಕ್ಷೆ ಇಲ್ಲವಾಗಿದೆ. ಕೊನೆ ಹಂತದಲ್ಲಿ ಮತ್ತೊಂದು ಸುತ್ತಿನ ಚರ್ಚೆ ನಡೆಸಲಾಗುವುದು. ಸರಕಾರ ನಮ್ಮ ಬೇಡಿಕೆಗಳನ್ನು ಈಡೇರಿಸಿದರೆ ಮುಖ್ಯಮಂತ್ರಿಯವರನ್ನು ಅಭಿನಂದಿಸಿ ಕೆಲಸ ಮುಂದುವರಿಸುತ್ತೇವೆ. ಇಲ್ಲವಾದರೆ ಮುಂದಿನ ಹೋರಾಟದ ರೂಪುರೇಷೆಗಳನ್ನು ಚರ್ಚಿಸಬೇಕಾಗುತ್ತದೆ ಎಂದು ಕಾರ್ಮಿಕ ಸಂಘಟನೆಗಳ ಮುಖಂಡರು ಎಚ್ಚರಿಕೆ ನೀಡಿದ್ದಾರೆ.

ಸಮಸ್ಯೆ ಬಗೆಹರಿಸುವ ಭರವಸೆ

ಮುಷ್ಕರದ ಎಚ್ಚರಿಕೆಯ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಮಿಕ ಸಂಘಟನೆಗಳೊಂದಿಗೆ ಸಭೆ ನಡೆಸಿದ್ದು, ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ. ಪ್ರಮುಖವಾಗಿ 2020ರ ಜ.1ರ ವೇತನ ಪರಿಷ್ಕರಣೆಯ 38 ತಿಂಗಳ ಹಿಂಬಾಕಿಯನ್ನು ಪಾವತಿಸಬೇಕು. 01.01.2024ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡಬೇಕು. ದಿನಾಂಕ 01.01.2024ರಿಂದ ಇಂದಿನವರೆಗಿನ ಹಿಂಬಾಕಿಯನ್ನು ಪಾವತಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ. ಆದರೆ ವೇತನ ಪರಿಷ್ಕರಣೆಯ 38 ತಿಂಗಳ ಹಿಂಬಾಕಿ ಪಾವತಿ ಕುರಿತಾಗಿ ಸರಕಾರದ ಯಾವುದೇ ಆದೇಶ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಿಂಬಾಕಿ ಕುರಿತು ಮುಂದಿನ ವಾರ ಮತ್ತೆ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದು ಸಿದ್ದರಾಮಯ್ಯ ಅವರು ಭರವಸೆ ನೀಡಿದ್ದಾರೆ.

ವಿಧಾನಸೌಧದ ಉಪ ಮುಖ್ಯಮಂತ್ರಿಯವರ ಕಾರ್ಯಾಲಯದಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಸುಧೀಂದ್ರ ಅವರು ಒಂದು ವರ್ಷದ ಕಾರ್ಯಾವಧಿಯಲ್ಲಿ ಕೈಗೊಂಡ ಜೈವಿಕ ಅಭಿವೃದ್ಧಿ ಯೋಜನೆ ಕುರಿತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವರದಿ ಸಲ್ಲಿಸಿದರು.

ಅರಣ್ಯ ಭೂಮಿ ಒತ್ತುವರಿ ತೆರವಿಗೆ ರೈತರ ವಿರೋಧ

ಮಹದೇವಪುರ: ದಿನ್ನೂರಿನಲ್ಲಿ ಅರಣ್ಯ ಇಲಾಖೆ ನಡೆಸುತ್ತಿರುವ ಒತ್ತುವರಿ ತೆರವಿಗೆ ಬಾರಿ ವಿರೋಧ ವ್ಯಕ್ತವಾಗುತ್ತಿದ್ದು, ಗ್ರಾಮಸ್ಥರು ಪ್ರತಿಭಟನೆ ಮುಂದುವರಿಸಿದ್ದಾರೆ.

ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಸಂಸದ ಎಸ್. ಮುನಿಸ್ವಾಮಿ ಅವರು, ದಲಿತ ಬಡವರಿಗೆ ಹಾಗೂ ಅತೀ ಸಣ್ಣ ರೈತರಿಗೆ ಕಾಂಗ್ರೆಸ್ ಸರಕಾರ ಅನಗತ್ಯ ತೊಂದರೆ ಕೊಡುತ್ತಿದೆ. ಇದರಿಂದ ನೂರಾರು ಕುಟುಂಬಗಳಿಗೆ ತೊಂದರೆಯಾಗುತ್ತಿದೆ. ಖಾಸಗಿಯವರಿಗೆ ಈ ಭೂಮಿಯನ್ನು ಮಾರಲು 70 ವರ್ಷಗಳಿಂದಲೂ ದಿನ್ನೂರುನಲ್ಲಿ ವಾಸವಾಗಿರುವ ದಲಿತ ಗ್ರಾಮಸ್ಥರನ್ನು ಹೊರಹಾಕಲು ರಾಜ್ಯ ಸರಕಾರ ಅರಣ್ಯ ಇಲಾಖೆಯನ್ನು ಛೂ ಬಿಟ್ಟಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಹದೇವಪುರ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಡಾ.ಒ.ಪಿ.ಒಬಳೇಶ್, ದಲಿತಸಂಘಟನೆಗಳ ಮುಖಂಡರಾದ ಹೆಬ್ಬಾಳ ವೆಂಕಟೇಶ, ಚಂದ್ರಶೇಖರ, ಮುನಿರಾಜ್, ಮರಿಯಪ್ಪ, ಕನ್ನಲ್ಲಿ ಕೃಷ್ಣಪ್ಪ, ವಿಜಯನ್, ಮಧು, ಮೋಹನ್, ಜೆಡಿಎಸ್ ಮುಖಂಡರಾದ ಮುನಿವೆಂಕಟಪ್ಪ, ಮುನಿರಾಜು, ವೇಲು, ಕಾಂತರಾಜು, ವಿಜಯಕುಮಾರ್, ಗುಡ್ಡ ಜಯರಾಮ್, ಯಲ್ಲಪ್ಪ, ಹಜ್‌ರೀಪಾರು, ಸೋಮಶೇಖರ್, ಮುರಳಿ, ಮಂಜುನಾಥ ರೆಡ್ಡಿ ಭಾಗವಹಿಸಿದ್ದರು.

ದಿನ್ನೂರಿನಲ್ಲಿ ಅರಣ್ಯ ಇಲಾಖೆ ನಡೆಸುತ್ತಿರುವ ಒತ್ತುವರಿ ವಿರೋಧಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ರಾಜ್ಯ ಸರಕಾರದ ವಿರುದ್ಧ ಕಿಡಿ

ಜೆಡಿಎಸ್ ಪಕ್ಷದ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಅನ್ನದಾನಿ ಮಾತನಾಡಿ, ನೂರಾರು ವರ್ಷಗಳಿಂದ ಬದುಕಿ ಬಾಳುತ್ತಿರುವ ದಿನ್ನೂರಿನ ಜನತೆಯನ್ನು ಹೊರಹಾಕಲು ಅರಣ್ಯ ಭೂಮಿ ಎಂದು ದಲಿತರ ಕುಟುಂಬಗಳಿಗೆ ಬೆಂಕಿ ಇಡುವ ಕೆಲಸವನ್ನು ರಾಜ್ಯ ಸರಕಾರ ಮಾಡುತ್ತಿದೆ. ದಲಿತರನ್ನು ಸುಡುವ ಬೆಂಕಿ ಮುಂದಿನ ದಿನ ಸಿಎಂ ಸಿದ್ದರಾಮಯ್ಯ ಹಾಗೂ ಇಡೀ ಕಾಂಗ್ರೆಸ್ ಪಕ್ಷವನ್ನು ಸುಡುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರಕಾರ ನೀಡುವ ಅನುದಾನ ಸಾಲದು

ಮಹದೇವಪುರ: ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಕೊಡುವ ಅನುದಾನ ಸಾಲುತ್ತಿಲ್ಲ ಎಂದು ಶಾಸಕಿ ಮಂಜುಳ ಲಿಂಬಾವಳಿ ಬೇಸರ ವ್ಯಕ್ತಪಡಿಸಿದರು.

ಶೀಗೇಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 2025-26 ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮ ಸಭೆಯಲ್ಲಿ ಮಾತನಾಡಿದ ಅವರು, ಮಹದೇವಪುರ ಕ್ಷೇತ್ರ ಸುಮಾರು 50 ಕಿಮೀ ಗೂ ಹೆಚ್ಚಿರುವ ಕ್ಷೇತ್ರ, ಕಳೆದ ಎರಡು ವರ್ಷದಿಂದ ರಾಜ್ಯ ಸರಕಾರ ಅಭಿವೃದ್ಧಿಗೆ ನೀಡುತ್ತಿರುವ ಅನುದಾನ ಸಾಲುತ್ತಿಲ್ಲ. ಬೆಂಗಳೂರಿನ ನೀರು ಹಾಗೂ ಕಸ ಎರಡನ್ನೂ ಮಹದೇವಪುರ ಕ್ಷೇತ್ರಕ್ಕೆ ಬಿಟ್ಟು ವಾತಾವರಣ ಹಾಳಾಗಿದೆ, ಇದನ್ನು ಸರಿಪಡಿಸುವಷ್ಟರಲ್ಲಿ ಸರಕಾರ ಕೊಡುವ ಅನುದಾನ ಎಲ್ಲಾ ವ್ಯಯವಾಗುತ್ತಿದೆ. ಗ್ರಾಮಾಂತರ ಭಾಗದಲ್ಲಿ ಪಂಚಾಯತಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕೆಲಸ ಸಾಗುತ್ತದೆ. ಕಳೆದ 15 ವರ್ಷದಲ್ಲಿ 7 ಸಾವಿರ ಕೋಟಿ ರು. ವ್ಯಯ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಕಲಾಂಗರಿಗೆ ಮತ್ತು ವಿದ್ಯಾರ್ಥಿಗಳಿಗೆ ಶಾಸಕರು ಸಹಾಯ ಚೆಕ್ ವಿತರಣೆ ಮಾಡಿದರು. ತಾ.ಪಂ ಸಿಇಒ ವಸಂತ ಕುಮಾರ್, ಗ್ರಾ.ಪಂ ಅಧ್ಯಕ್ಷೆ ಮಂಗಳಾ, ಉಪಾಧ್ಯಕ್ಷ ಸುರೇಶ್ ಬಾಬು, ಸದಸ್ಯ ದೊಮ್ಮಸಂದ್ರ ಮಧು ಸೇರಿದಂತೆ ಗ್ರಾಮ ಪಂಚಾಯಿತಿ ಸದಸ್ಯರು, ಅಧಿಕಾರಿಗಳು, ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಮಹದೇವಪುರ ಕ್ಷೇತ್ರದ ಶೀಗೇಹಳ್ಳಿ ಗ್ರಾಮದಲ್ಲಿ ನಡೆದ 2025-26 ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮ ಸಭೆಯಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ ವಿಕಲಾಂಗರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಹಾಯ ಚೆಕ್ ವಿತರಣೆ ಮಾಡಿದರು. ತಾ.ಪಂ ಸಿಇಒ ವಸಂತ ಕುಮಾರ್, ಗ್ರಾ.ಪಂ ಅಧ್ಯಕ್ಷೆ ಮಂಗಳಾ, ಉಪಾಧ್ಯಕ್ಷ ಸುರೇಶ್ ಬಾಬು, ಸದಸ್ಯ ದೊಮ್ಮಸಂದ್ರ ಮಧು, ಪಿಡಿಒ ಸುರೇಶ್ ಇದ್ದರು.

ಆಷಾಢ ಮಾಸದ 2ನೇ ಶುಕ್ರವಾರದ ಪ್ರಯುಕ್ತ ಬನಶಂಕರಿ ದೇವಾಲಯದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಸಮಾಚಾರ ಸಣ್ಣದಲ್ಲ

ಸಾಂಗತ್ಯ ಜೀವನ ಯುವಕ ಆತ್ಮಹತ್ಯೆ

ಮಡಿಕೇರಿ: ಲಿವಿಂಗ್ ಟುಗೇದರ್‌ನಲ್ಲಿದ್ದ ವ್ಯಕ್ತಿ ಆತ್ಮಹತ್ಯೆಗೆ ಶರಣಾದ ಘಟನೆ ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ವ್ಯಕ್ತಿಯನ್ನು

ಸಾಗರ್ (30) ಎಂದು ಗುರುತಿಸಲಾಗಿದೆ. ಮೃತ ಸಾಗರ್ ಸೆಸ್ಕಾಂನಲ್ಲಿ ವಿದ್ಯುತ್ ಕಂಬ ಅಳವಡಿಸುವ ಕೆಲಸ ಮಾಡುತಿದ್ದ. ಅಲ್ಲದೇ ಆಟೋ ಚಾಲನೆ ಮಾಡುತಿದ್ದ. ಈತ ಮಹಿಳೆಯೊಬ್ಬರ ಜತೆ ಗಾಂಧಿನಗರದಲ್ಲಿ ಬಾಡಿಗೆ ಮನೆಯಲ್ಲಿ ಸುಮಾರು 18 ವರ್ಷಗಳಿಂದ ಜೀವನ ನಡೆಸುತಿದ್ದ. ಈತನಿಗೆ ಕುಡಿತದ ಚಟವು ಇತ್ತು. ಎರಡು ದಿನಗಳ ಹಿಂದೆ ಸಾಗರ್ ಮತ್ತು ಮಹಿಳೆಯ ಮಧ್ಯೆ ಕಲಹ ನಡೆದಿತ್ತು. ಇದರಿಂದ ಎರಡು ದಿನಗಳ ಹಿಂದೆ ಮನನೊಂದು ಕೇರಳದ ಕೊಟ್ಟಿಯೂರು ದೇವಾಲಯಕ್ಕೆ ಒಬ್ಬನೇ ತೆರಳಿ ನಂತರ ಮನೆಗೆ ಸಂಜೆ 6ರ ವೇಳೆಗೆ ಹಿಂದಿರುಗಿದ್ದ. ಮನೆಗೆ ಬಂದ ವೇಳೆ ಮನೆಯಲ್ಲಿ ಯಾರು ಇಲ್ಲದೇ ಇರುವುದನ್ನು ಗಮನಿಸಿ ಮಹಿಳೆಗೆ ಹಲವು ಸಲ ಕರೆ ಮಾಡಿದ್ದಾನೆ. ಮಹಿಳೆಯಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ, ಆಕೆ ನನ್ನಿಂದ ದೂರವಾಗಿದ್ದಾಳೆ ಎಂದು ಭಾವಿಸಿ, ವಿಡಿಯೊ ಮಾಡಿಟ್ಟು ನೇಣಿಗೆ ಶರಣಾಗಿದ್ದಾನೆ. ಈ ಬಗ್ಗೆ ವಿರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾಗಿದ್ದ ಫಾರೆಸ್ಟ್ ಗಾರ್ಡ್ ಶವವಾಗಿ ಪತ್ತೆ

ಚಿಕ್ಕಮಗಳೂರು: ಕಳೆದೊಂದು ವಾರದಿಂದ ನಾಪತ್ತೆಯಾಗಿದ್ದ ಫಾರೆಸ್ಟ್ ಗಾರ್ಡ್ ಮೃತದೇಹ ಕಡೂರು ತಾಲೂಕಿನ ಸಖರಾಯಪಟ್ಟಣ ಸಮೀಪದ ಹಳೇಹಟ್ಟಿ ತಾಂಡ್ಯ

ಬಳಿ ಶುಕ್ರವಾರ (ಜು.4) ಪತ್ತೆಯಾಗಿದೆ. ಶರತ್ (33) ಮೃತ ದುರ್ದೈವಿ.ಮೂಲತಃ ಮಡಿಕೇರಿ ಮೂಲದವರಾದ ಶರತ್ ಕಳೆದ ಒಂದು ವಾರದ ಹಿಂದೆ ನಾಪತ್ತೆಯಾಗಿದ್ದು ಈ ಕುರಿತು ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಅದರಂತೆ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರು ಹುಡುಕಾಟ ನಡೆಸಿದ ವೇಳೆ ಸಖರಾಯಪಟ್ಟಣ ನೀಲಗಿರಿ ಪ್ಲಾಂಟೇಷನ್ ನಲ್ಲಿ ಶರತ್ ಬೈಕ್ ಮತ್ತು ಜರ್ಕಿನ್ ಪತ್ತೆಯಾಗಿತ್ತು ಆದರೆ ಶರತ್ ಮಾತ್ರ ಪತ್ತೆಯಾಗಿರಲಿಲ್ಲ ಮತ್ತೆ ಕಾರ್ಯಾಚರಣೆ ನಡೆಸಿದ ತಂಡಕ್ಕೆ ಸಖರಾಯಪಟ್ಟಣ ಸಮೀಪದ ಹಳೇಹಟ್ಟಿ ತಾಂಡ್ಯ ಬಳಿ ಶುಕ್ರವಾರ ಮೃತದೇಹ ಪತ್ತೆಯಾಗಿದೆ. ಮೃತದೇಹ ಸಂಪೂರ್ಣ ಕೊಳೆತು ಹೋಗಿದ್ದು ಇದೀಗ ಪೊಲೀಸರು ಮರಣೋತ್ತರ ಪರೀಕ್ಷೆಗೆ ಮುಂದಾಗಿದ್ದಾರೆ.

ಕೃಷ್ಣಾ, ತುಂಗಭದ್ರಾ ನದಿ ಪಾತ್ರದ ಗ್ರಾಮಗಳಿಗೆ ಪ್ರವಾಹ ಭೀತಿ

ತುಂಗಭದ್ರಾ, ನಾರಾಯಣಪುರ ಡ್ಯಾಮ್‌ನಿಂದ ನೀರು ಬಿಡುಗಡೆ

ಬೆಂಗಳೂರು: ಕೃಷ್ಣಾ ಹಾಗೂ ತುಂಗಭದ್ರಾ ಜಲಾಶಯಗಳಿಂದ ನದಿಗೆ ನೀರು ಬಿಡಲಾಗುತ್ತಿದ್ದು, ರಾಯಚೂರು ಜಿಲ್ಲೆಗೆ ಪ್ರವಾಹ ಭೀತಿ ಎದುರಾಗಿದೆ. 3 ಜಿಲ್ಲೆಗಳ ಜೀವನಾಡಿ ತುಂಗಭದ್ರಾ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದ್ದು, 54,938 ಕ್ಯೂಸೆಕ್ ನೀರು ಡ್ಯಾಮ್‌ನಿಂದ ನದಿಗೆ ಬಿಡಲಾಗುತ್ತಿದೆ.

ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಆಧರಿಸಿ ನದಿಗೆ ನೀರು ಬಿಡಲಾಗುತ್ತಿದೆ. ಸುಮಾರು 60 ಸಾವಿರದಿಂದ ದಿಂದ 85 ಸಾವಿರ ಕ್ಯೂಸೆಕ್ ವರೆಗೆ ನೀರಿನ್ನು ನದಿಗೆ ಹರಿಸುವ ಸಾಧ್ಯತೆ ಇದೆ. ಆದ್ದರಿಂದ ತುಂಗಭದ್ರಾ ನದಿಯ ಕೆಳಭಾಗದ ಹಳ್ಳಿಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಎಚ್ಚರಿಕೆ ನೀಡಿ, ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಜಲಾಶಯದ ಅಧಿಕಾರಿಗಳು ಆಯಾ ಜಿಲ್ಲಾಡಳಿತಕ್ಕೆ ಸಂದೇಶ ರವಾನಿಸಿದ್ದಾರೆ.

ನದಿ ಪಾತ್ರದ ಜನತೆಗೆ ಎಚ್ಚರಿಕೆ: ನಾರಾಯಣಪುರ ಡ್ಯಾಮ್‌ನಿಂದಲೂ ನೀರಿನ ಒಳಹರಿವು ಹೆಚ್ಚಾಗಿದೆ. 30 ಗೇಟ್‌ಗಳ ಮೂಲಕ 95,265 ಕ್ಯೂಸೆಕ್ ನೀರನ್ನು ಕೃಷ್ಣಾ ನದಿಗೆ ಹರಿಸಲಾಗುತ್ತಿದೆ. ಲಿಂಗಸೂಗೂರು, ದೇವದುರ್ಗ, ರಾಯಚೂರು ತಾಲೂಕಿನ ನದಿ ಪಾತ್ರದ ಗ್ರಾಮಗಳಲ್ಲಿ ಪ್ರವಾಹದ ಅಲರ್ಟ್ ಘೋಷಿಸಲಾಗಿದೆ. ಇನ್ನು ತುಂಗಭದ್ರಾ ನದಿ ಕೆಳಭಾಗದ ಸಿಂಧನೂರು, ಮಾನವಿ, ರಾಯಚೂರು ತಾಲೂಕಿನ ನದಿ ತೀರದ ಗ್ರಾಮಗಳಿಗೆ ಪ್ರವಾಹ ಭೀತಿ ಎದುರಾಗಿದೆ. ನದಿ ಪಾತ್ರಕ್ಕೆ ತೆರಳದಂತೆ ಜನರಿಗೆ ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ.

ನಾರಾಯಣಪುರ ಜಲಾಶಯದಿಂದ ಭಾರೀ ಪ್ರಮಾಣದ ನೀರು ಹೊರಗೆ ಬಿಟ್ಟಿರುವುದು.

ಹುಲಿಕಲ್ ಘಾಟಿಯಲ್ಲಿ ಉರುಳಿದ ಮರಗಳು

ಶಿವಮೊಗ್ಗ, ಕುಂದಾಪುರ, ಉಡುಪಿ ಸಂಪರ್ಕದ ಹುಲಿಕಲ್ ಘಾಟಿ ರಸ್ತೆಯಲ್ಲಿ ಸಾಲು ಸಾಲು ಮರಗಳು ರಸ್ತೆಗೆ ಬಿದ್ದಿದ್ದು ಸಂಚಾರಕ್ಕೆ ತೊಂದರೆಯಾಗಿದೆ. ಶಿವಮೊಗ್ಗ ಗಡಿಭಾಗದಿಂದ ಹೊಸಂಗಡಿ ಕಡೆಗೆ ಹೆಚ್ಚಿನ ಮರಗಳು ರಸ್ತೆಗೆ ಬಿದ್ದರೆ ಕೆಲವು ಮರಗಳು ರಸ್ತೆಗೆ ವಾಲಿ ನಿಂತಿವೆ. ಇದರಿಂದ ಸಂಚಾರಕ್ಕೆ ತೊಂದರೆಯಾಗಿದೆ. ಕೆಲವಡೆ ಕೆಲವು ದಿನಗಳ ಹಿಂದೆಯೇ ಮರ ಬಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದ್ದರು ಕೂಡ ರಸ್ತೆಯಿಂದ ಮರಗಳನ್ನು ತೆರವುಗೊಳಿಸಿಲ್ಲ. ಅಲ್ಲದೇ ಕಾಂಕ್ರೀಟ್ ರಸ್ತೆಯ ಅಂಚಿನಲ್ಲಿ ಗುಂಡಿ ಬಿದ್ದಿದ್ದು ಅಪಾಯಕ್ಕೆ ಎಡೆ ಮಾಡಿಕೊಟ್ಟಿದೆ. ಇನ್ನು ಘಾಟಿಯುದ್ದಕ್ಕೂ ಚರಂಡಿ ತುಂಬಿಕೊಂಡಿದ್ದು ನೀರು ರಸ್ತೆ ಮೇಲೆ ಹರಿಯುವಂತಾಗಿದೆ. ಮಳೆಯ ತೀವ್ರತೆ ಹೆಚ್ಚಾಗುತ್ತಿದ್ದು ತುರ್ತು ಕ್ರಮ ಕೈಗೊಳ್ಳುವಂತೆ ಸ್ಥಳೀಯರು, ವಾಹನ ಸವಾರರು ಒತ್ತಾಯಿಸಿದ್ದಾರೆ.

ಚಿಕ್ಕಮಗಳೂರಲ್ಲಿ ರಜೆ ಘೋಷಣೆ

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆ ಹಿನ್ನೆಲೆ, ಮುಂಜಾಗ್ರತಾ ಕ್ರಮವಾಗಿ ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ 6 ತಾಲೂಕಿನ ಶಿಶು ಪಾಲನಾ ಅಂಗನವಾಡಿ ಕೇಂದ್ರಗಳಿಗೆ ಇಂದು ರಜೆ ಘೋಷಣೆ ಮಾಡಿದ್ದಾರೆ. ಕಳಸ, ಮೂಡಿಗೆರೆ, ಶೃಂಗೇರಿ, ಕೊಪ್ಪ, ಎನ್.ಆರ್. ಪುರ, ಚಿಕ್ಕಮಗಳೂರು ತಾಲೂಕುಗಳಿಗೆ ರಜೆ ಘೋಷಣೆ ಮಾಡಿ ಚಿಕ್ಕಮಗಳೂರು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶ ಹೊರಡಿಸಿದ್ದಾರೆ.



ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು	ಹೊರಹರಿವು
ಲಿಂಗನಮಕ್ಕಿ	1819.12	1789.45	41036	3759
ಕೆ ಆರ್ ಎಸ್	124.80	124.28	28814	36197
ಹಾರಂಗಿ	2859.00	2852.13	6000	8166
ಆಲಮಟ್ಟಿ	1704.81	1696.99	94767	100255
ನಾರಾಯಣಪುರ	1615.00	1609.89	99583	99265
ತುಂಗಭದ್ರಾ	1625.53	1624.80	27441	54938
ಹೇಮಾವತಿ	2917.92	2918.37	15712	10850

ಸಿಎಂ, ಡಿಸಿಎಂ ಒಗ್ಗಟ್ಟು ಬಲವಾಗಿದೆ

ಯಾರು ಏನೇ ಕುತಂತ್ರ ಮಾಡಿದರೂ ದೋಸ್ತಿ ವಿಭಜನೆ ಆಗಲ್ಲ: ಸಚಿವ ಚಲುವರಾಯಸ್ವಾಮಿ

ಮೈಸೂರು: ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಒಗ್ಗಟ್ಟಾಗಿದ್ದಾರೆ. ಯಾರು

ಏನೇ ಮಾಡಿದರೂ ಅವರ ಒಗ್ಗಟ್ಟು ಹೀಗೆ ಇರುತ್ತದೆ. 5 ವರ್ಷ ಇಬ್ಬರೂ ಹೀಗೆ ಇರುತ್ತಾರೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಸಿಎಂ ಬದಲಾವಣೆ ಬಗ್ಗೆ ಶಾಸಕರ ಬಹಿರಂಗ ಹೇಳಿಕೆ ವಿಚಾರ ಕುರಿತು ಮಾತನಾಡಿದ ಅವರು, ಅದು ಅವರವರ ಅಭಿಪ್ರಾಯ. ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿಕೆ ಶಿವಕುಮಾರ್ ಬಹಳ ಅನ್ಯೋನ್ಯವಾಗಿದ್ದಾರೆ. ಯಾರು ಏನೇ ಕುತಂತ್ರ ಮಾಡಿದರೂ ಡಿವೈಡ್ ಆಗಲ್ಲ. ಪೂರ್ಣಾವಧಿ ಸಿಎಂ ಆಗಿ ಸಿದ್ದರಾಮಯ್ಯ ಅವರೇ ಮುಂದುವರಿಯಬೇಕಾ ಬೇಡವಾ ಎನ್ನುವುದನ್ನು ನಿರ್ಧಾರ ಮಾಡೋದು ಪಕ್ಷದ ಹೈಕಮಾಂಡ್ ಎಂದರು

ರಾಜ್ಯಕ್ಕೆ ಬರಬೇಕಾದ ಟ್ಯಾಕ್ಸ್ ಕೊಡಿಸಲಿ

ಮಂಡ್ಯದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ದಿಶಾ ಸಭೆ ಆಯೋಜನೆ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿಗೆ ಒಳ್ಳೆಯದಾಗಲಿ. ನನಗೆ ಮೈಸೂರಿನಲ್ಲಿ ಅಧಿಕಾರಿಗಳ ಸಭೆ ಇದೆ. ಹೀಗಾಗಿ ಅಲ್ಲಿಗೆ ಹೋಗಲು ಆಗಲ್ಲ. ಅಲ್ಲದೇ ನಾವು ಸಭೆ ಮಾಡಿದಾಗ ಅವರು ಬರುವುದಿಲ್ಲ. ಅವರು ಏನೇ ಯೋಜನೆ ತಂದರೂ ನಮ್ಮ ಬೆಂಬಲ ಇರುತ್ತದೆ. ಜಿಲ್ಲೆಗೆ ರಾಜ್ಯಕ್ಕೆ ದೊಡ್ಡ ಮಂತ್ರಿ ಇದ್ದಾರೆ. ಜೋಷಿ, ಕುಮಾರಸ್ವಾಮಿ ಇಬ್ಬರು ಸೇರಿ ರಾಜ್ಯಕ್ಕೆ ಬರಬೇಕಾದ ಟ್ಯಾಕ್ಸ್ ಹಣ ಕೊಡಿಸಲಿ. ಅದನ್ನು ಬಿಟ್ಟು ಬರುವ ಎಂಪಿ ಫಂಡ್ ಹಣ ತಂದರೆ ಅದರಲ್ಲೇನು ವಿಶೇಷ ಇದೆ? ಏನಾದರೂ ವಿಶೇಷ ಅನುದಾನ ತಂದು ಅಭಿವೃದ್ಧಿ ಮಾಡಲಿ ಎಂದು ಟಾಂಗ್ ನೀಡಿದರು.

ಬಿಜೆಪಿ ಬಣ ಬಡಿದಾಟಕ್ಕೆ ಪ್ರಲ್ಹಾದ್ ಜೋಶಿ ಮದ್ದು

← ಮೊದಲಪುಟದಿಂದ

ಮೊದಲಿಗೆ ಮಾಜಿ ಶಾಸಕ ವೀರಣ್ಣ ಚರಂತಿ ಮಠ ಹಾಗೂ ಬೆಂಬಲಿಗರ ಜತೆ ಸಭೆ ನಡೆಸಿದ ಪ್ರಹ್ಲಾದ್ ಜೋಷಿಯವರು ನಂತರ ಪರಿಷತ್ ಸದಸ್ಯ ಪಿ.ಎಚ್.ಪೂಜಾರ್ ಮತ್ತು ಬೆಂಬಲಿಗರ ಜತೆ ಚರ್ಚೆ ನಡೆಸಿ ಸಮಸ್ಯೆಗಳಿಗೆ ಮದ್ದು ಅರೆಯುವ ಪ್ರಯತ್ನ ನಡೆಸಿದರೂ ಯಾರೂ ಮಾತು ಕೇಳುವ ಪರಿಸ್ಥಿತಿಯಲ್ಲಿಲ್ಲ ಎನ್ನಲಾಗಿದೆ.

ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಸಭೆಯಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಪಕ್ಷಕ್ಕೆ ಉಂಟಾದ ಹಿನ್ನಡೆಗೆ ಕಾರಣ ಏನೆಂಬುದರ ಬಗ್ಗೆ ಮುಖಂಡರು ಮಾಹಿತಿ ಪಡೆದುಕೊಂಡಿದ್ದಾರೆ. ದಾವಣಗೆರೆ ಬಿಜೆಪಿಯ ಭದ್ರಕೋಟೆಯಾಗಿತ್ತು. ಸತತ ನಾಲ್ಕು ಬಾರಿ ನಮ್ಮ ಅಭ್ಯರ್ಥಿ ಗೆದ್ದಿದ್ದರು. ಈ ಬಾರಿ ಕೆಲವೇ ಸಾವಿರ ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ. ನಾಯಕರಲ್ಲಿ ಪರಸ್ಪರ ಉಂಟಾದ ಗೊಂದಲ, ಅಪನಂಬಿಕೆಯೇ ಸೋಲಿಗೆ ಕಾರಣ ಎಂದು ಜೋಶಿ ಹೇಳಿದ್ದಾರೆ.

ಇನ್ನು ಮುಂದೆ ಯಾರೊಬ್ಬರೂ ಪಕ್ಷದ ಅನುಮತಿ ಇಲ್ಲದೆ ಮಾತನಾಡಬಾರದು. ನಿಮ್ಮ ಹೇಳಿಕೆಗಳು ಪಕ್ಷದಲ್ಲಿ ಗೊಂದಲ ಸೃಷ್ಟಿಸುತ್ತವೆ. ಯಾರಿಗೆ ಯಾವ ಜವಾಬ್ದಾರಿ ಇರುತ್ತದೆಯೋ ಅದನ್ನು ಅರಿತು ಮಾತನಾಡಿ. ಅನಗತ್ಯವಾಗಿ ಗೊಂದಲ ಸೃಷ್ಟಿಸಬೇಡಿ ಎಂದು ಸಲಹೆ ನೀಡಿದ್ದಾರೆ. ಅಲ್ಲದೆ. ಬಸನಗೌಡ ಪಾಟೀಲ್ ಯತ್ನಾಳ್ ಈ ರೀತಿ ಪದೇ ಪದೇ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದರಿಂದಲೇ ಪಕ್ಷವು ಅವರನ್ನು ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟನೆ ಮಾಡಿತು. ವರಿಷ್ಠರು ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಯಾರಿಗೆ ಯಾವ ಸಂದರ್ಭದಲ್ಲಿ ಲಗಾಮು ಹಾಕಬೇಕು ಎಂಬುದು ಗೊತ್ತಿದೆ. ಅನಗತ್ಯವಾಗಿ ಮಾತನಾಡಿ ನಿಮ್ಮ ರಾಜಕೀಯ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದ್ದಾರೆಂದು ತಿಳಿದುಬಂದಿದೆ.

ಕಾರಿಗೆ ಲಾರಿ ಡಿಕ್ಕಿ: ದಂಪತಿ ಸಾವು

ವಿಜಯನಗರ: ಪಟ್ಟಣದ ಹೊರವಲಯದ ಕೆಪಿಟಿಸಿಎಲ್ ಕಚೇರಿ ಮುಂಭಾಗದ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಗುರುವಾರ ಮಧ್ಯರಾತ್ರಿ ಕಾರಿಗೆ ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ದಂಪತಿ ಮೃತಪಟ್ಟಿದ್ದು, ಅವರ ಮೂವರು ಮಕ್ಕಳು ತೀವ್ರವಾಗಿ ಗಾಯಗೊಂಡಿದ್ದಾರೆ. ಬಾಗಲಕೋಟೆ ಜಿಲ್ಲೆಯ ಚೆಟ್ನಿಹಾಳು ಗ್ರಾಮದ ಕ್ಯಾಬ್ ಚಾಲಕ ಮುತ್ತಪ್ಪ ಪೂಜಾರ್ (35), ಅವರ ಪತ್ನಿ ರೇಣುಕಾ (30) ಮೃತರು. ಅವರ ಮಕ್ಕಳಾದ ಅನುಶ್ರೀ (9), ರೂಪಶ್ರೀ (6) ಹಾಗೂ ಖುಷಿ (4) ಗಂಭೀರ ಗಾಯಗೊಂಡಿದ್ದು, ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪಳ ಆಸ್ಪತ್ರೆಯಿಂದ ಹುಬ್ಬಳ್ಳಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ಸಹಾಯಕ ನಿರ್ದೇಶಕರು ರವರ ಕಛೇರಿ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ತಿದ್ದುಪಡಿ ಪ್ರಕಟಣೆ
ಸಂಖ್ಯೆ : ಹ.ಗು.ಪ./ಇ-ಟೆಂಡರ್/02/2025-26, ದಿನಾಂಕ : 03-07-2025, ಈ ಸಂಖ್ಯೆ ಪ್ರಕಟಣೆ ಇಂದು ಅಂದರೆ 04-07-2025 ರಂದು ವಿಶ್ವವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಇದರಲ್ಲಿ ಸರ್ಕಾರಿ ಸವಾಲು ಮೊತ್ತ (ರೂ. ಗಳಲ್ಲಿ) : 2,685.00 ಎಂದು ತಪ್ಪಾಗಿ ಮುದ್ರಣವಾಗಿದೆ ಅದನ್ನು 268500 ಎಂದು ಓದಿಕೊಳ್ಳುವುದು.
ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು, ಬಾದಾಮಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆ.
ವಾಸಾಸಂಇ/ ಬಾಗಲಕೋಟೆ/152(ಎ)/ಮಣಿಪಾಲ್/2025-26

ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ.
ನಂ. 297/5588, ಬಾಗೇಗೌಡ ಬಡಾವಣೆ, ತಿರುಮಲೆ ರಸ್ತೆ, ಮಾಗಡಿ ಟೌನ್, ರಾಮನಗರ ಜಿಲ್ಲೆ, ಪಿನ್ ಕೋಡ್-562120
ಇ-ಮೇಲ್:mpa.magadi@gmail.com
Phone:9448572782
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
ಮಾಗಡಿ ಯೋಜನಾ ಪ್ರಾಧಿಕಾರದ ಕಛೇರಿ ಉಪಯೋಗಕ್ಕೆ ಹೊರಗುತ್ತಿಗೆ ಮೂಲಕ ಖಾಸಗಿ ಏಜೆನ್ಸಿ / ಸಂಸ್ಥೆಯಿಂದ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಪಡೆಯುವ ಸಲುವಾಗಿ ಅರ್ಹ ಖಾಸಗಿ ಏಜೆನ್ಸಿ / ಸಂಸ್ಥೆಗಳಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ TPA/2025-26/SE0041 ರಲ್ಲಿ ಇ-ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಆಸಕ್ತಿಯುಳ್ಳ ಅರ್ಹ ಖಾಸಗಿ ಏಜೆನ್ಸಿ / ಸಂಸ್ಥೆಯವರು ದಿನಾಂಕ : 19-07-2025 ರಂದು ಸಮಯ ಸಂಜೆ 4.00 ಗಂಟೆ ಒಳಗೆ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬಹುದು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ ವಿಳಾಸ: https://www.kppp.karnataka.gov.in ನಲ್ಲಿ ಪರಿಶೀಲಿಸಿಕೊಳ್ಳಬಹುದು.
ಸಹಿ/-ಸದಸ್ಯ ಕಾರ್ಯದರ್ಶಿ, ಹಾಗೂ ಜಂಟಿ ನಿರ್ದೇಶಕರು, ಮಾಗಡಿ ಯೋಜನಾ ಪ್ರಾಧಿಕಾರ, ಮಾಗಡಿ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816-2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.04/2025-26 KW-3 & KW-4, (ದ್ವಿ ಲಕೋಟೆ)
ದಿನಾಂಕ: 30.06.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 30.06.2025
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2025-26ನೇ ಸಾಲಿನ ಲೆಕ್ಕ ಶೀರ್ಷಿಕೆ: PMKSY-HKKP-SMI ಮತ್ತು 4711-ಪ್ರವಾಹ ನಿಯಂತ್ರಣ-ಸಣ್ಣ ಕಾಮಗಾರಿಗಳು ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ ಪೋರ್ಟ್‌ಲ್ ಅಡಿಯಲ್ಲಿ ಐಟಂವಾರು ಟೆಂಡರುಗಳನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 04/2025-26, ದಿ: 30-06-2025 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 03-07-2025 ರಂದು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು (ಪ್ರೀ ಬಿಡ್) ಪಡೆಯಲು ದಿನಾಂಕ: 07-07-2025 ಬೆಳ್ಳಗ್ಗೆ 11.30 ಗಂಟೆಯವರೆಗೆ ಸ್ವೀಕರಿಸಲಾಗುವುದು. 3. ಗುತ್ತಿಗೆದಾರರಿಂದ ಟೆಂಡರ್‌ನ್ನು ಕೆ.ಪಿ.ಪಿ ಪೋರ್ಟಲ್‌ನ ಮೂಲಕ ದಿನಾಂಕ: 11-07-2025 ಸಾಯಂಕಾಲ 5.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ತಾಂತ್ರಿಕ ಬಿಡ್ಡನ್ನು ದಿನಾಂಕ: 14-07-2025 ಸಾಯಂಕಾಲ 5.05 ಗಂಟೆಗೆ ತೆರೆಯಲಾಗುವುದು. 5. ಆರ್ಥಿಕ ಬಿಡ್ಡನ್ನು ದಿನಾಂಕ: 15-07-2025 ಸಾಯಂಕಾಲ 5.10 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/177/KSMCA/2025-26

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, ಕೇಂದ್ರ ಕಛೇರಿ, 2ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.
ಸಂಖ್ಯೆ: ಬೆಂಮಸಾಸಂ/ಕೇಕ/ಸಂ/ವಾ/1797/1505/2025-26 ದಿನಾಂಕ : 03.07.2025
ಟೆಂಡರ್ ಪ್ರಕಟಣೆ ಸಂಖ್ಯೆ-15/2025-26 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವಿವಿಧ ಬಸ್ ನಿಲ್ದಾಣಗಳಲ್ಲಿನ ಸಾಮಾನ್ಯ ಮಳಿಗೆಗಳು(ಕಟ್ಟಿದ ಮತ್ತು ತೆರೆದ), ಉಪಹಾರ ಗೃಹ ಮತ್ತು ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಫ್ಲಾಟ್‌ಗಳಿಗೆ ಮಾಸಿಕ ಪರವಾನಗಿ ಶುಲ್ಕದ ಆಧಾರದ ಮೇಲೆ ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಇ-ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಸಲ್ಲಿಸುವ ಕೊನೆಯ ದಿನಾಂಕ	19.07.2025 ರಂದು 17:00 ಗಂಟೆಯವರೆಗೆ.
ಆರ್ಥಿಕ ಬಿಡ್ ತೆರೆಯುವ ದಿನಾಂಕ	21.07.2025 ರಂದು 11.30 ಗಂಟೆಗೆ.

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ, ವಿಸ್ತೀರ್ಣ ಹಾಗೂ ಇನ್ನಿತರ ಮಾಹಿತಿಗಾಗಿ www.kppp.karnataka.gov.in ಗೆ ಲಾಗಿನ್ ಆಗಿ ಅಥವಾ ಇ-ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 09240214000; 09240214001; 22371090; 22340060; 22340948 ಅಥವಾ 7760997519 & 7760991222, ಇ-ಮೇಲ್: ctmc@mybmtc.com ಗೆ ಸಂಪರ್ಕಿಸಬಹುದು.
ಸಹಿ/-ಮುಖ್ಯ ಸಂಚಾರ ವ್ಯವಸ್ಥಾಪಕರು(ವಾಣಿಜ್ಯ)(ಟೆಂಡರ್ ಕರೆಯುವ ಪ್ರಾಧಿಕಾರಿ)

ನಗರಸಭಾ ಕಾರ್ಯಾಲಯ, ನೆಲಮಂಗಲ
ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂ.: 080-27722735, ಸಹಾಯವಾಣಿ: 080-27722135, Web : www.nelamangala.mrc.gov.in, Email : itstaff_ulb_nelamangala@yahoo.com
ಸಂಖ್ಯೆ: ನಸನೆ/ತಾಂತ್ರಿಕ(ವಿ)/ಟೆಂಡರ್/14/2025-26 ದಿನಾಂಕ: 03.07.2025
ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟಾಂಡರ್ಡ್ ಡಾಕ್ಯೂಮೆಂಟ್ KW 1 & 2ರ & KG ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ 2021-22ನೇ ಸಾಲಿನ 15ನೇ ಹಣಕಾಸು ಹಾಗೂ 2025-26ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಹಾಗೂ 2025-26ನೇ ಸಾಲಿನ ನಗರಸಭಾ ನಿಧಿಯಡಿ ಕೈಗೊಂಡಿರುವ ಕಾಮಗಾರಿಗಳ ಟೆಂಡರ್ ಕೈಗೊಳ್ಳಲು ಒಟ್ಟು ಮೊತ್ತ ರೂ: 265.02 ಲಕ್ಷಗಳ ಕೈಗೊಳ್ಳುವ ಕಾಮಗಾರಿಗಳ ಐಟಾಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರಕ್ಯೂಮೆಂಟ್ ವೆಬ್‌ಸೈಟ್: https://kppp.karnataka.gov.in/ ಮೂಲಕ ಟೆಂಡರ್ ಸಲ್ಲಿಸುವುದು.
ಇ-ಪಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: (As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.
ಸಹಿ/- ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ | ಸಹಿ/- ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ | ಸಹಿ/- ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ | ಸಹಿ/- ಪೌರಾಯುಕ್ತರು (ಪ್ರಭಾರ) ನಗರಸಭೆ, ನೆಲಮಂಗಲ
ವಾ.ಸಾ.ಸಂ.ಇ/ವಾಪ್ರ/1623/ಶಿರಡಿಸಾಯಿ/2025-26

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352-277816, ಫ್ಯಾಕ್ಸ್:08352-277817
ಇ-ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2025-26/821
ದಿನಾಂಕ:04.07.2025
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)
ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2024-25 ನೇ ಸಾಲಿನ ಲೆಶೀ 5054 ಯೋಜನೆಯಡಿಯಲ್ಲಿ ಇಂಡೆಂಟ ನಂ. RDPR/2025-26/RD/WORK_INDENT16240, 16245, 16211 & 16243 ಒಟ್ಟು 4 ಕಾಮಗಾರಿಗೆ ಕೆ.ಡಬ್ಲೂ-4 ರ ಪ್ರಕಾರ ರೂ.200.00 ಲಕ್ಷದವರೆಗೆ ಈ ಕಚೇರಿಯ ಟೆಂಡರ್ ಪ್ರಕಟಣೆ **ಸಂಖ್ಯೆ: 821 ದಿನಾಂಕ: 04.07.2025** ರಂತೆ ಕಾಮಗಾರಿಗಳನ್ನು ಇ-ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೋಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 19.07.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.
ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/165/ಕೆಎಸ್‌ಎಂಸಿಎ/2025-26

ಮಕ್ಕಳ ಹಾರ್ಟ್ ಚೆಕಪ್

← ಮೊದಲಪುಟದಿಂದ

10ನೇ ತರಗತಿ ಮಕ್ಕಳಿಗೆ ಕಡ್ಡಾಯ ತಪಾಸಣೆ ನಡೆಸಿ ಮಕ್ಕಳ ಹೃದಯ ಬಡಿತ, ಹೈಪರ್ ಟೆನ್ಷನ್ ಪತ್ತೆ ಹಚ್ಚಬೇಕು. ಸಂಭಾವ್ಯ ಅಪಾಯ ಪತ್ತೆ ಮಾಡಬೇಕು ಎಂದು ಸಮಿತಿ ತಿಳಿಸಿದೆ. ಕೋವಿಡ್ ಸಮಸ್ಯೆ ಕಾಣಿಸಿಕೊಂಡವರಲ್ಲೂ ಕೊಂಚ ಹೃದಯದ ಸಮಸ್ಯೆ ಇದೆ ಎಂದು ಸಮಿತಿ ವರದಿ ತಿಳಿಸಿದೆ. ಕೋವಿಡ್ ಲಸಿಕೆ ತೆಗೆದುಕೊಂಡ 250 ಮಂದಿ ಮೇಲೆ ಅಧ್ಯಯನ ಮಾಡಿ ಸಮಿತಿ ಈ ವರದಿ ಸಿದ್ಧಪಡಿಸಿದೆ.

ಆಸ್ಪತ್ರೆಗಳಲ್ಲಿ ಮೂಲಸೌಕರ್ಯವನ್ನು ಬಲಪಡಿಸುವ ಸಲಹೆಯೂ ವರದಿಯಲ್ಲಿ ಪ್ರಮುಖವಾಗಿದೆ. ಜಿಲ್ಲಾ ಆಸ್ಪತ್ರೆಗಳಲ್ಲಿ ಹೃದಯಕ್ಕೆ ಸಂಬಂಧಪಟ್ಟ ಔಷಧಗಳ ಸಂಗ್ರಹವನ್ನು ಖಾತರಿಪಡಿಸಬೇಕು ಎಂದು ತಜ್ಞರು ಶಿಫಾರಸು ಮಾಡಿದ್ದಾರೆ. ಜತೆಗೆ, ಸ್ಟೆಮಿ ಯೋಜನೆಯನ್ನು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ವಿಸ್ತರಿಸುವಂತೆ ಸೂಚಿಸಲಾಗಿದೆ. ಈ ಯೋಜನೆ ತುರ್ತು ಸಂದರ್ಭಗಳಲ್ಲಿ ತ್ವರಿತ ಚಿಕಿತ್ಸೆ ಒದಗಿಸುವಲ್ಲಿ ಪರಿಣಾಮಕಾರಿಯಾಗಿದೆ. ಇದರ ಜತೆಗೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ಡಿಯಾಲಜಿಸ್ಟ್‌ಗಳ ನೇಮಕಾತಿಯನ್ನು ಆದ್ಯತೆಯ ಮೇಲೆ ಕೈಗೊಳ್ಳಬೇಕು ಎಂದು ಸಮಿತಿಯು ಹೇಳಿದೆ. ವೈದ್ಯಕೀಯ ತಜ್ಞರ ಕೊರತೆಯಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ತಕ್ಷಣದ ಚಿಕಿತ್ಸೆ ಲಭ್ಯವಾಗದಿರುವುದು ಒಂದು ಪ್ರಮುಖ ಸಮಸ್ಯೆಯಾಗಿದೆ.

ಹೃದಯಾಘಾತದ ಕುರಿತಾದ ದಾಖಲಾತಿಗಳನ್ನು ರಿಜಿಸ್ಟರ್‌ನಲ್ಲಿ ದಾಖಲಿಸುವ ಮೂಲಕ ಡೇಟಾಬೇಸ್ ರಚಿಸುವ ಸಲಹೆಯೂ ವರದಿಯಲ್ಲಿದೆ. ಇದು ರಾಜ್ಯದಾದ್ಯಂತ ಹೃದಯಾಘಾತದ ಪ್ರಕರಣಗಳನ್ನು ಗಮನಿಸಲು ಮತ್ತು ತಡೆಗಟ್ಟುವ ಕಾರ್ಯಕ್ರಮಗಳನ್ನು ಯೋಜಿಸಲು ಸಹಾಯಕವಾಗಲಿದೆ. ಕರೋನಾ ಲಸಿಕೆಯ ದುಷ್ಪರಿಣಾಮಗಳ ಬಗ್ಗೆಯೂ ತನಿಖೆ ನಡೆಸಲು ಸಮಿತಿಯು ಶಿಫಾರಸು ಮಾಡಿದೆ.

ದೇವೇಗೌಡರ ಕನಸು ಮೋದಿಯಿಂದ ನನಸು

ಕಲಬುರಗಿ: ರಾಷ್ಟ್ರವ್ಯಾಪಿ ಮಾಜಿ ಪ್ರಧಾನಿ ದೇವೇಗೌಡರ ಸಾಧನೆಗಳಿಗೆ ಹಾಗೂ ಅವರ ಕಲ್ಪನೆಗಳಿಗೆ ಈಗಿನ ಕೇಂದ್ರ ಸರಕಾರದಲ್ಲಿ ಮನ್ನಣೆ ಸಿಗುತ್ತಿದೆ. ದೇವೇಗೌಡರ ಕನಸ್ಸನ ಪ್ರಧಾನಿ ನರೇಂದ್ರ ಮೋದಿ ಅವರು ನನಸು ಮಾಡುತ್ತಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ

ನಿಖಿಲ್ ಕುಮಾರಸ್ವಾಮಿ ಹೇಳಿದರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಜೆಡಿಎಸ್ ಪಕ್ಷದ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ 33 ಪ್ರತಿಶತ ಮೀಸಲಾತಿ ಬಿಲ್‌ನ್ನು ಪ್ರಧಾನಿ ನರೇಂದ್ರ ಮೋದಿ ಜಾರಿಗೊಳಿಸಿದ್ದಾರೆ.ಈ ಕಲ್ಪನೆ 1996ರಲ್ಲೆ ದೇವೇಗೌಡರು ಹೊಂದಿದ್ದರು.

ಆದರೆ, ರಾಜ್ಯಸಭೆಯಲ್ಲಿ ಅವರಿಗೆ ಕ್ಲಿಯರೆನ್ಸ್ ಸಿಕ್ಕಿತು. ಲೋಕಸಭೆಯಲ್ಲಿ ಸಿಗಲಿಲ್ಲ.ಅಷ್ಟರಲ್ಲೇ ದೇವೇಗೌಡರ ಸರಕಾರ ಪತನವಾಯಿತು.ಇದೀಗ ಅವರ ಕನಸು,ಕಲ್ಪನೆ ಪ್ರಧಾನಿ ನರೇಂದ್ರ ಮೋದಿ ನನಸು ಮಾಡಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಆಷಾಢ ಶುಕ್ರವಾರ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪತ್ನಿ, ಸೊಸೆ, ಮೊಮ್ಮಗನೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಆಗಮಿಸಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಹುಲಿ ಸಾವು: ಮೂವರ ತಲೆದಂಡ

← ಮೊದಲಪುಟದಿಂದ

ಪ್ರಾಥಮಿಕ ತನಿಖಾ ವರದಿ ಸಲ್ಲಿಸಿರುವ ಅಪರ ಮುಖ್ಯ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಪುಷ್ಕರ್ ನೇತೃತ್ವದ ಉನ್ನತ ಮಟ್ಟದ ಸಮಿತಿಯಲ್ಲಿ ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಶ್ರೀನಿವಾಸುಲು, ಚಾಮರಾಜನಗರ ಸಿಸಿಎಫ್ ಹೀರಾಲಾಲ್, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಎ.ಐ.ಜಿ ಹರಿಣಿ ವೇಣುಗೋಪಾಲ್, ವನ್ಯಜೀವಿ ತಜ್ಞ ಡಾ.ಸಂಜಯ್ ಗುಬ್ಬಿ ಮತ್ತು ಮೈಸೂರು ಮೃಗಾಲಯದ ಸಹಾಯಕ ನಿರ್ದೇಶಕ ಡಾ. ಶಶಿಧರ್ ಸದಸ್ಯರಾಗಿದ್ದರು. ಈ ಸಮಿತಿಗೆ ಅಂತಿಮ ವರದಿಯನ್ನು ಇದೇ ತಿಂಗಳ 10ರೊಳಗೆ ಸಲ್ಲಿಸುವಂತೆಯೂ ಅರಣ್ಯ ಸಚಿವರು ಸೂಚಿಸಿದ್ದಾರೆ.

ಸಿಬ್ಬಂದಿಗೆ ವೇತನ ಪಾವತಿ ವಿಳಂಬ

ಹೊರಗುತ್ತಿಗೆ ಸಿಬ್ಬಂದಿಗೆ ವೇತನ ಪಾವತಿ ಮಾಡಲು ಏಪ್ರಿಲ್ ತಿಂಗಳಾಂತ್ಯಕ್ಕೆ ಹಣ ಬಿಡುಗಡೆಯಾಗಿದ್ದರೂ, ಜೂನ್ ತಿಂಗಳವರೆಗೆ ವೇತನ ಪಾವತಿಸದಿರುವುದು ಡಿಸಿಎಫ್ ಚಕ್ರಪಾಣಿ ಅವರ ಕರ್ತವ್ಯ ಲೋಪವಾಗಿದ್ದು, ಇದು ಗಸ್ತು ಕಾರ್ಯಕ್ಕೆ ಹಿನ್ನಡೆ ಉಂಟುಮಾಡಿದೆ. ಈ ಸಂಬಂಧ ಡಿಸಿಎಫ್ ಚಕ್ರಪಾಣಿ ಅಮಾನತಿಗೆ ಶಿಫಾರಸು ಮಾಡಿ, ಇಲಾಖಾ ವಿಚಾರಣೆ ಮಾಡಲು ಶಿಫಾರಸು ಮಾಡಿದ್ದಾರೆ. ಹೊರಗುತ್ತಿಗೆ ಸಿಬ್ಬಂದಿ ಮಾರ್ಚ್‌ನಿಂದ 3 ತಿಂಗಳ ವೇತನ ಪಾವತಿ ಆಗಿಲ್ಲ ಎಂದು ಜೂನ್ 23ರಂದು ಪ್ರತಿಭಟನೆ ನಡೆಸಿದ್ದರು. ಸಕಾಲದಲ್ಲಿ ವೇತನ ಸಿಗದೆ ಮುಂಚೂಣಿಯ ಸಿಬ್ಬಂದಿ ಕರ್ತವ್ಯ ವಿಮುಖರಾಗಲು ಕಾರಣವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ.

ಸರಕಾರ ತ.ನಾ. ಮನವೊಲಿಸಲಿ

ಮಂಡ್ಯ: ಕಾಂಗ್ರೆಸ್‌ನವರು ಮೊದಲು ತಮಿಳುನಾಡಿನವರನ್ನು ಒಪ್ಪಿಸಲಿ. ತಮಿಳುನಾಡಿನವರು ಕಾಂಗ್ರೆಸ್‌ನವರ ಪಾರ್ಟ್‌ನರ್



ಗಳು ಅವರ ಒಪ್ಪಿಗೆ ತಗೊಂಡು ಬನ್ನಿ. ಮೇಕೆದಾಟು ಮಾಡಿಸೋಣ. ಮೇಕ ದಾಟು ಯೋಜನೆ ದೇವೇಗೌಡರ ಕುಟುಂಬದಿಂದಲೇ ಆಗಬೇಕು. ಇವರ ಯಾರ ಕೈಯಲ್ಲೂ ಆಗಲ್ಲ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ 32ಕ್ಕೂ ಅಧಿಕ ಸಾವು ಆಗಿವೆ. ಇದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕಾಗಿದೆ. ಪ್ರತಿ ತಾಲೂಕಿನಲ್ಲೂ ಜೆಡಿಎಸ್ನಿಂದ ಹೃದಯ ತಪಾಸಣೆ ಮಾಡಲು ಚರ್ಚೆ ಮಾಡುತ್ತಿದ್ದೇವೆ. ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಹೃದ್ರೋಗ ವಿಭಾಗ ತೆರೆಯಲು ರಾಜ್ಯ ಸರಕಾರ ಕ್ರಮವಹಿಸಬೇಕು. ಸಚಿವರು ಇದಕ್ಕೆ ಆದ್ಯತೆ ನೀಡಬೇಕು ಎಂದು ಹೇಳಿದರು.

ನಿಖಿಲ್ ರಾಜ್ಯ ಪ್ರವಾಸ ವಿಚಾರಕ್ಕೆ ಪ್ರತಿಕ್ರಿಯಿಸಿ, ರಾಜ್ಯದಲ್ಲಿ ಜೆಡಿಎಸ್ ಸಂಘಟನೆಗೆ ನಿಖಿಲ್ ಓಡಾಡುತ್ತಿದ್ದಾರೆ. ಬಿಜೆಪಿ ಜತೆಗಿನ ಮೈತ್ರಿಗೂ ಇದಕ್ಕೂ ಸಂಬಂಧ ಇಲ್ಲ. ನಾವು (ಜೆಡಿಎಸ್) ರಾಜ್ಯದ 224 ಸ್ಥಾನಗಳಿಗೂ ಸ್ಪರ್ಧಿಸಲು ಸಾಧ್ಯವಿಲ್ಲ. ನಮಗೆ ಶಕ್ತಿ ಇರುವ ಕಡೆ ಸಂಘಟನೆ ಮಾಡುತ್ತಾ ಇದ್ದೇವೆ. ಚುನಾವಣೆ ಬಂದಾಗ ಕೇಂದ್ರ ನಾಯಕರ ಜತೆ ಕ್ಷೇತ್ರಗಳ ಬಗ್ಗೆ ಮಾತನಾಡುತ್ತೇವೆ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಕೆಟ್ಟು ನಿಂತ ಲಾಂಚ್: ತಪ್ಪಿದ ಅನಾಹುತ

ಶಿವಮೊಗ್ಗ: ಶರಾವತಿ ಹಿನ್ನೀರಿನ ಪ್ರದೇಶದ ಹೊಳೆಬಾಗಿಲಿನಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗುತ್ತಿದ್ದ ಲಾಂಚ್ ನೀರಿನ ಮಧ್ಯದಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿ ನಿಂತಿರುವ ಘಟನೆ ಗುರುವಾರ ಸಂಜೆ ನಡೆದಿದೆ. ಲಾಂಚಿನಲ್ಲಿ ನೂರಕ್ಕೂ ಹೆಚ್ಚು ಪ್ರಯಾಣಿಕರು ಹಾಗೂ ವಾಹನಗಳನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಇದರಿಂದ ಪ್ರಯಾಣಿಕರು ಆತಂಕಕ್ಕೆ ಒಳಗಾಗಿದ್ದರು. ಬಳಿಕ ಸೇತುವೆ ಕಾಮಗಾರಿಗೆ ಬಂದಿದ್ದ ಲಾಂಚ್ ಮೂಲಕ ಹಗ್ಗ ಕಟ್ಟಿ ಕೆಟ್ಟು ನಿಂತಿದ್ದ ಲಾಂಚನ್ನು ದಡಕ್ಕೆ ತರಲಾಯಿತು. ಮತ್ತೊಂದು ಲಾಂಚ್ ಹೋಗಲು ಸ್ವಲ್ಪ ತಡವಾಗುತ್ತಿದ್ದರು ಸಹ ಕೆಟ್ಟ ನಿಂತಿದ್ದ ಲಾಂಚ್ ಪಕ್ಕದಲ್ಲೇ ನಿರ್ಮಾಣಗೊಳ್ಳುತ್ತಿರುವ ಸಿಗಂದೂರು ಸೇತುವೆಯ ಪಿಲ್ಲರ್‌ಗೆ ಲಾಂಚ್ ಡಿಕ್ಕಿಯಾಗುವ ಸಾಧ್ಯತೆ ಇತ್ತು ಎನ್ನಲಾಗಿದೆ.

ಶರಣ್ ಪಂಪ್ವೆಲ್ ವಿರುದ್ಧ ಪ್ರಕರಣ

ಉಡುಪಿ: ಬ್ರಹ್ಮಾವರದ ಕುಂಜಾಲುವಿನಲ್ಲಿ ನಡೆದ ಗೋ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ, ಧರ್ಮಗಳ ನಡುವೆ ದ್ವೇಷ ಹುಟ್ಟು ಹಾಕುವಂತಹ ಪ್ರಚೋದನಕಾರಿ ಹೇಳಿಕೆ ನೀಡಿರುವ ಆರೋಪದಲ್ಲಿ ವಿಶ್ವ ಹಿಂದೂ ಪರಿಷತ್ ಮುಖಂಡ

ಶರಣ್ ಪಂಪ್ವೆಲ್ ವಿರುದ್ಧ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ. ಪ್ರಕರಣದ ತನಿಖೆ ಪೂರ್ಣಗೊಳ್ಳುವ ಮೊದಲೇ ಆರೋಪಿ ಶರಣ್ ಅವರು ಸಾರ್ವಜನಿಕ ಶಾಂತಿ, ಸುವ್ಯವಸ್ಥೆಗೆ ಭಂಗ ತರುವಂತೆ ಸುದ್ದಿಗೋಷ್ಠಿಯಲ್ಲಿ ಸುಳ್ಳು ಮಾಹಿತಿ ನೀಡಿ, ಸಾರ್ವಜನಿಕರಲ್ಲಿ ಗೊಂದಲ ಉಂಟು ಮಾಡಿದ್ದಾರೆ ಎಂದು ದೂರಿನಲ್ಲಿ ಹೇಳಲಾಗಿದೆ. ಶರಣ್ ಪಂಪ್ವೆಲ್ ಅವರ ಹೇಳಿಕೆಯ ವಿಡಿಯೊ ವಿವಿಧ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡಿದೆ ಎಂದೂ ತಿಳಿಸಲಾಗಿದೆ.

ಗುತ್ತಿಗೆದಾರನ ಹತ್ಯೆ ಪ್ರಕರಣ: 6 ಜನ ಸೆರೆ

ಹಾವೇರಿ: ಶಿಗ್ಗಾಂವಿಯಲ್ಲಿ ನಡೆದಿದ್ದ ಗುತ್ತಿಗೆದಾರನ ಹತ್ಯೆ ಪ್ರಕರಣದ ಎ1 ಆರೋಪಿ ಮನೆಗೆ ಬೆಂಕಿ ಹಾಕಿದ್ದ 6 ಜನರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿ ಮನೆಗೆ ಬೆಂಕಿ ಹಾಕಿದ್ದ ಹತ್ಯೆಯಾದ ಶಿವಾನಂದ ಕುನ್ನೂರು ಕುಟುಂಬದ 6 ಜನ

ಸದಸ್ಯರನ್ನು ಬಂಧಿಸಲಾಗಿದೆ. ಹತ್ಯೆಯಾದ ರಾತ್ರಿಯೇ ಪ್ರಕರಣದ ಆರೋಪಿ ನಾಗರಾಜ್ ಸವದತ್ತಿ ಮನೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಾಕಲಾಗಿತ್ತು. ಮನೆಯಲ್ಲಿ ಯಾರೂ ಇಲ್ಲದೇ ಇದ್ದಿದ್ದರಿಂದ ಸಾವುನೋವು ಸಂಭವಿಸಿರಲಿಲ್ಲ. ಬಂಧಿತ ಆರೋಪಿಗಳನ್ನು ಲಿಂಗರಾಜ್ ಕುನ್ನೂರು, ಧರ್ಮಣ್ಣ ಕುನ್ನೂರು, ಶ್ರೀಧರ್, ಪ್ರಕಾಶ್ ಕುನ್ನೂರು, ಶಂಕ್ರಪ್ಪ, ಪ್ರಕಾಶ್ ಎಂದು ಗುರುತಿಸಲಾಗಿದೆ. ಕಳೆದ ಜೂ.24 ರಂದು ಶಿಗ್ಗಾಂವಿಯಲ್ಲಿ ಶಿವಾನಂದ ಕುನ್ನೂರು ಹತ್ಯೆ ನಡೆದಿತ್ತು. ಸೈಟ್ ವಿಚಾರವಾಗಿ ಈ ಕೊಲೆ ನಡೆದಿತ್ತು. ಹತ್ಯೆಯಾದ ದಿನವೇ ಆರೋಪಿಗಳು ನಾಗರಾಜ್ ಮನೆಗೆ ಬೆಂಕಿ ಹಾಕಿದ್ದರು. ಶಿಗ್ಗಾಂವಿ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಸುಮೋಟೋ ಕೇಸ್ ದಾಖಲಾಗಿತ್ತು.

ಹೇಮಾವತಿ ವಿವಾದ: ಮರುಪರಿಶೀಲನೆ ಡಿಸಿಎಂ ಡಿ.ಕೆ. ಶಿವಕುಮಾರ್ ಭರವಸೆ

ತಜ್ಞರು ಸ್ಥಳ ಪರಿಶೀಲಿಸಿದ ಬಳಿಕ ಕಾಮಗಾರಿ ಆರಂಭ | ಉಪಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಸಭೆ

ಬೆಂಗಳೂರು: ಭಾರಿ ವಿವಾದಕ್ಕೆ ಕಾರಣವಾಗಿದ್ದ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಯಿಂದ ಯಾರಿಗೂ ಸಮಸ್ಯೆಯಾಗದಂತೆ ಕ್ರಮವಹಿಸಲಾಗುವುದು. ತಜ್ಞರಿಂದ ಮರುಪರಿಶೀಲಿಸಿ, ಅನುಮತಿ ನೀಡಿದ ಬಳಿಕವೇ ಕಾಮಗಾರಿಯನ್ನು ಆರಂಭಿಸುವ ಭರವಸೆಯನ್ನು ಸರಕಾರ ಸ್ಥಳೀಯ ಜನಪ್ರತಿನಿಧಿಗಳಿಗೆ ನೀಡಿದೆ.

ಮಾಗಡಿ ಹಾಗೂ ಕುಣಿಗಲ್‌ಗೆ ನೀರು ಒದಗಿಸುವುದಕ್ಕೆ ತೀವ್ರ ವ್ಯಕ್ತವಾದ ಹಿನ್ನೆಲೆಯಲ್ಲಿ ಶುಕ್ರವಾರ ವಿಧಾನಸೌಧದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ತುಮಕೂರು ಹಾಗೂ ಬೆಂಗಳೂರು ದಕ್ಷಿಣ ಭಾಗದ ಜನ ಪ್ರತಿನಿಧಿಗಳ ಸಭೆ ನಡೆಸಿದರು. ಈ ಸಭೆಯಲ್ಲಿ ಯೋಜನೆ ಸಂಬಂಧ ತಜ್ಞರ ತಂಡದೊಂದಿಗೆ ಮತ್ತೊಮ್ಮೆ ಸ್ಥಳ ಪರಿಶೀಲನೆ ಮಾಡಿದ ಬಳಿಕವಷ್ಟೇ ಕಾಮಗಾರಿಯನ್ನು ಮುಂದುವರಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದ್ದಾರೆ.

ಮಾಗಡಿ ಮತ್ತು ಕುಣಿಗಲ್ ತಾಲೂಕಿಗೆ ಕುಡಿಯುವ ನೀರು ಪೂರೈಕೆ ಉದ್ದೇಶಕ್ಕಾಗಿ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ 70ಕಿ.ಮೀ.ನಿಂದ ಗುರುತ್ವಾಕರ್ಷಣೆ ಪೈಪ್ ಲೈನ್ ಅಳವಡಿಸಿ, ಶ್ರೀರಂಗ ಕೆರೆಗೆ ತುಂಬಿಸುವ ಯೋಜನೆಗೆ ನೀರನ್ನು ಖಾತರಿಪಡಿಸುವ ಕಾಮಗಾರಿಯ ಅನುಷ್ಠಾನಗೊಳಿಸುವ ಯೋಜನೆ ವಿವಾದವಾಗಿತ್ತು. ಆದ್ದರಿಂದ ಈ ಎಲ್ಲ ಗೊಂದಲಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಸಭೆಯಲ್ಲಿ ಹೇಮಾವತಿ ನೀರಾವರಿ ನಾಲೆಗೆ ಲಿಂಕ್ ಕೆನಾಲ್ ಮಾಡಿ ಮಾಗಡಿ ಮತ್ತು ಕುಣಿಗಲ್‌ಗೆ ನೀರು ನೀಡುವುದು ಅವೈಜ್ಞಾನಿಕ ಯೋಜನೆಯಾಗಿದೆ. ಆದ್ದರಿಂದ ಈ ಕಾಮಗಾರಿ ನಿಲ್ಲಿಸಬೇಕು ಎನ್ನುವ ಆಗ್ರಹ ಕೇಳಿಬಂತು. ಮಾಗಡಿ ಮತ್ತು ಕುಣಿಗಲ್ ಶಾಸಕರು ಎಷ್ಟು ನೀರು ಹರಿಸಬೇಕೆಂಬ ನಿರ್ಧಾರ ಅಧಿಕಾರಿಗಳ ಕೈಯಲ್ಲಿ ಇರಲಿದೆ. ಅದನ್ನು ನಿಯಂತ್ರಣ ಮಾಡಿ ಎಂದು ಒತ್ತಾಯಿಸಿದರು. ಅಂತಿಮವಾಗಿ ಕಾಮಗಾರಿ ಸ್ಥಳಕ್ಕೆ ಮತ್ತೊಮ್ಮೆ ಐಐಎಸ್‌ಸಿ ಮತ್ತು ಐಐಟಿ ತಜ್ಞರ ತಂಡದೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಮುಂದಿನ ನಿರ್ಧರ ತೆಗೆದುಕೊಳ್ಳಲಾಗುತ್ತದೆ. ಅಲ್ಲಿಯವರೆಗೂ ಕಾಮಗಾರಿ ನಡೆಯುವುದಿಲ್ಲ ಎಂದು ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಅವೈಜ್ಞಾನಿಕ ಕಾಮಗಾರಿ: ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಮಾತನಾಡಿ, ಡಿಪಿಆರ್ ನಡೆದು ಕಾಮಗಾರಿ ನಡೆಯುತ್ತಿರುವ ಸಮಯದಲ್ಲಿ ಯೋಜನೆ ದಿಕ್ಕು ತಪ್ಪಿಸಿರುವುದು ಇತಿಹಾಸದಲ್ಲಿಯೇ ಮೊದಲ ಬಾರಿ. ಇದೊಂದು ಅವೈಜ್ಞಾನಿಕ ಯೋಜನೆ. ತಜ್ಞರಿಂದ ಮತ್ತೊಮ್ಮ ವರದಿ ಪಡೆಯಬೇಕೆಂದು ಸಭೆಯಲ್ಲಿ ಆಗ್ರಹಿಸಲಾಗಿದೆ. ಕುಡಿಯುವ ನೀರು, ಸಾಮರಸ್ಯ, ನೆಮ್ಮದಿ ಎಲ್ಲರಿಗೂ ಅಗತ್ಯವಾಗಿದೆ. ಆದರಿಂದ ಗೊಂದಲ ಮಾಡದೆ ಮತ್ತೊಮ್ಮೆ ತಜ್ಞರ ಜತೆಗೆ ಹೋಗಿ ಸ್ಥಳ ಪರಿಶೀಲನೆಗೆ ಒತ್ತಾಯ ಮಾಡಿದ್ದೇನೆ. ಅದಕ್ಕೆ ಡಿಸಿಎಂ ಒಪ್ಪಿಕೊಂಡಿದ್ದಾರೆ. ಸಾಧಕಬಾಧಕ ಪರಿಶೀಲನೆ ನಡೆಸಿ ಅಂತಿಮ ನಿರ್ಧಾರಕ್ಕೆ ಬರುವುದಾಗಿ ಸರಕಾರ ಭರವಸೆ ನೀಡಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ವಿ. ಸೋಮಣ್ಣ, ಸಂಸದ ಡಾ.ಸಿ.ಎನ್ ಮಂಜುನಾಥ್, ತುಮಕೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಜಿ ಪರಮೇಶ್ವರ್, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ, ಶಾಸಕ ಬಿ.ಸುರೇಶ್ ಗೌಡ, ಡಾ.ರಂಗನಾಥ್, ಬಾಲಕೃಷ್ಣ, ಮುಖಂಡರಾದ ಎಚ್.ಎಂ. ರೇವಣ್ಣ, ಎಂ.ಟಿ ಕೃಷ್ಣಪ್ಪ, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಡಿಸಿಎಂ ತಾಂತ್ರಿಕ ಸಲಹೆಗಾರ ಜೈಪ್ರಕಾಶ್, ಕಾವೇರಿ ನೀರಾವರಿ ನಿಗಮದ ಎಂ.ಡಿ ಮಹೇಶ್ ಮತ್ತಿತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಮಾಗಡಿ ಹಾಗೂ ಕುಣಿಗಲ್‌ಗೆ ನೀರು ಒದಗಿಸುವುದಕ್ಕೆ ತೀವ್ರ ವ್ಯಕ್ತವಾದ ಹಿನ್ನೆಲೆಯಲ್ಲಿ ಶುಕ್ರವಾರ ವಿಧಾನಸೌಧದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ತುಮಕೂರು ಹಾಗೂ ಬೆಂಗಳೂರು ದಕ್ಷಿಣ ಭಾಗದ ಜನಪ್ರತಿನಿಧಿಗಳ ಸಭೆ ನಡೆಸಿದರು.

ಯೋಜನೆ ಪರಿಶೀಲಿಸಲು ಮನವಿ

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಕೇಂದ್ರ ಸಚಿವ ವಿ.ಸೋಮಣ್ಣ, ಮತ್ತೊಮ್ಮೆ ಯೋಜನೆ ಬಗ್ಗೆ ಪರಿಶೀಲನೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ. ಕೆನಾಲ್ ಯೋಜನೆಯಿಂದ ತುಮಕೂರಿಗೆ ಭಾರಿ ಸಮಸ್ಯೆಯಾಗುತ್ತದೆ. ಕುಣಿಗಲ್ ತಾಲೂಕಿಗೆ ಪೂರ್ವ ನಿಯೋಜಿತ ಯೋಜನೆಗೆ 3 ಟಿಎಂಸಿ ಹರಿಸುವುದಕ್ಕೆ ತಕರಾರು ಇಲ್ಲ. ಆದರೆ, ಹಾಲಿ ಆಧುನಿಕರಣಗೊಂಡಿರುವ ಟಿಬಿಸಿ ನಾಲೆಯ 166ನೇ ಕಿ.ಮೀನಲ್ಲಿ ಹೊಸ ವಿನ್ಯಾಸದ ಪ್ರಕಾರ 567 ಕ್ಯೂಸೆಕ್ ನೀರು ಹರಿಸುವ ಸಾಮರ್ಥ್ಯ ಇದೆ. ಈ ನಾಲ ಮುಖೇನವೇ ಕುಣಿಗಲ್‌ಗೆ ನಿಗದಿತ 3 ಟಿಎಂಸಿ ನೀರು ಹರಿಸಬಹುದು. ಹೊಸ ಲಿಂಕ್ ಕೆನಾಲ್ ಅನಾವಶ್ಯಕವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಭೆಯಲ್ಲಿ ಸಚಿವ, ಶಾಸಕರ ನಡುವೆ ವಾಕ್ಸಮರ

ಸಭೆಯ ಆರಂಭದಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ ಮಾತನಾಡಿ, ನಾಳೆಯಿಂದಲೇ ಕಾಮಗಾರಿ ಶುರು ಮಾಡುತ್ತೇವೆ. ಯೋಜನೆಗೆ ಅನುಮತಿ ಇದೆ, ಕಾಮಗಾರಿ ಅರ್ಧವಾಗಿರುವುದರಿಂದ, ಈಗ ಅದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಇದಕ್ಕೆ ತುಮಕೂರು ಶಾಸಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಅಸಮಾಧಾನವ್ಯಕ್ತಪಡಿಸಿದ ಪರಮೇಶ್ವರ, ನಾನು ಇಡೀ ರಾಜ್ಯವನ್ನು ನೋಡಬೇಕು. ಕೇವಲ ನಮ್ಮ ಭಾಗಕ್ಕಲ್ಲ. ಸಮ್ಮಿಶ್ರ ಸರಕಾರದ ಅವಧಿಯಲ್ಲಿ ಹೇಮಾವತಿ ಯೋಜನೆಯಲ್ಲಿ ತುಮಕೂರು ಶಾಖಾ ನಾಲೆಯ ಅಡಿಯಲ್ಲಿ ಕುಣಿಗಲ್ ತಾಲೂಕಿಗೆ ಕುಡಿಯುವ ನೀರು ಒದಗಿಸುವ ಉದ್ದೇಶಕ್ಕಾಗಿ ಲಿಂಕ್ ಕೆನಾಲ್ ಬಗ್ಗೆ ನಿರ್ಧರಿಸಲಾಗಿದೆ ಎಂದರು. ಕುಣಿಗಲ್‌ಗೆ ಲಿಂಕ್ ಕೆನಾಲ್ ಬೇಕು ಎಂಬುದನ್ನು ತೀರ್ಮಾನಿಸಲಾಗಿದೆ. 960 ಕೋಟಿ ಅನುದಾನ ಮೀಸಲಿಡಲಾಗಿದೆ. ಈಗಾಗಲೇ 400 ಕೋಟಿ ಕಾಮಗಾರಿಗೆ ಖರ್ಚು ಮಾಡಲಾಗಿದೆ. ಇದನ್ನು ಅನುಷ್ಠಾನಗೊಳಿಸಲು ಜಿಲ್ಲೆಯ ಶಾಸಕರ ಸಹಕಾರ ಬೇಕಲ್ಲವೇ? ಯೋಜನೆ ನಿಲ್ಲಿಸಲು ಅಗುವುದಿಲ್ಲ. ಕುಣಿಗಲ್‌ಗೆ ನೀರಿನ ಹಂಚಿಕೆ ಆಗಿದೆ ಅವರಿಗೂ ಕುಡಿಯುವ ನೀರು ಬೇಕಲ್ಲವೇ? ಎಂದು ಪರಮೇಶ್ವರ್ ಖಾರವಾಗಿ ಉತ್ತರಿಸಿದರು.

ರವಿಕುಮಾರ್‌ಗೆ ಬಾಯಿ ಚಪಲವಿದೆ: ಪ್ರಿಯಾಂಕ್

ಕಲಬುರಗಿ: ಎನ್.ರವಿಕುಮಾರ್ ಮೂಲತಃ ಬಿಜೆಪಿಯವರು ಅಲ್ಲ. ಅವರು ಆರ್‌ಎಸ್‌ಎಸ್ ಶಾಖೆಯಿಂದ ಬಂದವರು. ತಮ್ಮ ಬಾಯಿ ಚಪಲಕ್ಕೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಆಕ್ರೋಶ

ವ್ಯಕ್ತಿಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಬಗ್ಗೆ ರವಿಕುಮಾರ್ ನೀಡಿರುವ ಹೇಳಿಕೆಗೆ ತಿರುಗೇಟು ನೀಡಿದ ಅವರು, ರವಿಕುಮಾರ್ ಅವರಿಗೆ ಮುಂಚೆಯಿಂದ ಬಾಯಿ ಚಪಲವಿದೆ. ಕಲಬುರಗಿಯಲ್ಲೂ ಜಿಲ್ಲಾಧಿಕಾರಿಗಳ ವಿರುದ್ಧ ಬಾಯಿಗೆ ಬಂದ ಹಾಗೇ ಮಾತಾಡಿದ್ದಾರೆ. ಅದಕ್ಕೆ ಕೋರ್ಟ್ ಸಹ ಛೀಮಾರಿ ಹಾಕಿದೆ. ಈಗ ಸರಕಾರದ ಮುಖ್ಯ ಕಾರ್ಯದರ್ಶಿಗಳ ಬಗ್ಗೆ ಕೆಟ್ಟ ಮಾತನಾಡುವ ಮೂಲಕ ತಮ್ಮ ಕೊಳಕು ಬುದ್ಧಿ, ಕೊಳಕು ಮನಸ್ಸು ರವಿಕುಮಾರ್ ತೋರಿದ್ದಾರೆ. ರವಿಕುಮಾರ್ ಸದನದಲ್ಲಿ ಅಲ್ಲ, ನಿಮಾನ್ಸ್‌ನಲ್ಲಿ ಇರಬೇಕು ಎಂದು ಕಿಡಿಕಾರಿದರು.

ಅಶ್ಲೀಲ ಹೇಳಿಕೆ ನೀಡಿದರೆ ನೇಣು ಹಾಕಿಕೊಳ್ಳುತ್ತೇನೆ ಎಂದು ಬೇರೆ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಇದು ಅವರಿಗೆ ನಾಚಿಕೆ ಆಗಬೇಕು. ವಿಧಾನಸೌಧದ ಎದುರಿಗೆ ಮಾತನಾಡಿದ ವಿಡಿಯೊವೇ ಸಾಕ್ಷಿಯಾಗಿದೆ. ಹಗ್ಗ ಕೊಡಿ ರವಿಕುಮಾರ್ ನೇಣು ಹಾಕಿಕೊಳ್ಳಲಿ ಎಂದು ಸಚಿವ ಖರ್ಗೆ ಗುಡುಗಿದರು.

ಆರ್‌ಎಸ್‌ಎಸ್ ನವರು 300-400 ಕೋಟಿ ರು.ಗಳ ಕಚೇರಿ ಕಟ್ಟುತ್ತಾರೆ. ಸಂಘಕ್ಕೆ ಅಷ್ಟೊಂದು ದೊಡ್ಡ ಹಣ ಎಲ್ಲಿಂದ ಬರುತ್ತಿದೆ ಎಂದು ತಿಳಿಯಬೇಕು. ನಾವು ಕೇಂದ್ರದಲ್ಲಿ ನಾವು ಮೂರು ಅಂಕಿ ದಾಟಿದ ಮೊದಲ ದಿನವೇ ಐ.ಟಿ, ಇ.ಡಿ ಅವರನ್ನು ಆರ್‌ಎಸ್‌ಎಸ್ ಕಚೇರಿಗೆ ಕಳುಹಿಸುತ್ತೇವೆ.

- ಪ್ರಿಯಾಂಕ್ ಖರ್ಗೆ ಜಿಲ್ಲಾ ಉಸ್ತುವಾರಿ ಸಚಿವ

ಬಿಜೆಪಿ ಶಾಸಕರ ಹೇಳಿಕೆ ಹೆಣ್ಣು ಕುಲಕ್ಕೆ ಅವಮಾನ

ಬೀದರ್: ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ನೀಡಿರುವ ಹೇಳಿಕೆ ಇಡೀ ಹೆಣ್ಣು ಕುಲಕ್ಕೆ ಮಾಡಿರುವ ಅವಮಾನ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ

ಹೆಬ್ಬಾಳ್ಕರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯವರು ರಾಮಾಯಣದ ಬಗ್ಗೆ ಹೇಳುತ್ತಾರೆ. ರಾಮ-ಸೀತೆ ಕುರಿತು ಮಾತನಾಡುತ್ತ ಮಹಿಳೆಯರನ್ನು ಗೌರವಿಸಬೇಕು ಎಂದು ಹೇಳುತ್ತಾರೆ. ಇನ್ನೊಂದು ಕಡೆ ಹಲ್ಕಾ ಮಾತನಾಡುತ್ತಾರೆ. ಇದು ಬಿಜೆಪಿಯವರ ಸಂಸ್ಕೃತಿ ತೋರಿಸುತ್ತದೆ. ಇವರಿಗೆ ಮಾನ ಮರ್ಯಾದೆ ಇಲ್ಲ ಎಂದು ಟೀಕಿಸಿದರು.

ರವಿಕುಮಾರ ಅವರಿಗೆ ಮಹಿಳೆಯರ ಬಗ್ಗೆ ಹಗುರ ಮಾತನಾಡುವ ಕೆಟ್ಟ ಚಾಳಿ ಬಿದ್ದಿದೆ. ಮಹಿಳೆಯರಿಗೆ ಅವಮಾನ ಮಾಡುವುದು, ಅವಾಚ್ಯ ಪದಗಳಿಂದ ನಿಂದಿಸಿ ಮಾನಸಿಕ ಹಿಂಸೆ ಕೊಡುವುದು ಚಾಳಿ ಆಗಿದೆ. ನನಗೂ ಇದೇ ರೀತಿ ಸಿ.ಟಿ. ರವಿ ಸದನದಲ್ಲಿ ನಿಂದಿಸಿದ್ದರು. ಇವರಿಗೆ ನೈತಿಕ ಜವಾಬ್ದಾರಿ ಇಲ್ಲ. ಇಂತಹವರು ವಿಧಾನಸಭೆಯಲ್ಲಿ ಇರಕೂಡದು ಎಂದರು.

ಅಂಗನವಾಡಿ ನೇಮಕಾತಿ ಪೂರ್ಣಗೊಳಿಸಿ

ಅಂಗನವಾಡಿ ನೇಮಕಾತಿಯಲ್ಲಿ ಇನ್ನಷ್ಟು ಸರಳ, ಹೆಚ್ಚಿನ ಪಾರದರ್ಶಕತೆಗೆ ಕೈಗೊಳ್ಳಬೇಕು. ಗರಿಷ್ಟ ಮೂರು ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು. ಯಾವುದೇ ಕಾರಣದಿಂದಲೂ ನೇಮಕಾತಿಗಳು ವಿಳಂಬ ಆಗಬಾರದು. ನೇಮಕಾತಿ ವೇಳೆ ಸಮಸ್ಯೆಗಳು ಕಂಡುಬಂದಲ್ಲಿ, ತಕ್ಷಣವೇ ಪರಿಹರಿಸಬೇಕು ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ರವಿಕುಮಾರ್‌ಗೆ ಆತ್ಮಸಾಕ್ಷಿ ಇದ್ದರೆ ಕ್ಷಮೆ ಕೇಳಲಿ

ಹಾವೇರಿ: ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧ ಎಂಎಲ್ ಸಿ ರವಿಕುಮಾರ್ ನೀಡಿದ ಅವಹೇಳನಕಾರಿ ಹೇಳಿಕೆಗೆ ಸಚಿವ ಎಚ್.ಕೆ.ಪಾಟೀಲ್ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಇದು ಅತ್ಯಂತ ದುರ್ದೈವ.

ಶಾಸನ ಸಭೆ ಸದಸ್ಯರು, ಬಿಜೆಪಿ ನಾಯಕರು ಹಿರಿಯ ಅಧಿಕಾರಿಯೊಬ್ಬರ ಮೇಲೆ ಲಘುವಾಗಿ ಮಾತಾಡಿರುವುದು ನೀಚ ಕೆಲಸ. ಮಹಿಳೆಯರಿಗೆ ಸಣ್ಣ ಅಗೌರವವಾದರೂ ಸಹಿಸದ ಸಮಾಜ ನಮ್ಮದು. ಈ ಲಘುವಾದ, ಅವಮಾನಕರ ಮಾತನ್ನು ನಾವು ತೀವ್ರವಾಗಿ ಖಂಡನೆ ಮಾಡಲೇಬೇಕು. ರವಿಕುಮಾರ್‌ಅವರಿಗೆ ಆತ್ಮಸಾಕ್ಷಿ ಇದ್ದರೆ ಕ್ಷಮೆ ಕೇಳಲಿ. ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು ಎಂದು ಅಪೇಕ್ಷೆ ಪಡುತ್ತೇನೆ. ಇಲ್ಲದಿದ್ದರೆ ಜನರಿಗೆ ಅವಮಾನ ಮಾಡಿದ ಹಾಗೆ ಎಂದರು.

ಸಿಎಂ ಬದಲಾವಣೆ ವಿಚಾರವಾಗಿ ನನ್ನ ಪ್ರಾರ್ಥನೆ ಫಲಿಸಬಹುದು ಎಂಬ ಡಿಕೆಶಿ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾನು ಇಷ್ಟೇ ಹೇಳ್ತೀನಿ ನಮ್ಮ ಮುಖ್ಯಸ್ಥರು ಮಲ್ಲಿಕಾರ್ಜುನ ಖರ್ಗೆಯವರು. ಸಿಎಂ ಬದಲಾವಣೆ ವಿಚಾರ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವಾಗಿ ಯಾರೂ ಮಾತಾಡತಕ್ಕದಲ್ಲ ಎಂದು ಖರ್ಗೆಯವರು ಹೇಳಿದ್ದಾರೆ. ಅವರ ಮಾತು ನಮಗೆ ಆದೇಶ ಇದ್ದಂತೆ ಎಂದರು.

ಆರ್ಥಿಕವಾಗಿ ಅನುಕೂಲತೆಯಿಂದ ನಡೆದಿದ್ದೇವೆ. ಬಿಜೆಪಿಯವರಿಗೆ ಅಸೂಯೆಯಾಗಿದೆ. ಪಂಚ ಗ್ಯಾರಂಟಿ ಯೋಜನೆ ಮೂಲಕ ಬಡ ಬಲ್ಲಿದರ ಬಡತನದ ಬೇರನ್ನು ಕಿತ್ತು ಹಾಕುತ್ತಿದ್ದೇವೆ. ಬಡವರನ್ನು ಜಿರೋ ಪರ್ಸೆಂಟ್ ಮಾಡಲು ಸಾಧ್ಯವಾಗಿದೆ. ರಾಜ್ಯದಲ್ಲಿ ಸುಮಾರು 98.5 % ಜನರಿಗೆ ಯೋಜನೆಗಳ ಪ್ರತಿಫಲ ಮುಟ್ಟಿದೆ.

-ಎಚ್.ಕೆ.ಪಾಟೀಲ್ ಸಚಿವ

ಎಲ್ಲ ಕ್ಷೇತ್ರಗಳಲ್ಲಿ ಭಾರತ ಕ್ರಾಂತಿಕಾರಿ ಹೆಜ್ಜೆ

ವಿಟಿಯು 25ನೇ ವಾರ್ಷಿಕ ಘಟಿಕೋತ್ಸವ | 60,052 ವಿದ್ಯಾರ್ಥಿಗಳಿಗೆ ಸ್ನಾತಕ ಪದವಿ ಪ್ರದಾನ

ಬೆಳಗಾವಿ: ಎಲ್ಲ ಕ್ಷೇತ್ರಗಳಲ್ಲಿ ಭಾರತ ಮಹತ್ವದ ಸಾಧನೆ ಮಾಡುತ್ತಿದ್ದು, ಜಗತ್ತು ಭಾರತದತ್ತ ತಿರುಗಿ ನೋಡುವಂತಾಗಿದೆ. ಆಧುನಿಕ ತಂತ್ರಜ್ಞಾನ ಬಳಕೆ ಮಾಡಿಕೊಂಡು ಹೊಸ ಆವಿಷ್ಕಾರ ಮಾಡಲು ಯುವ ಸಮೂಹ ಮುಂದಾದರೆ ಮಾತ್ರ ದೇಶದ ಅಭಿವೃದ್ಧಿಗೆ ವೇಗ ಸಿಗಲಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಹೇಳಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಜ್ಞಾನ ಸಂಗಮದಲ್ಲಿ ಶುಕ್ರವಾರ ಜರುಗಿದ ವಿಟಿಯು 25ನೇ ವಾರ್ಷಿಕ ಘಟಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ದೇಶ ಅಭಿವೃದ್ಧಿ ಸಾಧಿಸಬೇಕಾದರೆ ಯುವಜನರ ಪಾತ್ರ ಪ್ರಮುಖವಾಗಿದೆ. ಶಿಕ್ಷಣದ ಪಯಣ ಎಂದಿಗೂ ಮುಗಿಯುವುದಿಲ್ಲ. ಕೊನೆಯವ ರೆಗೂ ಮಾನವ ಹೊಸದನ್ನು ಕಲಿಯುತ್ತಾನೆ. ಆಧುನಿಕ ತಂತ್ರಜ್ಞಾನಗಳನ್ನು ಕಲಿತು ಹೊಸದನ್ನು ರೂಪಿಸುವ ಮನೋಭಾವ ಸದಾ ಸಕ್ರಿಯವಾಗಿರಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಇದೆ ವೇಳೆ ಮಾತನಾಡಿದ ಭಾರತ ಸರಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಪ್ರೊ. ಅಜಯ್ ಕುಮಾರ್ ಸೂದ್, ಯುದ್ಧ ಭೂಮಿಯಲ್ಲಿ ಶತ್ರು ರಾಷ್ಟ್ರವನ್ನು ಸಮರ್ಥವಾಗಿ ಎದುರಿಸಲು ಭಾರತದ ಸ್ವದೇಶಿ ನಿರ್ಮಿತ ಯುದ್ಧೋಪಕರಣಗಳು ಸಾಕಷ್ಟು ಪರಿಣಾಮಕಾರಿಯಾಗಿವೆ. ತಂತ್ರಜ್ಞಾನ ಪಡೆದ ಯಶಸ್ಸಿನಿಂದಲೇ ಆಪರೇಷನ್ ಸಿಂಧೂರ್ ಕಾರ್ಯಾಚರಣೆಯಲ್ಲಿ ನಮ್ಮ ರಕ್ಷಣಾ ಸಾಮರ್ಥ್ಯ ಪ್ರದರ್ಶಿಸಲು ಸಹಕಾರಿಯಾಗಿದೆ. ಚಂದ್ರಯಾನ, ಮಂಗಳಯಾನ ಹಾಗೂ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಭಾರತದ ತಾಂತ್ರಿಕ ಸ್ವಾವಲಂಬನೆ ಮತ್ತು ರಕ್ಷಣಾ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಆಕಾಶ್ ಕ್ಷಿಪಣಿಗಳು, ಸ್ಥಳೀಯ ಡ್ರೋನ್‌ಗಳು ಹಾಗೂ ಡಿ4 ಕೌಂಟರ್ -ಡ್ರೋನ್ ಪ್ಲಾಟ್‌ಫಾರ್ಮ್‌ನಂತಹ ಸ್ವದೇಶಿ ವ್ಯವಸ್ಥೆಗಳು ಯುದ್ಧಭೂಮಿಯಲ್ಲಿ ನಿಖರತೆಯನ್ನು ನೀಡುತ್ತಿರುವುದು ಗಮನಾರ್ಹ ಅಂಶ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಟಿಯು ಕುಪತಿ ಪ್ರೊ. ವಿದ್ಯಾಶಂಕರ ಎಸ್. ಮೌಲ್ಯಮಾಪನ ಕುಲಸಚಿವ ಪ್ರೊ. ಟಿ.ಎನ್. ಶ್ರೀನಿವಾಸ, ಕುಲಸಚಿವ ಪ್ರೊ. ಬಿ.ಈ. ರಂಗಸ್ವಾಮಿ ಉಪಸ್ಥಿತರಿದ್ದರು.

ಬೆಳಗಾವಿಯ ವಿಟಿಯುನಲ್ಲಿ ನಡೆದ 25ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ ಗೆಹ್ಲೋಥ್ ಪಾಲ್ಗೊಂಡಿದ್ದರು.

ಇಸ್ರೊ ನಾರಾಯಣನ್‌ಗೆ ಗೌಡಾ

ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಇಸ್ರೊ ಮತ್ತು ಬಾಹ್ಯಾಕಾಶ ಇಲಾಖೆ ಕಾರ್ಯದರ್ಶಿ ಡಾ.ವಿ.ನಾರಾಯಣನ್, ಎಕ್ಸೆಲ್ ಇಂಡಿಯಾ ಸಂಸ್ಥಾಪಕ, ಪದ್ಮಶ್ರೀ ಪುರಸ್ಕೃತ ಪ್ರಶಾಂತ ಪ್ರಕಾಶ ಮತ್ತು ಬೆಂಗಳೂರು ಎಟ್ರಿಯ ವಿಶ್ವವಿದ್ಯಾಲಯ ಕುಲಾಧಿಪತಿ ಸಿ.ಎಸ್.ಸುಂದರ ರಾಜು ಅವರಿಗೆ ಡಾಕ್ಟರ್ ಆಫ್‌ಸೈನ್ಸ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಹೊಸ ಆವಿಷ್ಕಾರಕ್ಕೆ ಡಿಜಿಟಲ್ ಇಂಡಿಯಾ, ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ ಸಹಕಾರಿಯಾಗಲಿವೆ. ಭವಿಷ್ಯದ ಭಾರತ ನಿರ್ಮಾಣಕ್ಕೆ ಹಗಲಿರುಳು ಶ್ರಮಿಸಬೇಕು.

-ಥಾವರ್ ಚಂದ್ ಗೆಹ್ಲೋಥ್ ರಾಜ್ಯಪಾಲ

60,052 ಮಂದಿಗೆ ಪದವಿ ಪ್ರದಾನ

- ಬಿಇ - 58861
- ಬಿಟೆಕ್ - 117
- ಬಿ.ಪ್ಲಾನ್ - 10
- ಬಿ.ಆರ್ಚ್ - 1040
- ಬಿಎಸ್‌ಸಿ - 24
- ಪಿಎಚ್‌ಡಿ - 262
- ಇಂಟಿಗ್ರೇಟೆಡ್ ಡುಯಲ್ ಡಿಗ್ರಿ - 2

ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗಲ್ಲ

ಚಾಮುಂಡೇಶ್ವರಿ ದರ್ಶನ ಪಡೆದ ಡಿಸಿಎಂ ಡಿ.ಕೆ.ಶಿ.

ಆಷಾಢ ಶುಕ್ರವಾರ ಅಂಗವಾಗಿ ಕುಟುಂಬ ಸಮೇತವಾಗಿ ಚಾಮುಂಡಿಬೆಟ್ಟದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಶೇಷ ಪೂಜೆ ಸಲ್ಲಿಸಿದರು.

ಮೈಸೂರು: ನನಗೆ ಏನೇನು ಬೇಕೋ ಅದನ್ನು ತಾಯಿ ಚಾಮುಂಡೇಶ್ವರಿ ಬಳಿ ಪ್ರಾರ್ಥಿಸಿದ್ದೇನೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬುದು ನನ್ನ ನಂಬಿಕೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸೂಚ್ಯವಾಗಿ ಹೇಳಿದರು.

ಆಷಾಢ ಮಾಸದ ಎರಡನೇ ಶುಕ್ರವಾರದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಸಿಎಂ ರೇಸ್‌ನಿಂದ ತಾವು ಹೊರಬಂದಿರಾ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯಾವ ಚರ್ಚೆಯೂ ಈಗ ಬೇಡ. ನಾನು ರಾಜಕೀಯ ಮಾತನಾಡಲು ಇಲ್ಲಿಗೆ ಬಂದಿಲ್ಲ ಎಂದರು.

ರಾಜ್ಯಕ್ಕೆ ಒಳ್ಳೆಯದಾಗಲಿ. ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು. ಅವರು ನಮ್ಮೆಲ್ಲರಿಗೂ ಬುದ್ಧಿವಾದ ಹೇಳಿದ್ದಾರೆ ಮತ್ತು ಸಂದೇಶ ನೀಡಿದ್ದಾರೆ. ಅವರ ಮಾತಿನಂತೆ ನಡೆದುಕೊಂಡು ಎಲ್ಲರೂ ಒಟ್ಟಿಗೆ ಸೇರಿ ಕೆಲಸ ಮಾಡೋಣ ಎಂದರು.

ತಾಯಿ ಚಾಮುಂಡಿ ಈ ಬಾರಿ ರಾಜ್ಯಕ್ಕೆ ಸಮೃದ್ಧಿಯಾಗಿ ಮಳೆ, ಬೆಳೆ, ನೆಮ್ಮದಿ ಶಾಂತಿಯನ್ನು ತಾಯಿ ನೀಡುತ್ತಿದ್ದಾಳೆ. ನಾನು ನನ್ನ ಕುಟುಂಬ ಸಮೇತ ಬಂದು ತಾಯಿಯ ದರ್ಶನ ಮಾಡಿ ಪ್ರಾರ್ಥಿಸಿದ್ದೇನೆ ಎಂದರು.

www.pravasiprapancha.com
ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್

ವಿಶ್ವವಾಣಿ

ಸಂಪಾದಕೀಯ

ರಕ್ಷಕನೇ ಭಕ್ಷನಾದರೆ ಗತಿಯೇನು?

ಮಹಾರಾಷ್ಟ್ರದ ಪುಣೆ ಮತ್ತು ಉತ್ತರ ಪ್ರದೇಶದ ಫರೂಕಾಬಾದ್‌ನಿಂದ ಎರಡು ಅತ್ಯಾಚಾರದ ಘಟನೆಗಳು ವರದಿಯಾಗಿವೆ. ಈ ಪೈಕಿ ಪುಣೆಯಲ್ಲಿ, ಕೊರಿಯರ್ ನೀಡುವ ನೆಪದಲ್ಲಿ ಯುವತಿಯೊಬ್ಬಳ ಅಪಾರ್ಟ್‌ಮೆಂಟ್ ಒಳಗೆ ಪ್ರವೇಶಿಸಿದ ದುಷ್ಕರ್ಮಿಯು ಆಕೆಯ ಮೇಲೆ ಅದೇನೋ ರಾಸಾಯನಿಕವನ್ನು ಸಿಂಪಡಿಸಿ ಪ್ರಜ್ಞೆ ತಪ್ಪಿಸಿ ಅತ್ಯಾಚಾರ ಎಸಗಿದ್ದಾನೆ ಮತ್ತು ತರುವಾಯದಲ್ಲಿ ಸಂತ್ರಸ್ತೆಯ ಮೊಬೈಲ್ ಫೋನನ್ನೇ ಬಳಸಿ ಸೆಲ್ಫಿ ತೆಗೆದು, 'ಮತ್ತೆ ಬರುವೆ' ಎಂಬ ಬೆದರಿಕೆಯನ್ನೂ ಹಾಕಿದ್ದಾನೆ. ಮತ್ತೊಂದೆಡೆ, ಫರೂಕಾಬಾದ್‌ನಲ್ಲಿ ನಡೆದಿರುವ ಅತ್ಯಾಚಾರ ಪ್ರಕರಣವು ಇದಕ್ಕಿಂತ ಘೋರವಾದುದು, ಕಾರಣ ಇದನ್ನು ಎಸಗಿದಾತ 'ಜನರಕ್ಷಕ' ಎಂದೇ ಕರೆಸಿಕೊಳ್ಳುವ ಒಬ್ಬ ಪೊಲೀಸ್ ಪೇದೆ. ಶಾಲೆಗೆ ತೆರಳುತ್ತಿದ್ದ 15ರ ಬಾಲಕಿಯನ್ನು ಈತ ರಸ್ತೆಯಲ್ಲೇ ಅಡ್ಡಗಟ್ಟಿ ಕಾರಿನಲ್ಲಿ ಅಪಹರಿಸಿ ತನ್ನ ತೃಷೆಯನ್ನು ತೀರಿಸಿಕೊಂಡಿದ್ದಾನೆ ಎಂಬುದು ಲಭ್ಯ ಮಾಹಿತಿ. ಈ ಎರಡೂ ಘಟನೆಗಳು ನಮ್ಮ ಸಮಾಜ ಎತ್ತ ಸಾಗುತ್ತಿದೆ ಎಂಬುದರ ಘೋರ ಚಿತ್ರಣವನ್ನು ನೀಡುತ್ತವೆ ಎನ್ನಲಡ್ಡಿಯಿಲ್ಲ. 'ಮಹಿಳೆಯೊಬ್ಬಳು ಮಧ್ಯರಾತ್ರಿಯಲ್ಲಿ ಒಂಟಿಯಾಗಿ ಬೀದಿಯಲ್ಲಿ ನಿರ್ಭೀತಿಯಿಂದ ಓಡಾಡುವಂತಾದರೆ ಆಗ ಭಾರತಕ್ಕೆ ನಿಜಾರ್ಥದಲ್ಲಿ ಸ್ವಾತಂತ್ರ್ಯ ಸಿಕ್ಕಿದೆ ಎಂದರ್ಥ' ಎಂದಿದ್ದರು ಮಹಾತ್ಮ ಗಾಂಧೀಜಿ. ಆದರೆ ಮೇಲಿನ ಎರಡೂ ಪ್ರಕರಣಗಳನ್ನು ಗಮನಿಸಿದರೆ, ಮಧ್ಯರಾತ್ರಿಯಲ್ಲ, ರಾತ್ರಿಯಲ್ಲ, ಸಂಜೆಯಲ್ಲ, ಹಾಡುಹಗಲಲ್ಲೇ ಮಹಿಳೆಯೊಬ್ಬಳು ಸ್ವತಂತ್ರವಾಗಿ ಓಡಾಡುವುದು ದುಸ್ತರವಾಗಿದೆ ಎನಿಸುತ್ತದೆ. ಇಂಥ ಕುಕೃತ್ಯವನ್ನು ಎಸಗುವ ದುರುಳರಿಗೆ ಕಟ್ಟುನಿಟ್ಟಿನ ಕಾನೂನಿನ ಮತ್ತು ಶಿಕ್ಷೆಯ ಭಯವಿಲ್ಲದಿರುವುದೇ, ಅತ್ಯಾಚಾರದಂಥ ಪ್ರಕರಣಗಳು ದೇಶದ ವಿವಿಧೆಡೆ ಇನ್ನೂ ನಡೆಯುತ್ತಿರುವುದಕ್ಕೆ ಕಾರಣವಾಗಿದೆ ಎನಿಸುತ್ತದೆ. ದೆಹಲಿಯಲ್ಲಿ 'ನಿರ್ಭಯಾ' ಪ್ರಕರಣ ವರದಿಯಾದ ನಂತರ ದೇಶದ ಒಂದಿಡೀ ನಾಗರಿಕ ಸಮಾಜ ತಲೆತಗ್ಗಿಸಿತ್ತು. ಆದರೀಗ ಪುಣೆ ಮತ್ತು ಫರೂಕಾಬಾದ್‌ನಲ್ಲಿ ನಡೆದಿರುವ ಈ ಕೃತ್ಯಗಳು ನಾಗರಿಕ ಸಮಾಜವು ಮತ್ತೆ ತಲೆಯೆತ್ತದಂತೆ ಮಾಡಿವೆ.

ಸೊಂಪಾದಕೀಯ

ಕ್ಯಾಬ್ ಬಾತ್ ಹೈ!

ಅದೇನೋ ಅಂತಾರಲ್ಲ, 'ತೂಕಡಿಸುವವನಿಗೆ ಚಾಪೆ ಹಾಸಿ ಕೊಟ್ರಂತೆ' ಅಂತ, ಹಾಗೆ ನಮ್ಮ ಸರಕಾರಗಳು ಸಾರಿಗೆ ಅಗ್ರಿಗೇಟರ್ ಕಂಪನಿಗಳಿಗೆ ಚಾಪೆಯಷ್ಟೇ ಅಲ್ಲ ಹಾಸಿಗೆಯನ್ನೇ ಹಾಸಿಕೊಟ್ಟಿವೆ. ಬೆಂಗಳೂರಿನಂಥ ಮಹಾನಗರಗಳಲ್ಲಿ ಕಳೆದ ದಶಕದಲ್ಲಿ ಬೆಳಕಿಗೆ ಬಂದ ಈ ಓಲಾ, ಉಬರ್ ಅನ್ನೋ ಕ್ಯಾಬ್ ಸರ್ವೀಸ್‌ಗಳು ಇವತ್ತು ದುಡ್ಡಿಗೆ ಬೆಲೆ ಇಲ್ಲದಂತೆ ಮಾಡಿವೆ. ಮೊದಲೆಲ್ಲ, ಆಟೋದಲ್ಲಿ 100 ರುಪಾಯಿ ಕೊಟ್ರೆ ಅದೇ ದೊಡ್ಡದು ಎನ್ನುವಂತಿದ್ದ ಜನ ಈಗ ಇಂಥ ಕ್ಯಾಬ್‌ಗಳಲ್ಲಿ 500-1000 ಕೊಟ್ಟು ಓಡಾಡುವುದಕ್ಕೆ ಅಡಿಕ್ಟ್ ಆಗಿಬಿಟ್ಟಿದ್ದಾರೆ. ಹಾಗಾಗಿ ಈ ಕಂಪನಿಗಳು ಅದೆಷ್ಟೇ ರೇಟ್ ಜಾಸ್ತಿ ಮಾಡಿದರೂ ಬೈದುಕೊಂಡಾದರೂ ಅದರಲ್ಲೇ ಓಡಾಡುತ್ತಾರೆ. ಮೊದ ಮೊದಲು ಆಟೋಗಳಿಗಿಂತ ಕೊಂಚ ದುಬಾರಿ ಆದ್ರೂ ಸುಖಕರ ಪ್ರಯಾಣ ಅಂತ ಕ್ಯಾಬ್‌ನ ಮೊರೆಹೋದ ಪ್ರಯಾಣಿಕರು ಈಗ ಅವುಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಆದರೆ ಅದ್ಯಾವುದರ ಪರಿವೆಯೇ ಇಲ್ಲದಂತೆ ಸರಕಾರಗಳು ಈಗ ಪ್ರಯಾಣಿಕರಿಗೆ ಬರೆ ಮೇಲೆ ಬರೆ ಎಳೆಯುತ್ತಿವೆ. ಮೊದಲು ಮೆಟ್ರೋ ದರ ಜಾಸ್ತಿ ಮಾಡಿ ಪ್ರಯಾಣಿಕರ ಜೇಬಿಗೆ ಕತ್ತರಿ ಹಾಕಿದ್ದಾಯ್ತು. ನಂತರ ಬೈಕ್ ಟ್ಯಾಕ್ಸಿ ನಿಷೇಧ ಆಯ್ತು. ಇದರಿಂದ ಪೊಗರು ಮಾಡುತ್ತಿದ್ದ ಆಟೋದವರಿಗೆ ಇನ್ನಷ್ಟು ಕುಮ್ಮಕ್ಕು ಸಿಕ್ಕಂತಾಯಿತು. ಇದಾದ ನಂತರ ಈಗ ಕ್ಯಾಬ್ ಕಂಪನಿಗಳಿಗೆ ಪೀಕ್ ಅವರ್‌ನಲ್ಲಿ ಎರಡರಷ್ಟು ದುಡ್ಡು ಚಾರ್ಜ್ ಮಾಡಲು ಅನುಮತಿ ನೀಡಿ ಪ್ರಯಾಣಿಕರ ಕಷ್ಟವನ್ನು ಇನ್ನಷ್ಟು ಜಾಸ್ತಿ ಮಾಡಲಾಗಿದೆ. ಮೊದಲೇ ಪೀಕ್ ಅವರ್ ಅಷ್ಟೇ ಅಲ್ಲದೆ ಇತರ ಸಮಯದಲ್ಲೂ ಇಲ್ಲಸಲ್ಲದ ಚಾರ್ಜ್‌ಗಳನ್ನು ಹಾಕಿ ಪ್ರಯಾಣಿಕರ ಜೀವ ಹಿಂಡುತ್ತಿದ್ದ ಈ ಕಂಪನಿಗಳಿಗೆ ಈಗ ಅಧಿಕೃತವಾಗಿ ಲೂಟಿ ಮಾಡುವ ಲೈಸೆನ್ಸ್ ಸಿಕ್ಕಿದೆ. ಹಾಗಾಗಿ ಜನಸಾಮಾನ್ಯರು ಮನೆ ಬಿಟ್ಟು ಓಡಾಡದೇ ಮನೆಯಲ್ಲೇ ಇರಲು ಸರಕಾರ ನಿರ್ದೇಶನ ನೀಡುತ್ತಿದೆಯೇ ಅಂತ ಅನುಮಾನ. ಅಲ್ಲದೆ ಖಾಸಗಿ ಕಂಪನಿಗಳ 'ವರ್ಕ್ ಫ್ರಮ್ ಹೋಮ್'ಗೆ ಸಪೋರ್ಟ್ ಮಾಡಲು ಅಥವಾ ಬೆಂಗಳೂರಿನ ಟ್ರಾಫಿಕ್ ಕಡಿಮೆ ಮಾಡಲು ಈ ರೀತಿ ಕ್ರಮ ತಗೊಂಡಿದ್ದಾರೋ ಒಂದೂ ಅರ್ಥ ಆಗ್ತಿಲ್ಲ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಡಿಜೆಐ ನಿಯೋ ಡ್ರೋನ್

ಡಿಜೆಐ ಬಿಡುಗಡೆ ಮಾಡಿರುವ ನಿಯೋ (Neo) ಎಂಬ 135 ಗ್ರಾಂ ತೂಕದ ಡ್ರೋನ್ ನನ್ನ ಬಳಿಯಿದೆ. ಇದು ಇಲ್ಲಿ ತನಕ ಡಿಜೆಐ ಬಿಡುಗಡೆ ಮಾಡಿರುವ ಡ್ರೋನ್‌ಗಳ ಪೈಕಿ ಅತ್ಯಂತ lightest and most compact aerial videographer ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ಈ ಡ್ರೋನ್‌ನ ಟೇಕಾಫ್ ಮತ್ತು ಲ್ಯಾಂಡಿಂಗ್ ಅನ್ನು ಸುರಕ್ಷಿತವಾಗಿ ನಿಮ್ಮ ಹಸ್ತದಿಂದಲೇ ಮಾಡಬಹುದು. ಇದು ಸದಾ ನಮ್ಮನ್ನೇ ಫೋಕಸ್ ಮಾಡುತ್ತದೆ. ಈ ಡ್ರೋನನ್ನು ಅಂಗೈಯಲ್ಲಿಟ್ಟುಕೊಂಡು, ಕೆಮರಾವನ್ನು ನಮ್ಮ ಕಡೆಗೆ ಮುಖಮಾಡಿ ಹಿಡಿದರೆ, ಅದು ನಮ್ಮನ್ನೇ ಕೇಂದ್ರೀಕರಿಸಿ, ಸಿನಿಮ್ಯಾಟಿಕ್ ದೃಶ್ಯಗಳನ್ನು ಶೂಟ್ ಮಾಡುತ್ತದೆ. ಇಲ್ಲಿ ತನಕ ಡಿಜೆಐ ಅಭಿವೃದ್ಧಿಪಡಿಸಿದ ಡ್ರೋನ್‌ನ ಅತಿ ಕಡಿಮೆ ತೂಕ 249 ಗ್ರಾಂ ಇತ್ತು. ನಿಯೋ ಅದಕ್ಕಿಂತ 114 ಗ್ರಾಂ ಕಡಿಮೆ ಭಾರ ಅಥವಾ ಹಗುರ! ಡಿಜೆಐ ನಿಯೋ ಡ್ರೋನನ್ನು ಇನ್ಸ್ಟಾ ಅಥವಾ ಸೋಷಿಯಲ್ ಮೀಡಿಯಾ ಕಂಟೆಂಟ್ ಕ್ರಿಯೇಟರುಗಳಿಗಾಗಿಯೇ ಅಭಿವೃದ್ಧಿಪಡಿಸಲಾಗಿದೆ. ಇದನ್ನು ಮನೆಯೊಳಗೂ ಸುಲಭವಾಗಿ ಹಾರಿಸಬಹುದು. ಗೋಡೆ, ಮರ, ಕಂಬ ಅಥವಾ ಇನ್ನಿತರ ಅಡೆ-ತಡೆಗೆ ಡಿಕ್ಕಿ ಹೊಡೆಯಬಹುದು ಎಂಬ ಚಿಂತೆಯಿಲ್ಲ. ಕಾರಣ ಇದರ ರೆಕ್ಕೆಗಳಿಗೆ ಕವಚಗಳಿವೆ. ಡಿಕ್ಕಿ ಹೊಡೆದರೂ ಏನೂ ಆಗುವುದಿಲ್ಲ. ಒಂದು ವೇಳೆ ಮನುಷ್ಯರಿಗೆ ಡಿಕ್ಕಿ ಹೊಡೆದರೂ ಗಾಯವಾಗುವುದಿಲ್ಲ. ಅಸಲಿಗೆ ಈ ಡ್ರೋನ್ ಹಾರಿಸಲು ರಿಮೋಟ್ ಕಂಟ್ರೋಲರ್ (RC) ಬೇಕಾಗಿಲ್ಲ. ನಮ್ಮ ಮೊಬೈಲನ್ನೇ RC ಆಗಿ ಪರಿವರ್ತಿಸಿಕೊಳ್ಳಬಹುದು. RC ಸಹಾಯದಿಂದಲೂ ಹಾರಿಸಬಹುದು. ಇದಕ್ಕಿಂತ ಸರಳವಾಗಿ ಒಂದು ಡ್ರೋನನ್ನು ರೂಪಿಸಲು ಸಾಧ್ಯವೇ ಇಲ್ಲ. 16 ವರ್ಷಕ್ಕಿಂತ ಮೇಲ್ಪಟ್ಟವರು ಇದನ್ನು ಬಳಸಬಹುದು ಎಂದು ಡಿಜೆಐ ಸಂಸ್ಥೆ ಹೇಳಿದ್ದರೂ, ಅಸಲಿಗೆ ಇದು ಅದಕ್ಕಿಂತ ಕಡಿಮೆ ವಯಸ್ಸಿನವರಿಗೇ ಹೆಚ್ಚು ಖುಷಿ ಕೊಡಬಹುದು. ಡಿಜೆಐ ನಿಯೋ ಡ್ರೋನ್ RC ಸಹಾಯದಿಂದ, ಸೆಕೆಂಡಿಗೆ 8 ಮೀಟರ್ ವೇಗದಲ್ಲಿ ಸುಮಾರು 7 ಕಿ.ಮೀ. ದೂರದವರೆಗೆ ಹಾರಬಲ್ಲುದು. ಇದು ಅತ್ಯಂತ ಹಗುರಾದ ಡ್ರೋನ್ ಆಗಿರುವುದರಿಂದ ಬಲವಾದ ಗಾಳಿ ಬೀಸಿದರೆ, ಕ್ರ್ಯಾಶ್ ಆಗುವ ಸಂಭವವಿರುತ್ತದೆ. ನಮ್ಮ ಸುತ್ತಮುತ್ತ 10 ಮೀ. ಒಳಗೆ, 10 ಮೀ. ಎತ್ತರದವರೆಗೆ ಈ ಡ್ರೋನ್ ಬಳಸುವುದು ವಾಸಿ. ಅಷ್ಟಕ್ಕೂ ಇದರ ರೇಂಜ್ 50 ಮೀಟರ್. ಸೈಕ್ಲಿಂಗ್, ಸ್ಕೇಟ್ ಬೋರ್ಡಿಂಗ್, ರನ್ನಿಂಗ್, ಹೈಕಿಂಗ್ ಮಾಡುವಾಗ ಈ ಡ್ರೋನ್ ಬಳಸಬಹುದು. ಅದು ನಿಮ್ಮ ವೇಗದಲ್ಲಿಯೇ ನಿಮ್ಮನ್ನು ಹಿಂಬಾಲಿಸುತ್ತಾ ಅದ್ಭುತ ಎನಿಸುವ ದೃಶ್ಯಗಳನ್ನು ಸೆರೆಹಿಡಿಯಬಲ್ಲದು. ದೃಶ್ಯಗಳನ್ನು ಈ ಡ್ರೋನ್, ಹಾರಿಜಾಂಟಲ್ ಮತ್ತು ವರ್ಟಿಕಲ್ ರೂಪದಲ್ಲಿ ಚಿತ್ರೀಕರಿಸಬಲ್ಲುದು. ಡಿಜೆಐ ನಿಯೋಗೆ ಕೆಲವು ಮಿತಿಗಳೂ ಇವೆ. ಇದರ ದೊಡ್ಡಣ್ಣಂದಿರಿಗೆ ಫಾರ್ವರ್ಡ್, ಬ್ಯಾಕ್‌ವರ್ಡ್ ಮತ್ತು ಸೈಡ್ ಸೆನ್ಸರ್‌ಗಳಿವೆ. ಆದರೆ ಆ ಭಾಗ್ಯ ಇದಕ್ಕಿಲ್ಲ. ಹೀಗಾಗಿ ಇದನ್ನು ಜಾಗರೂಕವಾಗಿ ಹಾರಿಸಬೇಕು. ಅಂದ ಹಾಗೆ ಈ ಡ್ರೋನ್‌ನ ಗರಿಷ್ಠ ಹಾರಾಟದ ಸಮಯ 18 ನಿಮಿಷ. ನಂತರ ಬ್ಯಾಟರಿ ಬದಲಿಸಿಕೊಳ್ಳಬೇಕು. ಸಾಮಾನ್ಯವಾಗಿ ಎಲ್ಲರೂ ಅವಶ್ಯ ಕೇಳುವ ಪ್ರಶ್ನೆ- ಈ ಡ್ರೋನ್ ಬೆಲೆ ಎಷ್ಟು, ಎಲ್ಲಿ ಸಿಗುತ್ತದೆ? ರಿಮೋಟ್ ಕಂಟ್ರೋಲ್ ಮತ್ತು ಹೆಚ್ಚುವರಿ ಬ್ಯಾಟರಿ ಇರುವ (ಇದಕ್ಕೆ Fly By Combo ಅಂತಾರೆ) ಡ್ರೋನ್‌ಗೆ (ಅಮೆರಿಕದಲ್ಲಿ) 30 ಸಾವಿರ ರುಪಾಯಿ. ಆದರೆ ಬೆಂಗಳೂರಿನಲ್ಲಿ 45 ಸಾವಿರ ರುಪಾಯಿ. ರಿಮೋಟ್ ಕಂಟ್ರೋಲ್ ಮತ್ತು ಹೆಚ್ಚುವರಿ ಬ್ಯಾಟರಿ ಇರದ ಡ್ರೋನ್‌ಗೆ 15 ಸಾವಿರ ರುಪಾಯಿ, ಬೆಂಗಳೂರಿನಲ್ಲಿ 28-30 ಸಾವಿರ ರುಪಾಯಿ. ಇದು ಪಿಕ್‌ನಿಕ್‌ಗೆ ಹೇಳಿ ಮಾಡಿಸಿದ ಡ್ರೋನ್. ಇದನ್ನು ಬಳಸಲು ಯಾರ ಅನುಮತಿ ಬೇಕಿಲ್ಲ. ಮನೆಯೊಳಗಿನ ಸಣ್ಣ-ಪುಟ್ಟ ಸಮಾರಂಭಗಳ ದೃಶ್ಯ ಸೆರೆಹಿಡಿಯಲು ಸಹ ಉಪಯುಕ್ತ.

ಯುದ್ಧಭೂಮಿಯಲ್ಲಿ ಮೋದಿಯವರ ತಾಕತ್!

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಪ್ರಧಾನಿ ನರೇಂದ್ರ ಮೋದಿಯವರು ಆಫ್ರಿಕಾದ ಪುಟ್ಟ ದೇಶ ಘಾನಾಕ್ಕೆ ಭೇಟಿ ನೀಡಿದಾಗ ಅಲ್ಲಿನ ಸಂಸತ್ತಿನ ಕೆಲ ಸದಸ್ಯರು ಭಾರತೀಯ ಸಂಸ್ಕೃತಿಯನ್ನು ಪ್ರದರ್ಶಿಸುವ ಉಡುಪುಗಳನ್ನು ಧರಿಸಿ ಸ್ವಾಗತ ಕೋರಿದರು. 30 ವರ್ಷಗಳ ಬಳಿಕ ಘಾನಾ ದೇಶಕ್ಕೆ ಭೇಟಿ ನೀಡಿದ ಭಾರತದ ಮೊದಲ ಪ್ರಧಾನಿ ಎಂಬ ಹೆಗ್ಗಳಿಕೆಗೆ ಮೋದಿ ಪಾತ್ರರಾದರು.

ಪಾಕಿಸ್ತಾನ ಬೆಂಬಲಿತ ಉಗ್ರರು ಪಹಲ್ಗಾಮ್‌ನಲ್ಲಿ ನಡೆಸಿದ ಭಯೋತ್ಪಾದಕ ದಾಳಿಯನ್ನು ಘಾನಾ ತೀವ್ರವಾಗಿ ಖಂಡಿಸಿತ್ತು. ನಂತರ ಭಾರತವು ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ನಡೆಸಿದ ಮಿಸೈಲ್ ದಾಳಿಯನ್ನು ಘಾನಾ ಸಮರ್ಥಿಸಿಕೊಂಡಿತ್ತು. ಆಫ್ರಿಕಾದ ಪುಟ್ಟ ದೇಶಕ್ಕೆ ಇರುವ ಬದ್ಧತೆಯು ಭಾರತದೊಳಗೆ ಹುಟ್ಟಿ ಸ್ವಂತದೇಶಕ್ಕೆ ಕೇಡು ಬಯಸುವ ಕೆಲವು ನಗರ ನಕ್ಸಲರಿಗೆ ಇರಲಿಲ್ಲ. ಕಾಂಗ್ರೆಸ್ಸಿನ ನಾಯಕನೊಬ್ಬ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ಅಣಕಿಸಿ ಸೈನ್ಯದ ಮನೋಬಲ ಕುಗ್ಗಿಸುವ ಕೆಲಸ ಮಾಡಿದ್ದ. ಘಾನಾ ಸಣ್ಣ ದೇಶವಾದರೂ, ಸುಮಾರು 15000 ಭಾರತೀಯರು ಅಲ್ಲಿ ವಾಸಿಸುತ್ತಿದ್ದಾರೆ. ಬಟ್ಟೆ ತಯಾರಿಕಾ ಕಾರ್ಖಾನೆಗಳು ಮತ್ತು ಗಣಿಗಾರಿಕೆಯಲ್ಲಿ ಭಾರತೀಯರು ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪಾಕಿಸ್ತಾನದ ಭಯೋತ್ಪಾದಕ ನೆಲೆಗಳ ಮೇಲೆ ಭಾರತ ನಡೆಸಿದ ದಾಳಿಯ ನಂತರ, ಮೋದಿಯವರ ವಿದೇಶಿ ಪ್ರವಾಸದ ಬಗ್ಗೆ ಕೊಂಕು ಮಾತನಾಡಿದ ಕಾಂಗ್ರೆಸ್‌ನ ನಾಯಕರೊಬ್ಬರು ಕಾಂಗ್ರೆಸ್ಸಿನ ಮತ್ತದೇ ಹಳೆ ಚಾಳಿಯನ್ನು ಮುಂದುವರಿಸಿದರು. ಭಾರತದ ರಾಜತಾಂತ್ರಿಕತೆಯ ಬಗ್ಗೆ ನಾಲಿಗೆ ಹರಿಬಿಟ್ಟ ಇವರು ಪಾಕಿಸ್ತಾನದ ಮೇಲಿನ ದಾಳಿಯ ಸಂದರ್ಭದಲ್ಲಿ ಭಾರತದ ಜತೆಗೆ ಇತರೆ ದೇಶಗಳು ನಿಲ್ಲಲಿಲ್ಲವೆಂಬ ಹಸಿಸುಳ್ಳನ್ನು ಹೇಳಿದರು.

ಪಾಕಿಸ್ತಾನದ ಮೇಲೆ ದಾಳಿ ನಡೆಸಿದ 'ರಫೇಲ್' ಯುದ್ಧ ವಿಮಾನ ಫ್ರಾನ್ಸ್ ದೇಶದ್ದು. ಭಯೋತ್ಪಾದಕ ನೆಲೆಗಳನ್ನು ಉಡೀಸ್ ಮಾಡಿದ ಬ್ರಹ್ಮೋಸ್ ಕ್ಷಿಪಣಿ ಭಾರತ ಮತ್ತು ರಷ್ಯಾ ಜಂಟಿಯಾಗಿ ತಯಾರಿಸಿದ್ದು. ಇಸ್ರೇಲ್ ನಿರ್ಮಿತ ಲೇಸರ್ ಗೈಡೆಡ್ ಬಾಂಬುಗಳು ಪಾಕಿಸ್ತಾನದ ಭಯೋತ್ಪಾದಕ ನೆಲೆಗಳನ್ನು ನಾಶಗೊಳಿಸಿದವು. ರಷ್ಯಾ ನಿರ್ಮಿತ 'ಎಸ್-400' ಸಾಧನವು ಸುದರ್ಶನ ಚಕ್ರದಂತೆ ನಿಂತು ಪಾಕಿಸ್ತಾನದ ಡ್ರೋನ್‌ಗಳನ್ನು ಹೊಡೆದುರುಳಿಸಿತು. ರಷ್ಯಾ ನೇರವಾಗಿ ಭಾರತದ ಪರವಾಗಿ ನಿಂತಿತ್ತು. ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವಾನ್ಸ್ 'ಭಾರತವು ಸೇಡು ತೀರಿಸಿಕೊಳ್ಳುವ ಹಕ್ಕನ್ನು ಹೊಂದಿದೆ' ಎಂದು ಹೇಳಿದ್ದರು. ಇಸ್ರೇಲ್ ಪ್ರಧಾನಮಂತ್ರಿ ನೆತನ್ಯಾಹು, ಪಾಕಿಸ್ತಾನದ ದಾಳಿಯನ್ನು ಖಂಡಿಸಿ ಭಾರತದ ಪರ ನಿಂತರು. ಒಂದು ಸುಳ್ಳನ್ನು ಹತ್ತು ಬಾರಿ ಹೇಳಿ ಜನರನ್ನು ನಂಬಿಸಿಬಿಡಬಹುದೆಂಬ ಎಡಚರರ ಸತ್ತುಹೋದ ಸಿದ್ಧಾಂತವನ್ನು ಇಂದಿಗೂ ನಂಬಿರುವ ಮೇಲೆ ಉಲ್ಲೇಖಿಸಿದ ಕಾಂಗ್ರೆಸ್ ನಾಯಕರಿಗೆ ಸಾಮಾಜಿಕ ಜಾಲತಾಣದ ಯುಗದಲ್ಲಿ ಸುಳ್ಳುಗಳು ವೇಗವಾಗಿ ಜನರ ಮುಂದೆ ಬೆತ್ತಲಾಗುತ್ತವೆ ಎಂಬ ಸತ್ಯ ತಿಳಿದಿಲ್ಲ.

ಪುಲ್ವಾಮದಲ್ಲಿ ಸೈನಿಕರ ಮೇಲೆ ಪಾಕಿಸ್ತಾನಿ ಭಯೋತ್ಪಾದಕರು ನಡೆಸಿದ ದಾಳಿಗೆ ಪ್ರತೀಕಾರವಾಗಿ ಭಾರತವು ಬಾಲಕೋಟ್ ಮೇಲೆ ನಡೆಸಿದ ವೈಮಾನಿಕ ದಾಳಿಯ ಸಂದರ್ಭದಲ್ಲಿ ಯೋಧ ಅಭಿನಂದನ್‌ರನ್ನು ಪಾಕಿಸ್ತಾನ ಸೆರೆ ಹಿಡಿದಿತ್ತು. ನಂತರ ಮೋದಿಯವರ ಭಯದಿಂದ ಕೇವಲ 72 ಗಂಟೆಗಳಲ್ಲಿ ವಾಘಾ ಗಡಿಯ ಮೂಲಕ ಅವರನ್ನು ಭಾರತಕ್ಕೆ ವಾಪಸ್ ಕಳುಹಿಸಿತ್ತು. ಮೋದಿಯವರ ವಿದೇಶಿ ಪ್ರವಾಸ ಮತ್ತು ರಾಜತಾಂತ್ರಿಕತೆಯ ಬಗ್ಗೆ ಹಸಿಸುಳ್ಳು ಹೇಳುವವರು ಈ ಘಟನೆಯ ಬಗ್ಗೆ ಏನು ಹೇಳುತ್ತಾರೆ? ರಷ್ಯಾ ಮತ್ತು ಉಕ್ರೇನ್ ನಡುವೆ ಕಳೆದ ಮೂರು ವರ್ಷಗಳಿಂದ ಯುದ್ಧ ನಡೆಯುತ್ತಿದೆ. ಅಮೆರಿಕವನ್ನೂ ಒಳಗೊಂಡಂತೆ ನ್ಯಾಟೋ ದೇಶಗಳು, 'ರಷ್ಯಾದೊಂದಿಗೆ ಭಾರತ ನಿಂತರೆ ಭಾರತದ ಮೇಲೆ ನಿರ್ಬಂಧ ಹೇರಲಾಗುವುದು' ಎಂಬ ಬೆದರಿಕೆಯನ್ನು ಹಾಕಿದ್ದವು. ಆದರೆ ಭಾರತ ಕ್ಯಾರೆ ಎನ್ನದೆ ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಂಡಿತು. ರಷ್ಯಾ ಮತ್ತು ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಉಕ್ರೇನ್‌ನಲ್ಲಿ ಸಿಕ್ಕಿಹಾಕಿಕೊಂಡಿದ್ದ ಭಾರತೀಯ ವಿದ್ಯಾರ್ಥಿಗಳನ್ನು ಕರೆತರುವುದಕ್ಕೆ ಅನುವುಮಾಡಿಕೊಡಲು ಮತ್ತು ಭಾರತದ ಮನವಿಯ ಮೇರೆಗೆ ರಷ್ಯಾ 48 ಗಂಟೆಗಳ ಕಾಲ ಯುದ್ಧವನ್ನು ನಿಲ್ಲಿಸಿ 'ಸೇಫ್ ಪ್ಯಾಸೇಜ್' ನೀಡಿತ್ತು. ಪರಿಣಾಮ ಉಕ್ರೇನ್‌ನಲ್ಲಿ ಸಿಲುಕಿದ್ದ ಸಾವಿರಾರು ಭಾರತೀಯರು ಭಾರತಕ್ಕೆ ಮರಳಿದರು. ರಷ್ಯಾದಂಥ ದೈತ್ಯದೇಶ ಭಾರತೀಯರಿಗಾಗಿ ಯುದ್ಧವನ್ನು 48 ಗಂಟೆಗಳ ಕಾಲ ನಿಲ್ಲಿಸಿದ್ದು ನರೇಂದ್ರ ಮೋದಿಯವರ ರಾಜತಾಂತ್ರಿಕತೆಯ ತಾಕತ್ತಲ್ಲದೆ ಮತ್ತೇನು?

ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ನಡುವೆ ನಡೆಯುತ್ತಿದ್ದ ಯುದ್ಧದ ಸಂದರ್ಭದಲ್ಲಿ ಇಸ್ರೇಲಿನಲ್ಲಿ ಸಿಲುಕಿದ್ದ ಭಾರತೀಯರನ್ನು 'ಆಪರೇಷನ್ ಅಜಯ್' ಮೂಲಕ ರಕ್ಷಿಸಲಾಯಿತು. ಇಸ್ರೇಲ್ ಮತ್ತು ಇರಾನ್ ನಡುವೆ ನಡೆದ ಯುದ್ಧದ ಸಂದರ್ಭದಲ್ಲಿ ಇರಾನ್ ದೇಶದಲ್ಲಿ ಸಿಲುಕಿದ್ದ ಭಾರತೀಯರನ್ನು ಕರೆತರಲು ಇರಾನ್ 34 ಗಂಟೆಗಳ ಕಾಲ ದಾಳಿಯನ್ನು ನಿಲ್ಲಿಸಿ ಭಾರತಕ್ಕೆ 'ಸೇಫ್ ಪ್ಯಾಸೇಜ್' ನೀಡಿತ್ತು. ಕಾಂಗ್ರೆಸ್ಸಿನ ಕಾರ್ಯಕರ್ತರನ್ನೂ ಒಳಗೊಂಡಂತೆ ಅನೇಕ ಭಾರತೀಯರನ್ನು ಸುರಕ್ಷಿತವಾಗಿ ಇರಾನ್ ದೇಶದಿಂದ ಭಾರತಕ್ಕೆ ಕರೆತರಲಾಯಿತು. ಸಾವಿರಾರು ವರ್ಷಗಳ ಯುದ್ಧದ ಇತಿಹಾಸವಿರುವ ಎರಡು ದೇಶಗಳ ನಡುವಿನ ಯುದ್ಧವನ್ನು 24 ಗಂಟೆ ನಿಲ್ಲಿಸಿ ಭಾರತೀಯರನ್ನು ವಾಪಸ್ ಕರೆತರುವುದು ಮೋದಿಯವರ ರಾಜತಾಂತ್ರಿಕತೆಯ ತಾಕತ್ತಲ್ಲದೆ ಮತ್ತೇನು?

ವಿದೇಶದಲ್ಲಿ ಸಂಕಷ್ಟದಲ್ಲಿ ಸಿಲುಕಿರುವವರು ಒಂದು ಟ್ವೀಟ್ ಮಾಡಿ ಸರಕಾರವನ್ನು ಸಂಪರ್ಕಿಸಿದರೆ, ತಕ್ಷಣ ಸ್ಪಂದಿಸಿ ಅವರ ಸಮಸ್ಯೆಯನ್ನು ರಾಜತಾಂತ್ರಿಕ ಕಚೇರಿಗಳ ಮೂಲಕ ಬಗೆಹರಿಸಿರುವ ಅನೇಕ ಉದಾಹರಣೆಗಳಿವೆ. ಯುದ್ಧಪೀಡಿತ ಯೆಮನ್ ದೇಶದಿಂದ ಸಾವಿರಾರು ಜನರನ್ನು ವಿಶೇಷ ವಿಮಾನಗಳ ಮೂಲಕ ಭಾರತಕ್ಕೆ ಕರೆತರಲಾಗಿತ್ತು. 2008ರಲ್ಲಿ ಮುಂಬೈ ನಗರದ ಮೇಲೆ ಪಾಕಿಸ್ತಾನಿ ಪ್ರಾಯೋಜಿತ ಭಯೋತ್ಪಾದಕರು ನಡೆಸಿದ ದಾಳಿಗೆ ಪ್ರತೀಕಾರವಾಗಿ ಕಾಂಗ್ರೆಸ್ ಸರಕಾರ ಪ್ರತಿದಾಳಿ ನಡೆಸಿರಲಿಲ್ಲ. ಮೌನಿ ಪ್ರಧಾನಮಂತ್ರಿ ಮನ್‌ಮೋಹನ್ ಸಿಂಗ್, ಪಾಕಿಸ್ತಾನದ ಮೇಲೆ ದಾಳಿ ನಡೆಸಿದರೆ ಅಮೆರಿಕ ಅಡ್ಡ ಬರುವುದೆಂಬ ಭಯದಿಂದಿದ್ದರು. ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದ ಕಾಂಗ್ರೆಸ್ಸಿನ ಆಡಳಿತದಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ಭಯೋತ್ಪಾದಕ ದಾಳಿಗಳಾಗಿದ್ದವು. ಪಾಕಿಸ್ತಾನಿ ಪ್ರಾಯೋಜಿತ ಭಯೋತ್ಪಾದಕರಿಗೆ ಕಾಂಗ್ರೆಸ್ಸಿಗರನ್ನು ಕಂಡರೆ ಭಯವೇ ಇರಲಿಲ್ಲ. ಕತಾರ್ ದೇಶದಲ್ಲಿ ಅಲ್ಲಿನ ಸೈನ್ಯದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂಟು ಮಂದಿ ಭಾರತೀಯರಿಗೆ ಅಲ್ಲಿನ ನ್ಯಾಯಾಲಯ ಮಾಹಿತಿ ಸೋರಿಕೆ ವಿಷಯದಲ್ಲಿ ಗಲ್ಲಿಗೇರಿಸುವ ಶಿಕ್ಷೆಯನ್ನು ನೀಡಿತ್ತು. ತಕ್ಷಣ ಮಧ್ಯ ಪ್ರವೇಶಿಸಿದ ಭಾರತ ಅವರ ಗಲ್ಲುಶಿಕ್ಷೆಯನ್ನು ತಡೆಹಿಡಿಸಿ ನಿಯಮಿತ ಸೆರೆವಾಸ ಶಿಕ್ಷೆಗೆ ಪರಿವರ್ತಿಸುವಲ್ಲಿ ಯಶಸ್ವಿಯಾಗಿತ್ತು. 2023ರಲ್ಲಿ ದಕ್ಷಿಣ ಟರ್ಕಿ ಮತ್ತು ಸಿರಿಯಾ ದೇಶದಲ್ಲಿ ಸಂಭವಿಸಿದ ಭೀಕರ ಭೂಕಂಪದಲ್ಲಿ ಸಿಲುಕಿದವರನ್ನು 'ಆಪರೇಷನ್ ದೋಸ್ತ್' ಮೂಲಕ ರಕ್ಷಣೆ ಮಾಡಲಾಯಿತು. ಯುದ್ಧಪೀಡಿತ ಸೂಡಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು 'ಆಪರೇಷನ್ ಕಾವೇರಿ' ಮೂಲಕ ರಕ್ಷಿಸಲಾಯಿತು. ಮೋದಿಯವರ ಬದಲಾದ ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯ ಮೂಲಕ ಭಾರತೀಯರನ್ನು ರಕ್ಷಿಸಿರುವ ನೂರಾರು ಉದಾಹರಣೆಗಳನ್ನು ಹೇಳಬಹುದು.

ಮೋದಿಯವರ ವಿದೇಶಿ ಪ್ರವಾಸದ ಪರಿಣಾಮ ಇಂದು ಭಾರತದಲ್ಲಿ 'ಆ್ಯಪಲ್' ಕಂಪನಿಯು ತನ್ನ ಮೊಬೈಲ್ ಉತ್ಪಾದನಾ ಘಟಕವನ್ನು ಸ್ಥಾಪಿಸಿ ಜಗತ್ತಿಗೆ ಪೂರೈಸುತ್ತಿದೆ. ಡೊನಾಲ್ಡ್ ಟ್ರಂಪ್ ನೀಡಿದ ಎಚ್ಚರಿಕೆಯನ್ನು ಆ್ಯಪಲ್ ಕಂಪನಿ ಗಂಭೀರವಾಗಿ ತೆಗೆದುಕೊಂಡಿಲ್ಲ, ಸ್ಯಾಮ್‌ಸಂಗ್ ಜಗತ್ತಿನ ಎರಡನೇ ಅತಿದೊಡ್ಡ ಮೊಬೈಲ್ ಉತ್ಪಾದನಾ ಘಟಕವನ್ನು ನೋಯಿಡಾದಲ್ಲಿ ನಿರ್ಮಿಸಿದೆ. ಮೋದಿಯವರ ರಾಜತಾಂತ್ರಿಕತೆಯ ಫಲವಾಗಿ ಭಾರತಕ್ಕೆ ಬಿಲಿಯನ್‌ಗಟ್ಟಲೆ ಹಣ ವಿದೇಶಿ ಬಂಡವಾಳದ ರೂಪದಲ್ಲಿ ಹರಿದುಬರುತ್ತಿದೆ. ಈ ಕಂಪನಿಗಳಿಂದ ಕೋಟ್ಯಂತರ ಉದ್ಯೋಗಗಳು ಭಾರತದಲ್ಲಿ ಸೃಷ್ಟಿಯಾಗಿವೆ. 'ವಸುಧೈವ ಕುಟುಂಬಕಂ' ಶೀರ್ಷಿಕೆಯಡಿಯಲ್ಲಿ ದೆಹಲಿಯಲ್ಲಿ 2023ರ ಸೆಪ್ಟೆಂಬರ್‌ನಲ್ಲಿ ಜಿ-20 ಶೃಂಗಸಭೆ ನಡೆಸುವ ಮೂಲಕ ಭಾರತವು ಜಾಗತಿಕ ಮಟ್ಟದಲ್ಲಿ ಸಮಸ್ಯೆಗಳನ್ನು ಬಗೆಹರಿಸುವ ದೇಶವಾಗಿ ಹೊರಹೊಮ್ಮಿದೆ.

ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವಧಿಯ ಅಂತಾರಾಷ್ಟ್ರೀಯ ರಾಜತಾಂತ್ರಿಕತೆಯ ಪರಿಣಾಮವನ್ನೀಗ ನೋಡೋಣ. 1947ರಿಂದ 1991ರವರೆಗೆ ಭಾರತವನ್ನಾಳಿದ ಕಾಂಗ್ರೆಸ್ ಪಕ್ಷವು 21000 ಕೆ.ಜಿ. ಚಿನ್ನವನ್ನು 1991ರಲ್ಲಿ ಲಂಡನ್ನಿನ ಬ್ಯಾಂಕಿನಲ್ಲಿ ಅಡವಿಟ್ಟು ಸಾಲ ತಂದು ದೇಶವನ್ನು ನಡೆಸುವ ಪರಿಸ್ಥಿತಿಗೆ ತಳ್ಳಿತ್ತು. 1991ರಲ್ಲಿ ಕೇವಲ ಎರಡು ವಾರಕ್ಕೆ ಆಗುವಷ್ಟು ವಿದೇಶಿ ವಿನಿಮಯ ಮಾತ್ರ ಭಾರತದ ಬಳಿಯಿತ್ತು. ದೇಶವನ್ನು ದಿವಾಳಿ ಅಂಚಿಗೆ ತಲುಪಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿತ್ತು. 1980ರ ದಶಕದ ರಷ್ಯಾ ಮತ್ತು ಅಮೆರಿಕ ನಡುವಿನ ಶೀತಲ ಸಮರದಿಂದ ಭಾರತದ ಮೇಲಾದ ಪರಿಣಾಮವನ್ನು ಎದುರಿಸುವಲ್ಲಿ ಕಾಂಗ್ರೆಸ್ ವಿಫಲವಾಗಿತ್ತು. ಇಂದಿರಾ ಗಾಂಧಿ ಅವಧಿಯ 'ಲೈಸೆನ್ಸ್ ರಾಜ್' ವ್ಯವಸ್ಥೆಯಿಂದ ಭಾರತಕ್ಕೆ ವಿದೇಶಿ ಬಂಡವಾಳ ಹರಿದುಬಂದಿರಲಿಲ್ಲ. ಪರಿಣಾಮ, ಭಾರತವು ಆರ್ಥಿಕ ಅಭಿವೃದ್ಧಿಯಲ್ಲಿ ಹಿಂದುಳಿದಿತ್ತು. 2004 ಮತ್ತು 2014ರ ನಡುವೆ ಆಡಳಿತ ನಡೆಸಿದ, 54 ಪುಟಗಳ ಬಯೋಡೇಟಾ ಹೊಂದಿದ್ದ ಮನಮೋಹನ್ ಸಿಂಗ್ ಅವಧಿಯಲ್ಲಿ ಭಾರತದ ಆರ್ಥಿಕತೆ ಸಂಕಷ್ಟದಲ್ಲಿರುವ ಆರ್ಥಿಕ ದೇಶಗಳ ಪಟ್ಟಿಯಲ್ಲಿ ಹತ್ತನೇ ಸ್ಥಾನದಲ್ಲಿತ್ತು.

'ಆಪರೇಷನ್ ಸಿಂದೂರ್' ನಂತರ ಭಾರತದ ಪರವಾಗಿ ಯಾರೂ ನಿಲ್ಲಲಿಲ್ಲವೆಂದು ಸುಳ್ಳು ಹೇಳುವ ಕಾಂಗ್ರೆಸ್ ನಾಯಕರು, ಇಸ್ಲಾಮಿಕ್ ರಾಷ್ಟ್ರ ಪಾಕಿಸ್ತಾನದ ಪರವಾಗಿ ಸ್ವತಃ ಮುಸ್ಲಿಂ ರಾಷ್ಟ್ರಗಳೇ ನಿಲ್ಲಲಿಲ್ಲವೆಂಬುದನ್ನು ತಿಳಿಯಬೇಕು. ಟರ್ಕಿ ಮತ್ತು ಅಜರ್‌ಬೈಜಾನ್ ದೇಶಗಳು ಮಾತ್ರ ಪಾಕಿಸ್ತಾನದ ಪರವಾಗಿ ನಿಂತವು. ಅಫ್ಘಾನಿಸ್ತಾನ, ಇರಾನ್, ಮಾಲ್ಡೀವ್ಸ್, ಕಝಕಿಸ್ತಾನ, ಕತಾರ್, ಬಹ್ರೈನ್, ಮಸ್ಕತ್, ಕೊಲ್ಲಿ ರಾಷ್ಟ್ರಗಳು ಪಾಕಿಸ್ತಾನದ ಪರ ನಿಲ್ಲಲಿಲ್ಲ. ಭಾರತದ ಪರವಾಗಿ ದೂರದ ಆಸ್ಟ್ರೇಲಿಯಾ, ಆಫ್ರಿಕಾದ ಘಾನಾ ನಿಂತಿದ್ದವು. ಭಯೋತ್ಪಾದಕ ನೆಲೆಗಳ ಮೇಲೆ ದಾಳಿ ನಡೆಸಿದ ನಂತರ ಭಾರತ ಜಗತ್ತಿನ ಅನೇಕ ದೇಶಗಳಿಗೆ ಕರೆ ಮಾಡಿ ಕಾರ್ಯಾಚರಣೆಯ ವಿವರವನ್ನು ನೀಡಿತ್ತು. ಕೋವಿಡ್ ಸಮಯದಲ್ಲಿ ಭಾರತಕ್ಕೆ ಬೇಕಿದ್ದಂಥ ರೆಮಿಡಿವೈಸರ್, ಆಕ್ಸಿಜನ್ ಸಿಲಿಂಡರ್, ಪಿಪಿಇ ಕಿಟ್‌ಗಳನ್ನು ಇಸ್ರೇಲ್, ಫ್ರಾನ್ಸ್, ಆಸ್ಟ್ರೇಲಿಯಾ ದೇಶಗಳು ಪೂರೈಸಿದ್ದವು. ನರೇಂದ್ರ ಮೋದಿಯವರ ಬದಲಾದ ರಾಜತಾಂತ್ರಿಕ ನೀತಿಯಿಂದ ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ಬಿಲಿಯನ್‌ಗಟ್ಟಲೆ ಬಂಡವಾಳ ಹೂಡಿಕೆ ಮಾಡುತ್ತಿವೆ. ಮೈಕ್ರೋಸಾಫ್ಟ್, ಗೂಗಲ್, ಬೋಯಿಂಗ್, ಏರ್‌ಬಸ್, ಕ್ಸಿಯೋಮಿ, ಆಪಲ್, ಸ್ಯಾಮ್‌ಸಂಗ್, ಹುಂಡೈ, ಹೋಂಡಾ, ಟೊಯೋಟಾ, ಟೆಸ್ಲಾದಂಥ ಕಂಪನಿಗಳು ಭಾರತದಲ್ಲಿ ಹೂಡಿಕೆ ಮಾಡುತ್ತಿವೆ. ಮೋದಿಯವರ ವಿದೇಶಿ ಪ್ರವಾಸದ ಬಗ್ಗೆ ಕೆಟ್ಟದಾಗಿ ಮಾತನಾಡುವ ಕಾಂಗ್ರೆಸ್ಸಿನ ಕೆಲ ಬಾಯಿಬಡುಕರು ಅವರ ವಿದೇಶಾಂಗ ನೀತಿಯಿಂದ ಲಾಭ ಪಡೆಯುತ್ತಿದ್ದಾರೆಂಬುದು ಅಪ್ಪಟ ಚಿನ್ನದಷ್ಟು ಸತ್ಯ.

ಒದುಗರ ಒಣಿ
ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಾದು ನೋಡೋಣ...

ನಾವೆಲ್ಲರೂ 'ಪ್ರತಿಭಾ ಪಲಾಯನ'ದ ಕುರಿತಾದ ಮಾತುಗಳನ್ನು ಲಾಗಾಯ್ತಿನಿಂದ ಕೇಳುತ್ತಲೇ ಬಂದಿದ್ದೇವೆ. ಅವುಗಳಲ್ಲಿ ಹೆಚ್ಚಿನವು, ನಮ್ಮ ದೇಶದ ಪ್ರತಿಭೆಗಳು ಅಮೆರಿಕಕ್ಕೆ ತೆರಳಿ, ಅಲ್ಲೇ ಶಿಕ್ಷಣವನ್ನು ಮುಂದುವರಿಸಿ ತರುವಾಯ ಉದ್ಯೋಗವನ್ನು ಕಂಡುಕೊಂಡು, ಅಮೆರಿಕದವರಾಗಿಯೇ ಇದ್ದುಬಿಡುವುದರ ಕುರಿತಾದದ್ದು. ಅಮೆರಿಕ ಎಂದರೆ ಸಂಪದ್ಭರಿತ ನಾಡು ಎಂಬ ಕಲ್ಪನೆಯಿಂದಲೇ ಇಂಥವರು ಹೆಚ್ಚು ಆಕರ್ಷಿತರಾಗುವುದು. ಈಗಿತ್ತಲಂತೂ ಬಹುತೇಕರು ತಮ್ಮ ಮಗ, ಮಗಳು, ಅಳಿಯ, ಸಂಬಂಧಿಕರು ಅಮೆರಿಕದಲ್ಲೇ ಬಹಳ ವರ್ಷಗಳಿಂದ ಇದ್ದಾರೆ ಎಂದು ಹೇಳುವುದನ್ನು ಕೇಳುತ್ತೇವೆ.

ಇಂಥವರಿಗೆಲ್ಲ ಅಮೆರಿಕ ಅಧ್ಯಕ್ಷರು ಶಾಕ್ ಕೊಟ್ಟಂತಿದೆ! ಕೇವಲ ಒಂದು ಮತದಿಂದ ಅಂಗೀಕಾರಗೊಂಡ One Big Beautiful Bill ಹೆಸರಿನ ಅಮೆರಿಕದ ವಿಧೇಯಕವು ಭಾರತೀಯರ ಪಾಲಿಗೆ ದೊಡ್ಡ ಹೊಡೆತವೇ ಆಗಿದೆ. ಇನ್ನು ಮುಂದೆ, ಭಾರತೀಯರು ಅಮೆರಿಕದಲ್ಲಿ ದುಡಿದ ಹಣವನ್ನು ಭಾರತಕ್ಕೆ ಕಳುಹಿಸಿದರೆ ಶೇ.3.5ರಷ್ಟು ತೆರಿಗೆ ಅನ್ವಯವಾಗುತ್ತದೆ. ಇದು ಎಚ್1 ಬಿ, ಎಲ್ 1, ಎಫ್ 1 ಗ್ರೀನ್ ಕಾರ್ಡ್ ಹೊಂದಿದವರಿಗೂ ಅನ್ವಯ. ಇಷ್ಟೇ ಅಲ್ಲ, ಇನ್ನು ಮುಂದೆ ಹೆಂಡತಿ-ಮಕ್ಕಳನ್ನಷ್ಟೇ ಅಮೆರಿಕಕ್ಕೆ ಕರೆತರಬಹುದು, ಕುಟುಂಬದ ಇತರೆ ಸದಸ್ಯರುಗಳಿಗೆ ಅವಕಾಶವೇ ಇಲ್ಲ.

ಇದು ನಿಜಕ್ಕೂ ಆಘಾತಕಾರಿ ಬೆಳವಣಿಗೆ. ಟ್ರಂಪ್ ಅವರು ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷ ಪದವಿಗೆ ಏರಿದಾಗಿನಿಂದ ಏನೇನೋ ಹೊಸತನ್ನು ತರಲು ಯತ್ನಿಸುತ್ತಿದ್ದಾರೆ. ಭಾರತಕ್ಕೆ ಅನನುಕೂಲವಾಗಬೇಕೆಂಬುದೇ ಅವುಗಳ ಹಿಂದಿರುವ ಉದ್ದೇಶ ಎಂಬುದೂ ಸ್ಪಷ್ಟ. ಅದ್ಯಾಕೋ ಗೊತ್ತಿಲ್ಲ, ಭಾರತದ ಇಂದಿನ ಬೆಳವಣಿಗೆ, ಅಭಿವೃದ್ಧಿ, ಆಡಳಿತ ವೈಖರಿ ಮುಂತಾದವನ್ನು ಟ್ರಂಪ್ ಅವರಿಗೆ ಜೀರ್ಣಿಸಿಕೊಳ್ಳಲು ಆಗುತ್ತಿಲ್ಲ. ಅಷ್ಟೇ ಅಲ್ಲ, ಅವರ ಮಾತುಗಳಿಗೂ ಭಾರತ ಅಷ್ಟೊಂದು ಮಹತ್ವ ಕೊಡುತ್ತಿಲ್ಲ, ಅವರು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಅಥವಾ ಸ್ಥಾನ ಕಾಪಾಡಿಕೊಳ್ಳಲು ಇನ್ನಿಲ್ಲದ ಹೇಳಿಕೆ, ಸಲಹೆಗಳನ್ನು ನೀಡುತ್ತಿದ್ದರೂ ಅವ್ಯಾವುದಕ್ಕೂ ಭಾರತ ಅಷ್ಟೊಂದು ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಇದು ಟ್ರಂಪ್ ಕೆರಳುವುದಕ್ಕೆ ಕಾರಣವಾಗಿದ್ದಿರಲೂಬಹುದು. ಹೀಗಾಗಿ, ಹೇಗಾದರೂ ಮಾಡಿ ಭಾರತವನ್ನು ಹಣಿಯಬೇಕು ಎಂಬ ಒಂದಂಶದ ಕಾರ್ಯಕ್ರಮವನ್ನು ಅವರು ಇಟ್ಟುಕೊಂಡಂತೆ ಕಾಣುತ್ತದೆ. ಇದಕ್ಕಾಗಿ ಅವರು ಹೊಸ ಹೊಸ ತಂತ್ರಗಳನ್ನು ಬಳಸುತ್ತಿದ್ದಾರೆ ಎಂಬುದು ನಿರ್ವಿವಾದ. ಜತೆಗೆ, ತಮ್ಮ ದೇಶದ ಹಣವು ಸಾಧ್ಯವಾದಷ್ಟರ ಮಟ್ಟಿಗೆ ತಮ್ಮಲ್ಲೇ ಉಳಿದು ದೇಶದ ಪ್ರಗತಿಗೆ ಸಹಾಯವಾಗಲಿ ಎಂಬ ಧೋರಣೆ ಇದ್ದಿರಲೂಬಹುದು ಹಾಗೂ ತಮ್ಮ ಹಣವು ಬೇರೆಯವರ ಅನುಕೂಲಕ್ಕೆ ಏಕೆ ವಿನಿಯೋಗವಾಗಬೇಕು? ಎಂಬ ಸಣ್ಣತನವೂ ಅಲ್ಲಿ ಅಡಗಿರಬಹುದು. ಒಟ್ಟಿನಲ್ಲಿ, ಟ್ರಂಪ್ ಅವರ ಈಗಿನ ಅವತಾರವು ಭಾರತಕ್ಕೆ ಎಂತೆಂಥ ಕಷ್ಟಗಳನ್ನು ತಂದೊಡ್ಡೀತು ಎಂಬುದನ್ನು ಊಹಿಸುವುದೂ ಕಷ್ಟ. ಆದರೆ, ಅಂಥ ಎಲ್ಲ ಸವಾಲುಗಳನ್ನೂ ಚಾಣಾಕ್ಷತೆಯಿಂದ ನಿಭಾಯಿಸಲು ಭಾರತವು ಶಕ್ಯವಾಗಿದೆ ಎಂಬುದನ್ನೂ ಮರೆಯಬಾರದು. ಈ ಹಿಂದೆಯೂ ಟ್ರಂಪ್ ಹಲವು ಪ್ರಯೋಗಗಳನ್ನು ಮಾಡಿ ಸೋತಿದ್ದಾರೆ; ಈಗ ಈ ಮಸೂದೆಯನ್ನು ಭಾರತವು ಅದೆಷ್ಟು ಸಕ್ಷಮವಾಗಿ ಎದುರಿಸೀತು ಎಂಬುದನ್ನು ಕಾದುನೋಡೋಣ...

- ಶಂಕರನಾರಾಯಣ ಭಟ್, ಮಾಡಗೇರಿ

ಒದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು
vveditoped@gmail.comಗೆ ಮೇಲ್
ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ
ಕಳುಹಿಸಬಹುದು

ಸಾಲುತಿಲ್ಲವೇ.. ಸಾಲುತಿಲ್ಲವೇ.. ಎಂಬ ಶುದ್ಧ ಕಳ್ಳನೆಪ!

ನಾವು ಎಷ್ಟೊಂದು ನೆಪ ಹೇಳುತ್ತೇವೆ. ಕೆಲಸಕ್ಕೆ ಕಳ್ಳಬೀಳುತ್ತೇವೆ. ಮನೆಯಲ್ಲಿ ಯಾರಿಗೋ ಹುಷಾರಿಲ್ಲ, ನನಗೆ ಸಣ್ಣ ತಲೆನೋವಿದೆ. ಊರಿಗೆ ಹೋಗಿಬಂದು ಸುಸ್ತಾಗಿದ್ದೇನೆ. ಮನಸ್ಸು ಸರಿ ಇಲ್ಲ. ಡಿಪ್ರೆಶನ್ನು. ಬರೆಯೋ ಮೂಡ್ ಇಲ್ಲ. ಕೆಲಸ ಮಾಡುವ ಮೂಡ್ ಇಲ್ಲ. ಹೀಗೆಲ್ಲ ನೆಪ ಹುಡುಕುತ್ತೇವೆ. ಹೀಗೆ ನೆಪ ಹುಡುಕುವ ನಾವು, ಮೊಬೈಲ್ ಸ್ಕ್ರೋಲಿಂಗ್ ನಿಲ್ಲಿಸಿರೋದಿಲ್ಲ. ಸಂಬಳಕ್ಕೆ ದುಡಿಯುವ ಕಡೆ ಮಾತ್ರ ನಮಗೆ ಇವೆಲ್ಲವೂ ನೆಪವಾಗಿ ಅಡ್ಡಿ ಬರುತ್ತವೆ. ನಮಗೆ ನಾವು ಆಳಾಗಿ ಉಳಿಯವುದು ಹೀಗೆಯೇ. ಇಂಥ ಮನಸ್ಥಿತಿಯಲ್ಲಿ ನಾವು ಯಾವತ್ತಿಗೂ ಬಾಸ್ ಆಗಲು ಸಾಧ್ಯವೇ ಇಲ್ಲ.

ಪದಸಾಗರ

ನವೀನ್ ಸಾಗರ್
vveditoped@gmail.com

ಯಾವುದಕ್ಕೂ ಟೈಮ್ ಸಿಗುತ್ತಿಲ್ಲ.. ಸಾಲುತ್ತಿಲ್ಲ. ತುಂಬ ಬ್ಯುಸಿ.. ಈ ಮಾತುಗಳು ಇತ್ತೀಚೆಗೆ ಬಹಳ ನಿರರ್ಥಕ ಅನಿಸುವುದಕ್ಕೆ ಶುರುವಾಗಿದೆ. ಬದಲಿಗೆ A busy man has time for everything ಎಂಬ ಮಾತು ಸತ್ಯವೆನಿಸತೊಡಗಿದೆ. ಮುಖಸ್ತುತಿ ಅನಿಸಿದರೂ ಸರಿಯೇ, ಈ ಅಭಿಪ್ರಾಯ ನನ್ನಲ್ಲಿ ರೂಪುಗೊಳ್ಳುವುದಕ್ಕೆ ಕಾರಣ ನಮ್ಮ ಸಂಪಾದಕರಾದ ವಿಶ್ವೇಶ್ವರ ಭಟ್ಟರು. ಕಳೆದ ಹತ್ತು ವರ್ಷಗಳಲ್ಲಿ ಒಂದು ಎಂಡ್‌ಲೆಸ್ ಅಚ್ಚರಿಯಿಂದಲೇ ಅವರನ್ನು ಗಮನಿಸಿಕೊಂಡು ಬಂದಿದ್ದೇನೆ. ಅದು ಹತ್ತಾರು ಪಟ್ಟು ಹೆಚ್ಚಾದದ್ದು ಈ ಆರು ತಿಂಗಳಲ್ಲಿ. 'ಪ್ರವಾಸಿ ಪ್ರಪಂಚ'ದ ಆರು ತಿಂಗಳ ಪ್ರಿ-ಪ್ರೊಡಕ್ಷನ್ ಮತ್ತು ಬಿಡುಗಡೆಯಾದ ನಂತರದ ಈ ಒಂದು ತಿಂಗಳು ನನ್ನ ಯೋಚನಾಕ್ರಮವನ್ನು ಬದಲಿಸಿದೆ. ಕಾರಣ ಹೊಸ ಪತ್ರಿಕೆ ಅಲ್ಲ, ಭಟ್ಟರ ದಿನಚರಿ, ಅವರ ಓದು, ಅವರ ಕನಸು ಕಾಣುವಿಕೆ, ದೂರದೃಷ್ಟಿತ್ವ, ತಾಳ್ಮೆ, ಬದ್ಧತೆ ಮುಂತಾದ ಹಲವಾರು ವಿಚಾರಗಳು ನನ್ನನ್ನು ಬದಲಾಯಿಸಿವೆ. ಪೂರ್ತಿಯಾಗಿ ಬದಲಾಗಿದ್ದೇನಾ? ಇಲ್ಲ. ಆದರೆ ಆತ್ಮಾವಲೋಕನಕ್ಕಂತೂ ಒಳಪಡುತ್ತಲೇ ಇರುತ್ತೇನೆ.

ನಾವು ಯಾರದ್ದೋ ಆತ್ಮಚರಿತ್ರೆ, ಸಿನಿಮಾ ಅಥವಾ ವಿದೇಶಿ ದಾರ್ಶನಿಕನ ಕೋಟು ಇಂಥವನ್ನು ಓದಿಯೇ ಪ್ರೇರೇಪಿತರಾಗಬೇಕಿಲ್ಲ. ಅಕ್ಕಪಕ್ಕದಲ್ಲೇ, ಜತೆಯಲ್ಲೇ ನಮ್ಮ ಜೀವನಪಠ್ಯಗಳು ಇರುತ್ತವೆ. ಆದರೆ ಹಿತ್ತಲ ಗಿಡ ಮದ್ದೆನಿಸುವುದೇ ಇಲ್ಲ.

ಮೇ 23, 1999 ಸಚಿನ್ ತೆಂಡೂಲ್ಕರ್ ಕೀನ್ಯಾ ವಿರುದ್ಧ ಶತಕ ಗಳಿಸುತ್ತಾನೆ. ಮರುದಿನ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. 'ತಂದೆಯ ನಿಧನದ ದುಃಖದಲ್ಲೂ ಶತಕ ಬಾರಿಸಿದ ಸಚಿನ್', 'ದೇಶಕ್ಕಾಗಿ ಖಾಸಗಿ ದುಃಖವನ್ನು ಬದಿಗಿಟ್ಟ ಸಚಿನ್' ಅಂತ. ಸಾಲು ಸಾಲು ಸ್ಫೂರ್ತಿ ಕತೆಗಳು ಬರುತ್ತವೆ. ವಿರಾಟ್ ಕೊಹ್ಲಿ ಕೇವಲ ಹದಿನೆಂಟು ವರ್ಷದವನಿದ್ದಾಗ ತಂದೆಯನ್ನು ಕಳೆದುಕೊಳ್ಳುತ್ತಾನೆ. ಮರುದಿನವೇ ಕೊಹ್ಲಿ ಅಂಡರ್ 19 ಪಂದ್ಯವೊಂದಕ್ಕೆ ಹಾಜರಾಗಿ ತೊಂಬತ್ತು ರನ್ ಗಳಿಸುತ್ತಾನೆ. ಕೊಹ್ಲಿ ಮುಂದೆ ಖ್ಯಾತನಾದಾಗ ಈ ಕಥೆ ಹೊರಗೆ ಬರುತ್ತದೆ. ಪ್ರಧಾನಿ ನರೇಂದ್ರ ಮೋದಿಯವರ ತಾಯಿ ಡಿಸೆಂಬರ್ 30, 2022ರಲ್ಲಿ ತಮ್ಮ 99ನೇ ವಯಸ್ಸಲ್ಲಿ ನಿಧನರಾದರು. ಸರಳವಾಗಿ ಅವರ ಅಂತ್ಯಕ್ರಿಯೆ ಮುಗಿಸಿ ಬಂದ ಮೋದಿಯವರು ಕೆಲವೇ ಗಂಟೆಗಳ ನಂತರ ತಮ್ಮ ಕರ್ತವ್ಯಕ್ಕೆ ಹಾಜರಾಗುತ್ತಾರೆ.

ನಮ್ಮಿಂದ ದೂರವಿರೋ ಪಬ್ಲಿಕ್ ಪರ್ಸನಾಲಿಟಿಗಳ ಇಂಥ ವಿಚಾರಗಳನ್ನು ಕೇಳಿದಾಗ ಅವರ ಬಗ್ಗೆ ಒಂದು ಅಭಿಮಾನ ಹುಟ್ಟುತ್ತದೆ, ಮೆಚ್ಚುಗೆ ಮೂಡುತ್ತದೆಯೇ ಹೊರತು ನಾವು ರಾತ್ರೋರಾತ್ರಿ ಅವರಂತಾಗಿಬಿಡುವುದಿಲ್ಲ. ಆದರೆ ನಮ್ಮ ಸುತ್ತಲೇ, ನಮ್ಮ ಹತ್ತಿರದವರಲ್ಲೇ ಇಂಥದ್ದೊಂದನ್ನು ನೋಡಿದಾಗ ಅದು ಮನಸ್ಸಿಗೆ ಬೇರೆಯದೇ ರೀತಿಯಲ್ಲಿ ನಾಟುತ್ತದೆ.

'ಪ್ರವಾಸಿ ಪ್ರಪಂಚ' ಪತ್ರಿಕೆ ಬಿಡುಗಡೆಯಾಗಿ ಒಂದು ಸಂಚಿಕೆ ಹೊರಬಂದಿತ್ತು. ಅದರ ಸಂಭ್ರಮವೂ ಮುಗಿದಿರಲಿಲ್ಲ. ವಾರ ಕಳೆದು ಎರಡನೇ ಸಂಚಿಕೆ ಪ್ರಕಟಣೆಗೆ ಕ್ಷಣಗಣನೆ ಶುರುವಾಗಿಬಿಟ್ಟಿತ್ತು. ನನಗೋ, 'ವಾರಕ್ಕೆ ಬರೀ ಏಳು ದಿನ ಯಾಕೆ? ಈ ಏಳು ದಿನ ಯಾಕೆ ಇಷ್ಟು ಬೇಗ ಸರಿದುಹೋಗ್ತಾ ಇದೆ? ಈಗಲೂ ದಿನಕ್ಕೆ ಇಪ್ಪತ್ನಾಲ್ಕೇ ಗಂಟೆಯಾ ಅಥವಾ ಹತ್ತು ಹನ್ನೆರಡು ಗಂಟೆಗೆ ದಿನ ಮುಗಿದುಹೋಗ್ತಾ ಇದೆಯಾ? 'ಪ್ರವಾಸಿ ಪ್ರಪಂಚ' ವಾರಕ್ಕೊಂದು ಬೇಕಿತ್ತಾ? ಹದಿನೈದು ದಿನಕ್ಕೊಂದು ಇದ್ದಿದ್ದರೆ ಆಗ್ತಿರಲಿಲ್ವಾ?' ಹೀಗೆಲ್ಲಾ ಅನಿಸುತ್ತಿದ್ದರೆ, ಭಟ್ಟರು ಮಾತ್ರ ಮುಂದಿನ ಸಂಚಿಕೆಗಾಗಿ ಹೊಸ ಹೊಸ ಯೋಜನೆ, ಲೇಖನ, ಪ್ರವಾಸ ಇವೆಲ್ಲವನ್ನೂ ಯೋಚಿಸುತ್ತಿದ್ದರು. ನನಗೆ 'ಪ್ರವಾಸಿ ಪ್ರಪಂಚ' ಒಂದೇ. ಆದರೆ ಅವರಿಗೆ 'ವಿಶ್ವವಾಣಿ' ಇದೆ. 'ಗ್ಲೋಬಲ್ ಅಚೀವರ್' ಕಾರ್ಯಕ್ರಮಗಳಿವೆ, 'ವಿಶ್ವವಾಣಿ ಪುಸ್ತಕ' ಪ್ರಕಾಶನ, ಮಾಧ್ಯಮ ಅಕಾಡೆಮಿ, ಕ್ಲಬ್‌ಹೌಸ್, 'ವಿಶ್ವವಾಣಿ ಟಿವಿ', ಹೀಗೆ ಒಂದೇ ಎರಡೇ? ಈ ಮಧ್ಯ ಕಾಲಿಗೆ ಚಕ್ರ, ಮೈಗೆ ರೆಕ್ಕೆ ಅಂಟಿಸಿಕೊಂಡು ವಿದೇಶಕ್ಕೆ ಹಾರುತ್ತಾರೆ. ವಿದೇಶಕ್ಕೆ ಹೋಗಿಲ್ಲವೆಂದರೆ ಈ ದೇಶದಲ್ಲೇ ನೂರಾರು ಕಿಲೋಮೀಟರ್ ಸುತ್ತುತ್ತಾರೆ. ಯಾವ್ಯಾವುದೋ ಕಾರ್ಯಕ್ರಮದಲ್ಲಿ ಭಾಷಣ ಮಾಡುತ್ತಾರೆ. ಇದರ ಮಧ್ಯ ಅದೆಷ್ಟು ಓದುತ್ತಾರೆ, ಬರೆಯುತ್ತಾರೆ. ನಡುವೆ ಹಿರಿಯ ಜೀವ ಭೈರಪ್ಪನವರೊಂದಿಗೆ ತಪ್ಪದೇ ಕಾಲ ಕಳೆಯುತ್ತಾರೆ. ಬೆಳಬೆಳಗ್ಗೆ ವಾಕಿಂಗೋ ಡ್ರೈವಿಂಗೋ ಹೋಗಿ ಅಲ್ಲಿ ಡ್ರೋನ್ ಹಾರಿಸಿ ಬರುತ್ತಾರೆ. ಕುಟುಂಬಕ್ಕೂ, ಆಫೀಸಿನ ಸ್ಟಾಫಿಗೂ ಸಮಯ ಕೊಡುತ್ತಾರೆ. ವಾರಕ್ಕೆ ಎಂಟು-ಹತ್ತು ಅಂಕಣಗಳನ್ನು ಮಿಸ್ ಮಾಡದೇ ಬರೆಯುತ್ತಾರೆ. ಇಷ್ಟೆಲ್ಲ ಮಾಡಿಯೂ ಫ್ರಿಜ್ಜಿಂದ ತೆಗೆದ ಹಣ್ಣಿನಷ್ಟು ತಾಜಾ ಮತ್ತು ತಣ್ಣಗೆ ಇರ್ತಾರೆ. ಸಾಮಾನ್ಯ ಮನುಷ್ಯನಿಂದ ಹೇಗೆ ಸಾಧ್ಯ? ಮತ್ತೆ ನೆನಪಾಗೋದು ಅದೇ ಮಾತು. ಅತ್ಯಂತ ಬ್ಯುಸಿ ಮನುಷ್ಯ ಅಂದ್ರೆ ಎಲ್ಲದಕ್ಕೂ ಸಮಯ ಇರುವವನು.

ಎರಡನೇ ಸಂಚಿಕೆ ನಾಳೆ ಮುದ್ರಣಕ್ಕೆ ಹೋಗಬೇಕು ಎಂಬ ಗಳಿಗೆಯಲ್ಲಿ ಭಟ್ಟರ ಅತ್ಯಂತ ಆಪ್ತರ ನಿಧನ ವಾರ್ತೆ ಬರುತ್ತದೆ. ಅವರೇ ಮುಂದೆ ನಿಂತು ಎಲ್ಲವನ್ನೂ ನಡೆಸಿಕೊಡಬೇಕಾದಷ್ಟು ಆಪ್ತರು. ಇಂಥ ಸಮಯದಲ್ಲಿ ಭಟ್ಟರು ಫೋನ್ ಮಾಡಿ ಸುದ್ದಿ ತಿಳಿಸಿ, ಅಂತ್ಯಕ್ರಿಯೆ ಮುಗಿಸಿಬಂದವನೇ ಲೇಖನಗಳನ್ನು ಬರೆದುಕಳಿಸ್ತೀನಿ ಅಂದಾಗ, ನನಗೆ ಹೇಗೆ ಪ್ರತಿಕ್ರಿಯಿಸಬೇಕು ಅಂತಲೇ ತಿಳಿಯಲಿಲ್ಲ. ಭಟ್ಟರು ಮಾತಿಗೆ ತಪ್ಪಲಿಲ್ಲ. ಶೋಕದ ನಡುವೆಯೇ ಒಂದಾದ ಮೇಲೊಂದು ಅಂತ ಬರೋಬ್ಬರಿ ನಾಲ್ಕು ಲೇಖನಗಳನ್ನು ಅಂದ್ರೆ ಸುಮಾರು ಮೂರೂವರೆ ಸಾವಿರ ಪದಗಳಷ್ಟು ಬರೆದು ಕಳಿಸಿದರು. ಪತ್ರಿಕೆ ಸಮಯಕ್ಕೆ ಸರಿಯಾಗಿ ಪ್ರಿಂಟ್‌ಗೆ ಹೋಯ್ತು.

ಇದು ನನ್ನ ಆಲೋಚನಾಕ್ರಮವನ್ನು ಬದಲಿಸಿದ್ದು. ಶುಕ್ರವಾರ ರಾತ್ರಿಯೇ 'ಪ್ರವಾಸಿ ಪ್ರಪಂಚ'ಕ್ಕೆ ಡೆಡ್‌ಲೈನ್. ನನ್ನ ಅಂಕಣಕ್ಕೂ ಶುಕ್ರವಾರವೇ ಡೆಡ್‌ಲೈನ್. ಹೇಗೆ ಬರೆಯೋದು? ಕಾಲಂ ನಿಲ್ಲಿಸಿಬಿಡೋಣ ಅಥವಾ ಬೇರೆ ದಿನಕ್ಕೆ ಶಿಫ್ಟ್ ಮಾಡಿಕೊಳ್ಳೋಣ ಅಂತೆಲ್ಲ ಯೋಚಿಸುತ್ತಿದ್ದ ನಾನು, ಇಲ್ಲ, ಇದೇ ದಿನವೇ ಅಂಕಣ ಬರೆಯುತ್ತೇನೆ ಎಂದು ನಿರ್ಧರಿಸಿಕೊಂಡೆ. ನಾನು ಬ್ಯುಸಿ, ಸಮಯ ಸಾಕಾಗ್ತಾ ಇಲ್ಲ ಎಂಬ ಪದವನ್ನು ಅಕ್ಷರಶಃ ಮನಸಿನಿಂದ ತೆಗೆದುಹಾಕಿದೆ.

ನಾನು ಇತ್ತೀಚಿನ ದಿನಗಳಲ್ಲಿ ಇಂಥದ್ದೇ ಉತ್ಸಾಹ ಎನರ್ಜಿ, ಕನಸು, ಕಸುವು ಎಲ್ಲ ಕಂಡದ್ದು ಬಹುಶಃ ವೀರಕಪುತ್ರ ಶ್ರೀನಿವಾಸ್, ರಂಗಸ್ವಾಮಿ ಮೂಕನಹಳ್ಳಿ ಈ ಇಬ್ಬರಲ್ಲಿ. ಆದರೆ ಭಟ್ಟರನ್ನು ಅತ್ಯಂತ ಹತ್ತಿರದಿಂದ ನೋಡುತ್ತಿರುವುದರಿಂದ ಅವರು ನನ್ನ ಮೇಲೆ ದೊಡ್ಡ ಪರಿಣಾಮ ಬೀರಿದರು.

ನಾವು ಎಷ್ಟೊಂದು ನೆಪ ಹೇಳುತ್ತೇವೆ. ಕೆಲಸಕ್ಕೆ ಕಳ್ಳಬೀಳುತ್ತೇವೆ. ಮನೆಯಲ್ಲಿ ಯಾರಿಗೋ ಹುಷಾರಿಲ್ಲ, ನನಗೆ ಸಣ್ಣ ತಲೆನೋವಿದೆ. ಊರಿಗೆ ಹೋಗಿಬಂದು ಸುಸ್ತಾಗಿದ್ದೇನೆ. ಮನಸ್ಸು ಸರಿ ಇಲ್ಲ. ಡಿಪ್ರೆಶನ್ನು. ಬರೆಯೋ ಮೂಡ್ ಇಲ್ಲ.

ಕೆಲಸ ಮಾಡುವ ಮೂಡ್ ಇಲ್ಲ, ಹೀಗೆಲ್ಲ ನೆಪ ಹುಡುಕುತ್ತೇವೆ. ಹೀಗೆ ನೆಪ ಹುಡುಕುವ ನಾವು, ಮೊಬೈಲ್ ಸ್ಕ್ರೋಲಿಂಗ್ ನಿಲ್ಲಿಸಿರೋದಿಲ್ಲ, ಊಟ ತಿಂಡಿ ನಿದ್ದೆ ಬಿಟ್ಟಿರುವುದಿಲ್ಲ, ಸಂಬಳಕ್ಕೆ ದುಡಿಯುವ ಕಡೆ ಮಾತ್ರ ನಮಗೆ ಇವೆಲ್ಲವೂ ನೆಪವಾಗಿ ಅಡ್ಡಿ ಬರುತ್ತವೆ. ನಮಗೆ ನಾವು ಆಳಾಗಿ ಉಳಿಯವುದು ಹೀಗೆಯೇ. ಇಂಥ ಮನಸ್ಥಿತಿಯಲ್ಲಿ ನಾವು ಯಾವತ್ತಿಗೂ ಬಾಸ್ ಆಗಲು ಸಾಧ್ಯವೇ ಇಲ್ಲ.

ಇಂಥ ಪರೀಕ್ಷೆಗಳನ್ನು ಪಾಸ್ ಮಾಡಿದರೇನೇ ಬದುಕು. ಇವತ್ತಿಗೂ ಅದೆಷ್ಟೋ ಮಂದಿ ಸೀರಿಯಲ್‌ಗೆ ಸಂಭಾಷಣೆ ಬರೆಯುತ್ತಿದ್ದಾರೆ. ಹೊತ್ತುಗೊತ್ತಿಲ್ಲದಂತೆ ಕೀಬೋರ್ಡ್ ಕುಟ್ಟುತ್ತಾರೆ. ಹಿಮಾಲಯಕ್ಕೆ ಹೋಗಿದ್ದರೂ ಅಲ್ಲೇ ಕೂತು ಬರೆಯುತ್ತಾರೆ. ಮನೆಯಲ್ಲಿ ಸಾವಾಗಿದ್ದರೂ ಬದಿಯಲ್ಲೆಲ್ಲೋ ಕೂತು ಕಣ್ಣೀರು ಒರೆಸಿಕೊಳ್ಳುತ್ತಾ ಹಾಸ್ಯದ ಎಪಿಸೋಡ್ ಬರೆಯುತ್ತಾರೆ. ಅದು ಕೆಲವರ ಬದ್ಧತೆ, ಕೆಲವರಿಗೆ ಅನಿವಾರ್ಯತೆ. ಅಂಥ ಸಂದರ್ಭಗಳೇ ನಮ್ಮನ್ನು ಅಳೆಯೋದು. ಬರವಣಿಗೆ ಅನ್ನೋದು ಕ್ರಿಯೇಟಿವ್ ಕೆಲಸ, ಅದಕ್ಕೆ ಮೂಡ್ ಅಗತ್ಯ ಎಂಬುದು ಒಂದು ಮಟ್ಟಿಗೆ ನಿಜವೇ ಆದರೂ, ಎಂಥ ಕ್ರಿಯೇಟಿವ್ ಕೆಲಸವೂ ಕಾಲಕ್ರಮೇಣ ಮೆಕ್ಯಾನಿಕಲ್ ಆಗುತ್ತದೆ ಎಂಬುದೂ ಅಷ್ಟೇ ನಿಜ. ಮೂಡ್ ಮೇಲೆ ಡಿಪೆಂಡ್ ಆಗಿ ಕೆಲಸ ಮಾಡುವವರಿಗೆ ಇದು ಕಾಲವಲ್ಲ. ಶೋ ಮಸ್ಟ್ ಗೋ ಆನ್. ನಮ್ಮನ್ನು ಬಿಟ್ಟು ಕೂಡ ಶೋ ನಡೆಯುತ್ತದೆ. ನಾವು ನಮ್ಮ ಪಾತ್ರ ಕಳೆದುಕೊಳ್ಳಬಾರದು. ಅಷ್ಟೆ.

ಜಗತ್ತಿನಲ್ಲಿ ಸಚಿನ್, ಮೋದಿ, ವಿರಾಟ್ ಮಾತ್ರವಲ್ಲ, ನಮ್ಮ ಸುತ್ತ ಲಕ್ಷಾಂತರ ಮಂದಿ ಹೀಗೆ ಎಲ್ಲ ಕಷ್ಟಗಳ ನಡುವೆ ಕರ್ತವ್ಯಕ್ಕೆ ಹಾಜರಾಗುವವರಿದ್ದಾರೆ. ಕೇವಲ ಹಾಜರಾಗುವುದು ಮಾತ್ರ ಮುಖ್ಯವಾಗುವುದಿಲ್ಲ, ಪರ್ಫಾರ್ಮೆನ್ಸ್ ಕೂಡ ಮುಖ್ಯವಾಗುತ್ತದೆ. ಅವತ್ತು ಸಚಿನ್ ಮತ್ತು ವಿರಾಟ್ ಬ್ಯಾಟಿನಿಂದ ರನ್ ಹರಿದುಬರದೇ ಇದ್ದಿದ್ದರೆ, ಈ ಕಥೆಗಳು ಅಲ್ಲೇ ಸತ್ತು ಹೋಗುತ್ತಿದ್ದವು. ಸಿನಿಮಾ ನಟ-ನಟಿಯರು ನಿಜಜೀವನದ ದಾರುಣ ಘಟನೆಗಳ ಬೆನ್ನಲ್ಲೇ ಶೂಟಿಂಗಿಗೆ ಬಂದು ಕ್ಯಾಮೆರಾ ಎದುರು ತದ್ವಿರುದ್ಧ ಮೂಡ್‌ನ ದೃಶ್ಯದಲ್ಲಿ ನಟಿಸಿ ಸೈ ಎನಿಸಿಕೊಂಡ ಉದಾಹರಣೆಗಳಿವೆ.

ಮನುಷ್ಯನೆಂಬ ಭಾವುಕ ಪ್ರಾಣಿಗೆ, ದುಃಖದಿಂದ ಹೊರಬಂದು ಕೆಲಸದತ್ತ ಚಿತ್ತ ಹರಿಸುವುದು ಖಂಡಿತ ಸುಲಭದ ವಿಷಯವೇನಲ್ಲ. ಆದರೆ ಕರ್ತವ್ಯ, ಬದ್ಧತೆ ಅವೆಲ್ಲವನ್ನೂ ಮೀರಿ ನಿಲ್ಲಲೇಬೇಕು. ಸಮಯವಿಲ್ಲ ಅನ್ನೋ ಮಾತುಗಳು, ಕೆಲಸ ಜಾಸ್ತಿ ಆಗ್ತಿದೆ ಎಂಬ ಗೊಣಗುಗಳು ಎಲ್ಲವೂ ಅಂತಿಮವಾಗಿ ನೆಪಗಳಷ್ಟೆ. ವಿಮಾನ ನಿಲ್ದಾಣದಲ್ಲಿ ಮಧ್ಯರಾತ್ರಿ ಮೂರೂವರೆ ರಾತ್ರಿಯಲ್ಲಿ ಕೂತು ಭಟ್ಟರು 'ಪ್ರವಾಸಿ ಪ್ರಪಂಚ'ದ ಪ್ರೂಫ್ ಚೆಕ್ ಮಾಡಬಲ್ಲರು, ಫಿಲಿಪೀನ್ಸ್‌ನ ತಿರುಗಾಟದ ನಡುವೆಯೇ ಕೂತು ರಾಶಿ ರಾಶಿ ಬರೆದು (ಒಂದಕ್ಷರವೂ ತಪ್ಪಿಲ್ಲದಂತೆ) ಕಳಿಸಬಲ್ಲರು, ಸಾವಿರ ಜಂಜಡಗಳ ಮಧ್ಯೆಯೂ ಹಸನ್ಮುಖ ಇಟ್ಟುಕೊಂಡು ಓದಿ ಓದಿ ಬರೆಯಬಲ್ಲರು ಅಂದ್ರೆ, ಸಮಯವಿಲ್ಲ, ಮೂಡ್ ಇಲ್ಲ ಎಂಬ ಪದಗಳಿಗೆ ಅರ್ಥವೆಲ್ಲಿದೆ?

ಬ್ಯಾಕೆಟ್ ಬರಹ: ಈಗ ನಮ್ಮ ನಡುವೆ ಇಲ್ಲದ ನಿರ್ದೇಶಕನೊಬ್ಬ ಈಗೊಂದು ಏಳು ವರ್ಷದ ಹಿಂದೆ ಖಾಸಗಿ ವಾಹಿನಿಯಲ್ಲಿ ರಿಯಾಲಿಟಿ ಶೋ ಜಡ್ಜ್ ಆಗಿದ್ದ. ಆ ಸಮಯದಲ್ಲಿ ಆತನ ತಂದೆ ನಿಧನ ಹೊಂದಿದರು. ಆಗ ಆತ ಚಾನೆಲ್ಲಿಗೆ ಫೋನ್ ಮಾಡಿ ಹೇಳಿದನಂತೆ- ''ನನ್ನ ತಂದೆ ಹೋಗೆ ಹಾಕಿಸಿಕೊಂಡಿದಾರೆ. ಇವತ್ತೇ ಶೂಟ್ ಇಟ್ಕೊಂಡ್ ಬಿಡಿ, ಶೂಟ್ ಆದ ಹಾಗೂ ಆಗತ್ತೆ, ಅಪ್ಪ ಸತ್ತರೂ ಶೂಟಿಂಗಿಗೆ ಬಂದಿದಾನೆ ಅಂತಾನೂ ಆಗತ್ತೆ. ಬೇಕಾದ್ರೆ ಗೊಳೋ ಅಂತ ಅತ್ತುಬಿಡ್ತೀನಿ. ನಿಮಗೆ ಟಿಆರ್‌ಪಿನೂ ಹೆವಿಯಾಗಿ ಬರುತ್ತೆ'' ಅಂತ. ಚಾನೆಲ್‌ನವರು ಆತನ ಬಗ್ಗೆ ಅಸಹ್ಯಪಟ್ಟುಕೊಂಡು, ''ಬೇಡ ಸರ್, ನೀವು ಎಲ್ಲ ಕಾರ್ಯ ಮುಗಿಸಿ ಬನ್ನಿ. ನಂತರ ಶೂಟ್ ಇಟ್ಟುಕೊಳ್ಳೋಣ'' ಅಂದರಂತೆ. ಇಂಥದ್ದನ್ನೆಲ್ಲ ಬದ್ಧತೆ ಎಂದು ಕನ್‌ಫ್ಯೂಸ್ ಮಾಡಿಕೊಂಡು ಯಾರೂ ಪ್ರೇರಣೆ ಪಡೆಯಬಾರದು.

ಭಟ್ಟರ್ ಸ್ಕಾಚ್

- **ವೆಂಕಣ್ಣ ಆಚಾರ ಹಿತ್ತಲಮನಿ, ಮೈಸೂರು**
  ಬ್ಯಾಟ್ಸ್‌ಮನ್‌ಗಳು ತೊಂಬತ್ತು ದಾಟುತ್ತಿದ್ದಂತೆ ನರ್ವಸ್ ಆಗ್ತಾರೆ, ರಾಜಕಾರಣಿಗಳು?
- **ಬೇರೆಯವರನ್ನು ನರ್ವಸ್ ಮಾಡ್ತಾರೆ!**

- **ಬೆಂ. ಮು.ಮಾರುತಿ, ಬೆಂಗಳೂರು**
  ಭಟ್ರೇ, ನಾರಿಮಣಿಗೆ ಇರಲೇಬೇಕಾಗಿದ್ದೇನು?
- **ಕರಿಮಣಿ!**

- **ಸತೀಶ ಎಲ್.ವಿ., (ಇಮೇಲ್ ಮೂಲಕ)**
  ಭಟ್ರೇ, ಹೆಣ್ಣಿನ ಕಣ್ಣಿನ ನೋಟಕ್ಕೆ ಸೋಲದವರು ಯಾರಾದರೂ ಇದ್ದಾರಾ?
- **ಕಣ್ಣು ಮಂಜಾದವರು!**

- **ಶ್ರೀದೇವಿ ತಾಳಗುಪ್ಪ, ಸಾಗರ**
  ಭಟ್ರೇ, ಹೆಂಡತಿಯನ್ನು ನೋಯಿಸಿದರೆ ಏನು ಸಿಗುತ್ತದೆ?
- **ಯಾರ ಹೆಂಡತಿಯನ್ನು ನೋಯಿಸಿದರೆ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು ಮೇಡಂ!**

- **ರಾಜು ಪತ್ತಾರ, ಹುಬ್ಬಳ್ಳಿ**
  ಭಟ್ರನ್ನು ಕೇಳಿದ್ದರೆ ಸರಿ ಹೋಗ್ತಾ ಇತ್ತು ಅಂತಾಳಲ್ಲ, ಹಾಗಂದ್ರೆ ಏನು?
- **'ಆಸ್ಕ್ ದಿ ಎಡಿಟರ್' ಅಂಕಣದ ಪರಿಣಾಮವಿದು!**

- **ಜಯಶ್ರೀ ಬಿ., (ಇಮೇಲ್ ಮೂಲಕ)**
  ರೆಸ್ಲಿಂಗ್ ಪಂದ್ಯದಲ್ಲಿ ಇಬ್ಬರೂ ಹೊಡೆದಾಡುವುದಿಲ್ಲ ಅಂತ ನಿಮಗೆ ಅನಿಸ್ತಾ ಇಲ್ಲವಾ, ಭಟ್ರೇ?
- **ಇಬ್ಬರು ಬೆಲ್ಟ್‌ಗಾಗಿ ಬಡಿದಾಡ್ತಾರೆ ಅಂತ ಅನಿಸುತ್ತೆ!**

- **ರಾಮಸ್ವಾಮಿ ಪಿ.ಕೆ., ಮಂಗಳೂರು**
  ಭಟ್ರೇ, ಅವನ ಜತೆ ಮಾತಾಡೋದು ಅಂದ್ರೆ, ಗೋಡೆ ಜತೆ ಮಾತಾಡಿದಂತೆ ಅಂತಾರಲ್ಲ, ಹಾಗಂದರೇನು?
- **ಫೇಸ್‌ಬುಕ್ ವಾಲ್‌ನಲ್ಲಿ ಸದಾ ಪೋಸ್ಟ್ ಮಾಡುವವರನ್ನು ನೋಡಿ ಹಾಗೆ ಹೇಳಿರಬಹುದು!**

- **ಬಿ.ರಾಮರಾವ್, ಬೆಂಗಳೂರು**
  ಭಟ್ರೇ, ಜೀವನದಲ್ಲಿ ಎಲ್ಲರೂ ಪ್ರೀತಿಗಾಗಿ ಹಾತೊರೆಯುತ್ತಾರಲ್ಲ?
- **ಹಾಗೇನಿಲ್ಲ, ಪಬ್‌ನಲ್ಲಿ ಬಿಯರ್‌ಗೆ ಹಾತೊರೆಯುವವರನ್ನು ನೋಡಿದ್ದಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ!**

- **ಹರಿಪ್ರಕಾಶ ಭಟ್, ಸಿದ್ದಾಪುರ**
  ಭಟ್ರೇ, ಪ್ರೀತಿ ಅಂದ್ರೆ, ನಿಮ್ಮ ದೃಷ್ಟಿಯಲ್ಲಿ ಕೆರೆ ನೀರಾ, ಹರಿವ ನೀರಾ?
- **ನಾವು ಅಂದುಕೊಂಡ ಹೊತ್ತಿಗೆ ಥಟ್ ಅಂತ ಬರುವ ನಲ್ಲಿ ನೀರಾದರೂ ಆಗಬಹುದು!**

- **ವಿ.ಹೇಮಂತಕುಮಾರ, ಬೆಂಗಳೂರು**
  ಸರ್, ಪ್ರಾಣ ಉಳಿಸುವ ನೀರಿಗೆ, ಪ್ರಾಣ ತೆಗೆಯುವ ಶಕ್ತಿಯೂ ಇದೆಯಂತೆ, ಹೌದಾ?
- **ಗುಂಡಿಗೆ ಸೋಡಾ ಬದಲು, ಬರೀ ನೀರು ಹಾಕಿಕೊಳ್ಳುವವರು ಕೇಳುವ ಪ್ರಶ್ನೆ ಇದು!**

ವೈದ್ಯನು ನಾರಾಯಣನಾಗುವ ಬಗೆ ಹೇಗೆ?

ರೋಗಿಗಳ ಕಾಯಿಲೆಗಳನ್ನು ಮತ್ತು ನೋವನ್ನು ಶಮನ ಮಾಡುವವ 'ವೈದ್ಯ'. ಅವನು ಲೋಕಕ್ಕೆ ನೀತಿಯನ್ನು ಬೋಧಿಸುತ್ತಾನೆ. ನಮ್ಮ ಸನಾತನ ಪರಂಪರೆಯು ಒಬ್ಬ ವೈದ್ಯ ಹೇಗಿರಬೇಕು ಎಂಬ ಪ್ರಶ್ನೆಗೆ 'ಆದಿದೇವ ಧನ್ವಂತರಿ' ಮತ್ತು 'ಅಶ್ವಿನಿ ದೇವತೆ'ಗಳ ಆದರ್ಶವನ್ನು ನಮ್ಮ ಮುಂದಿಟ್ಟಿದೆ.

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ
vveditoped@gmail.com

ನಮ್ಮದೊಂದು ಚಾರಿಟಬಲ್ ಸಂಸ್ಥೆ. ಈ ಸಂಸ್ಥೆಯ ನೇತೃತ್ವದಲ್ಲಿ ನಾವು ಕಣ್ವ ಜಲಾಶಯ ಸಮೀಪವಿರುವ ಕನ್ನಮಂಗಲ ಹಳ್ಳಿಯಲ್ಲಿ 'ಸಾಧನ ವಿದ್ಯಾಲಯ' ಎಂಬ ಶಾಲೆಯನ್ನು ಸ್ಥಾಪಿಸಿದ್ದೇವೆ. ಸುತ್ತಮುತ್ತಲಿನ ಗ್ರಾಮೀಣ ಮಕ್ಕಳಿಗೆ ಸಂಸ್ಕಾರಭರಿತವಾದ ಶಿಕ್ಷಣವನ್ನು ನೀಡುವ ಸದುದ್ದೇಶದೊಂದಿಗೆ ಈ ಶಾಲೆಯ ಪ್ರಾರಂಭವಾಯಿತು. ಇದೇ ಶಾಲೆಯಲ್ಲಿ ನಾವು ಪ್ರತಿ ತಿಂಗಳು ಉಚಿತ ಆಯುರ್ವೇದ ಆರೋಗ್ಯ ಶಿಬಿರಗಳನ್ನು ಕಳೆದ ಎರಡು ವರ್ಷಗಳಿಂದ ಸತತವಾಗಿ ನಡೆಸಿಕೊಂಡು ಬಂದಿದ್ದೇವೆ. ನುರಿತ ತಜ್ಞರ ಉಪನ್ಯಾಸಗಳ ಮೂಲಕ ಅಲ್ಲಿನ ಹಳ್ಳಿ ಜನರಿಗೆ ಆರೋಗ್ಯ ಶಿಕ್ಷಣವನ್ನು ನೀಡಿ, ಉತ್ತಮ ವೈದ್ಯರ ತಪಾಸಣೆಯ ಸೌಲಭ್ಯವನ್ನು ಕಲ್ಪಿಸಿ, ಗುಣಮಟ್ಟದ ಆಯುರ್ವೇದ ಔಷಧಿಗಳನ್ನ ಬಡ ಜನರಿಗೆ ತಲುಪಿಸಲು ಈ ಕೈಂಕರ್ಯ.

ಕೆಲವು ತಿಂಗಳ ಹಿಂದಿನ ಈ ಆಯುರ್ವೇದ ಶಿಬಿರದಲ್ಲಿ ನಡೆದ ಒಂದು ಘಟನೆಯನ್ನು ನಿಮ್ಮ ಜತೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಓರ್ವ ಬೆನ್ನು ಬಾಗಿದ ಹಿರಿಯ ಹೆಂಗಸು ನಮ್ಮ ಕ್ಯಾಂಪಿಗೆ ಬಂದಿದ್ದರು. ಇಬ್ಬರು ವೈದ್ಯರನ್ನು ಭೇಟಿ ಮಾಡಿ ಅವರ ಸಲಹೆ ಪಡೆದು ಮತ್ತೆ ನನ್ನ ಬಳಿಯೂ ಬಂದರು. ಅವರದ್ದು ಚಿರಪರಿಚಿತ ಮುಖ. ಕಾರಣ ಪ್ರತಿ ತಿಂಗಳು ಅವರು ಕ್ಯಾಂಪಿಗೆ ತಪ್ಪದೇ ಭೇಟಿ ನೀಡುತ್ತಿದ್ದರು. ಅವರು ನನ್ನ ಬಳಿ ಬಂದ ಕೂಡಲೇ ನನ್ನ ಸಹಜವಾದ ಪ್ರಶ್ನೆ– ''ಹೇಗಿದ್ದೀರಾ?'' ಎಂದಿತ್ತು. ಅದಕ್ಕೆ ಅವರು, ''ನಾನು ಕಳೆದ ಎಂಟು ತಿಂಗಳಿಂದ ಇಲ್ಲಿಗೆ ಬರುತ್ತಿದ್ದೇನೆ, ಆದರೆ ನಾನು ಯಾವುದೇ ಔಷಧಿಗಳನ್ನು ತೆಗೆದುಕೊಳ್ಳುತ್ತಿಲ್ಲ. ಆದರೂ ನನ್ನ ಆರೋಗ್ಯ ಬಹಳ ಸುಧಾರಿಸಿದೆ. ಮನಸ್ಸು ಎಷ್ಟೋ ಶಾಂತವಾಗಿದೆ. ಈಗ ಸಂತೋಷವಾಗಿದ್ದೇನೆ'' ಎಂದು ನುಡಿದರು. ನನಗೆ ಆಶ್ಚರ್ಯವಾಯಿತು. ''ಯಾವ ಔಷಧಿಯೂ ಇಲ್ಲದೆ ಗುಣವಾಗಿಬಿಟ್ರಾ? ಅದು ಹೇಗೆ?'' ಎಂದು ಅವರನ್ನು ಮರುಪ್ರಶ್ನಿಸಿದೆ. ಅದಕ್ಕೆ ಅವರು ಹೀಗೆ ಹೇಳಿದರು– ''ಇಲ್ಲಿ ಬರುವ ಎಲ್ಲಾ ವೈದ್ಯರು, ರೋಗಿಗಳನ್ನ ತಮ್ಮ ಅತ್ಯಂತ ಪ್ರಿಯ ಬಂಧುಗಳ ರೀತಿ ನಡೆಸಿಕೊಳ್ಳುತ್ತಾರೆ. ಸದಾ ನಗುಮುಖದೊಂದಿಗೆ ಮಾತನಾಡಿಸುತ್ತಾರೆ. ಬಹಳ ಪ್ರೀತಿಯಿಂದ ತಪಾಸಣೆ ಮಾಡಿ ನಮ್ಮನ್ನು ವಿಚಾರಿಸಿಕೊಳ್ಳುತ್ತಾರೆ. ನಮ್ಮಲ್ಲಿರುವ ಎಲ್ಲಾ ದುಃಖಗಳನ್ನು ಹಂಚಿಕೊಳ್ಳಲು ಸಮಯ ಕೊಡುತ್ತಾರೆ. ಇದೇ ನನಗೆ ಬೇಕಾಗಿದ್ದ ಅತಿ ದೊಡ್ಡ ಔಷಧಿ. ನಿಮ್ಮ ಪ್ರೀತಿಯ ಮಾತುಗಳೇ ನನ್ನ ಆರೋಗ್ಯವನ್ನು ಬಹಳಷ್ಟು ಸುಧಾರಿಸಿದೆ. ಮನಸ್ಸಿನ ದುಃಖವನ್ನು ಕಡಿಮೆ ಮಾಡಿದೆ. ದೇವರು ನಿಮ್ಮನ್ನೆಲ್ಲ ಕಾಪಾಡಲಿ'' ಎಂದು ಆಶೀರ್ವದಿಸಿ ಹೊರಟೇಬಿಟ್ಟರು. ಆ ಘಟನೆ ನನ್ನ ಹೃದಯವನ್ನು ಸ್ಪರ್ಶಿಸಿತು. ವೈದ್ಯತ್ವದ ಅತ್ಯಂತ ಗಂಭೀರವಾದ ಪಾಠವನ್ನು ಆ ತಾಯಿ ನನಗೆ ಉಪದೇಶಿಸಿ ಹೋಗಿದ್ದರು. ವೈದ್ಯರೆಂದರೆ ಹೀಗಿರಬೇಕಪ್ಪ ಎಂಬ ಮಾದರಿಯನ್ನು ನಾಲ್ಕು ಜನರ ಬಳಿ ಹಂಚಿಕೊಂಡು ಅವರು ಆನಂದ ಪಡುತ್ತಿದ್ದ ದೃಶ್ಯ ಮನಸ್ಸು ಮುಟ್ಟಿತು.

ಸ್ನೇಹಿತರೇ, ರೋಗಿಗಳ ಕಾಯಿಲೆಗಳನ್ನು ಮತ್ತು ನೋವನ್ನು ಶಮನ ಮಾಡುವವ 'ವೈದ್ಯ'. ಅವನು ಲೋಕಕ್ಕೆ ನೀತಿಯನ್ನು ಬೋಧಿಸುತ್ತಾನೆ. ಅಂತೆಯೇ, ಸ್ವತಃ ತಾನು ವೈದ್ಯನಾಗಿ ಹೇಗಿರಬೇಕು ಎಂಬುದು ಮುಖ್ಯ ವಿಷಯ, ಅಲ್ಲವೇ? ನಮ್ಮ ಸನಾತನ ಪರಂಪರೆಯು ಒಬ್ಬ ವೈದ್ಯ ಹೇಗಿರಬೇಕು ಎಂಬ ಪ್ರಶ್ನೆಗೆ 'ಆದಿದೇವ ಧನ್ವಂತರಿ' ಮತ್ತು 'ಅಶ್ವಿನಿ ದೇವತೆ'ಗಳ ಆದರ್ಶವನ್ನು ನಮ್ಮ ಮುಂದಿಟ್ಟಿದೆ. ಧನ್ವಂತರಿಯು ವಿಷ್ಣು ಸ್ವರೂಪಿಯಾದರೆ, ಅಶ್ವಿನಿ ದೇವತೆಗಳು ದೇವ ವೈದ್ಯರು. ತ್ರಿಲೋಕದಲ್ಲೂ ಸಂಚರಿಸಿ ಚಿಕಿತ್ಸೆ ನೀಡುವ ಮಾದರಿ ವೈದ್ಯರು. ಇಂಥ ದೈವಿಕ ಪರಂಪರೆಯಿಂದ ಬಂದ ಒಬ್ಬ ವೈದ್ಯನ ನಡೆ-ನುಡಿ ಹೇಗಿರಬೇಕು? ಇದರ ಕುರಿತು ಆಯುರ್ವೇದದಲ್ಲಿ ಏನಿದೆ? ರೋಗಿ ಬಂದಾಗ ತಪಾಸಣೆ ಮಾಡಿ ಕೇವಲ ಔಷಧಿಗಳನ್ನ ನೀಡುವುದಷ್ಟೇ ಕರ್ತವ್ಯವೇ? ವೈದ್ಯನ ಗುಣ-ಧರ್ಮಗಳೇನು? ಎಂಬ ವಿಷಯವನ್ನು ಇಂದಿನ ಈ ಸಂಚಿಕೆಯಲ್ಲಿ ನೀವು ಕಾಣಬಹುದು. ಈ ವಿಷಯವನ್ನು ಆಯ್ದುಕೊಳ್ಳಲು ಒಂದು ವಿಶೇಷ ಕಾರಣವಿದೆ– ಜುಲೈ 1 ವೈದ್ಯರ ದಿನಾಚರಣೆ. ಅಂದು ಹಲವಾರು ವೈದ್ಯರನ್ನು ಸನ್ಮಾನಿಸಿ ವಿವಿಧ ರೀತಿಯ ಪ್ರಶಸ್ತಿಗಳನ್ನು ನೀಡಿರುವುದನ್ನು ಕಂಡಿದ್ದೇವೆ. ಹಾಗಾಗಿ, ಯಾವ ರೀತಿಯ ವೈದ್ಯರು ನಮ್ಮ ಈ ಅಭಿಮಾನಕ್ಕೆ ಮತ್ತು ಗೌರವಕ್ಕೆ ಅರ್ಹರು ಎಂದು ತಿಳಿದುಕೊಳ್ಳಲೇಬೇಕು!

ಆಯುರ್ವೇದವೆಂದರೆ ಕೇವಲ ವೈದ್ಯಕೀಯ ಪದ್ಧತಿಯಲ್ಲ. ಇದು ಜೀವವಿಜ್ಞಾನ. ಅತ್ಯುತ್ತಮವಾದ ಬದುಕನ್ನು ನಡೆಸಲು ಕಲಿಸುವ ಒಂದು ಬೆಳಕು. ಈ ಆರ್ಷವಿಜ್ಞಾನದಲ್ಲಿ ಇಲ್ಲದ ವಿಷಯವೇ ಇಲ್ಲ ಎಂದರೆ ತಪ್ಪಾಗದು. ಅಂತೆಯೇ, ವೈದ್ಯರ ಗುಣ-ಧರ್ಮಗಳ ಬಗ್ಗೆಯೂ ಇದರಲ್ಲಿ ನಿರ್ದೇಶನವನ್ನು ಕಾಣಬಹುದು. ಚಿಕಿತ್ಸೆಯು ಗುಣಕಾರಿ ಆಗಬೇಕಾದರೆ ವೈದ್ಯ, ಔಷಧ, ಪರಿಚಾರಕ ಮತ್ತು ರೋಗಿ– ಈ ನಾಲ್ಕು ಅಂಶಗಳು ಮುಖ್ಯ. ಅದರಲ್ಲೂ ವೈದ್ಯನ ಪಾತ್ರ ಅಪಾರವಾದದ್ದು. ವೈದ್ಯ ಗ್ರಂಥಗಳಲ್ಲಿ ವಿವರಿಸಿರುವ ವೈದ್ಯನ ಕುರಿತಾದ ಹಲವಾರು ವಿಷಯಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ತಿಳಿಸುತ್ತಿದ್ದೇನೆ.

ಒಬ್ಬ ವೈದ್ಯ ಸದಾ ಉತ್ತಮ ನಡತೆ ಉಳ್ಳವನಾಗಿರಬೇಕು. ಅವನ ಶುಚಿತ್ವ ಮತ್ತು ಪಾವಿತ್ರ್ಯ ಬಹಳ ಮುಖ್ಯ. ಈ ಬಗ್ಗೆ ಆಯುರ್ವೇದದಲ್ಲಿ ಹೀಗೆ ಹೇಳಲಾಗಿದೆ: ಶಸ್ತ್ರಂ ಶಾಸ್ತ್ರಾಣಿ ಸಲಿಲಂ ಗುಣದೋಷ ಪ್ರವೃತ್ತಯೇ । ಪಾತ್ರಾಪೇಕ್ಷಿಣೀ ಅತಃ ಪ್ರಜ್ಞಾಂ ಚಿಕಿತ್ಸಾರ್ಥಂ ವಿಶೋಧಯೇತ್ ॥ (ಚ-ಸೂ-9/20). ಅಂದರೆ, ಶಸ್ತ್ರ, ಶಾಸ್ತ್ರ ಹಾಗೂ ನೀರು– ಈ ಮೂರೂ ಪಾತ್ರವನ್ನು ಅನುಸರಿಸಿ ಗುಣ ಅಥವಾ ದೋಷಗಳಾಗಿ ಪರಿವರ್ತಿತವಾಗುತ್ತವೆ. ಗಂಗೆಯಂಥ ಪವಿತ್ರವಾದ ನೀರನ್ನು ತಂದುಬಿಟ್ಟರೆ ಏನು? ತರುವ ಪಾತ್ರೆಯು ಕೊಳಕಾಗಿದ್ದರೆ ಆ ಶುದ್ಧವಾದ ನೀರೆಲ್ಲ ಅಶುದ್ಧವಾಗಿ ವ್ಯರ್ಥವಾಗುವುದು. ಹಾಗಾಗಿ, ವೈದ್ಯನು ತಾನು ನೀಡುವ ಚಿಕಿತ್ಸೆಯು ಉತ್ತಮ ಫಲಿತಾಂಶವನ್ನು ನೀಡಬೇಕೆಂದರೆ ತನ್ನ ನಡತೆಯನ್ನು ಸದಾ ಶುದ್ಧಿಗೊಳಿಸಿಕೊಳ್ಳುವ ಪ್ರಯತ್ನವನ್ನು ಮಾಡಿ ಉತ್ತಮ ವೈದ್ಯನಾಗಲು ಯೋಗ್ಯತೆಯನ್ನು ಹೆಚ್ಚಿಸಿಕೊಳ್ಳಬೇಕು. ಒಬ್ಬ ವೈದ್ಯನು ಕಾಯಾ, ವಾಚಾ, ಮನಸಾ ಶುಭ್ರವಾಗಿದ್ದು ಪವಿತ್ರ ಚಾರಿತ್ರ್ಯವುಳ್ಳ ವ್ಯಕ್ತಿಯಾಗಿರಬೇಕು. ಅತ್ಯುನ್ನತ ಮಟ್ಟದ ಶಾಸ್ತ್ರ ಅಧ್ಯಯನವನ್ನು ಮಾಡಿರಬೇಕು. ಉತ್ತಮ ವೈದ್ಯನು ಒಬ್ಬ ಉತ್ತಮ ಗುರುವಿನಿಂದಲೇ ಶಾಸ್ತ್ರದ ಶಿಕ್ಷಣವನ್ನು ಪಡೆದು ಕಲಿತ ಜ್ಞಾನವನ್ನು ಪುನಃ ಪುನಃ ಅಧ್ಯಯನ ಮಾಡಿ, ಶಾಸ್ತ್ರ ಅರ್ಥವನ್ನು ಆಳವಾಗಿ ತಿಳಿದಿರಬೇಕು. ಕರ್ಮಾಭ್ಯಾಸ ಅತ್ಯವಶ್ಯಕ. ಅಡುಗೆ ಮಾಡುವ ಬಗ್ಗೆ ಎಷ್ಟು ಪುಸ್ತಕ ಜ್ಞಾನವಿದ್ದರೇನು? ಅಡುಗೆ ಮಾಡಲು ನಿಂತಾಗಲೇ ಅದರ ಅಡ್ಡಿ-ಆತಂಕಗಳನ್ನು ಪರಿಹರಿಸಿಕೊಳ್ಳುವ ಬಗ್ಗೆ ಪ್ರತ್ಯಕ್ಷ ಜ್ಞಾನ ಸಿಗುತ್ತದೆ. ಅಂತೆಯೇ, ಉನ್ನತ ಶಾಸ್ತ್ರ ಜ್ಞಾನವನ್ನು ಪಡೆದ ವೈದ್ಯನು ಗುರುವಿನ ಮಾರ್ಗದರ್ಶನದಲ್ಲಿ ಸತತವಾಗಿ ಅದನ್ನು ಅಭ್ಯಾಸ ಮಾಡಿ ಅದರ ಪ್ರಾಯೋಗಿಕ ನೈಪುಣ್ಯವನ್ನು ಗಳಿಸಿರಬೇಕು. ಆಯುರ್ವೇದದಲ್ಲಿ ಹೀಗೆ ಹೇಳಿದ್ದಾರೆ– 'ಹೇಗೆ ಕುರುಡನಾದ ವ್ಯಕ್ತಿಯು ಓಡಾಡುವಾಗ ದಾರಿ ಕಾಣದೆ ತನ್ನ ಕೋಲು ಮತ್ತು ಕೈಕಾಲುಗಳನ್ನು ಆಚೆ ಈಚೆ ಬೀಸುತ್ತಾ ಭಯಭೀತನಾಗಿರುತ್ತಾನೋ, ಹಾಗೆಯೇ ಪ್ರತ್ಯಕ್ಷ ಅನುಭವವಿಲ್ಲದ ವೈದ್ಯನು ಚಿಕಿತ್ಸೆ ಕೊಡಲು ಆತ್ಮವಿಶ್ವಾಸವಿಲ್ಲದೆ ಹೆದರುತ್ತಾನೆ' ಅಂತ.

ಒಬ್ಬ ವೈದ್ಯನು ಇತರ ವೈದ್ಯರೊಂದಿಗೆ ಸದಾ ಶಾಸ್ತ್ರದ ಚರ್ಚೆಯನ್ನು ಮಾಡಬೇಕು, ಇದು ಜ್ಞಾನ ಕಾರಕ ಹಾಗೂ ತನ್ನ ತಪ್ಪನ್ನು ತಿದ್ದಿಕೊಳ್ಳಲು ಸಹಾಯಕ. ಕಾರ್ಯ ದಕ್ಷತೆ ಒಬ್ಬ ವೈದ್ಯನಿಗಿರಬೇಕಾದ ಪ್ರಮುಖ ಗುಣ. ಯಾವುದೇ ಕೆಲಸವನ್ನು ಶ್ರೇಷ್ಠ ರೀತಿಯಲ್ಲಿ, ಶಿಸ್ತುಬದ್ಧವಾಗಿ ಸಮಯಕ್ಕೆ ಸರಿಯಾಗಿ ಸೌಹಾರ್ದಯುತವಾಗಿ ಚತುರತೆಯಿಂದ ತನ್ಮಯನಾಗಿ ಮಾಡುವ ಗುಣವೇ ದಕ್ಷತೆ. ರೋಗಿಯ ಪರೀಕ್ಷೆಯನ್ನು ಸರಿಯಾದ ರೀತಿಯಲ್ಲಿ ಮಾಡಿ, ಸಾಧ್ಯಾಸಾಧ್ಯತೆಯನ್ನು ಚೆನ್ನಾಗಿ ಅರಿತು ಚಿಕಿತ್ಸೆ ಮಾಡಬೇಕು. ಒಬ್ಬ ವೈದ್ಯನು ರೋಗಿಯ ದೇಹಬಲ, ಸತ್ವ, ಪ್ರಕೃತಿ, ದೋಷಗಳ ಅವಸ್ಥೆ, ಪ್ರಮಾಣ ಇತ್ಯಾದಿಗಳನ್ನು ಚೆನ್ನಾಗಿ ಅರಿತ ನಂತರ ಸಾಧ್ಯವೇ ಎಂದು ನಿರ್ಧರಿಸಿ ನಂತರವೇ ಚಿಕಿತ್ಸೆ ಮಾಡತಕ್ಕದ್ದು. ಶಾಸ್ತ್ರಗಳು ಹೇಳುವ ಪ್ರಕಾರ ಅಸಾಧ್ಯ ವ್ಯಾಧಿಗಳಿಗೆ ಚಿಕಿತ್ಸೆ ಮಾಡಬಾರದು. ಮಾಡಿದರೆ ಅರ್ಥ, ವಿದ್ಯಾ ಮತ್ತು ಯಶಸ್ಸುಗಳ ಹಾನಿ ಉಂಟಾಗಬಹುದು.

'ನಾರ್ಥಾರ್ಥಂ ನಾಪಿ ಕಾಮಾರ್ಥಂ ಅಥ ಭೂತದಯಾಂ ಪ್ರತಿ' ಅಂದರೆ ದಯೆಯೇ ಚಿಕಿತ್ಸೆಯಲ್ಲಿ ಪ್ರಧಾನವಾಗಿರಬೇಕು. ಒಬ್ಬ ವೈದ್ಯನು ಚಿಕಿತ್ಸೆಯನ್ನು ಯಾವುದೇ ಸ್ವಾರ್ಥ, ಪ್ರತಿಫಲಗಳ ಆಸೆ, ಅರ್ಥಕ್ಕಾಗಲಿ ಅಥವಾ ಕಾಮಕ್ಕಾಗಲಿ ಮಾಡಬಾರದು. ಬದಲಿಗೆ ಕೇವಲ ದಯೆಯಿಂದ ಸಮಸ್ತ ಜೀವಿಗಳ ಸುಖಕ್ಕಾಗಿಯೇ ಚಿಕಿತ್ಸೆಯನ್ನು ಮಾಡಬೇಕು. ಇಂಥ ಚಿಕಿತ್ಸೆಯನ್ನು ನೀಡಿದಾಗ ತಾನಾಗಿಯೇ ಬಂದ ಫಲವನ್ನು ಪಡೆಯಬಹುದೇ ಹೊರತಾಗಿ, ಧನಕ್ಕಾಗಿಯೇ ವಿಶೇಷ ಪ್ರವೃತ್ತಿ-ಪ್ರಯತ್ನವನ್ನುಮಾಡಬಾರದು. ಬಡವ ಬಲ್ಲಿದರನ್ನು ಸಮಾನ ರೀತಿಯಿಂದ ಚಿಕಿತ್ಸೆ ಮಾಡಬೇಕು. ಇದನ್ನು ಗುಣ ಮಾಡಿಯೇ ಮಾಡುತ್ತೇನೆ ಎಂದು ಹೇಳಬಾರದು. ಚಿಕಿತ್ಸೆಯ ಫಲಕ್ಕೆ ಕಾರಣ ಅನೇಕ. ನೀಡಿದ ಚಿಕಿತ್ಸೆಯು ಕೆಲವೊಮ್ಮೆ ಔಷಧೀಯ ದೋಷದಿಂದ, ಕೆಲವೊಮ್ಮೆ ರೋಗಿಯ ಅಜಾಗರೂಕತೆಯಿಂದ, ಕಾಲದೋಷದಿಂದ ವಿಫಲವಾಗಬಹುದು. ಆದ್ದರಿಂದ, 'ನಾನು ಇದನ್ನು ಗುಣಪಡಿಸಿಯೇ ತೀರುತ್ತೇನೆ' ಎಂಬ ಅಹಂಕಾರದ ಮಾತುಗಳು ಸಲ್ಲದು.

ಮರಣಾಸನ್ನ ರೋಗಿಯ ಸೂಚನೆಯನ್ನು ಒಬ್ಬ ವೈದ್ಯನು ತಿಳಿದರೂ ಅದನ್ನು ಹೇಳಬಾರದು. ಹೇಳಲೇಬೇಕಾದ ಪ್ರಸಂಗ ಬಂದಲ್ಲಿ ಅದು ದೈವೇಚ್ಛೆ ಇದ್ದರೆ ಬದಲಾಗಬಹುದು ಎಂದು ಹೇಳಬೇಕಾಗುತ್ತದೆ. ಒಂದು ರೋಗವನ್ನು ಕಡಿಮೆ ಮಾಡಿ ಇನ್ನೊಂದು ರೋಗವನ್ನು ಉಂಟುಮಾಡುವುದು ಚಿಕಿತ್ಸೆಯಲ್ಲ. ಶರೀರದ ಯಾವ ಅವಯವಕ್ಕೂ ಹಾನಿ ಮಾಡದೆ ರೋಗಕಾರಣವನ್ನು ಹೊರಹಾಕಿ ಗುಣ ಮಾಡುವುದೇ ಸರಿಯಾದ ಚಿಕಿತ್ಸೆ. ಚಿಕಿತ್ಸೆ ಮಾಡುವಾಗ ಬೇರೆ ರೀತಿಯ ತೊಂದರೆಗಳು ಉದ್ಭವಿಸಿದರೆ ಅದು ವೈದ್ಯನ ತಪ್ಪೇ ಆಗುತ್ತದೆ.

ಒಬ್ಬ ವೈದ್ಯನು ಪ್ರತಿನಿತ್ಯವೂ ತಾನು ಮಾಡಿದ ಚಿಕಿತ್ಸೆಯನ್ನು ಪುನರವಲೋಕನ ಮಾಡಬೇಕು. ಪುನರವಲೋಕನವು ಜ್ಞಾನದ ಸ್ಥಿರತೆಗೆ ಕಾರಣವಾಗುತ್ತದೆ. ಪ್ರತಿನಿತ್ಯ ಆದ ಅನುಭವ, ಕಲಿತ ಹೊಸಪಾಠ, ಮಾಡಿದ ಚಿಕಿತ್ಸೆ, ತಪ್ಪು-ಒಪ್ಪುಗಳನ್ನು ಸ್ಮರಿಸಿ ತಿದ್ದಿಕೊಳ್ಳುವುದು ವೈದ್ಯನಿಗಿರಬೇಕಾದ ಅವಶ್ಯಕ ಗುಣ. ಎಲ್ಲ ಜೀವಿಗಳ ಮೇಲೆ ಸಹಜವಾದ ಕರುಣೆ, ಮೈತ್ರೀ, ತ್ಯಾಗ, ಇಂದ್ರಿಯನಿಗ್ರಹ, ವಾಕ್ ಶುದ್ಧಿ, ಶರೀರ ಸಾಮ್ಯತೆ, ಎಲ್ಲರನ್ನೂ ತನ್ನಂತೆಯೇ ಕಾಣುವುದು– ಇಂಥ ಸದ್ಗುಣಗಳ ಆಗರವಾಗಿರಬೇಕು ಒಬ್ಬ ವೈದ್ಯ.

ಇದು ಒಬ್ಬ ವೈದ್ಯನ ಪ್ರಾರ್ಥನೆಯಾಗಿರಬೇಕು: ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ । ಅಯಂ ಮೇ ವಿಶ್ವಭೇಷಜೋಯಂ ಶಿವಾಭಿಮರ್ಶನಃ. ಅಂದರೆ– ಆ ನನ್ನ ಹಸ್ತ ಭಗವದನುಗ್ರಹದಿಂದ ಎಲ್ಲರಿಗೂ ಹಿತವನ್ನುಂಟು ಮಾಡುವ ವಿಶ್ವಭೇಷಜವಾಗಲಿ ಎಂಬ ಸವಿನಯ ಪ್ರಾರ್ಥನೆ ಅವಶ್ಯಕ. ಎಲ್ಲರನ್ನು ಗುಣಪಡಿಸುವಂಥ ಕಳಕಳಿಯುಳ್ಳ ಈ ನಿತ್ಯ ಪ್ರಾರ್ಥನೆಯೇ ಒಬ್ಬ ವೈದ್ಯನನ್ನು ದೇವವೈದ್ಯನನ್ನಾಗಿಸಲು ಸಾಧ್ಯ!

ಒಟ್ಟಾರೆ ಸ್ನೇಹಿತರೆ, ವೈದ್ಯವೃತ್ತಿಯು ಒಬ್ಬ ವೈದ್ಯನಿಗೆ ಚಿನ್ನವನ್ನು ಬೆಂಕಿಯಲ್ಲಿ ಶುದ್ಧಿಮಾಡುವ ತಪಸ್ಸಿನ ಹಾಗೆ. ನಿತ್ಯವೂ ಅವನ ಆಂತರ್ಯದ ವಿಕಸನ ಮತ್ತು ಶುದ್ಧಿಯೇ ಅವನ ಅನುಷ್ಠಾನ! ಒಬ್ಬ ವೈದ್ಯನ ನಡತೆ ಕೇವಲ ಔಷಧೋಪಚಾರಗಳನ್ನು ಬರೆಯಲಷ್ಟೇ ಸೀಮಿತವಾಗಬಾರದು. ಬದಲಿಗೆ ಅವನ ಅಂತರಾಳವು ಮೇಲೆ ಹೇಳಿದ ಸದ್ಗುಣಗಳ ಸಮುದ್ರವಾಗಬೇಕು. ದಯೆ ಮತ್ತು ಸೇವೆಯೆಂಬ ರಜ್ಜುವಿನಿಂದ ಈ ಸಮುದ್ರವನ್ನು ಮಥಿಸಿದಾಗ ಮಾತ್ರ ಹೊರಹೊಮ್ಮುವುದು ನಿಜವಾದ ಅಮೃತ. ಆ ಅಮೃತದಿಂದ ಮಾತ್ರ ಸಾಧ್ಯ ವ್ಯಾಧಿನೋವುಗಳ ಸಂಪೂರ್ಣ ಶಮನ! ಹಾಗೆ ಮಾಡಿದ ವೈದ್ಯನಾಗುವನು 'ವೈದ್ಯೋ ನಾರಾಯಣೋ ಹರಿಃ'...

ಮಾರ್ಗದರ್ಶಿ
ರವೀ ಸಜಂಗದ್ದೆ

ಸುರಂಗಮಾರ್ಗ ಯೋಜನೆಯ ಸಾಧಕ-ಬಾಧಕಗಳು

ಒಂದು ಕಾಲದಲ್ಲಿ (1990-2000), ಜಯನಗರದಿಂದ ದೀಪಾಂಜಲಿ ನಗರದವರೆಗೆ, ಯಶವಂತಪುರದಿಂದ ರಾಜಾಜಿನಗರದ ಮೂಲಕ ಬಸವೇಶ್ವರ ನಗರದವರೆಗೆ, ಇಂದಿರಾನಗರದಿಂದ ಬಸವನಗುಡಿಯವರೆಗಿನ ಭಾಗವಷ್ಟೇ ಬೆಂಗಳೂರು ನಗರ ಎನಿಸಿಕೊಂಡಿತ್ತು. 2000ನೇ ಇಸವಿಯ ನಂತರ, ಮಾಹಿತಿ ತಂತ್ರಜ್ಞಾನ (ಐಟಿ) ವಲಯವು ಪ್ರವರ್ಧಮಾನಕ್ಕೆ ಬರುತ್ತಿದ್ದಂತೆ ಬೆಂಗಳೂರಿನಲ್ಲಿ ಹಲವು ಐಟಿ ಕಂಪನಿಗಳು ಕಾರ್ಯಾರಂಭ ಮಾಡಿದವು. ಜತೆಗೆ ಐಟಿ ಸಂಬಂಧಿತ ಸೇವಾಕಂಪನಿಗಳು ಇಲ್ಲಿ ತಮ್ಮ ಶಾಖೆಗಳನ್ನು ತೆರೆದವು. ಭಾರತ ಅದಾಗಲೇ ಜಾಗತೀಕರಣದ ಬದಲಾವಣೆಗಳಿಗೆ ಒಗ್ಗಿಕೊಂಡಿತ್ತು. ಬೆಂಗಳೂರು ಕೂಡ ವ್ಯಾಪಕವಾಗಿ ಬೆಳೆಯುವ ಮುನ್ಸೂಚನೆಯನ್ನು ನೀಡಿದ್ದರಿಂದ, ಎಸ್.ಎಂ.ಕೃಷ್ಣ ನೇತೃತ್ವದ ಆಗಿನ ಸರಕಾರವು 'ಬ್ರ್ಯಾಂಡ್ ಬೆಂಗಳೂರು' ಎಂಬ ಪ್ರಸಿದ್ಧಿ ತರಿಸುವ ಸದುದ್ದೇಶದಿಂದ ಹಲವಾರು ಯೋಜನೆಗಳನ್ನು ರೂಪಿಸಿತು.

ಇದರ ಪರಿಣಾಮವಾಗಿ 'ಪೆರಿಫೆರಲ್ ರಿಂಗ್‌ರಸ್ತೆ' ಬಂತು, 'ಹೊರವರ್ತುಲ ರಸ್ತೆ' ರೂಪಿತವಾಯಿತು, 'ನೈಸ್ ರಸ್ತೆ' ಜನರ ಸುಗಮ ಸಂಚಾರಕ್ಕೆ ಅನುವುಮಾಡಿಕೊಟ್ಟಿತು. ಐಟಿ ಕಾರಿಡಾರ್ ಎನಿಸಿರುವ ಇಲೆಕ್ಟ್ರಾನಿಕ್ ಸಿಟಿಗೆ 'ಷಟ್ಪಥ ರಸ್ತೆ'ಯನ್ನು ಅಭಿವೃದ್ಧಿಪಡಿಸಲಾಯಿತು. ಅದೂ ಸಾಲದಾದಾಗ 'ಎಲಿವೇಟೆಡ್ ಫ್ಲೈಓವರ್' ಬಂತು. ಗೊರಗುಂಟೆಪಾಳ್ಯದಿಂದ ನೆಲಮಂಗಲದೆಡೆಗಿನ ಸಂಚಾರ ಸುಗಮವಾಗಲು ಕಿ.ಮೀ. ಉದ್ದದ ಫ್ಲೈ ಓವರ್ ನಿರ್ಮಾಣವಾಯಿತು. ಅಂಡರ್‌ಪಾಸ್‌ಗಳು, ಫ್ಲೈಓವರ್‌ಗಳು ಎಲ್ಲೆಂದರಲ್ಲಿ ರೂಪುಗೊಂಡವು. ಬಹು ನಿರೀಕ್ಷಿತ 'ನಮ್ಮ ಮೆಟ್ರೋ' ರೈಲು ಯೋಜನೆಯೂ ಬಂತು. ಅದರ ವಿವಿಧ ಹಂತಗಳ ಕಾಮಗಾರಿಗಳು ಇನ್ನೂ ಕುಂಟುತ್ತಾ ಸಾಗುತ್ತಿವೆ. ಆದರೆ, ಯಾರೂ ನಿರೀಕ್ಷಿಸದ ರೀತಿಯಲ್ಲಿ ಬೆಂಗಳೂರು ಬೆಳೆಯುತ್ತಿದ್ದರೂ, ಯೋಜಿತ ಮೂಲ ಸೌಕರ್ಯ ವ್ಯವಸ್ಥೆಯು ಯಾವುದೇ ಪಕ್ಷದ ಸರಕಾರದ ಅವಧಿಯಲ್ಲೂ ನಿರೀಕ್ಷಿತ ವೇಗ ಪಡೆಯಲೇ ಇಲ್ಲ ಎಂಬುದು ಕಹಿಸತ್ಯ. ಏಕೆಂದರೆ, ಟ್ರಾಫಿಕ್ ಸಮಸ್ಯೆ ದಿನೇದಿನೆ ವರ್ಧಿಸಿತು. ಆಧುನಿಕ ತಂತ್ರಜ್ಞಾನವನ್ನು ಬಳಸಿ ಟ್ರಾಫಿಕ್ ಸಿಗ್ನಲ್ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಲಾಯಿತಾದರೂ, ನಿತ್ಯ ಸವಾರರಿಗೆ ಇದರಿಂದ ಹೇಳಿಕೊಳ್ಳುವಂಥ ಪ್ರಯೋಜನವೇನೂ ಆಗಿಲ್ಲ. ಮಳೆ ಬಂದರಂತೂ ಬೆಂಗಳೂರು ವಾಸ ದೇವರಿಗೇ ಪ್ರೀತಿ! 'ಎರಡು ಪ್ರದೇಶಗಳ ನಡುವಿನ ಅಂತರವನ್ನು ಸಮಯದ ಆಧಾರದಲ್ಲಿ ಅಳೆಯುವ' ಕುಖ್ಯಾತಿಯನ್ನು ಈ ಟ್ರಾಫಿಕ್ ಸಮಸ್ಯೆಯು ಬೆಂಗಳೂರಿಗೆ ತಂದುಕೊಟ್ಟಿತು!

ಇವೆಲ್ಲದರ ನಡುವೆ, ಬೆಂಗಳೂರಿನ ಟ್ರಾಫಿಕ್ ದಟ್ಟಣೆಗೆ ಹೊಸ ಪರಿಹಾರೋಪಾಯವಾಗಿ ಎರಡು ಸುರಂಗ ರಸ್ತೆಗಳನ್ನು ನಿರ್ಮಿಸಲು ಸರಕಾರ ಸಜ್ಜಾಗಿದೆ. ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್‌ವರೆಗಿನ ಸುಮಾರು 17 ಕಿ.ಮೀ. ಉದ್ದದ 'ಉತ್ತರ-ದಕ್ಷಿಣ ಸುರಂಗ' ಮತ್ತು ಕೆ.ಆರ್.ಪುರಂನಿಂದ ನಾಯಂಡಹಳ್ಳಿವರೆಗಿನ 28 ಕಿ.ಮೀ. ಉದ್ದದ 'ಪೂರ್ವ-ಪಶ್ಚಿಮ ಸುರಂಗ' ಇದರಲ್ಲಿ ಸೇರಿವೆ. ಒಟ್ಟು 42,000 ಕೋಟಿ ರು.ನಷ್ಟು ವೆಚ್ಚದ ಬೃಹತ್ ಯೋಜನೆ ಇದಾಗಿದ್ದು, ಜಾಗತಿಕ ಟೆಂಡರ್ ಕರೆಯಲು ಸರಕಾರ ಸಿದ್ಧತೆ ನಡೆಸುತ್ತಿದೆ. ಈ ಯೋಜನೆಯ ಸಾಧಕ-ಬಾಧಕಗಳ ಕುರಿತು ಒಂದಿಷ್ಟು ಅವಲೋಕಿಸೋಣ.

ಯೋಜನೆಯ ಮೊದಲ ಹಂತದಲ್ಲಿ ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗಮಾರ್ಗದ ನಿರ್ಮಾಣಕ್ಕೆ ಸಿದ್ಧತೆಗಳು ಭರದಿಂದ ಸಾಗಿವೆ. ಈಗಿನ ಯೋಜನಾ ವರದಿಯ ಪ್ರಕಾರ, ಈ ಯೋಜನೆಗೆ 19,000 ಕೋಟಿ ರು. ವೆಚ್ಚ ತಗುಲಲಿದೆ. ಈ ಹಿಂದಿನ ಇಂಥ ಯೋಜನೆಗಳ ಅಂಕಿ-ಅಂಶಗಳನ್ನು ನೋಡಿದಾಗ, ಈ ಯೋಜನೆ ಪೂರ್ಣಗೊಳ್ಳುವಾಗ ವೆಚ್ಚವು ಮೂಲ ಯೋಜನಾ ಮೊತ್ತಕ್ಕಿಂತ ಹಲವು ಪಟ್ಟು ಏರುವುದರಲ್ಲಿ ಸಂಶಯವೇ ಇಲ್ಲ. ಈ ವರ್ಷದ ಕೊನೆಯಲ್ಲಿ ಅಥವಾ ಮುಂದಿನ ವರ್ಷದ ಶುರುವಿನಲ್ಲಿ ಈ ಯೋಜನೆ ಶುರುವಾಗುವ ಮಾಹಿತಿಯಿದ್ದು, 2030ಕ್ಕೆ ಕೊನೆಗೊಳ್ಳುವ ನಿರೀಕ್ಷೆಯಿದೆ. ಇದು ಲೋಕಾರ್ಪಣೆಯಾದ ಬಳಿಕ ಹೆಬ್ಬಾಳ-ಸಿಲ್ಕ್‌ಬೋರ್ಡ್ ಮಾರ್ಗದಲ್ಲಿ ಸಂಚರಿಸುವವರಿಗೆ 45 ನಿಮಿಷಗಳಷ್ಟು ಅವಧಿ ಉಳಿಯಲಿದೆ ಎಂದು ಅಂದಾಜಿಸಲಾಗಿದೆ. ಹಾಗಾದಲ್ಲಿ ಅದು ಸ್ವಾಗತಾರ್ಹವೇ, ಸ್ತುತ್ಯರ್ಹವೇ! ಈ ಯೋಜನೆಗೆ ವಿನಿಯೋಗವಾಗುವ ಹಣವನ್ನು ಟೋಲ್ ಸಂಗ್ರಹದ ಮೂಲಕ ಮರಳಿ ಪಡೆಯುವ ಗುರಿಯಿದೆಯಂತೆ. ಈ ಮೊತ್ತವು ಸವಾರಿಗರಿಗೆ ಹೆಚ್ಚು ಹೊರೆಯಾಗದ ರೀತಿಯಲ್ಲಿರಲಿ, ತನ್ಮೂಲಕ ಈ ಮಾರ್ಗದಲ್ಲಿ ಹೆಚ್ಚೆಚ್ಚು ಜನರು ಸಂಚರಿಸುವಂತಾಗಲಿ ಎಂಬುದು ಸಹೃದಯಿಗಳ ಆಶಯ.

ಇನ್ನು, ಜನದಟ್ಟಣೆಯ ಬಡಾವಣೆಗಳು ಮತ್ತು ಗಗನಚುಂಬಿ ಕಟ್ಟಡಗಳು ಹೆಚ್ಚಿರುವ ಹೆಬ್ಬಾಳ, ಟಿನ್ ಫ್ಯಾಕ್ಟರಿ, ಮಹಾದೇವಪುರ, ಮಾರತ್‌ಹಳ್ಳಿ, ಸಿಲ್ಕ್ ಬೋರ್ಡ್ ಮುಂತಾದ ಪ್ರದೇಶಗಳಲ್ಲಿ ಹಾದುಹೋಗುವ ಈ ಸುರಂಗಮಾರ್ಗದ ನಿರ್ಮಾಣ ಸವಾಲಿನ ಕೆಲಸವೇ. ಈ ಭಾಗದಲ್ಲಿ ಪ್ರತಿದಿನ ಸಂಚರಿಸುವ ಎರಡೂವರೆ ಲಕ್ಷಕ್ಕೂ ಹೆಚ್ಚಿನ ಜನರ ನಿಭಾವಣೆ, ಕುಡಿಯುವ ನೀರಿನ ಪೈಪುಗಳು, ಒಳಚರಂಡಿ, ಕೇಬಲ್, ಗ್ಯಾಸ್‌ಲೈನ್ ಮುಂತಾದ ವ್ಯವಸ್ಥೆಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವಿಕೆ ಇವೆಲ್ಲವೂ ಈ ಸವಾಲುಗಳಲ್ಲಿ ಸೇರಿವೆ. ಜತೆಗೆ, ಸುರಂಗಮಾರ್ಗವನ್ನು ಕೊರೆಯುವಾಗ, ಮೇಲ್ಮೈಯಲ್ಲಿ ಇರುವ ಕಟ್ಟಡಗಳಿಗೆ ಹಾನಿಯಾಗದಂತೆ ಎಚ್ಚರ ವಹಿಸಬೇಕಿದೆ. ಲಭ್ಯ ಮಾಹಿತಿಗಳ ಪ್ರಕಾರ, ಈಗಿರುವ ಹೊರವರ್ತುಲ ರಸ್ತೆ ಹಾದುಹೋಗುವ 120 ಅಡಿಗಳಷ್ಟು ಕೆಳಗಿನಿಂದ ಸಮಾನಾಂತರವಾಗಿ ಈ ಸುರಂಗಮಾರ್ಗ ಹಾದುಹೋಗಲಿದೆ. ಹಾಗಿದ್ದಲ್ಲಿ, ಮಳೆನೀರು ಸುರಂಗಮಾರ್ಗದೊಳಗೆ ನುಸುಳದಂತಾಗಲು ಎರಡೂ ಬದಿಯಲ್ಲಿ ಜಲನಿರೋಧಕ ಗೋಡೆಯನ್ನು ನಿರ್ಮಿಸಬೇಕಾದ ಗುರುತರ ಜವಾಬ್ದಾರಿಯೂ ಇಲ್ಲಿದೆ. ಏಕೆಂದರೆ, ಬಹುತೇಕರಿಗೆ ಗೊತ್ತಿರುವಂತೆ ಮಹಾನಗರಿಯಲ್ಲಿ ಅರ್ಧಗಂಟೆ ಜೋರಾಗಿ ಮಳೆ ಬಂದರೆ, ಹೊರವರ್ತುಲ ರಸ್ತೆಯ ಎಲ್ಲೆಡೆ ನಾಲ್ಕೈದು ಅಡಿ ನೀರು ನಿಂತು ಇಡೀ ರಸ್ತೆಯೇ ಹೊಳೆಯಾಗಿಬಿಡುತ್ತದೆ. ಸುರಂಗಮಾರ್ಗದ ನಿರ್ಮಾತೃಗಳು ಈ ವಿಷಯವನ್ನು ಗಮನದಲ್ಲಿಟ್ಟುಕೊಂಡಿದ್ದರೆ ಒಳಿತು. ಬೆಟ್ಟ ಕೊರೆದು ಸುರಂಗಮಾರ್ಗ ನಿರ್ಮಿಸುವುದು ಬೇರೆ; ಹೆಚ್ಚು ಕಮ್ಮಿ ಸಮತಟ್ಟಾಗಿರುವ ಬೆಂಗಳೂರಿನ ಹೊರವರ್ತುಲ ರಸ್ತೆ ಪ್ರದೇಶದಲ್ಲಿ ಇಂಥ ಸಾಹಸಕ್ಕೆ ಮುಂದಾಗುವಾಗಿನ ಸವಾಲುಗಳೇ ವಿಭಿನ್ನ. ಕರಾವಳಿ ಭಾಗದಲ್ಲಿ 120 ಅಡಿ ಆಳದಲ್ಲಿ ಅಲ್ಲಲ್ಲಿ ನೀರಿನ ಮೂಲಗಳಿವೆ; ಮಹಾನಗರಿಯ ಈ ಸುರಂಗಮಾರ್ಗ ಹಾದುಹೋಗುವ ಹೆಬ್ಬಾಳ, ಟಿನ್ ಫ್ಯಾಕ್ಟರಿ, ಮಹಾದೇವಪುರ, ಸಿಲ್ಕ್ ಬೋರ್ಡ್ ಮುಂತಾದೆಡೆ ಕೆರೆಗಳಿದ್ದು, ಇವು ಕಾಮಗಾರಿಗೆ ಒಂದಷ್ಟು ಸವಾಲು ಒಡ್ಡಲಿವೆ. ಜತೆಗೆ ಅಷ್ಟು ಆಳಕ್ಕೆ ಬೇಕಾದ ಆಮ್ಲಜನಕದ ನಿರಂತರ ಪೂರೈಕೆಯೂ ಸುಲಭದ ತುತ್ತಲ್ಲ! ಆ ವಿಷಯದಲ್ಲಿ ಸಣ್ಣ ವ್ಯತ್ಯಾಸ ಬಂದರೂ ಅದು ದುಬಾರಿಯಾಗಿ ಪರಿಣಮಿಸಲಿದೆ.

ಲಭ್ಯ ಮಾಹಿತಿಯಂತೆ, ಬೆಂಗಳೂರಿನಲ್ಲಿ ಪ್ರತಿದಿನ ರಸ್ತೆಗಿಳಿಯುತ್ತಿರುವ ಹೊಸ ವಾಹನಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಸದರಿ ಸುರಂಗಮಾರ್ಗವು ಜನರ ಉಪಯೋಗಕ್ಕೆ ಲಭ್ಯವಾಗುವ ಹೊತ್ತಿಗೆ, ಈ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಗಬಹುದು. ಆದ್ದರಿಂದ, ಬೆಂಗಳೂರು ಒಂದನ್ನೇ ಗುರಿಯಾಗಿಟ್ಟುಕೊಳ್ಳುವ ಬದಲು, ರಾಜ್ಯದ ಇತರ ಪಟ್ಟಣ/ನಗರಗಳನ್ನೂ ಅಭಿವೃದ್ಧಿಪಡಿಸಿ, ಎಲ್ಲ ಹೊಸ ಉದ್ಯಮಗಳು/ಉತ್ಪಾದನಾ ಘಟಕಗಳು, ಕಚೇರಿಗಳು ಅಲ್ಲಿ ತೆರೆಯಲ್ಪಡುವಂತೆ ಉತ್ತೇಜಿಸುವ ದಿಸೆಯಲ್ಲಿ ಸರಕಾರ ಕಾರ್ಯಪ್ರವೃತ್ತವಾಗಬೇಕಾಗಿದೆ. ಹಾಗಾದಾಗ ಮಾತ್ರವೇ ಬೆಂಗಳೂರು ಮಹಾನಗರಿಯು ಒಂದಷ್ಟು ಸಮಸ್ಥಿತಿಯನ್ನು ಕಾಯ್ದುಕೊಂಡು, ಎಲ್ಲಾ ಆಯಾಮಗಳಿಂದ ಉತ್ತಮ ನಗರವಾಗಿ ಉಳಿದೀತು. ಇಲ್ಲವಾದಲ್ಲಿ, 'ಈ ನಗರ, ಹೆಚ್ಚಿನ ಸಮಸ್ಯೆಗಳ ಆಗರ' ಎಂಬ ಹಣೆಪಟ್ಟಿಯನ್ನು ಕಟ್ಟಿಸಿಕೊಳ್ಳಬೇಕಾದೀತು. ಅಂಥ ಪರಿಸ್ಥಿತಿಯಲ್ಲಿ ಸುರಂಗಮಾರ್ಗದಂಥ ಯೋಜನೆಗಳನ್ನು ಕೈಗೊಂಡರೂ, ಅದರಿಂದ ಸರಕಾರದ ಬೊಕ್ಕಸ ಖಾಲಿಯಾಗುತ್ತದೆ ಅಷ್ಟೇ. ಹೀಗಾಗಿ, ಆಳುಗರು ಅಭಿವೃದ್ಧಿಯ ವಿಷಯದಲ್ಲಿನ ಅಸಮಾನತೆಯನ್ನು ತೊಡೆದು ಎಲ್ಲ ಪ್ರದೇಶಗಳಿಗೂ ಆದ್ಯತೆ ನೀಡಿದಲ್ಲಿ ಹಾಗೂ ರಾಜಕೀಯ, ಸ್ವಹಿತಾಸಕ್ತಿ, ಸ್ವಜನ ಪಕ್ಷಪಾತ ನುಸುಳದಂತೆ ನೋಡಿಕೊಂಡಲ್ಲಿ ಒಳಿತು.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಅಭಿಮಾನ ಬಿಟ್ಟು ಹಾಡಿದಾಗಲೇ ದೇವರಿಗೆ ಕೇಳಿಸುವುದು

ಸನಾತನ ಹಿಂದೂ ಸಂಪ್ರದಾಯವನ್ನು ಜಗತ್ತಿನೆಲ್ಲೆಡೆ ಹರಡಲು ಪ್ರಯತ್ನಪಡುತ್ತಿರುವ ಕೆಲವೇ ಸಂಸ್ಥೆಗಳಲ್ಲಿ ಇಸ್ಕಾನ್ ಕೂಡ ಒಂದು. ಎಲ್ಲ ತೆರನಾದ ಹಿಂಜರಿಕೆಗಳನ್ನು ತೊರೆದು, ಅಭಿಮಾನ ಬಿಟ್ಟು ಜನನಿಬಿಡ ರಸ್ತೆಗಳಲ್ಲಿ 'ಹರೇ ಕೃಷ್ಣ' ಭಜನೆಯಲ್ಲಿ ಮಗ್ನರಾಗುವ 'ಇಸ್ಕಾನ್' ಭಕ್ತರ ತಂಡವನ್ನು ನಾವು ನೋಡಬಹುದು. ವಾರಕರಿಯಲ್ಲಿಯೂ ಇದೇ ರೀತಿ. ಇದು ಭಕ್ತಿಪಂಥಗಳ ವಿಶಿಷ್ಟತೆ.

ಅನುಸಂಧಾನ
ಜನಮೇಜಯ ಉಮರ್ಜಿ
vveditoped@gmail.com

ಕಾರ್ಪೊರೇಟ್ ಕಂಪನಿಯ ಮೀಟಿಂಗ್ ಒಂದಕ್ಕೆ ಹೋಗಿದ್ದೆ. ಅಲ್ಲಿಯ ಮುಖ್ಯಸ್ಥರು, ''ಪ್ರಾರ್ಥನೆಯ ಮೂಲಕ ಮೀಟಿಂಗ್ ಪ್ರಾರಂಭಿಸೋಣ'' ಎಂದಾಗ ಎಲ್ಲರೂ ಹುಬ್ಬೇರಿಸಿದರು. ಮುಂದುವರಿದ ಮುಖ್ಯಸ್ಥರು, ''ನಿಮ್ಮನ್ನು ಯಾರೂ ನೋಡುತ್ತಿಲ್ಲ ಎಂಬ ಭಾವದಲ್ಲಿ ಹಾಡಿ ಅಥವಾ ದೇವರಿಗೆ ಕೇಳಿಸುವಂತೆ ಹಾಡಿ'' ಎಂದರು. ಆದರೆ ಎಲ್ಲರಿಗೂ ಸಂಕೋಚವಿದ್ದುದರಿಂದ ಅವರೇ ಹಾಡಿಗೆ ಶುರುವಿಟ್ಟುಕೊಂಡರು. ನಂತರ ಶುರುವಾದ ಸರದಿ ಎರಡೆರಡು ಬಾರಿಯಾದರೂ ಹುಮ್ಮಸ್ಸು ಹೆಚ್ಚುತ್ತಿತ್ತು. ಒಂದೊಳ್ಳೆ ವಾತಾವರಣ ನಿರ್ಮಾಣವಾಗಿ ಇಡೀ ದಿನ ಸಕಾರಾತ್ಮಕವಾಗಿಯೇ ಇತ್ತು. ಭಜನೆಯು ಅಂತರಾತ್ಮಕ್ಕೆ ಆನಂದ ನೀಡುತ್ತದೆ. ಸಂಗೀತವೂ ಹಾಗೆಯೇ, ಒಳಗಿನ ಶ್ರೋತೃ ತಣಿದರೆ, ಹೊರಗಿನ ರಸಿಕರೂ ತಣಿದಾರು.

ಇಷ್ಟೆಲ್ಲಾ ನೆನಪಾಗಲಿಕ್ಕೂ ಕಾರಣವಿದೆ. ''ಇಸ್ಕಾನ್ ಮತವು ಯಾಕೆ ಸರಿಯಾದದ್ದು ಅಲ್ಲ'' ಎಂಬುದಾಗಿ ಬಾಂಬೆಯ ವಿದ್ವಾಂಸರೊಬ್ಬರು ಹೇಳಿದ್ದ ವಿಡಿಯೋ ಇತ್ತೀಚೆಗೆ ವೈರಲ್ ಆಗಿದೆ. ಈ ಹಿನ್ನೆಲೆಯಲ್ಲಿ ಪುರಂದರದಾಸರು ನೆನಪಾದರು. 'ನವಕೋಟಿ ನಾರಾಯಣ'ರೇ ಆಗಿದ್ದ ಅವರು, 'ಮಾಧವ, ಕೇಶವ' ಎನ್ನುವ ಮಧುಕರ ವೃತ್ತಿಯನ್ನು ನಾಚದೆ ಕೈಗೊಂಡರು. 'ರಾಮನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆಯ ಜತೆಗೆ ವಿಠಲನಾಮ ತುಪ್ಪ'ವ ಬೆರೆಸಿ ಹಂಚಿದವರು. 'ಮುತ್ತು ಬಂದಿದೆ ಕೊಳ್ಳಿರೋ' ಎಂದು ಬೀದಿಬೀದಿ ಅಲೆದು ಪ್ರಚಾರ ಮಾಡಿದರು. ಸೇನಾತುಕಡಿಯ ನಾಯಕರಾದ ಕನಕದಾಸರು ಮನವ ತಾಳಿಸಿಕೊಂಡು ತಲ್ಲಣಿಸದೇ, ಭವರೋಗಕ್ಕೆ ಔಷಧಿಯಾದ 'ಹರಿಭಕ್ತಿಸಾರ'ವನ್ನು ಓಣಿ ಓಣಿಗೆ ಹೋಗಿ ಸಾರಿದರು. 'ಮುಂದಕ್ಕೆ ಹೋಗೋ ದಾಸಯ್ಯ' ಎಂದರೂ ಅವಮಾನಪಡಲಿಲ್ಲ. ಇಸ್ಕಾನ್‌ನವರದೂ ಇದೇ ಪರಂಪರೆ. ಸನಾತನ ಹಿಂದೂ ಸಂಪ್ರದಾಯವನ್ನು ಜಗತ್ತಿನೆಲ್ಲೆಡೆ ಹರಡಲು ಪ್ರಯತ್ನಪಡುತ್ತಿರುವ ಕೆಲವೇ ಸಂಸ್ಥೆಗಳಲ್ಲಿ ಇಸ್ಕಾನ್ ಕೂಡ ಒಂದು. ಎಲ್ಲ ತೆರನಾದ ಹಿಂಜರಿಕೆಗಳನ್ನು ತೊರೆದು, ಅಭಿಮಾನ ಬಿಟ್ಟು ಜನನಿಬಿಡ ರಸ್ತೆಗಳಲ್ಲಿ 'ಹರೇ ಕೃಷ್ಣ' ಭಜನೆಯಲ್ಲಿ ಮಗ್ನರಾಗುವ 'ಇಸ್ಕಾನ್' ಭಕ್ತರ ತಂಡವನ್ನು ನಾವು ನೋಡಬಹುದು. ವಾರಕರಿಯಲ್ಲಿಯೂ ಇದೇ ರೀತಿ. ಇದು ಭಕ್ತಿಪಂಥಗಳ ವಿಶಿಷ್ಟತೆ. ಭಜನೆಯ ಗುರಿಯು ಮತಶಾಸ್ತ್ರಗಳ ವಿಜಯವಲ್ಲ, ಅದು ಅಧ್ಯಾತ್ಮವನ್ನು ಜನಸಾಮಾನ್ಯರವರೆಗೂ ಒಯ್ಯುವ ಪರಿ. ವೇದಿಕೆಯಿಂದ ಇಳಿದು, ಕಾಲಿಗೆ ಗೆಜ್ಜೆ ಕಟ್ಟಿ, ಕನಕ-ಪುರಂದರರಂತೆ ಒಂದು ಬಾರಿ ಸಂಕೀರ್ತನೆಗೆ ಬೀದಿಗಿಳಿದು, ಜ್ಞಾನ-ಭಕ್ತಿ-ವೈರಾಗ್ಯಗಳ ವಿಮರ್ಶೆಮಾಡಿ ಮಾತನಾಡಿದರೆ ಅದರ ತೂಕವೇ ಬೇರೆ. ಆದರೆ ನಾವೆಷ್ಟು ಮಂದಿ ಹೀಗೆ ಮಾಡಲು ತಯಾರಿದ್ದೇವೆ?

'ಶಿವಶರಣ' ಮತ್ತು 'ಹರಿದಾಸ' ಇವು ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಎರಡು ಭಕ್ತಿ ಪರಂಪರೆಗಳು. ಇವುಗಳ ಅನುಯಾಯಿಗಳು ತಮ್ಮನ್ನು ಕರೆದುಕೊಳ್ಳಲು ಬಳಸಿಕೊಂಡ 'ಶರಣ' ಮತ್ತು 'ದಾಸ' ಎಂಬ ಶಬ್ದಗಳು, ಸಮಾಜದ ಕಟ್ಟಕಡೆಯ ವ್ಯಕ್ತಿಯಾಗಿ ತಾವಿದ್ದುಕೊಂಡು, ಸಮಾಜದ ಮೂಲೆಮೂಲೆಗೂ ಭಗವತ್-ತತ್ವವನ್ನು ಕೊಂಡೊಯ್ಯುವ ಬದ್ಧತೆಯನ್ನು ತೋರಿದಂಥವು. 'ಭಕ್ತಿಯಿಲ್ಲದ ಬಡವ ನಾನು, ಎನಗಿಂತ ಕಿರಿಯರಿಲ್ಲ' ಎಂದು ಶರಣರು ಹೇಳಿದರೆ, 'ಬಾಗಿಲಲಿ ಬಿದ್ದಿಹ ಭಜಕನು ನಾನು' ಎಂದು ದಾಸರು ಹೇಳಿದ್ದಾರೆ. ದಾಸನಾಗುವುದು ಅಥವಾ ಶರಣನಾಗುವುದು ಎಂದರೆ ಭಗವಂತನಿಗೆ ತನ್ನನ್ನೇ ಅರ್ಪಿಸಿಕೊಳ್ಳುವುದು. ಸಂಪೂರ್ಣ ಶರಣಾಗತಿಭಾವ. ಆದರೆ, ಹೀಗೆ ಅಭಿಮಾನ ತೊರೆದು ಕಟ್ಟಕಡೆಯ ನೆಲೆಯನ್ನು ಮುಟ್ಟುವ 'ತಥಾಕಥಿತರು' ಈಗ ಯಾರಿದ್ದಾರೆ?

ದಾಸನಾಗಲು ಎಷ್ಟೊಂದು ಜನ್ಮದ ಸುಕೃತ ಬೇಕು. ''ಬಹೂನಾಂ ಜನ್ಮನಾಮಂತೇ ಜ್ಞಾನವಾನ್ ಮಾಂ ಪ್ರಪದ್ಯತೆ'' (ಭಗವದ್ಗೀತೆ 7.19)– ಅನೇಕ ಜನ್ಮಗಳ ನಂತರ ಜ್ಞಾನಿಯು ನನ್ನಲ್ಲಿ ಶರಣಾಗುತ್ತಾನೆ ಎಂದು ಭಗವದ್ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ. ಭಕ್ತಿಯ ಒಂದು ಶ್ರೇಷ್ಠ ರೂಪ– 'ದಾಸ್ಯಭಾವ'. ರಾವಣನ ಎದುರಿಗೆ ಹನುಮಂತ ತನ್ನನ್ನು ಪರಿಚಯ ಮಾಡಿಕೊಂಡದ್ದೇ 'ದಾಸೋಹಂ ಕೋಸಲೇಂದ್ರಸ್ಯ' ಎಂದು. 'ಪತ್ರಂ ಪುಷ್ಪಂ ಫಲಂ ತೋಯಂ' ಎಂಬುದಕ್ಕೆ ಹಿಂದಿನ ಪೇಜಾವರ ಶ್ರೀಗಳ ದೀರ್ಘ ವಿಡಿಯೋ ಯೂಟ್ಯೂಬ್‌ನಲ್ಲಿದೆ. ಅಭಿಮಾನದಿಂದ ಮಾಡಿದ ಗಾಯನ ದೇವರನ್ನು ತಲುಪುವುದಿಲ್ಲ. 'ಮಾನಾಭಿಮಾನವು ನಿನ್ನದು ಎನಗೇನು' ಎಂದು ದೇಹಾಭಿಮಾನ, ಅಹಂಕಾರವಿಲ್ಲದೆ ಶುದ್ಧಭಕ್ತಿಯಿಂದ ಹಾಡಿದಾಗ ಅದು ದೇವರಿಗೆ ತಲುಪುತ್ತದೆ ಎಂದು ಪುರಂದರ ದಾಸರು ಹೇಳಿದ್ದಾರೆ. ಪುರಂದರರ ಬಗ್ಗೆ ವೇದಿಕೆಯಲ್ಲಿ ಪುಂಖಾನುಪುಂಖವಾಗಿ ಮಾತನಾಡುವ ಎಷ್ಟು ಮಂದಿ ಈ ಅಭಿಮಾನ ತೊರೆದು ಭಕ್ತಾಭಿಮಾನಿಯನ್ನು ಭಜಿಸಿದ್ದಿದೆ?

ಮುಕ್ತಿಗೆ ಹಲವು ದಾರಿಗಳಿವೆ, ಈ ದಾರಿಯನ್ನು ತಿಳಿಹೇಳಲು ಹಲವು ಮತ-ಸಿದ್ಧಾಂತಗಳಿವೆ. ಯಾವುದೇ ದಾರಿಯಲ್ಲಿ ಹೋದರೂ ಗಮ್ಯವೊಂದೇ. ಎಲ್ಲ ಮತಗಳೂ ಈ ಅಭಿಮಾನದ ತೊರೆಯುವಿಕೆಯನ್ನೇ ಹೇಳುತ್ತವೆ. ಸೆಮೆಟಿಕ್ ರಿಲಿಜನ್ನುಗಳನ್ನು ಹೊರತುಪಡಿಸಿ 'ಹಿಂದೂ' ಎಂದು ಕರೆಸಿಕೊಳ್ಳುವ ಮತಗಳಿಗೆ ತಳಹದಿಯೊಂದೇ. 'ಸತ್ಯ ಒಂದೇ, ತಿಳಿದವರು ಬೇರೆ ರೀತಿಯಲ್ಲಿ ಹೇಳುತ್ತಾರೆ'. ಈ ಮತಗಳು ಸಾರಾಸಗಟಾಗಿ ಪರಸ್ಪರರ ವಿರುದ್ಧವಲ್ಲ. ಹಲವು ವಿಷಯಗಳಲ್ಲಿ ಸಹಮತವಿದೆ, ಕೆಲವು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಹೀಗಾಗಿ ನಮ್ಮಲ್ಲಿ ವಾಗ್ಯುದ್ಧದ ಪದ್ಧತಿಯಿಲ್ಲ, ಬದಲಾಗಿ ವಾಕ್ಯಾರ್ಥವಿದೆ. ನಮ್ಮಲ್ಲಿ ಟೀಕೆ, ವಿಮರ್ಶೆಗೆ ವಿಶಾಲಾರ್ಥವಿದೆ, ವೈಚಾರಿಕವಾಗಿ ಮತಗಳನ್ನು ಖಂಡಿಸಲೂ ಸ್ವಾತಂತ್ರ್ಯವಿದೆ, ವೇದಿಕೆಗಳೂ ಇವೆ. ಆದರೆ ಸಾಮರಸ್ಯದ ವೆಚ್ಚದಲ್ಲಿ ಇದು ಬೇಕೇ?

ಇಂದು ಸಾಮಾಜಿಕ ಜಾಲತಾಣವನ್ನು ಒಮ್ಮೆ ಪ್ರವೇಶಿಸಿದರೆ ಸಾಕು, ಪರ-ವಿರೋಧಗಳ ಬರಹ, ವಿಡಿಯೋಗಳದ್ದೇ ಕಿರಿಕಿರಿ. ದ್ವೈತ-ಅದ್ವೈತ, ಲಿಂಗಾಯತ-ವೀರಶೈವ ಮುಂತಾದ ಚರ್ಚೆಗಳು ಸೈದ್ಧಾಂತಿಕ ಗಡಿಯನ್ನು ದಾಟಿ ವೈಯಕ್ತಿಕವೂ ಆಗಿ, ಉಚಿತವಲ್ಲದ ಶಬ್ದಗಳವರೆಗೆ ತಲುಪಿ, ಮಹಾಸಭಾಗಳ ಲೆಟರ್ ಹೆಡ್ಡಿನ ಪ್ರಕಟಣೆಗಳು ಸಹ ಜಾಲತಾಣಗಳಲ್ಲಿ ಹರಿದಾಡಿದ್ದೂ ಇದೆ. ಇದು ಸಾಮಾನ್ಯ ಅನ್ವೇಷಕನನ್ನು ಗೊಂದಲಗೊಳಿಸುವುದಲ್ಲದೆ, ಹಿಂದೂ ಧರ್ಮದ ಅಂತರ್ಗತ ಆಧ್ಯಾತ್ಮಿಕ ಶ್ರೀಮಂತಿಕೆಯಿಂದ ಅನೇಕರನ್ನು ದೂರವಿಡುತ್ತದೆ ಅಲ್ಲವೇ?

ಅನಾಮಧೇಯ ಪರಿಸರದಲ್ಲಿ ವ್ಯಕ್ತಿಯ ನಡವಳಿಕೆಯು ಗುಂಪಿನೊಳಗಿನದಕ್ಕಿಂತ ಮತ್ತು ಗುಂಪಿನ ಹೊರಗೆ ತೀವ್ರವಾಗಿರುತ್ತದೆ ಎಂದು ಸಾಮಾಜಿಕ ಮನೋವಿಜ್ಞಾನದ ಅಧ್ಯಯನಗಳು ಹೇಳುತ್ತವೆ. ಸಾಮಾಜಿಕ ಮಾಧ್ಯಮವು ಪರ ಅಥವಾ ವಿರೋಧ ಇರಬೇಕಾದ ಅನಿವಾರ್ಯತೆಯನ್ನು ತಂದೊಡ್ಡುತ್ತದೆ, ತರ್ಕದ ಬದಲು ಭಾವನೆಗೆ ಬೆಲೆ ಕೊಡುವಂತೆ ಮಾಡುತ್ತದೆ, ಸತ್ಯ ಮತ್ತು ಹರಡುವ ಶಕ್ತಿಯ ನಡುವೆ ಹರಡುವಿಕೆಯನ್ನು ಪ್ರೋತ್ಸಾಹಿಸುತ್ತದೆ. ಇದಕ್ಕೆ ನಿಕಟವಾಗಿ ಹೊಂದಿಕೊಂಡ ಧಾರ್ಮಿಕ ಗುಂಪುಗಳು, ಒಂದೇ ಸಿದ್ಧಾಂತವನ್ನು ಒಪ್ಪುವ ಹಲವು ಕವಲುಗಳ ನಡುವೆ 'ಸಹ-ಪಂಥೀಯ' ಸಂಘರ್ಷಕ್ಕೆ ಕಾರಣವಾಗುತ್ತದೆ. ಆಧ್ಯಾತ್ಮಿಕ ತತ್ವಶಾಸ್ತ್ರವು 'ಗುರುತಿನ ರಾಜಕೀಯ'ಕ್ಕೆ ಬಲಿಯಾಗುತ್ತಿರುವುದೇ ವಿಪರ್ಯಾಸ.

ವಿವೇಚನೆಯಿಲ್ಲದೆ ಬಳಸಿದರೆ, ನಮ್ಮ ಉದಾತ್ತ ಸಂಸ್ಕೃತಿಯು ಅದರ ಬೆಲೆಯನ್ನು ತೆರಬೇಕಾಗುತ್ತದೆ. ಇಂದು ಸಂಕೀರ್ಣ ಸಂಪ್ರದಾಯಗಳು ಬೌದ್ಧಿಕತೆಯ ಆಳಕ್ಕಿಳಿಯದೇ 'ಮೀಮ್'ಗಳಿಗೆ ಸೀಮಿತವಾಗಿವೆ. ಆಧ್ಯಾತ್ಮಿಕ ಚಿಂತನೆಯ ಬದಲು ಅಹಮ್ಮಿನ ಘರ್ಷಣೆಗಳನ್ನು ಮಾತ್ರ ನೋಡುವಂತಾಗಿದೆ. ಅಲ್ಲಲ್ಲಿ ಇಣುಕುವ ಉತ್ತರ-ದಕ್ಷಿಣ, ಆರ್ಯ-ದ್ರಾವಿಡ, ಶಿವ-ವಿಷ್ಣು, 'ಹಿಂದೂ ವರ್ಸಸ್ ಹಿಂದೂ' ಎಂಬ ಕಥನಗಳು ಸಮಗ್ರ ಭಾರತದ ಕಲ್ಪನೆಯನ್ನು ನಿಧಾನವಾಗಿ ದೂರವಿಡುತ್ತವೆ, ರಾಷ್ಟ್ರೀಯ ಏಕತೆಯನ್ನು ನಿರ್ಮೂಲನೆ ಮಾಡುತ್ತವೆ.

ಹಾಗಂತ, ಸಾಮಾಜಿಕ ಜಾಲತಾಣಗಳಲ್ಲಿ ಒಳ್ಳೆಯದು ಎಂಬುದು ನಡೆಯುತ್ತಲೇ ಇಲ್ಲ ಅಂತಿಲ್ಲ. ಆದರೆ ಇಂಥ ಒಳ್ಳೆಯದು ಹೊಗಳಿಕೆಯಿಂದ ಅನಾಥ, ಪಾಪ! ನಾವಿಂದು 'ಭೇದ' ಮತ್ತು 'ಭೇದಬುದ್ಧಿ'ಯ ನಡುವಿನ ವ್ಯತ್ಯಾಸವನ್ನು ಅರಿಯಬೇಕಾಗಿದೆ. 'ವಾದ' ಯಾವುದು, 'ವಿತಂಡವಾದ' ಯಾವುದು ಎಂಬುದನ್ನು ತಿಳಿಯಬೇಕಿದೆ. ಸಾಮಾಜಿಕ ಜಾಲತಾಣಗಳನ್ನು ಸಂಘರ್ಷದ ಬದಲು ಸತ್ಸಂಗಕ್ಕೆ ಬಳಸಬೇಕಾಗಿದೆ. ಸಾಮಾಜಿಕ ಮಾಧ್ಯಮವು ವಿಚಾರಗಳ ಯಜ್ಞವಾಗಿರಬೇಕೋ ಅಥವಾ ಅಹಂಕಾರದ ಯುದ್ಧಭೂಮಿಯಾಗಿರಬೇಕೋ? ಆಯ್ಕೆ ನಮ್ಮದು. ನಿಜವಾಗಿಯೂ ನಿಷ್ಠಾವಂತರಾಗಿದ್ದರೆ, ನಾವು ಕಡಿಮೆ ವಾದಿಸಬೇಕು ಮತ್ತು ಹೆಚ್ಚು ತಿಳಿದುಕೊಳ್ಳಬೇಕು, ಕಡಿಮೆ ಟೀಕಿಸಬೇಕು ಮತ್ತು ಹೆಚ್ಚು ಆತ್ಮಾವಲೋಕನ ಮಾಡಿಕೊಳ್ಳಬೇಕು.

ಆಧ್ಯಾತ್ಮಿಕ ಸಂಸ್ಥೆಗಳು ಸಾಮಾಜಿಕ ಜಾಲತಾಣಗಳಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಜವಾಬ್ದಾರಿಯುತ ಭಾಷಣಗಳನ್ನು ಉತ್ತೇಜಿಸಬೇಕು. ವಿವಿಧ ಸಂಪ್ರದಾಯಗಳ ನಾಯಕರು ಒಗ್ಗಟ್ಟನ್ನು ರೂಪಿಸಬೇಕೇ ವಿನಾ, ಸ್ಪರ್ಧೆಯನ್ನಲ್ಲ. ಅಂತರಪಂಥೀಯ ಭೇಟಿ, ಸಂವಾದಗಳು ನಡೆಯಬೇಕು. ರಾಮಾನಂದರಿಂದ ಬಸವಣ್ಣನವರವರೆಗೆ ಮತ್ತು ಚೈತನ್ಯರಿಂದ ಶರೀಫರವರೆಗಿನ ಸಂತರು ಬೋಧಿಸಿದಂತೆ– 'ಸತ್ಯ ಒಂದೇ, ಮಾರ್ಗಗಳು ಹಲವು'. ಸಾಮಾಜಿಕ ಮಾಧ್ಯಮ ವೇದಿಕೆಗಳು ಸೈದ್ಧಾಂತಿಕ ಒಲವನ್ನು ಲೆಕ್ಕಿಸದೆ, ಭಿನ್ನ ಭಾಷಣ, ತಪ್ಪು ಮಾಹಿತಿ ಮತ್ತು ನಂಬಿಕೆಗಳ ಅಪಹಾಸ್ಯವನ್ನು ಸಕ್ರಿಯವಾಗಿ ತೆಗೆದುಹಾಕಬೇಕು. ಕೂಡಿಮಾಡುವ ಹಬ್ಬಗಳು, ಪಾದಯಾತ್ರೆ, ತೀರ್ಥಯಾತ್ರೆಗಳು ಮತ್ತು ವಿವಿಧ ವರ್ಗದ ಸಾತ್ವಿಕ-ತಾತ್ವಿಕ ಚರ್ಚೆಗಳ ಕಥೆಗಳನ್ನು, ಸಕಾರಾತ್ಮಕ ಕಥನಗಳನ್ನು ಉತ್ತೇಜಿಸಬೇಕು.

(ಲೇಖಕರು ಸಂಸ್ಕೃತಿ ಚಿಂತಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:173

ಸಮಾಚಾರ ಸಣ್ಣದಲ್ಲ

ಭಾಷೆ ಹೆಸರಿನಲ್ಲಿ ಹಿಂಸೆ ಸಮರ್ಥನೀಯವಲ್ಲ

ಮುಂಬೈ: ಭಾಷೆಯ ಹೆಸರಿನಲ್ಲಿ ಹಿಂಸಾಚಾರದ ಬಳಕೆಯನ್ನು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಶುಕ್ರವಾರ ಖಂಡಿಸಿದ್ದಾರೆ,

ಮರಾಠಿ ಹೆಮ್ಮೆಯ ಸೋಗಿನಲ್ಲಿ ಗೂಂಡಾಗಿರಿ ಯನ್ನು ಸಹಿಸಲಾಗುವುದಿಲ್ಲ ಎಂದು ಎಚ್ಚರಿಸಿದ್ದಾರೆ. ಮುಂಬೈ ಬಳಿಯ ಮೀರಾ ರಸ್ತೆಯಲ್ಲಿರುವ ಅಂಗಡಿಯೊಬ್ಬರ ಮೇಲೆ ಮರಾಠಿಯಲ್ಲಿ ಮಾತನಾಡು ವುದು ಏಕೆ ಕಡ್ಡಾಯ ಎಂದು ಪ್ರಶ್ನಿಸಿದ್ದಕ್ಕಾಗಿ ಮಹಾರಾಷ್ಟ್ರ ನವನಿರ್ಮಾಣ ಸೇನೆ (ಎಂಎನ್‌ಎಸ್) ಕಾರ್ಯಕರ್ತರು ಹಲ್ಲೆ ನಡೆಸಿದ ಎರಡು ದಿನಗಳ ನಂತರ ಅವರ ಈ ಹೇಳಿಕೆ ಬಂದಿವೆ. ಮಹಾರಾಷ್ಟ್ರ ಬಹು ಭಾಷೆಗಳಿಗೆ ನೆಲೆಯಾಗಿದೆ ಎಂದು ಹೇಳಿದ ನಂತರ 48 ವರ್ಷದ ಅಂಗಡಿಯ ಮಾಲೀಕ ಬಾಬುಲಾಲ್ ಚೌಧರಿ ಅವರ ಮೇಲೆ ಏಳು ಜನರು ಹಲ್ಲೆ ನಡೆಸಿದ್ದಾರೆ. ಗುಂಪು ಅವರನ್ನು ಪದೇ ಪದೇ ಕಪಾಳಮೋಕ್ಷ ಮಾಡಿ ಆ ಪ್ರದೇಶದಲ್ಲಿ ತನ್ನ ವ್ಯವಹಾರವನ್ನು ಮುಂದುವರಿಸದಂತೆ ಎಚ್ಚರಿಸಿದೆ ಎಂದು ಆರೋಪಿಸಲಾಗಿದೆ.

ಮಣಿಪುರದಲ್ಲಿ ಶೋಧ ಐಇಡಿ, ಸ್ಫೋಟಕ ಜಪ್ತಿ

ಗುವಾಹಟಿ: ಗುರುವಾರ ಮಧ್ಯರಾತ್ರಿಯಿಂದ ಮಣಿಪುರದ ಬೆಟ್ಟದ ಜಿಲ್ಲೆಗಳಲ್ಲಿ ನಡೆಸಿದ ವ್ಯಾಪಕ ಶೋಧ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು 203 ಶಸ್ತ್ರಾಸ್ತ್ರಗಳು, ಐಇಡಿಗಳು, ಗ್ರೆನೇಡ್‌ಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದ್ದಾರೆ. ವಿವಿಧ ಸ್ಥಳಗಳಲ್ಲಿ ಅಡಗಿಸಿಟ್ಟಿರುವ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಇತರ ಯುದ್ಧೋಚಿತ ಸಾಮಗ್ರಿಗಳ ದೊಡ್ಡ ಸಂಗ್ರಹದ ಬಗ್ಗೆ ಗುಪ್ತಚರ ಮಾಹಿತಿ ಪಡೆದ ನಂತರ, ತೆಂಗ್ನೌಪಾಲ್, ಕಾಂಗ್ಪೋಕ್ಪಿ, ಚಾಂಡೆಲ್ ಮತ್ತು ಚುರಾಚಂದ್‌ಪುರ ಜಿಲ್ಲೆಗಳ ಒಳ ಪ್ರದೇಶಗಳಲ್ಲಿ ಸಂಘಟಿತ ಮತ್ತು ಏಕಕಾಲದ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೊಲೀಸರು, ಅಸ್ಸಾಂ ರೈಫಲ್ಸ್, ಸೇನೆ ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಜಂಟಿಯಾಗಿ ಈ ಕಾರ್ಯಾಚರಣೆ ನಡೆಸಿವೆ. ಸಾರ್ವಜನಿಕರು ಭದ್ರತಾ ಪಡೆಗಳೊಂದಿಗೆ ಸಹಕರಿಸಬೇಕು ಮತ್ತು ಅಕ್ರಮ ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಹತ್ತಿರದ ಠಾಣೆ ಅಥವಾ ಕೇಂದ್ರ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಬೇಕು ಎಂದು ಪೊಲೀಸರು ಕೋರಿದ್ದಾರೆ.

ಯುಜಿಸಿ ಮಾಜಿ ಅಧ್ಯಕ್ಷ ವಿರುದ್ಧ ಎಫ್‌ಐಆರ್

ದೆಹಲಿ: ಭಾರತದಾದ್ಯಂತ ವೈದ್ಯಕೀಯ ಕಾಲೇಜುಗಳ ತಪಾಸಣೆ ಮತ್ತು ನಿಯಂತ್ರಕ ಪ್ರಕ್ರಿಯೆಗಳಲ್ಲಿ ಅಕ್ರಮಗಳನ್ನು ಒಳಗೊಂಡ ವ್ಯಾಪಕ ಭ್ರಷ್ಟಾಚಾರ ಜಾಲವನ್ನು ಕೇಂದ್ರ ತನಿಖಾ ದಳ (ಸಿಬಿಐ) ಬಯಲು ಮಾಡಿದೆ. ಮಾಜಿ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಅಧ್ಯಕ್ಷ ಡಿ.ಪಿ ಸಿಂಗ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಹಲವಾರು ಅಧಿಕಾರಿಗಳು ಸೇರಿದಂತೆ 36 ಆರೋಪಿ ವ್ಯಕ್ತಿಗಳ ಹೆಸರುಗಳನ್ನು ಹೊಂದಿರುವ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಲಾಗಿದೆ. ಪ್ರಸ್ತುತ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್‌ನ (ಟಿಐಎಸ್‌ಎಸ್) ಕುಲಪತಿಯಾಗಿ ಸೇವೆ ಸಲ್ಲಿಸುತ್ತಿರುವ ಡಿ.ಪಿ ಸಿಂಗ್ 2018 ರಿಂದ 2021 ರವರೆಗೆ ಯುಜಿಸಿಯ ನೇತೃತ್ವ ವಹಿಸಿದ್ದರು. ಇತರ ಆರೋಪಿಗಳಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಹಿರಿಯ ಅಧಿಕಾರಿಗಳು ಮತ್ತು ದೇಶಾದ್ಯಂತ ಇರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಪ್ರತಿನಿಧಿಗಳು ಸೇರಿದ್ದಾರೆ.

ಖಾಸಗಿ ವಲಯಕ್ಕೆ ಇಸ್ರೋ ತಂತ್ರಜ್ಞಾನ

ಹೈದರಾಬಾದ್: ಭಾರತದ ಬಾಹ್ಯಾಕಾಶ ಪರಿಸರ ವ್ಯವಸ್ಥೆಯಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಗುರಿ ಹೊಂದಿರುವ ಮಹತ್ವದ ಕ್ರಮದಲ್ಲಿ, ಭಾರತೀಯ ಬಾಹ್ಯಾಕಾಶ ಸಂಶೋ ಧನಾ ಸಂಸ್ಥೆ (ಇಸ್ರೊ) ಬಾಹ್ಯಾಕಾಶ ಮತ್ತು ಸಂಬಂ ಧಿತ ವಲಯಗಳಲ್ಲಿ ವಾಣಿಜ್ಯ ಬಳಕೆಗಾಗಿ 10 ಸುಧಾರಿತ ತಂತ್ರಜ್ಞಾನಗಳನ್ನು ಆರು ಖಾಸಗಿ ಕಂಪನಿ ಗಳಿಗೆ ವರ್ಗಾಯಿಸಿದ್ದು, ಅದರಲ್ಲಿ ಹೈದರಾಬಾದ್ ಮೂಲದ 3 ಕಂಪನಿಗಳಿವೆ. ಭಾರತದ ಬಾಹ್ಯಾಕಾಶ ಕಾರ್ಯಾಚರಣೆಗಳಲ್ಲಿ ಖಾಸಗಿ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ನೋಡಲ್ ಏಜೆನ್ಸಿಯಾದ ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರ, ಗುರುವಾರ ಈ ಘೋಷಣೆ ಮಾಡಿದೆ. ಇಸ್ರೋದ ಇನರ್ಷಿಯಲ್ ಸಿಸ್ಟಮ್ಸ್ ಯೂನಿಟ್ ಅಭಿವೃದ್ಧಿಪಡಿಸಿದ ಇನರ್ಷಿಯಲ್ ಸೆನ್ಸರ್‌ಗಳನ್ನು ಒಳಗೊಂಡ ಎರಡು ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೈದರಾಬಾದ್ ಮೂಲದ ಝೀಟಾಟೆಕ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಸ್ವೀಕರಿಸಿದೆ.

{ರಾಜನಾಥ್ ಸಿಂಗ್ } ಕೇಂದ್ರ ರಕ್ಷಣಾ ಸಚಿವ

ದೇಶದಲ್ಲಿ ಕೇವಲ ಐದಾರು ಪ್ರದೇಶಗಳಿಗೆ ನಕ್ಸಲ್ ಚಟುವಟಿಕೆ ಸೀಮಿತವಾಗಿವೆ. ಮುಂದಿನ ವರ್ಷ ಮಾರ್ಚ್ 31ರೊಳಗೆ ಭಾರತವನ್ನು ನಕ್ಸಲ್ ಮುಕ್ತ ದೇಶವನ್ನಾಗಿ ಮಾಡಲು ಕೇಂದ್ರ ಸರಕಾರ ನಿರ್ಧರಿಸಿದೆ. ಭವಿಷ್ಯದಲ್ಲೂ ಪಹಲ್ಗಾಮ್ ಉಗ್ರರ ದಾಳಿಯಂತಹ ಘಟನೆಗಳು ನಡೆದರೆ ಭಯೋತ್ಪಾದಕರಿಗೆ ತಕ್ಕ ಪ್ರತ್ಯುತ್ತರ ನೀಡಲಾಗುವುದು.



ಟ್ರಿನಿಡಾಡ್ ಮತ್ತು ಟೊಬಾಗೊದಲ್ಲಿ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಪ್ರಧಾನಿ ಮಾತು

ಭಾರತ ಅವಕಾಶಗಳ ಕೇಂದ್ರ: ಮೋದಿ

ಪೋರ್ಟ್ ಆಫ್ ಸ್ಪೇನ್: ಭಾರತವು ಇಂದು ಅವಕಾಶಗಳ ಕೇಂದ್ರವಾಗಿದ್ದು, ಬೆಳವಣಿಗೆ ಮತ್ತು ಪ್ರಗತಿಯ ಫಲಗಳು ಅಗತ್ಯ ಇದ್ದವರನ್ನು ತಲುಪುತ್ತವೆ. ಹೊಸ ಭಾರತಕ್ಕೆ ಆಕಾಶವೂ ಮಿತಿಯಲ್ಲ. ಇಂದು ಭಾರತವು ವಿಶ್ವದ ಮೂರನೇ ಅತಿದೊಡ್ಡ ಸ್ಟಾರ್ಟ್ ಅಪ್ ಕೇಂದ್ರವಾಗಿದೆ. ಈ ಸ್ಟಾರ್ಟ್ ಅಪ್‌ಗಳಲ್ಲಿ ಸುಮಾರು ಅರ್ಧದಷ್ಟು ಮಹಿ ಳೆಯರು ನಿರ್ದೇಶಕಿಯಾಗಿದ್ದಾರೆ. ಸುಮಾರು 120 ಸ್ಟಾರ್ಟ್ ಅಪ್‌ಗಳು ಯುನಿಕಾರ್ನ್ ಸ್ಥಾನಮಾನವನ್ನು ಪಡೆದುಕೊಂಡಿವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

ಐದು ದೇಶಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಎರಡನೇ ದಿನ ಟ್ರಿನಿಡಾಡ್ ಮತ್ತು ಟೊಬಾಗೊಗೆ ಭೇಟಿ ನೀಡಿ ಅಲ್ಲಿನ ಅನಿವಾಸಿ ಭಾರತೀಯರನ್ನು ಉದ್ದೇಶಿಸಿ ಮಾತನಾಡಿ, ಅಂಕಿ-ಅಂಶಗಳ ಸಮೇತ ಭಾರತದ ಇತ್ತೀಚೆಗಿನ ಬೆಳವಣಿಗೆಯ ವಿವರಣೆ ನೀಡಿದ್ದಾರೆ. 1999ರಲ್ಲಿ ಮೊದಲ ಬಾರಿಗೆ ಭಾರತದ ಪ್ರಧಾನಿ ಯೊಬ್ಬರು ಕೆರಿಬಿಯನ್ ದ್ವೀಪ ರಾಷ್ಟ್ರಕ್ಕೆ ಭೇಟಿ ನೀಡಿದ್ದರು. ಟ್ರಿನಿಡಾಡ್ ಮತ್ತು ಟೊಬಾಗೊ ಪ್ರಧಾನಿ ಕಮಲಾ ಪ್ರಸಾದ್ ಬಿಸ್ಸೆಸ್ಸರ್ ಹಾಗೂ ಸಂಪುಟದ ಸದಸ್ಯರು, ಶಾಸಕರು ಮತ್ತು ಇತರ ಹಲವಾರು ಗಣ್ಯರು ಸೇರಿದಂತೆ 4,000ಕ್ಕೂ ಹೆಚ್ಚು ಜನರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಜಗತ್ತಿನ ಪ್ರಮುಖ ಮೂರು ಆರ್ಥಿಕತೆಯಲ್ಲಿ ಶೀಘ್ರದಲ್ಲೇ ಭಾರತವೂ ಒಂದಾಗಲಿದೆ. ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್ ಮತ್ತು ಕ್ವಾಂಟಮ್ ಕಂಪ್ಯೂಟರ್ ಬೆಳವಣಿಗೆಯ ಹೊಸ ಎಂಜಿನ್ ಆಗಿದೆ ಎಂದು ಮೋದಿ ಬಣ್ಣಿಸಿದ್ದಾರೆ.

ಕಾರ್ಯಕ್ರಮದಲ್ಲಿ ಅಲ್ಲಿನ ಭಾರತೀಯ ಸಮುದಾಯದವರನ್ನು ಮೆಚ್ಚಿ ಮಾತನಾಡಿದ ಪ್ರಧಾನಿ ಮೋದಿ, ನೀವು ತಾಯ್ನಾಡು ತೊರೆದಿರಬಹುದು, ಆದರೆ ನಿಮ್ಮ ಆತ್ಮ ಭಾರತದಲ್ಲೇ ಇದೆ. ಗಂಗಾ ಯಮುನಾವನ್ನು ಬಿಟ್ಟು ಬಂದಿರಬಹುದು, ಆದರೆ ಹೃದಯದಲ್ಲಿ ರಾಮಾಯಣ ಇದೆ, ಹಾಗಾಗಿ ವಲಸಿಗರಲ್ಲ, ಈ ದೇಶಕ್ಕೆ ನಿಮ್ಮಿಂದ ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಪ್ರಯೋಜನವಾಗಿದ್ದು, ಈ ಸುಂದರ ರಾಷ್ಟ್ರದ ಮೇಲೆ ಭಾರತದ ಗಾಢ ಪ್ರಭಾವವಿದೆ ಎಂದರು.

ನಿಮಗಾಗಿ ನಾನು ಅಯೋಧ್ಯೆಯ ರಾಮ ಮಂದಿರದ ಪ್ರತಿಕೃತಿ ಮತ್ತು ಸರಯೂ ನದಿಯಿಂದ ನೀರನ್ನು ತಂದಿದ್ದೇನೆ. ಹಾಗೆಯೇ ಈ ವರ್ಷ ನಡೆದ ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಕಾರ್ಯಕ್ರಮವಾಗಿದ್ದ ಮಹಾಕುಂಭದ ಪವಿತ್ರ ನೀರನ್ನೂ ತಂದಿರುವುದಾಗಿ ಪ್ರಧಾನಿ ಇದೇ ವೇಳೆ ಅಲ್ಲಿನ ಅನಿವಾಸಿ ಭಾರತೀಯರಿಗೆ ತಿಳಿಸಿದರು. ಈ ಪವಿತ್ರ ನೀರು ಟ್ರಿನಿಡಾಡ್ ಮತ್ತು ಟೊಬಾಗೋ ಜನರಿಗೆ ಆಶೀರ್ವಾದ ಮಾಡಲಿ ಎಂದು ನರೇಂದ್ರ ಮೋದಿ ಆಶಿಸಿದರು.

ಕೆರಿಬಿಯನ್ ರಾಷ್ಟ್ರಗಳಿಗೆ ಮೊದಲ ಭೇಟಿ ನೀಡಿದ ಮೋದಿಗೆ ಸಾಂಪ್ರದಾಯಿಕ ಸ್ವಾಗತ

ಮೋದಿಗೆ ಭೋಜ್‌ಪುರಿ ಚೌತಾಲ್ ಮೂಲಕ ಸ್ವಾಗತ

ಇದೇ ಮೊದಲ ಬಾರಿಗೆ ಕೆರಿಬಿಯನ್ ರಾಷ್ಟ್ರಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ ಅವರನ್ನು ಭೋಜ್‌ಪುರಿ ಚೌತಾಲ್‌ನ ಸಾಂಪ್ರದಾಯಿಕ ಪ್ರದರ್ಶನದೊಂದಿಗೆ ಸ್ವಾಗತಿಸಲಾಯಿತು. 1999ರ ಬಳಿಕ ಕೆರಿಬಿಯನ್ ರಾಷ್ಟ್ರಕ್ಕೆ ಭೇಟಿ ನೀಡುತ್ತಿರುವ ಮೊದಲ ಭಾರತದ ಪ್ರಧಾನಿ ಎಂಬ ಹೆಗ್ಗಳಿಕೆ ಅವರದ್ದಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣವಾದ ಎಕ್ಸ್ ನಲ್ಲಿ ಮಾಹಿತಿ ಹಂಚಿಕೊಂಡಿದ್ದು, ಟ್ರಿನಿಡಾಡ್ ಮತ್ತು ಟೊಬಾ ಗೋದಲ್ಲಿ ಬಂದಿಳಿದಾಗ ಸಾಂಪ್ರದಾಯಿಕ ಭೋಜ್‌ಪುರಿ ಚೌತಾಲ್‌ನನ್ನು ಪ್ರದರ್ಶಿಸಿ ಸ್ವಾಗತಿಸುತ್ತಿರುವ ಚಿತ್ರವೂ ಅದರಲ್ಲಿದೆ.

ಮಹಾಕುಂಭ ಮೇಳದ ಪವಿತ್ರ ನೀರನ್ನು ಕಮಲಾ ಪ್ರಸಾದ್ ವೀಕ್ಷಿಸುತ್ತಿರುವುದು

ಭಾರತೀಯ ಹಿನ್ನೆಲೆಯ ಕಮಲಾ ಪ್ರಸಾದ್

ಮೋದಿಯವರು ಪಿಯಾರ್ಕೊ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಅವರನ್ನು ಪ್ರಧಾನಿ ಕಮಲಾ ಪ್ರಸಾದ್ ಬಿಸ್ಸೆಸ್ಸರ್ ಮತ್ತು ಕೆರಿಬಿಯನ್ ರಾಷ್ಟ್ರದ 38 ಸಚಿವರು ಮತ್ತು ನಾಲ್ವರು ಸಂಸತ್ ಸದಸ್ಯರು ಬರಮಾಡಿಕೊಂಡರು. ಭಾಷಣದ ವೇಳೆ ಟ್ರಿನಿಡಾಡ್ ಮತ್ತು ಟೊಬಾಗೊ ಪ್ರಧಾನಿ ಪ್ರಧಾನಿ ಕಮಲಾರನ್ನು ಬಿಹಾರದ ಮಗಳು ಎಂದು ಉದ್ಘರಿಸಿದ್ದಾರೆ. ಬಿಹಾರದ ಬಕ್ಸಾರ್ ಜಿಲ್ಲೆಯ ಭೇಲುಪುರ ಗ್ರಾಮವು ಕಮಲಾ ಪ್ರಸಾದ್ ಬಿಸ್ಸೆಸ್ಸರ್ ಅವರ ಪೂರ್ವಜರ ಗ್ರಾಮವಾಗಿದೆ. ಅವರ ಮುತ್ತಜ್ಜ ರಾಮ್ ಲಖನ್ ಮಿಶ್ರಾ, ಬಿಹಾರದ ಬಕ್ಸಾರ್ ಜಿಲ್ಲೆಯವರು. ಎರಡನೇ ಬಾರಿಗೆ ಟ್ರಿನಿಡಾಡ್ ಮತ್ತು ಟೊಬಾಗೋದ ಪ್ರಧಾನಿಯಾಗಿರುವ 73 ವರ್ಷದ ಬಿಸ್ಸೆಸ್ಸರ್ ಈ ಹಿಂದೆ 2010-2015ರ ವರೆಗೆ ಕೆರಿಬಿಯನ್ ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದರು. ಟ್ರಿನಿಡಾಡ್ ಮತ್ತು ಟೊಬಾಗೋವನ್ನು ಮುನ್ನಡೆಸಿದ ಏಕೈಕ ಮಹಿಳೆ ಎಂಬ ಖ್ಯಾತಿ ಹೊಂದಿದ್ದಾರೆ.

ಮಳೆಪೀಡಿತ ರಾಜ್ಯಗಳ ಸಿಎಂಗಳಿಗೆ ನೆರವಿನ ಭರವಸೆ ನೀಡಿದ ಗೃಹ ಸಚಿವ ಅಮಿತ್ ಶಾ

ಭಾರೀ ಮಳೆಗೆ ಉತ್ತರ ತತ್ತರ

ದೆಹಲಿ: ಭಾರೀ ಮಳೆಯಿಂದ ಹಾನಿಗೆ ಒಳಗಾಗಿರುವ ರಾಜ್ಯಗಳಿಗೆ ಕೇಂದ್ರದಿಂದ ಅಗತ್ಯ ನೆರವು ನೀಡುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

ಗುಜರಾತ್, ಹಿಮಾಚಲ ಪ್ರದೇಶ, ರಾಜಸ್ಥಾನ, ಉತ್ತರಾಖಂಡ್ ಮತ್ತು ಛತ್ತೀಸ್‌ಗಡದ ಸಿ.ಎಂಗಳ ಜೊತೆಗೆ ಮಾತನಾಡಿದ ಅವರು, ಕೇಂದ್ರದಿಂದ ಎಲ್ಲ ಅಗತ್ಯ ನೆರವು ನೀಡಲಾಗುವುದು, ಈ ಬಗ್ಗೆ ಕೇಂದ್ರ ಸರಕಾರವೂ ಸಹ ಪರಿಸ್ಥಿತಿಯ ಪರಿಶೀಲನೆ ನಡೆಸುತ್ತಿದೆ ಎಂದು ಹೇಳಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ಆರೆಂಜ್ ಮತ್ತು ರೆಡ್ ಅಲರ್ಟ್ ನೀಡಿರುವ ರಾಜ್ಯಗಳಲ್ಲಿ ಪ್ರವಾಹ, ಭೂಕುಸಿತ ಮತ್ತು ಸಾರಿಗೆ ಅಡಚಣೆಯ ಹೆಚ್ಚಿನ ಅಪಾಯದ ಬಗ್ಗೆ ಎಚ್ಚರಿಕೆ ವಹಿಸುವಂತೆ ಕೂಡ ಗೃಹ ಸಚಿವರು ಸೂಚಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಶಾ, ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದ್ದು, ಅಗತ್ಯ ಇರುವ ಕಡೆಗಳಲ್ಲೆಲ್ಲ ಹೆಚ್ಚುವರಿ ಪಡೆಗಳನ್ನು ಒದಗಿಸಲಾಗುವುದು ಎಂದು ಇದೇ ವೇಳೆ ಅವರು ಅಭಯ ನೀಡಿದ್ದಾರೆ. ದೇಶದ ವಿವಿಧ ಭಾಗಗಳಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ, ಗುಜರಾತ್, ಹಿಮಾಚಲ ಪ್ರದೇಶ, ರಾಜಸ್ಥಾನ, ಉತ್ತರಾಖಂಡ ಮತ್ತು ಛತ್ತೀಸ್‌ಗಢದ ಮುಖ್ಯಮಂತ್ರಿಗಳೊಂದಿಗೆ ಪರಿಸ್ಥಿತಿ ಕುರಿತು ಅವಲೋಕಿಸಿದರು. ಎನ್‌ಡಿಆರ್‌ಎಫ್ ತಂಡಗಳ ಜೊತೆ ಅಗತ್ಯವಿದ್ದಲ್ಲಿ ಹೆಚ್ಚಿನ ಪಡೆಗಳನ್ನು ಕಳುಹಿಸಲಾಗುವುದು. ಕೇಂದ್ರ ಸರಕಾರದಿಂದ ಸಾಧ್ಯವಿರುವ ಎಲ್ಲಾ ನೆರವು ನೀಡಲಾಗುವುದು ಎಂದು ಶಾ ತಿಳಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ತತ್ತರಿಸಿದ ಜನ

ಹಿಮಾಚಲ ಪ್ರದೇಶದಲ್ಲಿ ಭಾರೀ ಮಳೆ ಸಾಕಷ್ಟು ಹಾನಿಗೆ ಕಾರಣವಾಗಿದೆ. ಜೂನ್ 20ರಿಂದ ಸುರಿಯುತ್ತಿರುವ ಮಳೆಗೆ ಈವರೆಗೂ 43 ಜನರು ಸಾವನ್ನಪ್ಪಿದ್ದು, 37 ಜನರು ಕಣ್ಮರೆಯಾಗಿದ್ದಾರೆ. ಅಧಿಕೃತ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಮಳೆಯಿಂದಾಗಿ 5 ಸಾವಿರ ಕೋಟಿ ನಷ್ಟ ಉಂಟಾಗಿದೆ. ಮಂಡಿ ಜಿಲ್ಲೆಯಲ್ಲೊಂದರಲ್ಲೇ 17 ಜನರು ಸಾವನ್ನಪ್ಪಿದ್ದು, 31 ಜನರು ಕಣ್ಮರೆಯಾಗಿದ್ದಾರೆ. ಮೇಘ ಸ್ಫೋಟ, ಹಠಾತ್ ಪ್ರವಾಹ ಮತ್ತು ಭೂ ಕುಸಿತದಂತಹ ಪ್ರಕರಣದಿಂದ 150 ಮನೆಗಳಿಗೆ ಹಾನಿಯಾಗಿದ್ದು, 14 ಸೇತುವೆ ಮತ್ತು ನೂರಾರು ವಾಹನಗಳು ಕೊಚ್ಚಿ ಹೋಗಿವೆ.

ಎನ್‌ಡಿಆರ್‌ಎಫ್ ತಂಡದಿಂದ ರಾಜಸ್ಥಾನದ ಕುಟುಂಬದ ಸ್ಥಳಾಂತರ.

ಅನುಮಾನ ಬಗೆಹರಿಸಿದ ಚುನಾವಣಾ ಆಯೋಗ

ದೆಹಲಿ: ಭಾರತೀಯ ಚುನಾವಣಾ ಆಯೋಗ ಬುಧವಾರ ನಿರ್ವಾಚನ ಸದನದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಎಲ್ಲ ಅನುಮಾನಗಳನ್ನು ಬಗೆಹರಿಸಲು ಪ್ರಯತ್ನಿಸಿದೆ. ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಚುನಾವಣಾ ಆಯೋಗವು, ಅನುಮಾನಗಳಿಗೆ ಪರಿಹಾರ ಒದಗಿಸುವ ಕೆಲಸ ಮಾಡಲಾಯಿತು ಎಂದು ತಿಳಿಸಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಚುನಾವಣಾ ಆಯುಕ್ತರಾದ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರೊಂದಿಗೆ ಈ ಸಭೆ ನಡೆಸಲಾಯಿತು. ಪಕ್ಷದ ಪ್ರತಿನಿಧಿಗಳು ಎತ್ತಿರುವ ಕಳವಳಗಳು, ಸಮಸ್ಯೆಗಳು ಮತ್ತು ಪ್ರಶ್ನೆಗಳನ್ನು ಆಯೋಗವು ಮುಕ್ತ ಮನಸಿನಿಂದ ಆಲಿಸಿತು. ಅಷ್ಟೇ ಅಲ್ಲ ಅವರಿಗೆ ಸಂಪೂರ್ಣ ವಿಶೇಷ ತೀವ್ರ ಪರಿಷ್ಕರಣೆಯನ್ನು ಡಿಕೋಡ್ ಮಾಡಿ ತೋರಿಸಿತು. ಮುಂಬರುವ ಬಿಹಾರ ವಿಧಾನಸಭೆ ಚುನಾವಣೆ ಮುಕ್ತ ಮತ್ತು ನ್ಯಾಯ ಸಮ್ಮತವಾಗಿ ನಡೆಯುವಂತೆ ಮಾಡಲು ಆಯೋಗ ಈಗಿನಿಂದಲೇ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಆಯೋಗ ಕರೆದ ಈ ಸಭೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ರಾಷ್ಟ್ರೀಯ ಜನತಾ ದಳ, ಸಮಾಜವಾದಿ ಪಕ್ಷ, ದ್ರಾವಿಡ ಮುನ್ನೇತ್ರ ಕಳಗಂ, ಜಾರ್ಖಂಡ್ ಮುಕ್ತಿ ಮೋರ್ಚಾ, ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ-ಲೆನಿನಿಸ್ಟ್) ಲಿಬರೇಶನ್, ಭಾರತೀಯ ಕಮ್ಯುನಿಸ್ಟ್ ಪಕ್ಷ, ಶಿವಸೇನೆ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಪಕ್ಷಗಳು ಆಯೋಗದ ಕರೆದ ಸಭೆಯಲ್ಲಿ ಪಾಲ್ಗೊಂಡಿದ್ದವು.

ಪಾಲಕ್ಕಾಡ್‌ನಲ್ಲಿ ಮತ್ತೊಂದು ಶಂಕಿತ ಪ್ರಕರಣ

ಕೇರಳದಲ್ಲಿ 18ರ ಯುವತಿ ಬಲಿ: ನಿಫಾ ಸೋಂಕು ದೃಢ

ಕೋಯಿಕ್ಕೋಡ್ (ಕೇರಳ): ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಮಲಪ್ಪುರಂನ ಮಂಕಡದ 18 ವರ್ಷದ ಯುವತಿ ಸಾವಿಗೆ ನಿಫಾ ಸೋಂಕು ಕಾರಣವಾಗಿದೆ ಎಂಬುದನ್ನು ದೃಢಪಡಿಸಲಾಗಿದೆ. ಕೋಯಿಕ್ಕೋಡ್ ವೈದ್ಯಕೀಯ ಕಾಲೇಜಿನ ವೈರಾಲಜಿ ಲ್ಯಾಬ್ ಪರೀಕ್ಷೆಯಲ್ಲಿ ಆಕೆ ಮಾರಾಣಾಂತಿಕ ನಿಫಾ ಸೋಂಕಿಗೆ ಒಳಗಾಗಿರುವುದು ಪತ್ತೆಯಾಗಿದ್ದು, ಕೇರಳದಲ್ಲಿ ಇತ್ತೀಚೆಗೆ ಕಂಡು ಬಂದ ಹೊಸ ನಿಫಾ ಸೋಂಕು ಇದಾಗಿದೆ.

ಸೋಂಕಿಗೆ ಒಳಗಾಗಿದ್ದ ಯುವತಿಯನ್ನು ಜೂನ್ 28ರಂದು ಕೊಟ್ಟಕ್ಕಲ್‌ನ ಖಾಸಗಿ ಆಸ್ಪತ್ರೆಯಿಂದ ಕೋಯಿಕ್ಕೋಡ್‌ಗೆ ಸ್ಥಳಾಂತರಿಸಲಾಯಿತು. ಆಸ್ಪತ್ರೆಗೆ ಬರುವಾಗಲೇ ಆಕೆಯ ಮೆದುಳು ನಿಷ್ಕ್ರಿಯವಾಗಿದೆ ಎಂದು ಘೋಷಿಸಲಾಗಿತ್ತು. ಆಕೆ ಜುಲೈ 1ರಂದು ಮೃತಪಟ್ಟಿದ್ದಳು. ಆಕೆಯ ಸೋಂಕಿನ ಮಾದರಿ ಯನ್ನು ಪುಣೆಯ ವೈರಲಾಜಿ ಸಂಸ್ಥೆಗೆ ಕಳುಹಿಸಲಾಗಿದ್ದು, ಈ ವರದಿ ಫಲಿತಾಂಶ ಶನಿವಾರ ಹೊರಬರುವ ಸಾಧ್ಯತೆ ಇದೆ. ಈ ನಡುವೆ ಕೋಯಿಕ್ಕೋಡ್ ವೈದ್ಯಕೀಯ ಕಾಲೇಜಿನ ಫಾರೆನ್ಸಿಕ್ ವೈದ್ಯರು ಆಕೆ ಸಾವಿಗೆ ನಿಫಾ ಸೋಂಕು ಕಾರಣ ಎಂದಿದ್ದು, ಮುನ್ನೆಚ್ಚರಿಕೆ ಕ್ರಮದಿಂದ ಆಕೆಯ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ.

ಮತ್ತೊಂದು ಶಂಕಿತ ಪ್ರಕರಣ

ಇದೇ ವೇಳೆ ಕೇರಳದ ಪಾಲಕ್ಕಾಡ್‌ನ ನಾಟ್ಟುಂಗಲ್‌ನ 38 ವರ್ಷದ ಮಹಿಳೆಯೊಬ್ಬರು ಪೆರಿಂಥಲ್ಮಣ್ಣಾದ ಖಾಸಗಿ ಆಸ್ಪತ್ರೆಯಲ್ಲಿ ಸೋಂಕಿನಿಂದ ದಾಖಲಾಗಿದ್ದು, ಅವರಿಗೆ ನಡೆಸಲಾದ ಆರಂಭಿಕ ತಪಾಸಣೆಯಲ್ಲಿ ನಿಫಾ ಪಾಸಿಟಿವ್ ಬಂದಿದೆ. ಹೆಚ್ಚಿನ ದೃಢೀಕರಣಕ್ಕೆ ಮಾದರಿಗಳನ್ನು ಪುಣೆ ವೈರಾಲಜಿ ಲ್ಯಾಬ್‌ಗೆ ಕಳುಹಿಸಲಾಗಿದೆ. ಸೋಂಕು ಪೀಡಿತ ಜಿಲ್ಲೆಗಳಲ್ಲಿ ಕಣ್ಗಾವಲು ಹೆಚ್ಚಿಸಲಾಗಿದ್ದು, ಸೋಂಕಿತರ ಸಂಪರ್ಕ ಪತ್ತೆಹಚ್ಚುವ ಕಾರ್ಯವನ್ನು ತೀವ್ರಗೊಳಿಸಲಾಗಿದೆ.

ಅವಧಿ ಮೀರಿದ ವಾಹನಗಳಿಗೆ ಹೇರಿದ್ದ ನಿಷೇಧ ರದ್ದು

ರಾಜಧಾನಿ ನಾಗರಿಕರ ಆಕ್ರೋಶ ಇಂಧನ ನಿಷೇಧ ಆದೇಶ ವಾಪಸ್

ದೆಹಲಿ: ವಾಯುಮಾಲಿನ್ಯ ನಿಯಂತ್ರಣ ಉದ್ದೇಶದಿಂದ ದೆಹಲಿಯಲ್ಲಿ ಅವಧಿ ಮೀರಿದ ಹಳೆಯ ವಾಹನಗಳಿಗೆ ಇಂಧನ ನಿಷೇಧಿಸುವ ನಿರ್ಧಾರಕ್ಕೆ ವ್ಯಾಪಕ ಟೀಕೆ ವ್ಯಕ್ತವಾದ ಬೆನ್ನಲ್ಲೇ ದೆಹಲಿಯ ಬಿಜೆಪಿ ಸರಕಾರ ತಾಂತ್ರಿಕ ಸಮಸ್ಯೆ ಕಾರಣ ನೀಡಿ ಹಳೆಯ ವಾಹನಗಳ ಮೇಲಿನ ಇಂಧನ ನಿಷೇಧ ಆದೇಶವನ್ನು ವಾಪಸ್ ಪಡೆದಿದೆ.

ಸರಕಾರ ಜನಾಕ್ರೋಶದ ಬೆನ್ನಲ್ಲೇ ತಾಂತ್ರಿಕ ಸಮಸ್ಯೆ ಕಾರಣ ನೀಡಿ ಹಳೆಯ ವಾಹನಗಳ ಮೇಲಿನ ಇಂಧನ ನಿಷೇಧವನ್ನು ತೆಗೆದುಹಾಕುವಂತೆ ವಾಯು ಗುಣಮಟ್ಟ ನಿರ್ವಹಣಾ ಆಯೋಗಕ್ಕೆ ಪತ್ರ ಬರೆದಿತ್ತು ಪತ್ರದಲ್ಲಿ, ಸ್ವಯಂಚಾಲಿತ ನಂಬರ್ ಪ್ಲೇಟ್ ಗುರುತಿಸುವಿಕೆ ವ್ಯವಸ್ಥೆ ಕ್ಯಾಮೆರಾಗಳಲ್ಲಿ ತಾಂತ್ರಿಕ ದೋಷಗಳು ಕಂಡುಬಂದಿದೆ ಹಾಗೂ ಸ್ಪೀಕರ್ ಕಾರ್ಯನಿರ್ವಹಿಸದಿರುವಂತಹ ಹಲವು ಸಮಸ್ಯೆಗಳಿವೆ. ಇನ್ನೂ ನೆರೆಯ ರಾಜ್ಯಗಳ ಪೆಟ್ರೋಲ್ ಪಂಪ್‌ಗಳಲ್ಲಿ ಎಎನ್‌ಪಿಆರ್ ವ್ಯವಸ್ಥೆಯನ್ನು ಜಾರಿಗೆ ತಂದಿಲ್ಲ, ಹೀಗಾಗಿ ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಈ ಕಾರಣಗಳಿಂದ ಹಳೆಯ ವಾಹನಗಳ ಮೇಲಿನ ಇಂಧನ ನಿಷೇಧವನ್ನು ತೆಗೆದುಹಾಕಲು ಪತ್ರ ಬರೆದಿತ್ತು. ಸರಕಾರದ ಪತ್ರದ ಬೆನ್ನಲ್ಲೇ ಆದೇಶವನ್ನು ಹಿಂಪಡೆಯಲಾಗಿದೆ.

ಸರಕಾರದ ಬದಲಾದ ನಿರ್ಧಾರದಿಂದಾಗಿ 10 ವರ್ಷಕ್ಕಿಂತ ಹಳೆಯದಾದ (ಡೀಸೆಲ್) ಮತ್ತು 15 ವರ್ಷ ಹಳೆಯದಾದ (ಪೆಟ್ರೋಲ್) ವಾಹನಗಳಿಗೆ ದೆಹಲಿಯ ಪೆಟ್ರೋಲ್ ಪಂಪ್‌ಗಳಲ್ಲಿ ಇಂಧನ ಹಾಕಿಸಬಹುದು. ಪೆಟ್ರೋಲ್ ಪಂಪ್‌ಗಳು ಇನ್ನು ಮುಂದೆ ಹಳೆಯ ವಾಹನಗಳನ್ನು ಅವುಗಳ ವರ್ಷದ ಆಧಾರದ ಮೇಲೆ ಸೇವೆಯನ್ನು ನಿರಾಕರಿಸುವಂತಿಲ್ಲ.

ವಿಶಾಖಪಟ್ಟಣಂನ ಐಎನ್‌ಎಸ್ ದೇಗಾದಲ್ಲಿ ಫೈಟರ್ ಪೈಲಟ್ ತರಬೇತಿ ಪಡೆದ ಮಹಿಳೆ

ಆಸ್ತಾ ಪೂನಿಯಾ ನೌಕಾಪಡೆ ಮೊದಲ ಮಹಿಳಾ ಫೈಟರ್ ಪೈಲಟ್

ದೆಹಲಿ: ವಿಶಾಖಪಟ್ಟಣಂನ ಐಎನ್‌ಎಸ್ ದೇಗಾದಲ್ಲಿ ಫೈಟರ್ ಪೈಲಟ್ ತರಬೇತಿ ಪಡೆದ ಮೊದಲ ಮಹಿಳೆ ಆಸ್ತಾ ಪೂನಿಯಾ ಅವರನ್ನು ಭಾರತೀಯ ನೌಕಾಪಡೆ ಶುಕ್ರವಾರ ತನ್ನ ಫೈಟರ್ ಸ್ಟ್ರೀಮ್‌ಗೆ ಸೇರಿಸಿಕೊಂಡಿದೆ.

ಸಬ್ ಲೆಫ್ಟಿನೆಂಟ್(ಎಸ್‌ಎಲ್‌ಟಿ) ಆಸ್ತಾ ಪೂನಿಯಾ ನೌಕಾ ವಾಯುಯಾನದ ಫೈಟರ್ ಸ್ಟ್ರೀಮ್‌ಗೆ ಸೇರ್ಪಡೆಗೊಂಡ ಮೊದಲ ಮಹಿಳೆಯಾಗಿದ್ದು, ಇದು ಅಡೆತಡೆಗಳನ್ನು ಮುರಿದು ನೌಕಾಪಡೆಯಲ್ಲಿ ಮಹಿಳಾ ಫೈಟರ್ ಪೈಲಟ್‌ಗಳ ಸೇರ್ಪಡೆಯ ಹೊಸ ಯುಗಕ್ಕೆ ನಾಂದಿ ಹಾಡಿದೆ ಎಂದು ಭಾರತೀಯ ನೌಕಾಪಡೆ ಹೇಳಿದೆ. ಭಾರತೀಯ ನೌಕಾಪಡೆಯು ಈಗಾಗಲೇ ಮಹಿಳಾ ಅಧಿಕಾರಿಗಳನ್ನು ಎಂ.ಆರ್

ವಿಮಾನ ಮತ್ತು ಹೆಲಿಕಾಪ್ಟರ್‌ಗಳಲ್ಲಿ ಪೈಲಟ್‌ಗಳು ಮತ್ತು ನೇವಲ್ ಏರ್ ಆಪರೇಷನ್ ಆಫೀಸರ್‌ಗಳಾಗಿ ನೇಮಿಸಿಕೊಂಡಿದೆ. ಜುಲೈ 3ರಂದು ಸಬ್ ಲೆಫ್ಟಿನೆಂಟ್ ಆಸ್ತಾ ಪೂನಿಯಾ, ಲೆಫ್ಟಿನೆಂಟ್ ಅತುಲ್ ಕುಮಾರ್ ಧುಲ್ ಅವರೊಂದಿಗೆ, ಎಸಿಎನ್‌ಎಸ್(ವಾಯು) ರಿಯರ್ ಅಡ್ಮಿರಲ್ ಜನಕ್ ಬೆವ್ಲಿ ಅವರಿಂದ ಪ್ರತಿಷ್ಠಿತ 'ವಿಂಗ್ಸ್ ಆಫ್ ಗೋಲ್ಡ್' ಅನ್ನು ಪಡೆದರು.ಎಸ್‌ಎಲ್‌ಟಿ ಆಸ್ತಾ ಪೂನಿಯಾ ಅವರನ್ನು ಫೈಟರ್ ಸ್ಟ್ರೀಮ್‌ಗೆ ಸೇರಿಸಿಕೊಳ್ಳುವ ಮೂಲಕ ನೌಕಾ ವಾಯುಯಾನದಲ್ಲಿ ಲಿಂಗ ಸಮಾನತೆ ಮತ್ತು ನಾರಿ ಶಕ್ತಿಯನ್ನು ಉತ್ತೇಜಿಸುವ ಬಗ್ಗೆ ಭಾರತೀಯ ನೌಕಾಪಡೆಯ ಬದ್ಧತೆಯನ್ನು ಎತ್ತಿ ತೋರಿಸುತ್ತದೆ, ಸಮಾನತೆ ಮತ್ತು ಅವಕಾಶದ ಸಂಸ್ಕೃತಿಯನ್ನು ಬೆಳೆಸುತ್ತದೆ ಎಂದು ಪ್ರಕಟಣೆಯಲ್ಲಿ ಭಾರತೀಯ ನೌಕಾಪಡೆ ತಿಳಿಸಿದೆ.

ದಳಪತಿ ವಿಜಯ್ ಸಿ.ಎಂ ಅಭ್ಯರ್ಥಿ

ಚೆನ್ನೈ: ತಮಿಳುನಾಡು ವಿಧಾನಸಭಾ ಚುನಾವಣೆಗೆ ಇನ್ನೂ ಒಂದು ವರ್ಷ ಬಾಕಿಯಿರುವಂತೆಯೇ ರಾಜಕೀಯ ಪಕ್ಷಗಳಲ್ಲಿ ಚಟುವಟಿಕೆಗಳು ಗರಿಗೆದರಿದ್ದು, ಈಗಾಗಲೇ ತಯಾರಿ ಆರಂಭಿಸಿವೆ.

ತಮಿಳಗ ವೆಟ್ರಿ ಕಳಗಂ ಪಕ್ಷವು ಸಂಸ್ಥಾಪಕ ದಳಪತಿ ವಿಜಯ್ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಶುಕ್ರವಾರ ಘೋಷಿಸಿದೆ. ಈ ಸಂಬಂಧ ನಡೆದ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿಶೇಷ ನಿರ್ಣಯವೊಂದನ್ನು ಅಂಗೀಕರಿಸಲಾಗಿದೆ. ಮುಂದಿನ ತಿಂಗಳು ಬೃಹತ್ ಸಮಾವೇಶ ಆಯೋಜಿಸಲು ಪ್ರಸ್ತಾಪಿಸಲಾಗಿದೆ. ಪಕ್ಷದ ಸಿದ್ಧಾಂತವನ್ನು ಜನರಿಗೆ ತಲುಪಿಸಲು ಹಳ್ಳಿಗಳಲ್ಲಿ ಸಾರ್ವಜನಿಕ ಸಭೆ ಆಯೋಜಿಸಲು ಪಕ್ಷ ನಿರ್ಧರಿಸಿದೆ. ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಡಿಎಂಕೆ ಅಥವಾ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದಿದೆ.

ರಷ್ಯಾದಿಂದ ತಾಲಿಬಾನ್ ಸರಕಾರಕ್ಕೆ ಮಾನ್ಯತೆ

ಮಾಸ್ಕೋ: ಜಾಗತಿಕ ಮಟ್ಟದಲ್ಲಿ ಮಹತ್ವದ ರಾಜತಾಂತ್ರಿಕ ಬೆಳವಣಿಗೆಯೊಂದು ನಡೆದಿದ್ದು ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಸರಕಾರವನ್ನು ರಷ್ಯಾ ಅಧಿಕೃತವಾಗಿ ಮಾನ್ಯ ಮಾಡಿದೆ. ಆಗಸ್ಟ್



2021ರಲ್ಲಿ ತಾಲಿಬಾನ್ ಸರಕಾರವು ಅಫ್ಘಾನಿಸ್ತಾನದಲ್ಲಿ ಅಧಿಕಾರಕ್ಕೆ ಬಂದ ನಂತರ ಅದಕ್ಕೆ ಅಧಿಕೃತ ಮಾನ್ಯತೆ ಕೊಟ್ಟ ಮೊದಲ ದೇಶ ರಷ್ಯಾ ಆಗಿದ್ದು, ಅದು ಅಫ್ಘಾನ್‌ನ ರಾಯಭಾರಿಯನ್ನೂ ಸ್ವೀಕರಿಸಿದೆ. ರಷ್ಯಾದ ವಿದೇಶಾಂಗ ಸಚಿವಾಲಯವು ತಾಲಿಬಾನ್ ಅನ್ನು ನಿಷೇಧಿತ ಸಂಘಟನೆಗಳ ಪಟ್ಟಿಯಿಂದ ತೆಗೆದುಹಾಕಿರುವುದಾಗಿ ಘೋಷಿಸಿದ್ದು ಆಮೂಲಕ ಪೂರ್ಣ ರಾಜತಾಂತ್ರಿಕ ಮಾನ್ಯತೆಗೆ ದಾರಿ ತೆರವು ಮಾಡಿಕೊಟ್ಟಿತು. ಕಾಬೂಲ್‌ನಲ್ಲಿ ತಾಲಿಬಾನ್ ನೇತೃತ್ವದ ಸರಕಾರದಿಂದ ನೇಮಿಸಲ್ಪಟ್ಟ ಅಫ್ಘಾನಿಸ್ತಾನದ ಹೊಸ ರಾಯಭಾರಿ ಗುಲ್ ಹಸನ್ ಹಸನ್ ಅವರ ರುಜುವಾತುಗಳನ್ನು ರಷ್ಯಾ ಔಪಚಾರಿಕವಾಗಿ ಸ್ವೀಕರಿಸಿತು. ರಷ್ಯಾದ ವಿದೇಶಾಂಗ ಸಚಿವಾಲಯವು ಈ ಕ್ರಮವು ಎರಡು ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಸಹಕಾರವನ್ನು ಉತ್ತೇಜಿಸುತ್ತದೆ ಎಂದು ಹೇಳಿದೆ. ಅಫ್ಘಾನಿಸ್ತಾನದಲ್ಲಿನ ಪ್ರಸ್ತುತ ವಾಸ್ತವತೆಯನ್ನು ಸಂಪೂರ್ಣವಾಗಿ ಅರಿತ ನಂತರವೇ ಈ ಮಾನ್ಯತೆಯನ್ನು ನೀಡಲಾಗಿದೆ ಎಂದು ಅದು ಹೇಳಿದೆ.

ಸಂತ್ರಸ್ತ ಕುಟುಂಬಕ್ಕೆ ಧಮ್ಕಿ ಏರ್ ಇಂಡಿಯಾ ಸ್ಪಷ್ಟನೆ

ಅಹಮದಾಬಾದ್: ಇತ್ತೀಚೆಗೆ ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ನೀಡಬೇಕಿರುವ ಪರಿಹಾರಕ್ಕೆ ಸಂಬಂಧಿಸಿ ಏರ್ ಇಂಡಿಯಾ ಸಂಸ್ಥೆ ಬೆದರಿಕೆ ಹಾಕುತ್ತಿದೆ ಎಂದು ಮೃತರ ಕುಟುಂಬಸ್ಥರು ಆರೋಪಿಸಿದ್ದು, ಇದನ್ನು ವಿಮಾನಯಾನ ಸಂಸ್ಥೆ ನಿರಾಕರಿಸಿದೆ. ಅಹಮದಾಬಾದ್‌ನಲ್ಲಿ ಜೂನ್ 12ರಂದು ನಡೆದ ಏರ್ ಇಂಡಿಯಾ-171 ವಿಮಾನ ಅಪಘಾತದಲ್ಲಿ ಒಟ್ಟು 241 ಮಂದಿ ಸಾವನ್ನಪ್ಪಿದ್ದು, ಬಳಿಕ ಸಂತ್ರಸ್ತ ಕುಟುಂಬಗಳಿಗೆ ವಿಮಾನಯಾನ ಸಂಸ್ಥೆಯು ಪರಿಹಾರ ನೀಡುವ ಪ್ರಕ್ರಿಯೆಯನ್ನು ಚಾಲನೆಗೊಳಿಸಿದೆ. ಆದರೆ ಈ ನಡುವೆ ವಿಮಾನಯಾನ ಸಂಸ್ಥೆಯು ತಮ್ಮ ಮೇಲೆ ಒತ್ತಡ ಹೇರುತ್ತಿದೆ ಎಂದು ಸಂತ್ರಸ್ತ ಕುಟುಂಬಗಳು ಆರೋಪಿಸಿವೆ.

ಅಪಘಾತದ ವಾರಗಳ ಬಳಿಕ ವಿಮಾನಯಾನ ಸಂಸ್ಥೆಯು ಒದಗಿಸುವ ಪ್ರಶ್ನಾವಳಿಯನ್ನು ಪೂರ್ಣಗೊಳಿಸಲು ವಿಫಲವಾದರೆ ಪರಿಹಾರ ನೀಡಲಾಗುವುದಿಲ್ಲ ಎನ್ನುವ ಬೆದರಿಕೆ ಒಡ್ಡುತ್ತಿದೆ, ಅಲ್ಲದೇ ಪರಿಹಾರ ಪಾವತಿಗಳನ್ನು ಕಡಿತಗೊಳಿಸಲು ತಮ್ಮ ಕುಟುಂಬದ ಮೃತ ಸದಸ್ಯರ ಮೇಲಿನ ಆರ್ಥಿಕ ಅವಲಂಬನೆಯನ್ನು ಬಹಿರಂಗಪಡಿಸುವ ಪತ್ರಗಳಿಗೆ ಸಹಿ ಹಾಕುವಂತೆ ಒತ್ತಾಯಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆಯ ವಿರುದ್ಧ ಕೆಲವರು ಆರೋಪಿಸಿದ್ದಾರೆ. ಈ ಆರೋಪಗಳಿಗೆ ಪ್ರತಿಕ್ರಿಯಿಸಿರುವ ವಿಮಾನಯಾನ ಸಂಸ್ಥೆಗಳು, ಇದು ಆಧಾರ ರಹಿತ ಎಂದು ಹೇಳಿ ತಿರಸ್ಕರಿಸಿದೆ.

ರಘುವಂಶಿ ಸೋದರಿ ವಿರುದ್ಧ ಎಫ್‌ಐಆರ್

ಗುವಾಹಟಿ: ರಾಷ್ಟ್ರವನ್ನೇ ಬೆಚ್ಚಿ ಬೀಳಿಸಿರುವ ರಾಜಾ ರಘುವಂಶಿ ಹನಿಮೂನ್ ಕೊಲೆ ಪ್ರಕರಣದಲ್ಲಿ ಆಘಾತಕಾರಿ ತಿರುವೊಂದು ಆಗಿದೆ. ರಾಜಾ ಅವರ ಸಹೋದರಿ ಶ್ರಸ್ತಿ ರಘುವಂಶಿ ವಿರುದ್ಧ ಗುವಾಹಟಿ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 302ರ ಅಡಿಯಲ್ಲಿ ಕೊಲೆ

ಆರೋಪ ಸೇರಿದಂತೆ, ಭಯ ಸೃಷ್ಟಿಸುವ ಮತ್ತು ಸಾಮಾಜಿಕ ಅಶಾಂತಿಯನ್ನು ಉಂಟುಮಾಡುವ ಆರೋಪಗಳಡಿ ಎಫ್‌ಐಆರ್ ದಾಖಲಿಸಿದ್ದಾರೆ. ಸೋಶಿಯಲ್ ಮೀಡಿಯಾ ಪೋಸ್ಟ್‌ಗಳಲ್ಲಿ ಸೋನಂ ರಘುವಂಶಿಯನ್ನು ಕೊಲೆಯ ಮುಖ್ಯ ಆರೋಪಿಯೆಂದು ಭಾವನಾತ್ಮಕವಾಗಿ ಆರೋಪಿಸಿದ್ದು ವೈರಲ್ ಆಗಿವೆ. ಒಂದು ಪೋಸ್ಟ್‌ನಲ್ಲಿ, ರಾಜಾನನ್ನು ಮೇಘಾಲಯದ ಹನಿಮೂನ್‌ನಲ್ಲಿ ಸೋನಂ ಬಲಿಕೊಟ್ಟಿದ್ದಾಳೆ ಎಂದು ಶ್ರಸ್ತಿ ಆರೋಪಿಸಿದ್ದು, ಈ ಹೇಳಿಕೆ ಸಾಮಾಜಿಕ ಸೌಹಾರ್ದಕ್ಕೆ ಧಕ್ಕೆ ತರುವಂತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ. ಇಂದೋರ್‌ನ ಸೋನಂ ಮತ್ತು ರಾಜಾ ರಘುವಂಶಿ ಮೇ 11ರಂದು ವಿವಾಹವಾದ ಕೆಲವೇ ದಿನಗಳಲ್ಲಿ ಶಿಲ್ಲಾಂಗ್‌ಗೆ ಹನಿಮೂನ್‌ಗೆ ತೆರಳಿದ್ದರು. ಜೂನ್ 2ರಂದು ಪೂರ್ವ ಖಾಸಿ ಬೆಟ್ಟಗಳ ವೈಸಾವ್‌ಡಾಂಗ್ ಜಲಪಾತದ ಬಳಿಯ ರಾಜಾ ರಘುವಂಶಿ ಶವ ಪತ್ತೆಯಾಗಿತ್ತು.

ರಿಜಿಜು ಹೇಳಿಕೆ: ಚೀನಾ ಆಕ್ಷೇಪ

ಬೀಜಿಂಗ್: ದಲೈ ಲಾಮಾ ಅವರು ಉತ್ತರಾಧಿಕಾರಿಯ ನೇಮಕದಲ್ಲಿ ತಮ್ಮ ಆಶಯದಂತೆಯೇ ನಡೆದುಕೊಳ್ಳಿ ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರ ಹೇಳಿಕೆಗೆ ಚೀನಾ ಶುಕ್ರವಾರ ಆಕ್ಷೇಪ ವ್ಯಕ್ತಪಡಿಸಿದ್ದು, ಟಿಬೆಟ್ ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಎಚ್ಚರಿಕೆ ವಹಿಸುವಂತೆ ಭಾರತಕ್ಕೆ ಒತ್ತಾಯಿಸಿದೆ. ಸುದ್ದಿಗೋಷ್ಠಿಯಲ್ಲಿ ಕಿರಣ್ ರಿಜಿಜು ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೋ ನಿಂಗ್, 14ನೇ ದಲೈ ಲಾಮಾ ಅವರ ಚೀನಾ ವಿರೋಧಿ ಪ್ರತ್ಯೇಕತಾವಾದಿ ಸ್ವಭಾವದ ಬಗ್ಗೆ ಭಾರತ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು ಮತ್ತು ಟಿಬೆಟ್‌ಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತನ್ನ ಬದ್ಧತೆಗಳನ್ನು ಗೌರವಿಸಬೇಕು ಎಂದರು. ಷಿಜಾಂಗ್ ವಿಚಾರ ಚೀನಾ-ಭಾರತ ಸಂಬಂಧದ ಸುಧಾರಣೆ ಮತ್ತು ಅಭಿವೃದ್ಧಿಯ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು ಎಂದು ಮಾವೋ ಹೇಳಿದ್ದಾರೆ. ಮುಂದಿನ ದಲೈಲಾಮಾ ಯಾರಾಗುತ್ತಾರೆ ಎಂಬು ದನ್ನು ಅವರೇ ನಿರ್ಧರಿಸುತ್ತಾರೆ ಎಂದು ರಿಜಿಜು ತಿಳಿಸಿದ್ದರು.

ಸಮಾಚಾರ ಸಣ್ಣದಲ್ಲ

ಪ್ರಚೋದನಕಾರಿ ಹೇಳಿಕೆ: ಆರೋಪಿ ಸೆರೆ

ಉಡುಪಿ: ಕರಾವಳಿಯಲ್ಲಿ ವಿಶೇಷ ಕಾರ್ಯಪಡೆ ಎಸ್‌ಎಫ್ ತಂಡ ಸಕ್ರಿಯವಾಗಿದೆ. ರಕ್ತಕ್ಕೆ ರಕ್ತವೇ ಬೇಕು ಎಂದು ಸ್ಟೇಟಸ್ ಹಾಕಿದವನನ್ನು ಎಸ್‌ಎಫ್ ಅಧಿಕಾರಿಗಳು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ಉಡುಪಿಯ ಕಾರ್ಕಳ ಇರ್ವತ್ತೂರು ಗ್ರಾಮದ ಆಶಿಕ್ ಎಸ್ ಕೋಟ್ಯಾನ್ ಎಂದು ಗುರುತಿಸಲಾಗಿದೆ.



ಈತ ತನ್ನ ಇನ್ಸ್ಟಾಗ್ರಾಮ್‌ನಲ್ಲಿ ಪ್ರಚೋದನಕಾರಿ ಸ್ಟೇಟಸ್ ಹಾಕಿದ್ದ. ನಮಗೆ ಯಾವುದೇ ರೀತಿಯ ಉತ್ತರಗಳು ಬೇಡ ರಕ್ತಕ್ಕೆ ರಕ್ತವೇ ಉತ್ತರವಾಗಬೇಕು. ಜೀವಕ್ಕೆ ಜೀವನೇ ಬೇಕು ಎಂದು ಮಾರಕಾಯುಧಗಳ ಚಿಹ್ನೆ ಬಳಸಿ ಸ್ಟೇಟಸ್ ಹಾಕಿದ್ದ. ಈ ಹಿನ್ನೆಲೆ ಆರೋಪಿ ವಿರುದ್ಧ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ನಾಯಕರ ಸರ್ಟಿಫಿಕೆಟ್ ಬೇಕಿಲ್ಲ

ಚಿಕ್ಕಮಗಳೂರು: ಆರ್‌ಎಸ್‌ಎಸ್ ದೇಶಭಕ್ತಿಗೆ ಸರ್ಟಿಫಿಕೆಟ್ ಕೊಡೊ ಯೋಗ್ಯತೆ ಕಾಂಗ್ರೆಸ್‌ಗಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆರ್‌ಎಸ್‌ಎಸ್ ಬ್ಯಾನ್ ಮಾಡುವುದಾಗಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ವಿಚಾರವಾಗಿ ಮಾತನಾಡಿದ ಅವರು, ಕೆಲವರಿಗೆ ತಲೆಯಲ್ಲಿ ಸ್ವಲ್ಪ ವ್ಯತ್ಯಾಸ ಆಗಿರುತ್ತದೆ. ಏನೇನೋ ಮಾತನಾಡುತ್ತಾರೆ. ತಲೆಸರಿಯಾಗಿ ಇದಿದ್ದರೆ ಹೀಗೆಲ್ಲಾ ಮಾತನಾಡುತ್ತಿರಲಿಲ್ಲ. ಗಾಂಧಿ ಹತ್ಯೆ ಆರೋಪದಲ್ಲಿ ಮೊದಲ ಬಾರಿಗೆ ಆರ್‌ಎಸ್‌ಎಸ್ ಬ್ಯಾನ್ ಮಾಡಿದರು. ಗಾಂಧಿ ಹತ್ಯೆಯಲ್ಲಿ ಆರ್‌ಎಸ್‌ಎಸ್ ಪಾತ್ರವಿಲ್ಲ ಎಂದು ಮೂರು ತನಿಖಾ ಸಂಸ್ಥೆಗಳು ಕ್ಲಿನ್‌ಚಿಟ್ ಕೊಟ್ಟಿದ್ದವು. ಆಗ ನೆಹರು ಸರಕಾರವೇ ಆರ್‌ಎಸ್‌ಎಸ್ ಬ್ಯಾನ್ ಮಾಡಿದ್ದ ಆದೇಶವನ್ನು ವಾಪಸು ಪಡೆದುಕೊಳ್ಳುತ್ತಿದೆ. ಮಲ್ಲಿಕಾರ್ಜುನ ಖರ್ಗೆ ಅವರ ಸುಪುತ್ರರ ಬಾಯಲ್ಲಿ ಎಷ್ಟು ಸುಳ್ಳು ಬರುತ್ತೆ ಅಂತ ಸಾಬೀತಾಯ್ತು. ಎರಡನೇ ಬಾರಿ ಬ್ಯಾನ್ ಮಾಡಿದ್ದು ತುರ್ತು ಪರಿಸ್ಥಿತಿಯಲ್ಲಿ, ತುರ್ತು ಪರಿಸ್ಥಿತಿ ಜತೆ ಇಂದಿರಾಗಾಂಧಿ ಅಧಿಕಾರವೂ ಹೊಯಿತು. 1963ರ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪೊಲೀಸ್, ಮಿಲಿಟರಿ ಹೊರತುಪಡಿಸಿ ಭಾಗವಹಿಸಿದ ಸಂಘಟನೆ ಆರ್‌ಎಸ್‌ಎಸ್. ಅಂದಿನ ಪ್ರಧಾನಮಂತ್ರಿ ನೆಹರು, ಅದೇ ಕಾಂಗ್ರೆಸ್ ಪಕ್ಷವಿದದ್ದು ಎಂದ ಅವರು, ಅಂಬೇಡ್ಕರ್ ಹೆಸರು ಹೇಳುವ ಯೋಗ್ಯತೆಯೂ ಕಾಂಗ್ರೆಸ್ ಪಕ್ಷಕಿಲ್ಲ ಎಂದು ಹೇಳಿದರು.

ಹೈಕೋರ್ಟ್‌ಗೆ ಸರಕಾರದ ಮುಚ್ಚಳಿಕೆ

ಬೆಂಗಳೂರು: ಉದ್ಯಮ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸದ ಹೊರತು ಕನಿಷ್ಠ ವೇತನ ಪರಿಷ್ಕರಣೆ ಮಾಡಿ ಹೊರಡಿಸಲಾಗಿರುವ ಉದ್ದೇಶಿತ ಕರಡು ಅಧಿಸೂಚನೆ ಅನ್ವಯ ಭವಿಷ್ಯದಲ್ಲಿ ಯಾವುದೇ ಕ್ರಮಕ್ಕೆ ಮುಂದಾಗುವುದಿಲ್ಲ ಎಂದು ರಾಜ್ಯ ಸರಕಾರವು ಹೈಕೋರ್ಟ್‌ಗೆ ಮುಚ್ಚಳಿಕೆ ನೀಡಿದೆ. ಅಧಿಸೂಚನೆಗಳನ್ನು ಪ್ರಶ್ನಿಸಿ ಶಿವಮೊಗ್ಗ-ದಾವಣಗೆರೆಯ ನಂಜಪ್ಪ ಆಸ್ಪತ್ರೆಗಳ ಆಡಳಿತಾಧಿಕಾರಿ ಎಸ್. ಸವಿತಾ ಮತ್ತು ನಂಜಪ್ಪ ಟ್ರಸ್ಟ್‌ನ ಆಡಳಿತಾಧಿಕಾರಿ ಪಿ.ನಳಿನಾ ಸಲ್ಲಿಸಲಾಗಿರುವ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಎಸ್.ನಾಗಾನಂದ್ ಅವರು ಏಕರೂಪದ ವೇತನ ನಿಗದಿಪಡಿಸುವ ಪ್ರಸ್ತಾವ, ಕನಿಷ್ಠ ವೇತನ ಕಾಯಿದೆ-1948ರ ಉದ್ದೇಶಕ್ಕೆ ವಿರುದ್ಧವಾಗಿದೆ. ಕರಡು ಅಧಿಸೂಚನೆಗಳಲ್ಲಿ ಪ್ರಸ್ತಾಪಿರುವ ದರಗಳು ಹಿಂದಿನ ಹೆಚ್ಚಳಕ್ಕೆ ಹೋಲಿಕೆ ಮಾಡಿದರೆ ಶೇ.40 ರಿಂದ ಶೇ.60ರಷ್ಟು ಅಧಿಕವಾಗಿವೆ. ಈ ದರಗಳು ದೇಶದಲ್ಲೆ ಅತ್ಯಧಿಕವಾಗಿವೆ ಎಂದರು. ಪ್ರಕರಣದ ಪ್ರತಿವಾದಿಗಳಾದ ಕಾರ್ಮಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಎಐಟಿಯುಸಿ (ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್) ಮತ್ತು ಸಿಐಟಿಯು (ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್) ಪ್ರಧಾನ ಕಾರ್ಯದರ್ಶಿ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಸುಂಕ ಒಪ್ಪಂದಕ್ಕೆ ಟ್ರಂಪ್ ಆತುರ

ವಾಷಿಂಗ್ಟನ್: ಭಾರತ ಮತ್ತು ಅಮೆರಿಕ ನಡುವೆ ವ್ಯಾಪಾರ ಮಾತುಕತೆಗಳು ನಿರಂತರವಾಗಿ ನಡೆಯುತ್ತಿವೆ. ಬಹುನಿರೀಕ್ಷಿತ ಮಧ್ಯಂತರ ವ್ಯಾಪಾರ ಒಪ್ಪಂದದ ಮಧ್ಯೆ, ಡೊನಾಲ್ಡ್ ಟ್ರಂಪ್, 170ಕ್ಕೂ ಹೆಚ್ಚು ದೇಶಗಳಿಗೆ ವ್ಯಾಪಾರ ಒಪ್ಪಂದ ಸಂಬಂಧ ಶ್ವೇತಭವನದಿಂದ ಪತ್ರಗಳನ್ನು ಕಳುಹಿಸಲು ಪ್ರಾರಂಭಿಸುವುದಾಗಿ ತಿಳಿಸಿದ್ದಾರೆ. ಈಗಾಗಲೇ ವಿಯೆಟ್ನಾಂ, ಚೀನಾ ಸೇ ರಿ ಕೆಲ ದೇಶಗಳ ಜತೆ ವ್ಯಾಪಾರ ಒಪ್ಪಂದಗಳನ್ನು ಅಂತಿ ಮಗೊಳಿಸಿದೆ. ಕಳೆದ ತಿಂಗಳು 'ಭಾರತಕ್ಕೆ ಬಾಗಿಲು ತೆರೆಯುವ' ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಬಹುದು ಎಂದು ಟ್ರಂಪ್ ಹೇಳಿದ್ದರು.

{ **ಎಚ್.ಡಿ. ರೇವಣ್ಣ** } ಶಾಸಕ

ಜೆಡಿಎಸ್ ಪಕ್ಷ ಅಧಿಕಾರಕ್ಕೆ ತರುವುದು ನಮ್ಮ ಗುರಿ. ಇದಕ್ಕಾಗಿ ಎಚ್.ಡಿ. ದೇವೇಗೌಡರು, ಕುಮಾರಣ್ಣ ಹಾಗೂ ನಾನು ಸಂಘಟನೆ ಮಾಡುತ್ತಿದ್ದೇವೆ. ಬಿಜೆಪಿ ಜತೆ ಸಮನ್ವಯ ಕಾಪಾಡಿಕೊಳ್ಳುತ್ತೇವೆ. ಹೊಂದಾಣಿಕೆಯಿಂದ ಚುನಾವಣೆಗಳನ್ನು ಎದುರಿಸುತ್ತೇವೆ. ರಾಜ್ಯ ಸರಕಾರದ ವಿರುದ್ಧ ಹೋರಾಟ ಮಾಡುತ್ತೇವೆ. ಕಾಂಗ್ರೆಸ್‌ನ ಯಾವುದೇ ವಿಚಾರಗಳ ಬಗ್ಗೆ ಮಾತನಾಡುವುದಿಲ್ಲ. ಅದು ನಮ್ಮ ಪಕ್ಷ ಅಲ್ಲ.



ಮೈಸೂರಿನ ಜಯದೇವ ಆಸ್ಪತ್ರೆಗೆ ಆಗಮಿಸುವ ರೋಗಿಗಳ ಸಂಖ್ಯೆ ಹೆಚ್ಚಳ

ಸರಣಿ ಹೃದಯಾಘಾತ, ಹೆಚ್ಚುವರಿ ವೈದ್ಯರ ನೇಮಕ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಹೃದಯಾಘಾತದಿಂದ ಸಾಯುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿರುವ ಬೆನ್ನಲ್ಲೇ ಎಚ್ಚತ್ತಿರುವ ರಾಜ್ಯ ಸರಕಾರ ಬೆಂಗಳೂರಿನಲ್ಲಿರುವ ಜಯದೇವ ಹಾಗೂ ರಾಜ್ಯದ ವಿವಿಧ ಭಾಗದಲ್ಲಿರುವ ಜಯದೇವ ಆಸ್ಪತ್ರೆಗಳಿಗೆ ಹೆಚ್ಚುವರಿ ತಜ್ಞ ವೈದ್ಯರ ನಿಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ. ಅದರಲ್ಲಿಯೂ ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ ಭಾಗದಲ್ಲಿ ಹೃದಯಾಘಾ ತದಿಂದ ಮೃತಪಡುವವರ ಸಂಖ್ಯೆ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ಮೈಸೂರಿನಲ್ಲಿರುವ ಜಯದೇವ ಹೃದ್ರೋಗ ಸಂಸ್ಥೆಗೆ ಹೆಚ್ಚುವರಿ ವೈದ್ಯರನ್ನು ನಿಯೋಜಿಸಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು, ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದರು.

ಇದಕ್ಕೆ ಸ್ಪಂದಿಸಿರುವ ಸಿದ್ದರಾಮಯ್ಯ ಅವರು ಕೂಡಲೇ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಗೆ ತಜ್ಞ ವೈದ್ಯರನ್ನು ನಿಯೋಜಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಹಾಸನ, ಮಂಡ್ಯ ಹಾಗೂ ಮೈಸೂರು ಭಾಗದಲ್ಲಿ 30 ರಿಂದ 50ರ ವಯೋಮಾನದವರಲ್ಲಿ ಹೃದಯಾಘಾತ ಪ್ರಕರಣ ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿರುವುದರಿಂದ ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ರೋಗಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಈ ಹಿಂದೆ ಸರಾಸರಿ ಪ್ರತಿನಿತ್ಯ 700 ರೋಗಿಗಳು ಬರುತ್ತಿದ್ದರೆ, ಇದೀಗ 1500-2000ಕ್ಕೆ ಏರಿಕೆಯಾಗಿದೆ. ಆದ್ದರಿಂದ ಈ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ವೈದ್ಯರು ಗೈರಾಗಿದ್ದರು. ಆದ್ದರಿಂದ ಇದೀಗ ಹೆಚ್ಚುವರಿ ವೈದ್ಯರನ್ನು ನಿಯೋಜಿಸಲು ಸಿದ್ದರಾಮಯ್ಯ ಅವರು ಸೂಚನೆ ನೀಡಿದ್ದಾರೆ.

ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಹೆಚ್ಚುವರಿ ತಜ್ಞ ವೈದ್ಯರ ನಿಯೋಜನೆ ಮಾಡಬೇಕಿದೆ. ಅಲ್ಲದೆ, ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾಥಮಿಕ ತಪಾಸಣೆ ವ್ಯವಸ್ಥೆ, ಹೃದಯಾಘಾತದ ಕಾರಣಗಳ ಕುರಿತು ಸಮಗ್ರ ಅಧ್ಯಯನ, ಜನಜಾಗೃತಿ ಮತ್ತು ಆರೋಗ್ಯ ಮೂಲಸೌಕರ್ಯ ಬಲಪಡಿಸುವಿಕೆ ಕ್ರಮವಹಿಸಬೇಕು ಎಂದು ಸಿಎಂ ಸಿದ್ದರಾಮಯ್ಯ, ಡಿಕೆಸಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಲಾಗಿತ್ತು. ಇದಕ್ಕೆ ಸ್ಪಂದಿಸಿರುವ ಸಿಎಂ ಅವರಿಗೆ ಧನ್ಯವಾದ.

-**ದಿನೇಶ್ ಗೂಳಿಗೌಡ**, ವಿಧಾನಪರಿಷತ್ ಸದಸ್ಯ

ಗೂಳಿಗೌಡರ ಪತ್ರದಲ್ಲಿ ಏನಿದೆ?

30 ರಿಂದ 50 ವರ್ಷ ವಯಸ್ಸಿನವರು ಹೆಚ್ಚಾಗಿ ಬಲಿಯಾಗುತ್ತಿದ್ದು, ಚಿಕ್ಕ ಮಕ್ಕಳು ಮತ್ತು ಯುವಜನತೆಯೂ ಈ ಸಮಸ್ಯೆಗೆ ತುತ್ತಾಗುತ್ತಿರುವುದು ಅತ್ಯಂತ ಕಳವಳಕಾರಿಯಾಗಿದೆ. ಈ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಭವಿಷ್ಯದಲ್ಲಿ ಇಂತಹ ದುರಂತಗಳನ್ನು ತಡೆಯಲು ಸರ್ಕಾರದ ತಕ್ಷಣದ ಮತ್ತು ದೀರ್ಘಕಾಲೀನ ಕ್ರಮಗಳು ಅತ್ಯಗತ್ಯ. ಮೈಸೂರಿನ ಜಯದೇವ ಆಸ್ಪತ್ರೆಗೆ ಹೆಚ್ಚುವರಿ ತಜ್ಞ ವೈದ್ಯರ ನೇಮಕ ಅಗತ್ಯವಾಗಿದೆ. ತುರ್ತು ಚಿಕಿತ್ಸಾ ಘಟಕದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮತ್ತು ಉತ್ತಮ ಚಿಕಿತ್ಸೆ ಒದಗಿಸಲು, ತಾತ್ಕಾಲಿಕವಾಗಿ ನಿಯೋಜನೆ ಮೂಲಕವಾದರೂ ತಜ್ಞ ವೈದ್ಯರನ್ನು ನಿಯೋಜಿಸಬೇಕು. ಇದರಿಂದ ಆಸ್ಪತ್ರೆ ಮೇಲಿನ ಹೊರೆಯನ್ನು ಕಡಿಮೆ ಮಾಡಿ, ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಲಭ್ಯವಾಗುವಂತೆ ಮಾಡುತ್ತದೆ. ಇದೇ ರೀತಿ ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆಗಳಲ್ಲಿ ಹೃದಯ ಸಂಬಂಧಿ ಕಾಯಿಲೆಯ ಲಕ್ಷಣ ಕಂಡುಬಂದವರು ಪ್ರಾಥಮಿಕ ಪರೀಕ್ಷೆಗೊಳಪಟ್ಟು, ಹೆಚ್ಚಿನ ಚಿಕಿತ್ಸೆ ಅಗತ್ಯವಿರುವವರನ್ನು ಮಾತ್ರ ಮೈಸೂರು ಜಯದೇವಕ್ಕೆ ಕಳುಹಿಸುವ ವ್ಯವಸ್ಥೆಯೂ ಆಗಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸರಕಾರಕ್ಕೆ ನೀಡಿದ್ದ ಸಲಹೆಗಳು?

- **ರಾಜ್ಯ ಸರಕಾರ 30 ವರ್ಷ ಮೇಲ್ಪಟ್ಟ ಎಲ್ಲರಿಗೂ ವಾರ್ಷಿಕ ಹೃದಯ ತಪಾಸಣೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಪರಿಶೀಲಿಸಬೇಕು.**
- **ಗ್ರಾಮೀಣ ಭಾಗದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೃದಯಾಘಾತದ ಪ್ರಾಥಮಿಕ ಚಿಕಿತ್ಸೆ ಮತ್ತು ಸಲಹೆ ನೀಡಲು ಸಿಬ್ಬಂದಿಗೆ ತರಬೇತಿ ನೀಡಬೇಕು.**
- **ಆರೋಗ್ಯಕರ ಆಹಾರ ಪದ್ಧತಿಗಳನ್ನು ಉತ್ತೇಜಿಸಲು ಮತ್ತು ಕಲಬೆರಕೆ ತಡೆಯಲು ಕಠಿಣ ಕ್ರಮಗಳನ್ನು ಜಾರಿಗೊಳಿಸಬೇಕು.**
- **ಹೃದಯ ಆರೋಗ್ಯ ಚಿಕಿತ್ಸಾ ಹಾಗೂ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸಿ, ಸ್ಥಳೀಯ ಮಟ್ಟದಲ್ಲಿ ರೋಗದ ಸ್ವರೂಪ ಮತ್ತು ಕಾರಣಗಳನ್ನು ಅಧ್ಯಯನ ಮಾಡಲು ಪ್ರೋತ್ಸಾಹಿಸಬೇಕು.**

'ಕೆಜಿ' ಕೋಡ್ ವರ್ಡ್ ಮೂಲಕ ಹಣ ವಸೂಲಿ
ಯಾರಿಂದ ಎಷ್ಟು ಹಣ ವಸೂಲಿ ಎಂದು ತನಿಖೆ

ಲೋಕಾಯುಕ್ತ ಹೆಸರಿನಲ್ಲಿ ಸರಕಾರಿ ನೌಕರರ ಸುಲಿಗೆ

ಬೆಂಗಳೂರು: ಅಬಕಾರಿ ಇಲಾಖೆ ಸೇರಿದಂತೆ ಸರಕಾರದ ವಿವಿಧ ಇಲಾಖೆಯ ನೌಕರರು ಮತ್ತು ಅಧಿಕಾರಿಗಳಿಗೆ ಲೋಕಾಯುಕ್ತ ಸಂಸ್ಥೆಯ ಹೆಸರನ್ನು ದುರ್ಬಳಕೆ ಮಾಡಿಕೊಂಡು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳು 'ಕೆಜಿ' ಕೋಡ್ ವರ್ಡ್ ಮೂಲಕ ಹಣ ವಸೂಲಿ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಪ್ರಕರಣದ ತನಿಖೆ ಕೈಗೊಂಡಿರುವ ಲೋಕಾಯುಕ್ತ ಪೊಲೀಸರಿಗೆ ಹಗರಣದ ಒಂದೊಂದೇ ಸತ್ಯಗಳು ಬಹಿರಂಗವಾಗುತ್ತಿದ್ದು, ಪ್ರಮುಖ ಆರೋಪಿ ನಿಂಗಪ್ಪ ಅಲಿಯಾಸ್ ನಿಂಗಪ್ಪ ಸಾವಂತ ಮತ್ತವರ ತಂಡವು ಹಣ ವಸೂಲಿಗೆ ಬಳಕೆ ಮಾಡುತ್ತಿದ್ದ ಕೋಡ್‌ವರ್ಡ್ ಅನ್ನು ಬಹಿರಂಗಗೊಂಡಿದೆ. ಕೆಜಿ ಕೋರ್ಡ್ ಮೂಲಕ ಹಣ ವಸೂಲಿ ಮಾಡಲಾಗುತ್ತಿದ್ದು, ಲಕ್ಷಾಂತರ ರು. ವಸೂಲಿ ಮಾಡಿರುವ ಆರೋಪಿಯು ಯಾವ ಅಧಿಕಾರಿಯಿಂದ ಎಷ್ಟು ಹಣ ವಸೂಲಿ ಮಾಡಲಾಗಿದೆ ಎಂಬುದನ್ನು ಕಲೆ ಹಾಕುತ್ತಿದೆ.

ಈ ನಡುವೆ, ಹಗರಣದಲ್ಲಿ ಭಾಗಿಯಾಗಿರುವ ಎಸ್‌ಪಿಯಾಗಿದ್ದ ಶ್ರೀನಾಥ್ ಜೋಶಿ ಐಪಿಎಸ್ ಆಗಿರುವ ಕಾರಣ ಲೋಕಾಯುಕ್ತ ಪೊಲೀಸರು ಸರಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಮಾಹಿತಿ ನೀಡಿದ್ದಾರೆ. ಅಲ್ಲದೇ, ಯುಪಿಎಸ್‌ಸಿಗೂ ಮಾಹಿತಿ ರವಾನಿಸಲಾಗಿದೆ. ನಿಂಗಪ್ಪ ಮತ್ತು ಶ್ರೀನಾಥ ಜೋಶಿ ವಿರುದ್ಧ ಹೊರಗಡೆಯಿಂದ ಯಾವುದೇ ದೂರು ಅರ್ಜಿಯು ಸ್ವೀಕೃತವಾಗಿಲ್ಲ. ಆದರೆ, ಲೋಕಾಯುಕ್ತರು ತಮ್ಮ ಗಮನಕ್ಕೆ ಬಂದ ಕೂಡಲೇ ದೂರು ದಾಖಲಿಸಿ ಮೇಲ್ಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಲೋಕಾಯುಕ್ತ ಸಂಸ್ಥೆಯು ತಿಳಿಸಿದೆ.

4.92 ಕೋಟಿ ರೂಪಾಯಿ ಕ್ರಿಪ್ಟೋದಲ್ಲಿ ಹೂಡಿಕೆ

ಆರೋಪಿ ನಿಂಗಪ್ಪ ಅಬಕಾರಿ ಇಲಾಖೆ ಮತ್ತು ಬಿಬಿಎಂಪಿ ವ್ಯಾಪ್ತಿಯ ಇತರೆ ಸರಕಾರಿ ಅಧಿಕಾರಿಗಳಿಗೆ ವಾಟ್ಸ್‌ಆ್ಯಪ್ ಮೂಲಕ ಕರೆ ಮಾಡಿ 'ನನಗೆ ಲೋಕಾಯುಕ್ತದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿಗಳ ಪರಿಚಯ ಇದೆ' ಎಂದು ಹೇಳಿಕೊಂಡು ಅವರುಗಳೊಂದಿಗೆ ಆತ್ಮೀಯತೆ ಬೆಳೆಸಿ ಹಣಕ್ಕೆ ಬೇಡಿಕೆಯಿಟ್ಟು ಸುಲಿಗೆ ಮಾಡುತ್ತಿದ್ದ. ಬೆಂಗಳೂರು ಲೋಕಾಯುಕ್ತ ಕಚೇರಿಗೆ ಆಗಾಗ್ಗೆ ಭೇಟಿ ನೀಡಿ, ಐಪಿಎಸ್ ಅಧಿಕಾರಿ ಶ್ರೀನಾಥ್ ಜೋಶಿ ಜತೆ ನಿಕಟ ಸಂಪರ್ಕದಲ್ಲಿದ್ದ. ಈ ಇಬ್ಬರು ಸೇರಿ ಸರಕಾರಿ ಅಧಿಕಾರಿಗಳಿಗೆ ಅಕ್ರಮವಾಗಿ ಆಸ್ತಿ ಹೊಂದಿರುವ ಬಗ್ಗೆ ಬೆದರಿಸಿ, ಅವರಿಂದ ಲಂಚದ ಹಣವನ್ನು ಕೋಡ್ ವರ್ಡ್ 'ಕೆಜಿ' ಮುಖಾಂತರ ವಸೂಲು ಮಾಡುತ್ತಿರುವುದು ತನಿಖೆಯಲ್ಲಿ ಗೊತ್ತಾಗಿದೆ. ಇದಲ್ಲದೇ, ಅಕ್ರಮವಾಗಿ ಸಂಗ್ರಹಿಸಿದ ಕಪ್ಪು ಹಣವನ್ನು ಬಿಳಿ ಹಣವಾಗಿ ಪರಿವರ್ತಿಸಲು ಕ್ರಿಪ್ಟೋ ಕರೆನ್ಸಿಯಲ್ಲಿ ಹೂಡಿಕೆ ಮಾಡಿರುವುದು, ನಿಂಗಪ್ಪನ ಮೊಬೈಲ್ ಪರಿಶೀಲನೆಯಲ್ಲಿಗೊತ್ತಾಗಿದೆ. ಈ ವೇಳೆ ಸುಮಾರು 24 ಕ್ರಿಪ್ಟೋ ವ್ಯಾಲೆಟ್‌ಗಳಿದ್ದು, ಅವುಗಳಲ್ಲಿ 13 ವ್ಯಾಲೆಟ್‌ಗಳಲ್ಲಿ ಸುಮಾರು 4.92 ಕೋಟಿ ರುಪಾಯಿಗಳಷ್ಟು ಹಣ ಹೂಡಿಕೆ ಮಾಡಿರುವುದು ತಿಳಿದುಬಂದಿದೆ ಎಂದು ಲೋಕಾಯುಕ್ತ ಪೊಲೀಸರು ಹೇಳಿದ್ದಾರೆ.

ಸುಗಮ ಖರೀದಿಗೆ ಎಫ್‌ಸಿಐಗೆ ವಹಿಸಲಿ: ಈರಣ್ಣ ಕಡಾಡಿ ಸಲಹೆ

ಬೆಳೆ ಖರೀದಿಸುವಲ್ಲಿ ಸರಕಾರ ವಿಫಲ

ಬೆಂಗಳೂರು: ರೈತರು ಉತ್ಪಾದಿಸುವ ಆಹಾರ ಧಾನ್ಯಗಳನ್ನು ಖರೀದಿಸುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಇದರ ಜವಾಬ್ದಾರಿಯನ್ನು ಭಾರತೀಯ ಆಹಾರ ನಿಗಮಕ್ಕೆ ವಹಿಸುವುದು ಸೂಕ್ತ ಎಂದು ಭಾರತೀಯ ಆಹಾರ ನಿಗಮದ ರಾಜ್ಯ ಘಟಕದ ಅಧ್ಯಕ್ಷ ಈರಣ್ಣ ಕಡಾಡಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಕೇಂದ್ರ ಸರಕಾರ ಹಲವು ಆಹಾರ ಧಾನ್ಯಗಳನ್ನು ಖರೀದಿಸಲು ಅವಕಾಶ ಕೊಡಲಾಗಿದೆ. 2012 ರಿಂದಲೂ ಖರೀದಿ ಮಾಡುತ್ತಿದ್ದಾರೆ. ಆದರೆ, ರಾಜ್ಯದಲ್ಲಿ ಸರಿಯಾಗಿ ಅನುಷ್ಠಾನ ಆಗುತ್ತಿಲ್ಲ. ಉದಾಹರಣೆಗೆ, ಕಳೆದ ವರ್ಷ 8 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಲು ಗುರಿ ಇಟ್ಟುಕೊಂಡಿದ್ದರು. ಆದರೆ, 3.44 ಲಕ್ಷ ಮೆಟ್ರಿಕ್ ಟನ್ ಖರೀದಿಸಲಾಗಿದೆ. ಜೋಳ 2 ಲಕ್ಷ ಮೆಟ್ರಿಕ್ ಟನ್ ಗುರಿ ಇದ್ದರೆ, 1.75 ಲಕ್ಷ ಮೆಟ್ರಿಕ್ ಟನ್ ಖರೀದಿಸಲಾಗಿದೆ. ಅಕ್ಕಿ 5 ಲಕ್ಷ ಮೆಟ್ರಿಕ್ ಟನ್ ಗುರಿ ಇಟ್ಟುಕೊಂಡಿದ್ದರೆ, ಕೇವಲ 510 ಮೆಟ್ರಿಕ್ ಟನ್ ಖರೀದಿಸಲಾಗಿದೆ. ಸರಿಯಾದ ಖರೀದಿ ವ್ಯವಸ್ಥೆ ಆಗಲಿಲ್ಲವೆಂದರೆ ಎಫ್‌ಸಿಐಗೆ ವಹಿಸಲು ರಾಜ್ಯ ಆಹಾರ ಸಚಿವರು ಗಮನಹರಿಸಬೇಕು ಎಂದು ಹೇಳಿದರು.

ಖರೀದಿ ಕೇಂದ್ರಗಳನ್ನು ಮೊದಲೇ ಸಿದ್ಧತೆ ಮಾಡಿಕೊಳ್ಳಬೇಕು. ರೈತರಿಂದ ಆಹಾರ ಧಾನ್ಯಗಳ ಖರೀದಿಯಲ್ಲಿ ವೈಫಲ್ಯವಾಗಿದೆ. ರೈತರ ಸಹಾಯಕ್ಕೆ ಬರಲು ಒಬ್ಬರು ಆಯುಕ್ತರನ್ನು ನೇಮಕ ಮಾಡಬೇಕು. ರಾಜ್ಯದಲ್ಲಿ 5949 ಎಫ್‌ಸಿಐ ಗೋದಾಮುಗಳಿದ್ದು, 56 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಮಾಡಬಹುದು ರೈತರಿಗೆ ಆರ್ಥಿಕ ಸಂಕಷ್ಟ ಇರುತ್ತದೆ. ಖರೀದಿ ಕೇಂದ್ರಗಳನ್ನು ಸಿದ್ಧತೆ ಮಾಡಿಕೊಂಡಿದ್ದರೆ ಒಳ್ಳೆಯದು. ಇಲ್ಲದಿದ್ದರೆ ಬೆಂಬಲ ಬೆಲೆಯಲ್ಲಿ ಖರೀದಿಸಲು ಮುಂಜಾಗ್ರತೆ ವಹಿಸಬೇಕು. ಕೇಂದ್ರ ಸರಕಾರ ರೈತರ ಉತ್ಪಾದನೆಗಳನ್ನು ಸಂಗ್ರಹ ಮಾಡಲು ಗೋದಾಮು ನಿರ್ಮಿಸಲು ರೈತರಿಗೆ, ಸಂಘ- ಸಂಸ್ಥೆಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದೆ. ಇದಕ್ಕೆ ಶೇ.25 ಸಬ್ಸಿಡಿ ಇದೆ. ಕಡಿಮೆ ಬಡ್ಡಿ ದರದಲ್ಲಿ ನಬಾರ್ಡ್ ಸಾಲ ನೀಡುತ್ತಿದೆ. ನಬಾರ್ಡ್ ಸಾಲ ನೀಡುತ್ತಿದ್ದರೂ ಖಾಸಗಿ ಬ್ಯಾಂಕ್‌ಗಳು ಜಮೀನನ್ನು ಎನ್‌ಎ ಮಾಡಬೇಕೆಂದು ಹೇಳುತ್ತಾರೆ. ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಎನ್‌ಎ ಮಾಡುವ ಅಗತ್ಯವಿಲ್ಲ ಎಂದು ಹೇಳಿದರು.

ಅಕ್ಕಿ ಮತ್ತು ಗೋಧಿಯನ್ನು ಹೆಚ್ಚುವರಿಯಾಗಿ ಬೆಳೆಯುವ ರಾಜ್ಯಗಳಿಂದ ರೈಲ್ವೆ ರೇಕುಗಳ ಮೂಲಕ ತರಿಸಿಕೊಂಡು ರಾಜ್ಯದಲ್ಲಿ ಯಶಸ್ವಿಯಾಗಿ ಪೂರೈಸಲಾಗಿದೆ. ರಾಜ್ಯದಲ್ಲಿಯೂ ಕೂಡ ಆಹಾರ ಧಾನ್ಯಗಳ ಖರೀದಿ ನಡೆಯುತ್ತಿದ್ದು, ಕೇಂದ್ರ ಸರಕಾರ ಬೆಂಬಲಿತ ಕನಿಷ್ಠ ಬೆಂಬಲ ಯೋಜನೆಯ ಮೂಲಕ ಭತ್ತ, ರಾಗಿ ಮತ್ತು ಜೋಳವನ್ನು ರಾಜ್ಯ ಸರಕಾರದ ಮೂಲಕ ಖರೀದಿಸಲಾಗಿದೆ.

-**ಈರಣ್ಣ ಕಡಾಡಿ**, ಭಾರತೀಯ ಆಹಾರ ನಿಗಮದ ರಾಜ್ಯ ಘಟಕದ ಅಧ್ಯಕ್ಷ

ಇಂದಿರಾ ಕಿಟ್ ಯೋಜನೆ ವಿಫಲ

ಮುಖ್ಯಮಂತ್ರಿಗಳು ಚುನಾವಣೆಗೂ ಮುನ್ನ 5 ಕೆಜಿ ಅಕ್ಕಿ ಘೋಷಣೆ ಮಾಡಿದರು. ಆದರೆ, ಕೊಡಲು ಸಾಧ್ಯವಾಗದೆ 170 ರು. ಕೊಡುತ್ತಿದ್ದಾರೆ. ಇದೀಗ ಅಕ್ಕಿ ಬದಲು ಇಂದಿರಾ ಕಿಟ್ ಕೊಡಲು ರಾಜ್ಯ ಸರಕಾರ ಮುಂದಾಗಿದೆ. ಸಕ್ಕರೆ, ಉಪ್ಪು, ತೊಗರಿಬೇಳೆ, ಅಡುಗೆ ಎಣ್ಣೆ, ಚಹಾ ಉಡಿ, ಕಾಫಿ ಪುಡಿ, ಗೋದಿ ಮತ್ತಿತರ ವಸ್ತುಗಳನ್ನು ಕೊಡುವ ಬಗ್ಗೆ ಸರಕಾರ ನಿರ್ಧರಿಸಿದೆ. ಆದರೆ, ಇನ್ನೂ ಜಾರಿಯಾಗಿಲ್ಲ, ಅಕ್ಕಿ ಕಳ್ಳಸಂತೆಯಲ್ಲಿ ಮಾರಾಟ ಮಾಡಿಕೊಳ್ಳುತ್ತಾರೆ. ಇಂದಿರಾ ಕಿಟ್ ಕೊಡಲು ತೀರ್ಮಾನ ಮಾಡಿದ್ದೇವೆ ಎಂದರು.

ಮುಂಚೂಣಿ ಕಾರ್ಯಕರ್ತರಿಗೆ ಸ್ಥಿತಿ ಸ್ಥಾಪಕತ್ವ ಯೋಜನೆಯಡಿ ತರಬೇತಿ: ತುಷಾರ್ ಗಿರಿನಾಥ್

ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಲ್ಲಾ ತ್ಯಾಜ್ಯ ನಿರ್ವಹಣಾ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಶಿಬಿರ ನಡೆಸಲು ಅಧಿಕಾರಿಗಳಿಗೆ ಬಿಬಿಎಂಪಿ ಆಡಳಿತಾಧಿಕಾರಿ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಬಿಬಿಎಂಪಿ, ಬಿಎಸ್‌ಡಬ್ಲ್ಯೂಎಂಎಲ್, ಸಿ40 ನಗರಗಳ ಸಹಯೋಗ, ಸೆನ್ಸಿಂಗ್ ಲೋಕಲ್ ನೇತೃತ್ವ ಹಾಗೂ ಸಾಹಸ್ ಸಂಸ್ಥೆಯ ಸಹಕಾರದೊಂದಿಗೆ ಬಿಎಸ್‌ಡಬ್ಲ್ಯೂಎಂಎಲ್ ಕಚೇರಿಯಲ್ಲಿ ನಡೆದ ಸಭೆ ಮಾತನಾಡಿದ ಅವರು, ನಗರದಲ್ಲಿ ಘನತ್ಯಾಜ್ಯ ವಿಭಾಗದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಆರೋಗ್ಯ ತಪಾಸಣಾ ಶಿಬಿರ ನಡೆಸುವ ಮೂಲಕ, ಆರೋಗ್ಯ ಸಮಸ್ಯೆಗಳನ್ನು ಪತ್ತೆಹಚ್ಚಿ, ತುರ್ತು ವೈದ್ಯಕೀಯ ಸಹಾಯ ಮಾಡಬೇಕು. ತ್ಯಾಜ್ಯ ಕಾರ್ಮಿಕರು ಹಾಗೂ ಮೇಲ್ವಿಚಾರಣೆ ಅಧಿಕಾರಿಗಳೊಂದಿಗೆ ಪ್ರತಿ ತಿಂಗಳು ಸಭೆಸಿ, ತಕ್ಷಣದ ಸಮಸ್ಯೆಗಳನ್ನು ಪತ್ತೆ ಹಚ್ಚಿ, ಸಂವಹನಕ್ಕೆ ವೇದಿಕೆ ಒದಗಿಸಿ ಒಟ್ಟಿಗೆ ಸಮಸ್ಯೆ ಪರಿಹಾರ ತಂತ್ರ ರೂಪಿಸಲು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಗುರುತಿಸಲಾದ ಒಣ ತ್ಯಾಜ್ಯ ಸಂಗ್ರಹಣಾ ಘಟಕಗಳನ್ನು ಬಲಪಡಿಸುವುದರ ಜತೆಗೆ, ಘಟಕಗಳಲ್ಲಿ ಕಾರ್ಯನಿರ್ವಹಿಸುವ ಕೆಲಸಗಾರರನ್ನು ಉದ್ಯಮಿಗಳಾಗುವ ವ್ಯವಸ್ಥೆ ಮಾಡಲಾಗುವುದು. ಜತೆಗೆ ಗುರುತಿನ ಚೀಟಿ ಕೂಡಾ ನವೀಕರಣ ಮಾಡಿ ನೀಡಲಾಗುವುದು. ಬೆಂಗಳೂರು ಹವಾಮಾನ ಕ್ರಿಯೆ ಮತ್ತು ಸ್ಥಿತಿಸ್ಥಾಪಕತ್ವ ಯೋಜನೆಯಡಿ ತ್ಯಾಜ್ಯ ನಿರ್ವಹಣೆಯಲ್ಲಿ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗಾಗಿ ಹವಾಮಾನ ಕ್ರಿಯೆಯ ಕುರಿತಾಗಿ ತರಬೇತಿ ಹಾಗೂ ಸಂವಾದ ಕಾರ್ಯಕ್ರಮ ಆಯೋಜಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಅಭಿನಂದನೆ ತಿಳಿಸಿದರು.

ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ನೇತೃತ್ವದಲ್ಲಿ ಶುಕ್ರವಾರ ಬಿಬಿಎಂಪಿ, ಬಿಎಸ್‌ಡಬ್ಲ್ಯೂಎಂಎಲ್, ಸಿ40 ನಗರಗಳ ಸಹಯೋಗ, ಸೆನ್ಸಿಂಗ್ ಲೋಕಲ್ ನೇತೃತ್ವ ಹಾಗೂ ಸಾಹಸ್ ಸಂಸ್ಥೆಗಳ ಸಭೆ ನಡೆಸಲಾಯಿತು.

ಸಭೆಯಲ್ಲಿ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಸ್ನೇಹಲ್, ರಮೇಶ್, ದಿಗ್ವಿಜಯ್ ಬೋಡ್ಕೆ, ಬಿಎಸ್‌ಡಬ್ಲ್ಯೂಎಂಎಲ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಮಾಮಣಿ, ಮುಖ್ಯ ಅಭಿಯಂತರರಾದ ಲೋಕೇಶ್, ಬಸವರಾಜ್ ಕಬಾಡೆ, ಲಿಂಕ್ ವರ್ಕರ್ಸ್, ಮಾರ್ಷಲ್‌ಗಳು ಉಪಸ್ಥಿತರಿದ್ದರು.

5 ವಲಯಗಳಲ್ಲಿ ತರಬೇತಿ: ಬೆಂಗಳೂರು ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ ಹಾಗೂ ಮಹದೇವಪುರ ವಲಯ ಸೇರಿದಂತೆ ಐದು ವಲಯಗಳಲ್ಲಿ 600ಕ್ಕಿಂತ ಹೆಚ್ಚು ಮುಂಚೂಣಿಯ ತ್ಯಾಜ್ಯ ಕಾರ್ಮಿಕರು ಹಾಗೂ ಅಧಿಕಾರಿಗಳಿಗೆ ಮೂರು ಹಂತದಲ್ಲಿ ಹವಾಮಾನ ಕ್ರಿಯೆಯ ಕುರಿತಾಗಿ ಸಂವಾದ ಕಾರ್ಯಕ್ರಮ ಹಾಗೂ ತರಬೇತಿ ನೀಡಲಾಗಿದೆ. ಮಾರ್ಚ್-ಜೂನ್ ನಡುವೆ ನಡೆದ ಸಾಮಾಜಿಕ ಸಂವಾದದ ಮೂಲಕ 75 ತ್ಯಾಜ್ಯ ಕಾರ್ಮಿಕರು ಭಾಗವಹಿಸಿ ತಮ್ಮ ಸಮಸ್ಯೆ ಹಂಚಿಕೊಂಡು ಪರಿಹಾರ ಮಾರ್ಗಗಳನ್ನು ರೂಪಿಸಿದ್ದಾರೆ ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ಕಾಡಿನಲ್ಲಿ ದನ ಮೇಯಿಸುವುದಕ್ಕೆ ಕಡಿವಾಣ

ಚಾಮರಾಜನಗರ: ಮಲೆ ಮಹದೇಶ್ವರ ವನ್ಯಧಾಮದಲ್ಲಿ 5 ಹುಲಿಗಳ ಹತ್ಯೆಯ ಬಳಿಕ ಎಚ್ಚೆತ್ತ ಅರಣ್ಯ ಇಲಾಖೆ ಜಿಲ್ಲೆಯ ಹುಲಿ ಸುರಕ್ಷಿತ ಅರಣ್ಯ ಹಾಗೂ ವನ್ಯಜೀವಿಧಾಮಗಳಲ್ಲಿ ಭಾರೀ ಕಟ್ಟೆಚ್ಚರ ವಹಿಸಿದೆ. ಜಿಲ್ಲೆಯ ಅರಣ್ಯಗಳಲ್ಲಿ ಗಸ್ತು ತೀವ್ರಗೊಳಿಸಿರುವುದಲ್ಲದೆ ಕಾಡಿನೊಳಗೆ ಜಾನುವಾರುಗಳನ್ನು ಬಿಡುವುದಕ್ಕೆ ತಡೆ ನೀಡಲಾಗಿದೆ.

ಕರ್ನಾಟಕ ರಾಜ್ಯದಲ್ಲೇ ಎರಡು ಹುಲಿ ಸುರಕ್ಷಿತ ಅರಣ್ಯ ಹಾಗೂ ಎರಡು ವನ್ಯಜೀವಿಧಾಮಗಳನ್ನು ಹೊಂದಿರುವ ಏಕೈಕ ಜಿಲ್ಲೆ ಎಂಬ ಹೆಗ್ಗಳಿಕೆ ಚಾಮರಾಜನಗರಕ್ಕಿದೆ. ರಾಜ್ಯದಲ್ಲೇ ಅತಿ ಹೆಚ್ಚು ಹುಲಿಗಳನ್ನು ಹೊಂದಿ ಹುಲಿಗಳ ನಾಡು ಎಂಬ ಖ್ಯಾತಿಗೂ ಚಾಮರಾಜನಗರ ಭಾಜನವಾಗಿದೆ. ಇತ್ತೀಚಿಗೆ ಆಶಾದಾಯಕವಾಗಿ ಹುಲಿಗಳ ಸಂಖ್ಯೆ ವೃದ್ಧಿಸುತ್ತಿದ್ದ ಮಲೆ ಮಹದೇಶ್ವರ ವನ್ಯಜೀವಿಧಾಮದಲ್ಲಿ 5 ಹುಲಿಗಳಿಗೆ ವಿಷಪ್ರಾಶಾನ ಮಾಡಿ ಕೊಂದು ಹಾಕಿರುವುದು ಹುಲಿಗಳ ಸಂತತಿ ವೃದ್ಧಿಗೆ ಭಾರೀ ಪೆಟ್ಟು ಬಿದ್ದಿದೆ.

ಈ ಕರಾಳ ಘಟನೆಯ ನಂತರ ಎಚ್ಚೆತ್ತಿರುವ ಅರಣ್ಯ ಇಲಾಖೆ ಜಿಲ್ಲೆಯ ಬಂಡೀಪುರ ಹಾಗೂ ಬಿಳಿಗಿರಿರಂಗನ ಹುಲಿ ಸಂರಕ್ಷಿತ ಪ್ರದೇಶ, ಮಲೆಮಹದೇಶ್ವರ ಹಾಗೂ ಕಾವೇರಿ ವನ್ಯಜೀವಿಧಾಮಗಳಲ್ಲಿ ಭಾರೀ ಕಟ್ಟೆಚ್ಚರ ವಹಿಸಿದೆ. ಈ ಅರಣ್ಯಗಳಲ್ಲಿ ಗಸ್ತು ತೀವ್ರಗೊಳಿಸಲಾಗಿದೆ. ಕಾಡಂಚಿನ ಗ್ರಾಮಸ್ಥರು ಜಾನುವಾರುಗಳನ್ನು ಅರಣ್ಯದೊಳಗೆ ಮೇಯಲು ಬಿಡದಂತೆ ಜಾಗೃತಿ ಮೂಡಿಸಲಾಗುತ್ತಿದೆ. ತಮಿಳುನಾಡು ಗಡಿ ಭಾಗದ ಹಳ್ಳಿಗಳಿಂದ ಬರುವ ಜಾನುವಾರುಗಳಿಗೂ ಕಡಿವಾಣ ಹಾಕಲಾಗಿದೆ. ಹುಲಿಗಳ ಹತ್ಯೆ ಪ್ರಕರಣದ ತನಿಖೆ ಮುಂದುವರಿದಿದ್ದು, ತನಿಖಾ ತಂಡ ಜು.10ರೊಳಗೆ ವರದಿ ನೀಡುವ ನಿರೀಕ್ಷೆಯಿದೆ.

ಅವಳಿ ಮಕ್ಕಳ ನಿರೀಕ್ಷೆಯಲ್ಲಿ ಭಾವನಾ

ಬೆಂಗಳೂರು: ನಟಿ ಭಾವನಾ ರಾಮಣ್ಣ ವಯಸ್ಸು 40 ಕಳೆದರೂ ಮದುವೆಯಾಗಿಲ್ಲ, ಆದರೆ ತಾಯಿಯಾಗುತ್ತಿದ್ದಾರೆ. ಇದೇನಿದು ಎಂದು ಅಚ್ಚರಿಯಾಗಬುದು. ಆದರೆ ಭಾವನಾ ಐವಿಎಫ್ ತಂತ್ರಜ್ಞಾನದಿಂದ ತಾಯಿಯಾಗಿದ್ದಾರೆ. ಈಗ ಅವರಿಗೆ ಆರು ತಿಂಗಳು. ಸ್ವತಃ ಅವರೇ ಈ ವಿಚಾರವನ್ನು ಹಂಚಿಕೊಂಡಿದ್ದು, ಬೇಬಿ ಬಂಪ್ ಫೋಟೊವನ್ನು ಶೇರ್ ಮಾಡಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿರುವ ಭಾವನಾ, ಒಂದು ಹೊಸ ಅಧ್ಯಾಯ ಆರಂಭವಾಗಿದೆ. ನಾನು ಈಗ 6 ತಿಂಗಳ ಗರ್ಭಿಣಿ. ಅವಳಿ ಮಕ್ಕಳ ತಾಯಿ ಆಗುತ್ತಿದ್ದೇನೆ. ನನ್ನಲ್ಲಿ ಧನ್ಯತಾ ಭಾವ ಆವರಿಸಿದೆ. 20 ಮತ್ತು 30ನೇ ವಯಸ್ಸಿನಲ್ಲಿ ತಾಯಿ ಆಗುವ ಬಗ್ಗೆ ಆಲೋಚನೆ ಮಾಡಿರಲಿಲ್ಲ. ಆದರೆ ನಲವತ್ತನೇ ವಯಸ್ಸಾದಾಗ ತಾಯಿಯಾಗುವ ಬಯಕೆ ಮನದಲ್ಲಿ ತೀವ್ರವಾಗಿತ್ತು. ಒಂಟಿ ಮಹಿಳೆಯಾಗಿ ಈ ದಾರಿ ಸುಲಭದ್ದಾಗಿರಲಿಲ್ಲ. ನಾನು ಸಾಕಷ್ಟು ಐವಿಎಫ್ ಕ್ಲಿನಿಕ್‌ಗಳಿಗೆ ಭೇಟಿ ನೀಡಿದೆ. ಆದರೆ ಅಲ್ಲಿ ಸಾಧ್ಯವಾಗಲಿಲ್ಲ. ಆದರೆ ಡಾ.ಸುಷ್ಮಾ ಅವರನ್ನು ಭೇಟಿಯಾದಾಗ ಅವರು ಮಗು ಪಡೆಯುವ ನನ್ನ ಕನಸಿಗೆ ಪುಷ್ಠಿ ನೀಡಿದರು. ಅವರ ಬೆಂಬಲದಿಂದ ನಾನು ಮೊದಲ ಪ್ರಯತ್ನದಲ್ಲೇ ಗರ್ಭಿಣಿಯಾದೆ. ನನ್ನ ತಂದೆ, ಒಡಹುಟ್ಟಿದವರು, ಪ್ರೀತಿ ಪಾತ್ರರು ಬಹಳ ಹೆಮ್ಮೆ ಮತ್ತು ಪ್ರೀತಿಯಿಂದ ನನ್ನ ಪರವಾಗಿ ನಿಂತುಕೊಂಡರು. ಕೆಲವರು ನನ್ನ ನಿರ್ಧಾರವನ್ನು ಪ್ರಶ್ನಿಸಿದರು. ಆದರೆ ನಾನು ಸವಾಲು ಎದುರಿಸಲು ಸಿದ್ಧವಾಗಿದ್ದೇನೆ ಎಂಬುದು ನನ್ನ ಮನಸ್ಸಿಗೆ ತಿಳಿದಿತ್ತು ಎಂದು ಭಾವನಾ ರಾಮಣ್ಣ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ವೈದ್ಯಕೀಯ ಕ್ಷೇತ್ರವೂ ಹಬ್ ಆಗುತ್ತಿದೆ ಭಾರತ: ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ಸಂಶೋಧನೆಗೆ 1 ಲಕ್ಷ ಕೋಟಿ ವಿನಿಯೋಗಿಸಲು ಕೇಂದ್ರ ಅಸ್ತು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಕಸಿತ ಭಾರತದ ಗುರಿಯೊಂದಿಗೆ ಕೆಲಸ ಮಾಡುತ್ತಿರುವ ಕೇಂದ್ರ ಸರಕಾರ ವೈದ್ಯಕೀಯ-ಆರೋಗ್ಯ ಕ್ಷೇತ್ರಕ್ಕೆ ಪ್ರಮುಖ ಆದ್ಯತೆ ನೀಡುತ್ತಿದ್ದು, ಸಂಶೋಧನೆಗಾಗಿ 1 ಲಕ್ಷ ಕೋಟಿ ವಿನಿಯೋಗಿಸಲು ಅನುಮತಿ ನೀಡಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಬೆಂಗಳೂರಿನಲ್ಲಿ ಜಾಯಿಂಟ್ ಕಮಿಷನ್ ಇಂಟರ್‌ನ್ಯಾಷನಲ್ (ಒಇಐ)' ಮಾನ್ಯತೆ ಪಡೆದ ರಾಮಯ್ಯ ಸ್ಮಾರಕ ಆಸ್ಪತ್ರೆಗೆ ಸಂಭ್ರಮೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿ, ಸಂಶೋಧನೆ ಕ್ಷೇತ್ರದಲ್ಲಿ ಖಾಸಗಿಯವರ ಸಹಭಾಗಿತ್ವಕ್ಕೂ ಕೇಂದ್ರ ಸರಕಾರ ಮುಂದಾಗಿದ್ದು, ಪ್ರಮುಖ ಸಂಸ್ಥೆ, ಕೈಗಾರಿಕೆಗಳನ್ನೂ ಒಳಗೊಂಡಂತೆ ಸಂಶೋಧನೆ, ಅಭಿವೃದ್ಧಿಗೆ ಮುಂದಾಗಿದೆ ಎಂದರು.

ಭಾರತ ಇಂದು ಶಿಕ್ಷಣ, ಸಂಶೋಧನೆ, ವೈದ್ಯಕೀಯ, ಉದ್ಯಮ, ಅಭಿವೃದ್ಧಿ, ಸೇವೆ ಹೀಗೆ ಸರ್ವತಃ ಅತ್ಯುತ್ತಮ ಬೆಳೆವಣಿಗೆ ಹೊಂದುತ್ತಿದೆ. ಹೀಗಾಗಿ ಹೂಡಿಕೆದಾರರಿಗೆ ಭಾರತ ಉತ್ತಮ ಅವಕಾಶಿತ ದೇಶವಾಗಿ ಕಾಣುತ್ತಿದೆ. ಉತ್ಪಾದನಾ ಹಬ್ ಆಗಿ ರೂಪುಗೊಳ್ಳುತ್ತಿದೆ. ಆರೇಳು ವರ್ಷಗಳಿಂದ ಭಾರತ ಮೆಡಿಕಲ್ ಕ್ಷೇತ್ರದಲ್ಲೂ ಅಮೂಲಾಗ್ರ ಬದಲಾವಣೆ ಕಾಣುತ್ತಿದೆ. 200-300 ಇದ್ದಂತಹ ಪೇಟೆಂಟ್‌ಗಳ ಸಂಖ್ಯೆ ಈಗ 1 ಲಕ್ಷ ದಾಟಿದೆ. ವೈದ್ಯಕೀಯ ಕಾಲೇಜುಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯೂ ಅಧಿಕಗೊಂಡಿದೆ ಎಂದರು.

ಮೆಡಿಕಲ್ ಹಬ್ ಆಗುತ್ತಿದೆ ಭಾರತ: ಬೆಂಗಳೂರು ಸೇರಿದಂತೆ ಭಾರತ ಇಂದು ಜಗತ್ತಿನಲ್ಲೇ ಮೆಡಿಕಲ್ ಹಬ್ ಆಗಿ ಪರಿವರ್ತನೆ ಹೊಂದುತ್ತಿದೆ. ಗುಣಮಟ್ಟದ ಚಿಕಿತ್ಸೆ ಸಿಗುತ್ತದೆಂಬ ನಂಬಿಕೆಯಿಂದ ಜಗತ್ತಿನೆಲ್ಲೆಡೆಯಿಂದ ಚಿಕಿತ್ಸೆಗಾಗಿ ಭಾರತಕ್ಕೆ ಆಗಮಿಸುತ್ತಿದ್ದಾರೆ. ಜಗತ್ತಿನ ಹಲವು ರಾಷ್ಟ್ರಗಳಲ್ಲಿ ಕೆಲಸ ಮಾಡುವ ಜನರ ಕೊರತೆ ತೀವ್ರವಾಗಿದೆ. ಹಾಗಾಗಿ ಹೂಡಿಕೆದಾರರು ಭಾರತದತ್ತ ಧಾವಿಸುತ್ತಿದ್ದಾರೆ. ದೇಶಿಯ ಯುವ ಸಮುದಾಯ ದಲ್ಲಿ ವಿದ್ಯಾರ್ಹತೆ ಜತೆಗೆ ಕೌಶಲ್ಯ, ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಗುಣಮಟ್ಟ ಅಡಕವಾಗಿದ್ದರಿಂದ ಉದ್ಯೋಗಾವಕಾಶ ಕಲ್ಪಿಸುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಹೂಡಿಕೆದಾರರ ಸಂಖ್ಯೆ ಹೆಚ್ಚುತ್ತಿದೆ. 2025ರ ಏಪ್ರಿಲ್-ಮೇ, ಜೂನ್ ತಿಂಗಳಲ್ಲೇ ಒಟ್ಟಾರೆ 35 ಬಿಲಿಯನ್ ಹೂಡಿಕೆ ಬಂದಿದೆ. ಮೊಬೈಲ್ ಆಮದು ಮಾಡಿಕೊಳ್ಳುತ್ತಿದ್ದ ಭಾರತವೀಗ ಶೇ.80ರಷ್ಟು ಮೊಬೈಲ್ ರಫ್ತು ಮಾಡುತ್ತಿದೆ. ಉತ್ಪಾದನಾ ಹಬ್ ಆಗುತ್ತಿದೆ. ಮುಂದಿನ ದಿನಗಳಲ್ಲಿ ಮೆಡಿಕಲ್ ಹಬ್ ಆಗಲಿದೆ ಎಂದರು.

ಸಮಾರಂಭದಲ್ಲಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಗೋಕುಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಎಂ.ಆರ್.ಸೀತಾರಾಮ, ಡಾ.ಎಂ.ಆರ್.ಜಯರಾಮ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಜಾಯಿಂಟ್ ಕಮಿಷನ್ ಇಂಟರ್‌ನ್ಯಾಷನಲ್ (ಒಇಐ)' ಮಾನ್ಯತೆ ಪಡೆದ ರಾಮಯ್ಯ ಸ್ಮಾರಕ ಆಸ್ಪತ್ರೆಗೆ ಸಂಭ್ರಮೋತ್ಸವ ಸಮಾರಂಭದಲ್ಲಿ ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿದರು.

ಒಲಿಂಪಿಕ್ಸ್ ಕ್ರೀಡಾಪಟುಗಳ ತಯಾರಿಗೆ ಕರೆ

ಹತ್ತು ವರ್ಷದಲ್ಲಿ ಅಂದರೆ, 2036ರ ವೇಳೆಗೆ ಭಾರತ ಸಮ್ಮರ್ ಒಲಿಂಪಿಕ್ಸ್‌ಗೆ ಸ್ಪರ್ಧೆಗೊಳ್ಳುವ ಆಲೋಚನೆಯಲ್ಲಿದ್ದು, ಇದಕ್ಕಾಗಿ ಸರಕಾರ ಹೆಚ್ಚುವರಿ ಅನುದಾನ ಸಹ ಕೊಡುತ್ತಿದೆ. ಸಮ್ಮರ್ ಒಲಿಂಪಿಕ್ಸ್‌ನಲ್ಲಿ ಭಾಗಿಯಾಗಲು ಕನಿಷ್ಠ ಒಬ್ಬೊಬ್ಬ ಯುವಕ-ಯುವತಿ ಕ್ರೀಡಾಪಟುಗಳನ್ನು ಶಿಕ್ಷಣ ಸಂಸ್ಥೆಗಳು ತಯಾರು ಮಾಡಬೇಕು. ಒಳ್ಳೇ ಎಂಜಿನಿಯರ್ಸ್, ಡಾಕ್ಟರ್ಸ್ ಜತೆಗೆ ಒಳ್ಳೇ ಒಲಿಂಪಿಕ್ಸ್ ಕ್ರೀಡಾಪಟುಗಳ ಕೊಡುಗೆ ಸಹ ನೀಡಬೇಕು ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ಕರೆ ನೀಡಿದರು.

ಎಂ.ಎಸ್.ರಾಮಯ್ಯ ಸ್ಮಾರಕ ಆಸ್ಪತ್ರೆಗೆ ಅಮೆರಿಕದ ಚಿಕಾಗೋದಲ್ಲಿರುವ ಜಾಯಿಂಟ್ ಕಮಿಷನ್ ಇಂಟರ್‌ನ್ಯಾಷನಲ್ (ಒಇಐ) ಮಾನ್ಯತೆ ನೀಡಿರುವುದು ಹೆಮ್ಮೆ ತರಿಸಿದೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ತೋರುವ ಜತೆಗೆ ಆಧುನಿಕ ಯುಗಕ್ಕೆ ಅಗತ್ಯ ಶಿಕ್ಷಣದ ಜತೆಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸುತ್ತಿದೆ.

-**ಪ್ರಲ್ಹಾದ್ ಜೋಶಿ**, ಕೇಂದ್ರ ಸಚಿವ

ಬದಲಾಗಿದೆ ರೈಲ್ವೆ, ಬದಲಾಗಿದೆ ನಿಯಮ

ರೈಲ್ವೆ ಟಿಕೆಟ್ ಬುಕಿಂಗ್ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆ

ಅಶ್ವಿನಿ ವೈಷ್ಣವ್ ಅವರು ರೈಲ್ವೆ ಸಚಿವರಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ರೈಲ್ವೆ ಹೊಸ ಹಾದಿಯಲ್ಲಿದೆ. ಹೊಸ ರೈಲ್ವೆ ಮಾರ್ಗ, ಹೊಸ ರೈಲುಗಳ ಆರಂಭ, ನಿಲ್ದಾಣಗಳ ಸುವ್ಯವಸ್ಥೆ, ರೈಲ್ವೆ ಬೋಗಿಗಳ ಆಧುನೀಕರಣ, ಟಿಕೆಟ್ ಬುಕಿಂಗ್ ಎಲ್ಲದರಲ್ಲೂ ಬದಲಾವಣೆಯ ಗಾಳಿ ಬೀಸಿದೆ. ದಶಕಗಳ ಸಮಯ ಹಿಡಿಯುತ್ತಿದ್ದ ರೈಲ್ವೆ ಕಾಮಗಾರಿ ಒಂದೆರಡು ವರ್ಷಗಳಲ್ಲಿ ಮುಗಿಯುತ್ತಿದೆ. ಜುಲೈ ಒಂದರಿಂದ ರೈಲ್ವೆ ಟಿಕೆಟ್ ಬುಕಿಂಗ್ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆ ತರಲಾಗಿದ್ದು ಈ ಬದಲಾವಣೆಗಳ ಬಗ್ಗೆ ಮಾಹಿತಿ ಇಲ್ಲಿದೆ.

ದೂರದ ಊರುಗಳಿಗೆ ಮುಂಗಡ ರೈಲ್ವೆ ಟಿಕೆಟ್ ಬುಕಿಂಗ್ ಮಾಡುವುದೆಂದರೆ ನಿಜಕ್ಕೂ ತ್ರಾಸದ ಕೆಲಸ. ಕೆಲವೊಂದು ಊರುಗಳಿಗೆ ಎರಡು ತಿಂಗಳ ಮೊದಲೇ ಬುಕ್ ಮಾಡಿದರಷ್ಟೇ ಟಿಕೆಟ್ ಲಭ್ಯ. ಕೊನೆ ಕ್ಷಣದಲ್ಲಿ ತುರ್ತಾಗಿ ಹೋಗಬೇಕಾದವರಿಗೆ ಟಿಕೆಟ್ ಪಡೆಯಲು ತತ್ಕಾಲ್‌ನಡಿ ಬುಕ್ ಮಾಡುವುದೊಂದೇ ದಾರಿಯಾಗಿತ್ತು. ಆದರೆ ತತ್ಕಾಲ್ ಟಿಕೆಟ್‌ಗಳು ಕೆಲವೇ ನಿಮಿಷಗಳಲ್ಲಿ ಖಾಲಿಯಾಗುತ್ತಿದ್ದವು. ಕೆಲವು ಏಜೆಂಟರು ಹೆಚ್ಚುವರಿ ದರಕ್ಕೆ ತತ್ಕಾಲ್ ಟಿಕೆಟ್ ಮಾರಾಟ ಮಾಡುತ್ತಿರುವ ಆರೋಪಗಳಿದ್ದವು. ಇದಕ್ಕೆ ಪರಿಹಾರವಾಗಿ ರೈಲ್ವೆ ಈಗ ತತ್ಕಾಲ್ ಟಿಕೆಟ್ ಬುಕಿಂಗ್‌ಗೆ ಒಟಿಪಿ ದೃಢೀಕರಣ ಕಡ್ಡಾಯಗೊಳಿಸಿದೆ. ಪ್ರಯಾಣಿಕರಿಗೆ ಏಜೆಂಟರಿಗಿಂತ ಅರ್ಧ ಗಂಟೆ ಮೊದಲೇ ತತ್ಕಾಲ್ ಟಿಕೆಟ್ ಬುಕ್ ಮಾಡುವ ಅವಕಾಶ ನೀಡಿದೆ. ಜುಲೈ ಒಂದರಿಂದ ನಿಯಮ ಜಾರಿಗೆ ಬಂದಿದೆ. ಜುಲೈ 15 ರಿಂದ ಕೌಂಟರ್ ಅಥವಾ ಏಜೆಂಟ್ ಮೂಲಕ ಟಿಕೆಟ್ ಬುಕಿಂಗ್ ಮಾಡಲು ಆಧಾರ್ ಕಡ್ಡಾಯವಾಗಲಿದೆ.

ತತ್ಕಾಲ್ ಟಿಕೆಟ್ ಬುಕಿಂಗ್ ವ್ಯವಸ್ಥೆಯ ಈ ಬದಲಾವಣೆಯ ಮೊದಲ ದಿನವೇ ಸ್ಪಷ್ಟವಾಗಿ ಗೋಚರಿಸಿದೆ. ಒಂದು ವರ್ಷದ ನಂತರ ದೆಹಲಿಯಿಂದ ವಾರಾಣಸಿ, ಲಖನೌ ಮತ್ತು ಬಿಹಾರಕ್ಕೆ ಹೋಗುವ ಪ್ರಮುಖ ರೈಲುಗಳಲ್ಲಿ ತತ್ಕಾಲ್ ಕೋಟಾದಲ್ಲಿ ಸೀಟುಗಳು ಖಾಲಿಯಾಗಿ ಕಂಡುಬಂದವು. ಈ ಹಿಂದೆ ಈ ಮಾರ್ಗಗಳಿಗೆ ತತ್ಕಾಲ್ ಟಿಕೆಟ್‌ಗಳು ಕೆಲವೇ ನಿಮಿಷಗಳಲ್ಲಿ ಬಿಕರಿಯಾಗುತ್ತಿದ್ದವು. ಈಗ ಬುಕಿಂಗ್ ಸಮಯದ ನಂತರ ಟಿಕೆಟ್‌ಗಳು ಲಭ್ಯವಾಗುತ್ತಿವೆ ಎಂದು ತೋರಿಸಲಾಗುತ್ತಿದೆ.

ತತ್ಕಾಲ್ ಟಿಕೆಟ್ ಬುಕಿಂಗ್ ಅನ್ನು ಹೆಚ್ಚು ಪಾರದರ್ಶಕವಾಗಿಸುವುದು ಮತ್ತು ಅಗತ್ಯವಿರುವ ಪ್ರಯಾಣಿಕರಿಗೆ ಆದ್ಯತೆ ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಬುಕಿಂಗ್ ವಿಂಡೋ ತೆರೆದ ನಂತರ ಮೊದಲ 30 ನಿಮಿಷಗಳ ಕಾಲ ಏಜೆಂಟರು ತತ್ಕಾಲ್ ಟಿಕೆಟ್‌ಗಳನ್ನು ಬುಕ್ ಮಾಡಲು ಸಾಧ್ಯವಾಗುವುದಿಲ್ಲ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಆಧಾರ್ ಒಟಿಪಿ ದೃಢೀಕರಣದ ಉದ್ದೇಶವನ್ನು ತಿಳಿಸಿದ್ದಾರೆ.

ಬದಲಾವಣೆ ಏನು?

ಈಗ ಆಧಾರ್ ಪರಿಶೀಲಿಸಿದ ಬಳಕೆದಾರರು ಮಾತ್ರ ಐಆರ್‌ಸಿಟಿಸಿ ವೆಬ್‌ಸೈಟ್ ಅಥವಾ ಐಆರ್‌ಸಿಟಿಸಿ ಮೊಬೈಲ್ ಅಪ್ಲಿಕೇಶನ್‌ನಿಂದ ತತ್ಕಾಲ್ ಟಿಕೆಟ್‌ಗಳನ್ನು ಬುಕ್ ಮಾಡಲು ಸಾಧ್ಯವಾಗುತ್ತದೆ. ಏಜೆಂಟ್ ಬುಕಿಂಗ್‌ಗಳಿಗೂ ಒಟಿಪಿ ಆಧಾರಿತ ಆಧಾರ್ ಪರಿಶೀಲನೆಯನ್ನು ಕಡ್ಡಾಯಗೊಳಿಸಲಾಗಿದೆ. ಜುಲೈ 15 ರಿಂದ ಕೌಂಟರ್ ಅಥವಾ ಏಜೆಂಟ್ ಮೂಲಕ ಟಿಕೆಟ್ ಬುಕಿಂಗ್ ಮಾಡಲು ಆಧಾರ್ ಕಡ್ಡಾಯವಾಗಲಿದೆ.

ಅಂದರೆ ಪ್ಯಾಸೆಂಜರ್ ರಿಸರ್ವೇಶನ್ ಸಿಸ್ಟಮ್ (ಪಿಆರ್‌ಎಸ್) ಕೌಂಟರ್‌ಗಳು ಮತ್ತು ಅಧಿಕೃತ ರೈಲ್ವೆ ಏಜೆಂಟ್‌ಗಳ ಮೂಲಕ ಬುಕಿಂಗ್‌ಗಳನ್ನು ಒಳಗೊಂಡಂತೆ ಎಲ್ಲಾ ತತ್ಕಾಲ್ ಬುಕಿಂಗ್‌ಗಳಿಗೆ ಆಧಾರ್ ಆಧಾರಿತ ಒಟಿಪಿ ಪರಿಶೀಲನೆ ಕಡ್ಡಾಯವಾಗಲಿದೆ. ತತ್ಕಾಲ್ ಟಿಕೆಟ್ ಬುಕಿಂಗ್‌ನ ಮೊದಲ 30 ನಿಮಿಷಗಳ ಕಾಲ ಏಜೆಂಟರಿಗೆ ನಿಷೇಧ ಹೇರಲಾಗಿದೆ.

ಎಸಿ ವರ್ಗ: ಸಾಮಾನ್ಯ ಪ್ರಯಾಣಿಕರು ಬೆಳಗ್ಗೆ 10 ರಿಂದ ಏಜೆಂಟ್‌ಗಳು 10:30 ರ ನಂತರ ಬುಕ್ ಮಾಡಲು ಸಾಧ್ಯವಾಗುತ್ತದೆ.

Non AC ವರ್ಗ: ಸಾಮಾನ್ಯ ಪ್ರಯಾಣಿಕರು ಬೆಳಗ್ಗೆ 11 ರಿಂದ ಮತ್ತು ಏಜೆಂಟ್‌ಗಳು 11:30 ರ ನಂತರ ಬುಕ್ ಮಾಡಲು ಸಾಧ್ಯವಾಗುತ್ತದೆ.

ಇದು ದಲ್ಲಾಳಿಗಳು ಮತ್ತು ನಕಲಿ ಬುಕಿಂಗ್‌ಗಳನ್ನು ತಡೆಯಲು ಅನುಕೂಲವಾಗಲಿದೆ. ಅನೇಕ ಪ್ರಯಾಣಿಕರು ಸಾಮಾಜಿಕ ಮಾಧ್ಯಮಗಳಲ್ಲಿಯೂ ಈ ಬಗ್ಗೆ ಸಂತಸ ಹಂಚಿಕೊಂಡಿದ್ದಾರೆ. ಈ ಹಿಂದೆ ತತ್ಕಾಲ್‌ನಲ್ಲಿ ಸರಾಸರಿ 10 ಟಿಕೆಟ್‌ಗಳನ್ನು ಬುಕ್ ಮಾಡಬಹುದಾದ ನಿಲ್ದಾಣಗಳಲ್ಲಿ ಈಗ ಸಂಖ್ಯೆ ದ್ವಿಗುಣಗೊಂಡಿದೆ. ಆದರೂ ಆರಂಭದಲ್ಲಿ ಕಡಿಮೆ ಆನ್‌ಲೈನ್ ಟಿಕೆಟ್‌ಗಳನ್ನು ಬುಕ್ ಮಾಡಲಾಗುತ್ತಿದೆ. ಅಧಿಕೃತ ಏಜೆಂಟರು ಹೊಸ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದಾರೆ.

ಆಧಾರ್ ಲಿಂಕ್, ಪರಿಶೀಲನೆ ಹೇಗೆ?

- ಐಆರ್‌ಸಿಟಿ ವೆಬ್‌ಸೈಟ್ ಅಥವಾ ಐಆರ್‌ಸಿಟಿ ಮೊಬೈಲ್ ಅಪ್ಲಿಕೇಶನ್ ಓಪನ್ ಮಾಡಿ.
- ನಿಮ್ಮ ಐಡಿ ಮೂಲಕ ಲಾಗಿನ್ ಆಗಿ.
- 'ಪ್ರೊಫೈಲ್' ಟ್ಯಾಬ್ ಮೇಲೆ ಕ್ಲಿಕ್ ಮಾಡಿ ಮತ್ತು 'ಲಿಂಕ್ ಆಧಾರ್' ಆಯ್ಕೆಯನ್ನು ಆರಿಸಿ.
- ನಿಮ್ಮ ಆಧಾರ್ ಸಂಖ್ಯೆ ಮತ್ತು ಹೆಸರನ್ನು ನಿಮ್ಮ ಆಧಾರ್ ಕಾರ್ಡ್‌ನಲ್ಲಿ ಮುದ್ರಿಸಿದಂತೆ ನಿಖರವಾಗಿ ನಮೂದಿಸಿ.
- ಸಮ್ಮತಿ ಚೆಕ್‌ಬಾಕ್ಸ್ ಟಿಕ್ ಮಾಡಿ ಮತ್ತು ಒಟಿಪಿ ಕಳುಹಿಸಿ ಕ್ಲಿಕ್ ಮಾಡಿ.
- ನಿಮ್ಮ ಆಧಾರ್‌ಗೆ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆಯಲ್ಲಿ ನೀವು ಒಟಿಪಿ ಸ್ವೀಕರಿಸುತ್ತೀರಿ.
- ಒಟಿಪಿ ನಮೂದಿಸಿ ಮತ್ತು ಪರಿಶೀಲಿಸಿ ಕ್ಲಿಕ್ ಮಾಡಿ.
- ಪರಿಶೀಲನೆ ಪೂರ್ಣಗೊಂಡ ನಂತರ ನೀವು ತತ್ಕಾಲ್ ಟಿಕೆಟ್‌ಗಳನ್ನು ಬುಕ್ ಮಾಡಲು ಸಾಧ್ಯವಾಗುತ್ತದೆ.

ತತ್ಕಾಲ್ ಟಿಕೆಟ್ ಎಂದರೇನು?

ತುರ್ತು ಪರಿಸ್ಥಿತಿಯಲ್ಲಿ ಪ್ರಯಾಣಿಸಬೇಕಾದ ಪ್ರಯಾಣಿಕರಿಗೆ ರೈಲ್ವೆಯಿಂದ ತತ್ಕಾಲ್ ಟಿಕೆಟ್‌ಗಳನ್ನು ನೀಡಲಾಗುತ್ತದೆ. ಹಠಾತ್ ಪ್ರಯಾಣ ಯೋಜನೆಗಳು, ವೈದ್ಯಕೀಯ ಪರಿಸ್ಥಿತಿಗಳು, ಪರೀಕ್ಷೆಗಳು ಅಥವಾ ಇತರ ಪ್ರಮುಖ ಕಾರಣಗಳ ಮೇಲಿನ ಪ್ರಯಾಣಕ್ಕೆ ಇದು ಅನುಕೂಲ. ಇದರಲ್ಲಿ ಎಸಿ ದರ್ಜೆಯ ಪ್ರಯಾಣ ಟಿಕೆಟ್ ಬುಕಿಂಗ್ ಒಂದು ದಿನದ ಮೊದಲು ಬೆಳಗ್ಗೆ 10 ಗಂಟೆಗೆ ಪ್ರಾರಂಭವಾಗುತ್ತದೆ. NON AC ಒಂದು ದಿನದ ಮೊದಲು ಬೆಳಗ್ಗೆ 11 ಗಂಟೆಗೆ ಪ್ರಾರಂಭವಾಗುತ್ತದೆ. ಮೂಲ ದರವನ್ನು ಹೊರತುಪಡಿಸಿ ತತ್ಕಾಲ್ ಶುಲ್ಕವನ್ನು (₹100 ರಿಂದ₹500) ಹೆಚ್ಚುವರಿಯಾಗಿ ವಿಧಿಸಲಾಗು ತ್ತದೆ. ದೃಢಪಡಿಸಿದ ತತ್ಕಾಲ್ ಟಿಕೆಟ್‌ಗಳಿಗೆ ಮರುಪಾವತಿ ಸಿಗುವುದಿಲ್ಲ.

ಏಜೆಂಟರ ಹಸ್ತಕ್ಷೇಪಕ್ಕೆ ತಡೆ

ಹೊಸ ವ್ಯವಸ್ಥೆಯಡಿಯಲ್ಲಿ ಅಧಿಕೃತ ಏಜೆಂಟ್ ಈಗ ತತ್ಕಾಲ್ ಬುಕಿಂಗ್ ಪ್ರಾರಂಭವಾದ 30 ನಿಮಿಷಗಳ ನಂತರ ಟಿಕೆಟ್‌ಗಳನ್ನು ಬುಕ್ ಮಾಡಬಹುದು. ಆ ಹೊತ್ತಿಗೆ ಸೀಟುಗಳು ಉಳಿಯಲು ಯಾವುದೇ ಅವಕಾಶವಿರುವುದಿಲ್ಲ. ರೈಲ್ವೆ ತತ್ಕಾಲ್ ಕೋಟಾದಲ್ಲಿ ಸೀಟುಗಳ ಸಂಖ್ಯೆಯನ್ನು ಕಡಿಮೆ ಮಾಡಿ ಪ್ರೀಮಿಯಂ ತತ್ಕಾಲ್ ಕೋಟಾಕ್ಕೆ ನೀಡಿವೆ. ಇದರರ್ಥ ತತ್ಕಾಲ್ ಬುಕಿಂಗ್‌ನಲ್ಲಿ ಸಾವಿರ ರೂಪಾಯಿಗಳಿಗೆ ಲಭ್ಯವಿರುವ ಸೀಟಿಗೆ, ಪ್ರೀಮಿಯಂ ತತ್ಕಾಲ್‌ನಲ್ಲಿ ಮೂರು ಪಟ್ಟು ಮೊತ್ತವನ್ನು ಪಾವತಿಸಬೇಕಾಗುತ್ತದೆ. ಹೊಸ ನಿಯಮಗಳು ತತ್ಕಾಲ್ ಮತ್ತು ಪ್ರೀಮಿಯಂ ತತ್ಕಾಲ್ ಎರಡಕ್ಕೂ ಅನ್ವಯಿಸುತ್ತವೆ.

ಪ್ರಯೋಜನ ಏನು ?

ಸಾಮಾನ್ಯ ಪ್ರಯಾಣಿಕರಿಗೆ ಆದ್ಯತೆ ನೀಡಲು ಈ ಬದಲಾವಣೆ ಮಾಡಲಾಗಿದೆ ಎಂದು ರೈಲ್ವೆ ಸಚಿವಾಲಯ ಹೇಳುತ್ತದೆ. ಈ ಹಿಂದೆ ಹೆಚ್ಚಿನ ತತ್ಕಾಲ್ ಟಿಕೆಟ್‌ಗಳು ಏಜೆಂಟರು ಮತ್ತು ಬ್ರೋಕರ್‌ಗಳ ಮೂಲಕ ಕೆಲವೇ ನಿಮಿಷಗಳಲ್ಲಿ ಬುಕ್ ಆಗುತ್ತಿದ್ದವು. ಇದರಿಂದಾಗಿ ಅಗತ್ಯವಿರುವ ಪ್ರಯಾಣಿಕರಿಗೆ ಟಿಕೆಟ್‌ಗಳು ಸಿಗುತ್ತಿರಲಿಲ್ಲ. ಈಗ ಆಧಾರ್ ಆಧಾರಿತ ಒಟಿಪಿ ಪರಿಶೀಲನೆ ಮತ್ತು ಏಜೆಂಟ್ ಬುಕಿಂಗ್ ಮೇಲೆ ಕಾಲಮಿತಿಯ ನಿಷೇಧದಿಂದಾಗಿ ಈ ವ್ಯವಸ್ಥೆಯು ಹೆಚ್ಚು ನ್ಯಾಯಯುತ ಮತ್ತು ಪಾರದರ್ಶಕವಾಗಿದೆ ಎಂದು ರೈಲ್ವೆ ಸಚಿವಾಲಯ ಹೇಳಿದೆ.

8 ಗಂಟೆಗೆ ಮೊದಲೇ ರಿಸರ್ವೇಶನ್ ಲಿಸ್ಟ್!

ರೈಲ್ವೆ ಸೀಟುಗಳ ರಿಸರ್ವೇಷನ್ ಪಟ್ಟಿ ಬಿಡುಗಡೆಯ ಸಮಯವನ್ನು ರೈಲ್ವೆ ಇಲಾಖೆ ಬದಲಾಯಿಸಲಿದೆ. ರೈಲು ಹೊರಡುವ ಎಂಟು ಗಂಟೆಗಳ ಮುಂಚೆಯೇ ಪಟ್ಟಿ ಬಿಡುಗಡೆ ಮಾಡಲು ರೈಲ್ವೆ ನಿರ್ಧರಿಸಿದೆ. 2025ರ ಡಿಸೆಂಬರ್ ವೇಳೆಗೆ ಹೊಸ ರಿಸರ್ವೇಷನ್ ವ್ಯವಸ್ಥೆ ಜಾರಿಗೆ ಬರಲಿದೆ. ಸದ್ಯಕ್ಕೆ ರೈಲಿನ ಆಸನಗಳ ರಿಸರ್ವೇಷನ್ ಪಟ್ಟಿಯು ರೈಲು ಹೊರಡುವ ನಾಲ್ಕು ಗಂಟೆಗಳ ಮೊದಲು ಬಿಡುಗಡೆಯಾಗುತ್ತಿದೆ. ಅದರಿಂದ ಸಮೀಪದ ಸ್ಥಳಗಳಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಗೊಂದಲವಾಗುತ್ತಿತ್ತು. ಆ ಸಮಸ್ಯೆಯನ್ನು ನಿವಾರಿಸಲು ಇನ್ನು ಮುಂದೆ ಈ ಪಟ್ಟಿಯನ್ನು ಎಂಟು ಗಂಟೆಗಳಿಗೂ ಮೊದಲೇ ಬಿಡುಗಡೆ ಮಾಡುವಂತೆ ರೈಲ್ವೆ ಸಚಿವರು ಸೂಚಿಸಿದ್ದಾರೆ.

ಡಿಸೆಂಬರ್‌ನಿಂದ ಹೊಸ ಪದ್ಧತಿ

2025ರ ಡಿಸೆಂಬರ್ ವೇಳೆಗೆ ಸಂಪೂರ್ಣವಾಗಿ ಆಧುನೀಕರಣಗೊಂಡ ಪ್ಯಾಸೆಂಜರ್ ರಿಸರ್ವೇಷನ್ ಸಿಸ್ಟಂ (ಪಿಆರ್‌ಎಸ್) ವ್ಯವಸ್ಥೆ ಜಾರಿಗೆ ಬರಲಿದೆ. ಇದು ಪ್ರಸ್ತುತ ವ್ಯವಸ್ಥೆಗಿಂತ ಹತ್ತು ಪಟ್ಟು ಹೆಚ್ಚು ಸಾಮರ್ಥ್ಯ ಮತ್ತು ದಕ್ಷತೆಯನ್ನು ಹೊಂದಿರಲಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ರೈಲ್ವೆ ಇಲಾಖೆಯ ಮಾಹಿತಿ ವ್ಯವಸ್ಥೆಯ ಕೇಂದ್ರ (ಸಿಆರ್ ಐಎಸ್) ಸಂಸ್ಥೆ ಕಳೆದ ಹಲವು ತಿಂಗಳಿಂದ ಈ ಸುಧಾರಿತ ಯೋಜನೆಯನ್ನು ದೇಶದ ಅಲ್ಲಲ್ಲಿ ಪ್ರಾಯೋಗಿಕವಾಗಿ ಕಾರ್ಯಗತಗೊಳಿಸುತ್ತಿದ್ದು, ಈಗಾಗಲೇ ಹೊಸ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಈಗ 24 ಗಂಟೆಗಳಲ್ಲಿ ಎಷ್ಟು ಪ್ರಯಾಣಿಕರ ರಿಸರ್ವೇಷನ್ ಸಾಧ್ಯವಿದೆಯೋ ಅದಕ್ಕಿಂತ ಹತ್ತುಪಟ್ಟು ಹೆಚ್ಚು ರಿಸರ್ವೇಷನ್ ಮಾಡುವ ಸಾಮರ್ಥ್ಯ ಹೊಸ ವ್ಯವಸ್ಥೆಯಡಿ ಬರಲಿದೆ.

ನಿಮಿಷಕ್ಕೆ 40 ಲಕ್ಷ ಟಿಕೆಟ್ ಎನ್‌ಕ್ವೈರಿ

ಈಗಿರುವ ರಿಸರ್ವೇಷನ್ ವ್ಯವಸ್ಥೆಯಲ್ಲಿ ನಿಮಿಷಕ್ಕೆ 32,000 ಟಿಕೆಟ್ ಗಳನ್ನು ರಿಸರ್ವ್ ಮಾಡಬಹುದು. ಆದರೆ, ಡಿಸೆಂಬರ್ ನಿಂದ ಜಾರಿಯಾಗುವ ಹೊಸ ವ್ಯವಸ್ಥೆಯಲ್ಲಿ 1.50 ಲಕ್ಷ ಟಿಕೆಟ್ ಗಳನ್ನು ರಿಸರ್ವ್ ಮಾಡಬಹುದಾಗಿದೆ. ಇನ್ನು, ಎನ್ ಕ್ವೈಯರಿ ಪ್ರಾಸೆಸಿಂಗ್ ವ್ಯವಸ್ಥೆಯು ಈಗ ನಿಮಿಷಕ್ಕೆ 4 ಲಕ್ಷ ಎನ್ ಕ್ವಯರಿಗಳನ್ನು ನಿರ್ವಹಿಸಬಲ್ಲದ್ದಾಗಿದ್ದು, ಡಿಸೆಂಬರ್ ನಿಂದ ಅದು 40 ಲಕ್ಷಕ್ಕೆ ಏರಲಿದೆ. ಅಷ್ಟೇ ಅಲ್ಲ, ಹೊಸ ರಿಸರ್ವೇಷನ್ ಪದ್ಧತಿಯು ಬಳಕೆದಾರ ಸ್ನೇಹಿಯಾಗಿರಲಿದೆ. ಅಲ್ಲದೆ ಅದನ್ನು ಭಾರತದ ಯಾವುದೇ ಭಾಷಿಗರು ಸುಲಭವಾಗಿ ಬಳಸುವಂಥದ್ದಾಗಿರುತ್ತದೆ ಎಂದು ರೈಲ್ವೆ ತಿಳಿಸಿದೆ.

ಅಲ್ಲದೆ, ದಿವ್ಯಾಂಗರಿಗಾಗಿ, ವಿದ್ಯಾರ್ಥಿಗಳಿಗಾಗಿ, ರೋಗಿಗಳಿಗಾಗಿ ಹಾಗೂ ಇನ್ನಿತರ ಪ್ರಯಾಣಿಕರಿಗಾಗಿ ಮೀಸಲಿರುವ ಸೀಟುಗಳು ಹಾಗೂ ಅವರಿಗೆ ರೈಲ್ವೆ ಇಲಾಖೆಯಿಂದ ಕಲ್ಪಿಸಲಾಗಿರುವ ವಿವಿಧ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡುತ್ತದೆ.

▶▶ ಸುದೀರ್ಘ 1149 ದಿನಗಳ ಹೋರಾಟ ▶▶ ಜಿಲ್ಲೆಗೆ ಬೇಕೇ ಬೇಕು ಕೇಂದ್ರದ 'ಏಮ್ಸ್'

ಗುರಿ ಮುಟ್ಟುವುದೇ ಏಮ್ಸ್ ಹೋರಾಟ?

ಜಿಲ್ಲಾ ನೋಟ

ಬಸವರಾಜ ನಾಗಡದಿನ್ನಿ, ರಾಯಚೂರು

ರಾಯಚೂರಿಗೆ ಏಮ್ಸ್ ಮಂಜೂರು ಮಾಡುವಂತೆ ಕಳೆದ 1149 ದಿನಗಳಿಂದ ನಿರಂತರ ಧರಣಿ ನಡೆಯುತ್ತಿದೆ. ಧರಣಿಯ ಹಿಂದೆ ಕಾಣದ ಕೈ ಒಂದು ಕೆಲಸ ಮಾಡುತ್ತಿದೆ ಎಂಬ ಸಂಶಯವಿದ್ದು ಹೋರಾಟಗಾರರು ಮತ್ತು ಶಾಸಕ ಡಾ.ಶಿವರಾಜ ಪಾಟೀಲರ ನಡುವೆ ಪರಸ್ಪರ ನಿಂದಿಸುವ ಮಟ್ಟಕ್ಕೆ ಹೋಗಿ ದೂರು ಕೂಡ ದಾಖಲಾಗಿದೆ. ಹಾಗಾಗಿ ಹೋರಾಟದ ಉದ್ದೇಶ ಈಡೇರುವುದೇ ಎಂಬ ಅನುಮಾನ ಮೂಡುವಂತಾಗಿದೆ.

ಸುದೀರ್ಘ ಹೋರಾಟ

ಸುದೀರ್ಘ 1149 ದಿನಗಳ ಹೋರಾಟವನ್ನ ಕೇಂದ್ರ ಸರಕಾರ ಗಂಭೀರವಾಗಿ ಪರಿಗಣಿಸದೆ ನಿರ್ಲಕ್ಷಿಸಿ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಆದರೆ ಏಮ್ಸ್ ಹೋರಾಟ ಸಮಿತಿ ಮತ್ತು ಬಿಜೆಪಿಯ ರಾಯಚೂರು ನಗರ ಶಾಸಕ ಡಾ.ಶಿವರಾಜ ಪಾಟೀಲ್ ನಡುವೆ ಪರಸ್ಪರ ಅವಾಚ್ಯ ಶಬ್ದಗಳಿಂದ ವಾಕ್ಸಮರ ನಡೆಸುವ ಮೂಲಕ ಏಮ್ಸ್ ಹೋರಾಟ ಗುರಿ ತಲುಪುವುದೇ..? ಎಂಬ ಗೊಂದಲ ಎದ್ದಿದೆ.

ಐಐಟಿ ಧಾರವಾಡದ ಪಾಲು

ಪ್ರಾದೇಶಿಕ ಅಸಮತೋಲನೆ ನಿವಾರಣೆಗಾಗಿ ರಾಯಚೂರಿನಲ್ಲಿ ಐಐಟಿ ಸ್ಥಾಪಿಸುವಂತೆ ಪ್ರೊ.ನಂಜುಂಡಪ್ಪ ಸಮಿತಿ ಸರಕಾರಕ್ಕೆ ಶಿಫಾರಸ್ಸು ಮಾಡಿತ್ತು. ಜಗದೀಶ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದಾಗ ಕಲಬುರ್ಗಿಯ ಸಚಿವ ಸಂಪುಟದಲ್ಲೂ ತೀರ್ಮಾನಿಸಲಾಗಿತ್ತು. ನಂತರ ನಡೆದ ರಾಜಕೀಯ ಮೇಲಾಟದಿಂದ ರಾಯಚೂರಿಗೆ ಐಐಟಿ ಕೈ ತಪ್ಪಿ ಧಾರವಾಡದ ಪಾಲಾಯಿತು.

ಐಐಟಿ ಧಾರವಾಡಕ್ಕೆ ನೀಡಿದ್ದನ್ನ ಪ್ರತಿಭಟಿಸಿ ಆಗ ನಡೆದ ಹೋರಾಟ ರಾಯಚೂರು ಜಿಲ್ಲೆಯ ಪ್ರತಿ ಮನಸ್ಸುಗಳಲ್ಲಿ ಕಿಚ್ಚು ಹತ್ತಿಸಿತ್ತು. ಅದರ ಫಲವಾಗಿ ರಾಯಚೂರಿಗೆ ಟ್ರಿಬಲ್ (ಐಐಐಟಿ) ಐಟಿ ನೀಡುವ ಮೂಲಕ ಹೋರಾಟ ತಣ್ಣಗಾಗುವಂತೆ ಮಾಡಲಾಗಿತ್ತಾದರೂ, ಜಿಲ್ಲೆಗಾಗಿರುವ ಅನ್ಯಾಯದ ಬಗ್ಗೆ ಹೋರಾಟಗಾರರ ಎದೆಯಲ್ಲಿದ್ದ ಕಿಚ್ಚು ಆರಿರಲಿಲ್ಲ.

ಏಮ್ಸ್ ಬೇಕೇ ಬೇಕು

ಡಾ.ಬಸವರಾಜ ಕಳಸ, ಅಶೋಕ ಜೈನ್, ಎಂ ಆರ್ ಭೇರಿ ಸೇರಿದಂತೆ ಹಲವು ಹೋರಾಟಗಾರರು ರಾಯಚೂರಿಗೆ ಏಮ್ಸ್ ಬೇಕೆಬೇಕು. ಏಮ್ಸ್ ಮಂಜೂರು ಆಗುವವರೆಗೆ

ಹೋರಾಟ ನಿಲ್ಲಿಸುವುದಿಲ್ಲ. ಪ್ರಾಣ ಬೇಕಾದರೂ ಬಿಟ್ಟೆವು ಏಮ್ಸ್ ಬಿಡುವುದಿಲ್ಲ ಎಂಬ ಘೋಷ ವಾಕ್ಯದೊಂದಿಗೆ ಮಹಾತ್ಮಗಾಂಧಿ ಪುತ್ಥಳಿಯ ಮುಂದೆ ಕಳೆದ 1149 ದಿನಗಳಿಂದ ನಿರಂತರವಾಗಿ ಧರಣಿ ನಡೆಸುತ್ತಿದ್ದಾರೆ. ಎರಡೆರಡು ಬಾರಿ ದೆಹಲಿಗೆ ನಿಯೋಗ ತೆರಳಿ ರಾಯಚೂರಿಗೆ ಏಮ್ಸ್ ಮಂಜೂರು ಮಾಡುವಂತೆ ಕೇಂದ್ರ ಸಚಿವರ ಗಮನಕ್ಕೆ ತಂದಿದ್ದಾರೆ. ರಾಜ್ಯದ ಕಾಂಗ್ರೆಸ್ ಸಂಸದರು ಕೂಡ ಇವರಿಗೆ ಸಾಥ್ ನೀಡಿದ್ದಾರೆ.

ಶಾಸಕರ ಜತೆ ಶೀತಲ ಸಮರ

ಈ ನಡುವೆ ಹೋರಾಟಗಾರರು ಮತ್ತು ಶಾಸಕ ಡಾ.ಶಿವರಾಜ ಪಾಟೀಲರ ನಡುವೆ ಶೀತಲ ಸಮರ ನಡೆಯುತ್ತಾ ಬಂದಿದೆ. ಹೋರಾಟಗಾರರು ಕೇವಲ ಕೇಂದ್ರದ ಮೇಲೆ ಗೂಬೆ ಕೂರಿಸುತ್ತಾ, ಟೀಕಿಸುತ್ತಿದ್ದಾರೆ. ರಾಜ್ಯ ಸರಕಾರ ಕಾನೂನಾತ್ಮಕವಾಗಿ ರಾಯಚೂರಿಗೆ ಏಮ್ಸ್ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವನೆಯನ್ನೇ ಸಲ್ಲಿಸಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ಬಾರಿ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಸಿ ಎಂ ಪತ್ರ ಬರೆದರೆ ಅದು ವೈಯಕ್ತಿಕವಾಗುತ್ತದೆ ವಿನಃ ಸರಕಾರದ ನಿರ್ಧಾರವಾಗುವುದಿಲ್ಲ ಎಂಬ ಅಪಸ್ವರದ ಮಾತು ಕೇಳಿ ಬಂದಿವೆ.

ಜೋಶಿ ಹೇಳಿಕೆಗೆ ಕಿಡಿ

ಕಳೆದ ಕೆಲ ದಿನಗಳ ಹಿಂದೆ ಜಿಲ್ಲೆಗೆ ಆಗಮಿಸಿದ್ದ ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರು ಶಾಸಕ ಡಾ.ಶಿವರಾಜ ಪಾಟೀಲ ಅವರ ಮನೆಯಲ್ಲಿ ಪತ್ರಕರ್ತರ ಪ್ರಶ್ನೆಗೆ ರಾಯಚೂರಿಗೆ ಏಮ್ಸ್ ನೀಡಬೇಕೋ ಬೇಡವೋ ಎಂಬದನ್ನು ತಜ್ಞರ ಸಮಿತಿ ನಿರ್ಧರಿಸುತ್ತದೆ ಎಂದು ಉತ್ತರ ನೀಡಿದ್ದರು. ಕೇಂದ್ರ ಸಚಿವರ ಈ ಹೇಳಿಕೆಯಿಂದ ಕೆರಳಿದ ಹೋರಾಟಗಾರರು ಪ್ರಲ್ಹಾದ ಜೋಶಿ ಮತ್ತು ಡಾ.ಶಿವರಾಜ ಪಾಟೀಲ ವಿರುದ್ಧ ಹರಿಹಾಯ್ದಿದ್ದರು. ಇದಕ್ಕೆ ಪ್ರತಿಯಾಗಿ ಶಾಸಕರ ಬೆಂಬಲಿಗರು ಸುದ್ದಿಗೋಷ್ಠಿ ನಡೆಸಿ, ಹೋರಾಟಗಾರರು ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದ್ದರು.

ದಿನಕ್ಕೊಂದು ಹೇಳಿಕೆ

ಸಾಲದೆಂಬಂತೆ ಸ್ವತಃ ಶಾಸಕರು ಬೃಹತ್ ಪ್ರತಿಭಟನೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಹೋರಾಟಗಾರರ ಮೇಲೆ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದರು. ಶಾಸಕರ ಒತ್ತಡದಿಂದಾಗಿ ಹೋರಾಟಗಾರರ ವಿರುದ್ಧ ದೂರು ದಾಖಲಾಗಿದೆ. ದಿನಕ್ಕೊಂದು ಸಂಘಟನೆಯವರು ಹೋರಾಟಗಾರರ ಪರ ಮತ್ತು ಶಾಸಕರ ಪರವಾಗಿ ಹೇಳಿಕೆ ನೀಡುತ್ತಿದ್ದಾರೆ.

ಏಮ್ಸ್ ಮಂಜೂರಾತಿಗಾಗಿ ಶಾಸಕರು ಮತ್ತು ಧರಣಿ ನಿರತರು ಒಗ್ಗೂಡಿ ಹೋರಾಟ ಮಾಡಬೇಕಿತ್ತು. ಆದರೆ ಹೋರಾಟದಲ್ಲೂ ರಾಜಕೀಯ ಬೆರೆತು ಜಿಲ್ಲೆಗೆ ಬೇಕಾಗಿರುವ ಏಮ್ಸ್ ಬೇಡಿಕೆಯ ಮೂಲ ಉದ್ದೇಶಕ್ಕೆ ಧಕ್ಕೆ ಬರುವಂತಾಗಿದೆ.

▶▶ ಕೊನೆಗೂ ಸೆರೆ ಸಿಕ್ಕರು ಹುಲಿ ಹಂತಕರು ▶▶ ಕೊನೆಗೆ 20 ಕೋತಿಗಳೂ ಬಲಿಯಾದವು

ಕಾಡಿನ ಜಿಲ್ಲೆಗೆ ವಿಷ ಪ್ರಾಶನದ ಕಳಂಕ

ಜಿಲ್ಲಾ ನೋಟ

ದೇವನೂರು ಶ್ರೀನಿವಾಸ್, ಚಾಮರಾಜನಗರ

ಇದು ಅಪ್ಪಟ ಕಾಡಿನ ಜಿಲ್ಲೆ. ಶೇ.52ರಷ್ಟು ಕಾಡನ್ನೇ ಹೊಂದಿದೆ. ಅದರಲ್ಲೂ ಎರಡು ಹೊರ ರಾಜ್ಯಗಳ ಸಂಪರ್ಕಕೊಂಡಿಯಾಗಿ ಗಡಿ ಜಿಲ್ಲೆ ಕೂಡ. ಈ ಜಿಲ್ಲೆಗೆ ಮತ್ತೊಂದು ಗರಿ ಕೂಡ ಇದೆ. ಅದೇನೆಂದರೆ ಎರಡು ಹುಲಿ ಸಂರಕ್ಷಿತ ಅರಣ್ಯ ಪ್ರದೇಶವನ್ನು ಹೊಂದಿದೆ. ಇದು ವನ್ಯ ಜೀವಿಗಳ ಧಾಮ ಕೂಡ ಎಂಬ ಹೆಗ್ಗಳಿಕೆಯೂ ಇದೆ.

ಜಿಲ್ಲೆಗೆ ಕಳಂಕದ ಘಟನೆ

ಜಿಲ್ಲೆಯ ಐದು ತಾಲೂಕುಗಳಾದ ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ, ಹನೂರು ಹಾಗೂ ಗುಂಡ್ಲುಪೇಟೆಗಳು ಕಾಡಿನ ನಂಟಿನೊಂದಿಗೆ ಬೆಳೆದಿವೆ. ಇಲ್ಲಿನ ಜನರಿಗೆ ಪ್ರಾಣಿಗಳ ಮೇಲಿನ ಪ್ರೀತಿ, ಗೌರವ ಹಾಗೂ ಹೆಮ್ಮೆ. ಇದುವರೆಗೂ ಪ್ರಾಣಿಗಳ ಸಂಕುಲಕ್ಕೆ ವೀರಪ್ಪನ್ ಹೋದ ನಂತರ ಯಾವುದೇ ಉಪದ್ರವ ಇರಲಿಲ್ಲ. ಆದರೆ ಯಾಕೋ ಏನೋ ಇತ್ತೀಚೆಗೆ ಜಿಲ್ಲೆಗೆ ಅಪಕೀರ್ತಿ ತರುವ ಘಟನೆ ಸಂಭವಿಸಿವೆ. ಇಡೀ ರಾಜ್ಯದ ಜನತೆಯನ್ನೇ ಬೆಚ್ಚಿಬೀಳುವಂತೆ ಮಾಡಿವೆ. ಒಂದೇ ವಾರದ ಅಂತರದಲ್ಲಿ ಎರಡು ಕಡೆ ಕಾಡು ಪ್ರಾಣಿಗಳಿಗೆ ವಿಷ ಹಾಕಿ ಕೊಂದ ಘಟನೆ ಇಡೀ ದೇಶವೇ ಜಿಲ್ಲೆಯತ್ತ ತಿರುಗಿ ನೋಡುವಂತೆ ಮಾಡಿದೆ!

ಐದು ಹುಲಿಗಳ ಪ್ರಕರಣ

ಮಲೆ ಮಹದೇಶ್ವರ ವನ್ಯಜೀವಿಧಾಮದ ಮೀಣ್ಯಂ ಬೀಟ್ ನಲ್ಲಿ ಸತ್ತ ಹಸುವಿಗೆ ವಿಷ ಹಾಕಿ ತಾಯಿ ಹುಲಿಯೊಂದಿಗೆ ನಾಲ್ಕು ಮರಿ ಹುಲಿಗಳು ಮೃತಪಟ್ಟವು. ಇನ್ನು ಸತ್ತು ಬಿದ್ದ ಹಸುವಿನ ಹತ್ತಿರವೇ ಐದು ಹುಲಿಗಳು ಸತ್ತು ಬಿದ್ದ ದೃಶ್ಯ ಎಂಥವರನ್ನು ಮರಗುವಂತೆ ಮಾಡಿತ್ತು. ಇನ್ನು ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಈ ಘಟನೆ ಆತಂಕ ಪಡುವಂತೆ ಮಾಡಿದೆ. ಪರಿಸರ ಪ್ರೇಮಿಗಳು ಹಾಗೂ ಪರಿಸರ ವಾದಿಗಳು ತೀವ್ರ ಆಕ್ರೋಶ ಕೂಡ ಹೊರಹಾಕಿದ್ದಾರೆ.

ಮೂವರು ಹಂತಕರ ಬಂಧನ

ಎರಡು ದಿನಗಳ ಕಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಅರಣ್ಯ ಇಲಾಖೆ ಎರಡು ದಿನಗಳಲ್ಲೇ ಬಂಧಿಸುವಲ್ಲಿ ಯಶಸ್ವಿಯಾಯಿತು. ಹನೂರು ತಾಲೂಕಿನ ಕೊಪ್ಪ ಗ್ರಾಮದ ಹಸುವಿನ ಮಾಲೀಕ ಕೋನಪ್ಪ, ಹಸುವಿಗೆ ವಿಷ ಹಾಕಿದ ಮಾದುರಾಜ್, ಶಿವಣ್ಣ ಹಾಗೂ ನಾಗರಾಜು, ಪೂಜಾರಿಗೌಡ ಎಂಬ ದನಗಾಹಿಗಳನ್ನು ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು. ಇದೀಗ ನ್ಯಾಯಾಂಗ ಬಂಧನವಾಗಿ ಜೈಲಿನಲ್ಲಿ ಮುದ್ದೆ ಮುರಿಯುತ್ತಿದ್ದಾರೆ.

ಹುಲಿಗಳಿಗೆ ವಿಷ ಹಾಕಿದ್ದೇಕೆ?

ಹನೂರು ತಾಲೂಕಿನ ಮೀಣ್ಯಂ ಸಮೀಪವೇ ಕೊಪ್ಪ ಗ್ರಾಮವಿದ್ದು ಜಾನುವಾರುಗಳಿಗೆ ಹುಲಿ

ಉಪಟಳ ಕೊಡುತ್ತಿದೆ. ಅಲ್ಲದೇ ಸಾಕಷ್ಟು ಜಾನುವಾರುಗಳನ್ನ ಕೊಂದು ತಿಂದಿದೆ ಎಂಬ ಕೋಪವಿತ್ತು. ಅದೇ ದ್ವೇಷವಿಟ್ಟುಕೊಂಡ ಕಿಡಿಗೇಡಿಗಳು ಹುಲಿಗೆ ಬಾಯಿಗೆ ಬಲಿಯಾದ ಹಸುವಿನ ದೇಹಕ್ಕೆ ಕ್ರಿಮಿನಾಶಕ ಸಿಂಪಡಿಸಿದ್ದರು. ಇದರಿಂದ ಬೇಟೆಗೆ ಬಂದ ಹುಲಿಗಳು ಸ್ಥಳದಲ್ಲೇ ಅಸುನೀಗಿದ್ದವು. ಘಟನೆ ಸಂಬಂಧ ಸಮೀಪದ ಗ್ರಾಮಗಳಾದ ಕೊಪ್ಪ, ಮೀಣ್ಯಂ ಹಾಗೂ ಗಾಜನೂರು ಗ್ರಾಮಗಳಲ್ಲಿ ಹಲವು ದನಗಾಹಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು. ಆದರೆ ಮೊದಲಿಗೆ ಕೊಪ್ಪ ಗ್ರಾಮದ ಐವರನ್ನು ಬಂಧಿಸಿದ್ದ ಅರಣ್ಯಾಧಿಕಾರಿಗಳು ತೀವ್ರ ಕಾರ್ಯಾಚರಣೆ ನಡೆಸಿ ಹಸುವಿನ ಮಾಲೀಕರನ್ನು ಮೊದಲಿಗೆ ಪತ್ತೆ ಮಾಡಿಕೊಂಡು ನಂತರ ಉಳಿದವರನ್ನು ಬಿಡುಗಡೆಗೊಳಿಸಿದ್ದರು. ಹಸುವಿನ ಮಾಲೀಕ ಕೋನಪ್ಪ ಎಂಬುದು ಖಚಿತವಾಗುತ್ತಿದ್ದಂತೆ ಹುಲಿಗಳ ಸಾವಿಗೆ ಕಾರಣರಾದ ಮಾದುರಾಜ್ ಮತ್ತು ನಾಗರಾಜು ಎಂಬವರನ್ನು ಕೂಡ ಹೆಡೆಮುರಿ ಕಟ್ಟಿದ್ದರು.

ಗೊಬ್ಬರ ದಂಧೆಗೆ ಹುಲಿಗಳು ಬಲಿ

ಇನ್ನು ಈ ಭಾಗದಲ್ಲಿ ತಮಿಳುನಾಡಿನ ಬಂಡವಾಳ ಶಾಹಿಗಳು ದನಗಳನ್ನು ಇಲ್ಲಿಗೆ ತಂದು ಇಲ್ಲಿ ಬಡಜನರನ್ನು ಕೂಲಿಕಾರರಾಗಿ ಮಾಡಿಕೊಂಡು ಗೊಬ್ಬರ ದಂಧೆ ನಡೆಸುತ್ತಿದ್ದಾರೆ ಎಂಬ ಆರೋಪವೂ ಕೇಳಿ ಬರುತ್ತಿದೆ. ಅದರ ಬಗ್ಗೆ ತನಿಖಾ ತಂಡ ಕ್ರಮ ಜರುಗಿಸಲಿದೆ. ತಮಿಳುನಾಡಿನಲ್ಲಿ ಕಾಡಿಗೆ ಜಾನುವಾರುಗಳನ್ನು ಬಿಡುವುದಿಲ್ಲ. ಹೀಗಾಗಿ ನಮ್ಮ ರಾಜ್ಯದ ಈ ಗಡಿ ಭಾಗದಲ್ಲಿ ದನಗಳನ್ನು ತಂದು ಬಿಡುತ್ತಾರೆ. ಇಲ್ಲಿ ಕೂಲಿ ಲೆಕ್ಕದಲ್ಲಿ ಹಸುಗಳ ಸಾಕಣೆ ಮಾಡಿಸುತ್ತಾರೆ. ಇಂಥಾದ್ದೊಂದು ಜಾಲ ಇಲ್ಲಿ ದಟ್ಟವಾಗಿದೆ. ಕರ್ನಾಟಕದ ಕಾಡು ತಮಿಳುನಾಡಿನ ದನಗಳಿಗೆ ಮೇವಿನ ತಾಣವಾಗಿದೆ. ತಮಿಳುನಾಡಿನ ದನಗಳನ್ನು ತಂದು ಸಾಕಲು ಕಡಿವಾಣ ಹಾಕಬೇಕೆಂದು ಮಾಜಿ ಶಾಸಕ ನರೇಂದ್ರ ಒತ್ತಾಯಿಸಿದ್ದಾರೆ.

250 ಹಸುಗಳ ಸಾಕಣೆ

ಹನೂರು ತಾಲೂಕಿನ ಕೊಪ್ಪ ಗ್ರಾಮದ ಶಿವಣ್ಣಗೌಡ, ಕುನ್ನಪ್ಪ ಸರಿಸುಮಾರು 250ಕ್ಕೂ ಅಧಿಕ ಹಸುಗಳನ್ನು ಸಾಕುತ್ತಿದ್ದಾರೆ. ಹಸುಗಳನ್ನು ಬರಗೂರು ಸಂಗಳ ಬೆಟ್ಟದ ಕಾರ್ತಿಕ್, ಈತನ ಸಹೋದರ ಮಾದೇಶ್ ಎಂಬಿಬ್ಬರು ಹಸುಗಳನ್ನು ಮೇಯಿಸಲು ಸೇರಿಕೊಂಡಿದ್ದರು. ಇವರ ಸ್ವ ಗ್ರಾಮದಲ್ಲಿ ಶುಭ ಕಾರ್ಯ ಇದ್ದಿದ್ದರಿಂದ ಭಾನುವಾರ ಗ್ರಾಮಕ್ಕೆ ತೆರಳಿದ್ದರು. ಇವರ ಬದಲಾಗಿ ಮಾಧುರಾಜು ಹಾಗೂ ಕುನ್ನಪ್ಪ ಹಸುಗಳನ್ನು ಮೇಯಿಸಲು ಕಾಡಿಗೆ ತೆರಳಿದ್ದ ವೇಳೆ ಹಸುಗಳು ದಿಕ್ಕಾಪಾಲಾಗಿ ಓಡಿಹೋದದ್ದನ್ನು ಕಂಡು ಪರಿಶೀಲನೆ ನಡೆಸಿದಾಗ ಹಸು ಹುಲಿ ದಾಳಿಗೆ ಮೃತಪಟ್ಟಿತ್ತು. ಕಳೆದ ವಾರವೂ ಮಾಧುರಾಜು ಗೂಳಿ ಮೇಲೆ ಹುಲಿ ದಾಳಿ ನಡೆಸಿತ್ತು. ಇದರಿಂದ ರೊಚ್ಚಿಗೆದ್ದಿದ್ದ ಮಾಧುರಾಜು ಕ್ರಿಮಿನಾಶಕವನ್ನು ಹಸುವಿನ ತೊಡೆಯ ಭಾಗಕ್ಕೆ ಹಾಕಿದ್ದರು. ಇದನ್ನು ವಿಚಾರಣೆಯಲ್ಲಿ ಬಾಯಿಬಿಟ್ಟಿದ್ದಾರೆ.

ಹುಲಿ ಬರುವ ನಂಬಿಕೆ

ಬೇಟೆಯಾಡಿದ್ದ ಹಸುವನ್ನು ಮತ್ತೇ ತಿನ್ನಲು ಬಂದ ಹುಲಿ ಮತ್ತು ಮರಿಗಳು ಕ್ರಿಮಿನಾಶಕ ಹಾಕಿದ್ದ ಮಾಂಸವನ್ನು ತಿಂದು ಮೃತಪಟ್ಟಿವೆ. ಮರಣೋತ್ತರ ಪರೀಕ್ಷೆಯಲ್ಲಿ ವಿಷದಿಂದಲೇ ಹುಲಿಗಳು ಮೃತಪಟ್ಟಿರುವುದು ದೃಢಪಟ್ಟಿದೆ.

ಪ್ರಸಾದಕ್ಕೆ 17 ಜೀವ ಬಲಿ

ಇದೇ ಹನೂರು ತಾಲೂಕಿನ ಸುಳ್ವಾಡಿ ಕಿಚ್ಚುಗುತ್ತಿ ಮಾರಮ್ಮನ ದೇವಸ್ಥಾನದಲ್ಲಿ 2019 ರಲ್ಲಿ ಎರಡು ಗುಂಪುಗಳ ಒಳ ಜಗಳಕ್ಕೆ ದೇವಸ್ಥಾನಕ್ಕೆ ಬಂದ ಭಕ್ತರಿಗೆ ಪ್ರಸಾದದಲ್ಲಿ ವಿಷ ಬೆರೆಸಿ ಹದಿನೇಳು ಜೀವಗಳು ಬಲಿಯಾಗಿದ್ದವು. ಅದಕ್ಕೆ ಕಾರಣರಾದವರು ಒಬ್ಬ ಸ್ವಾಮೀಜಿ. ಇನ್ನೂ ಜೈಲಿನಲ್ಲೇ ಮುದ್ದೆ ಮುರಿಯುತ್ತಿದ್ದಾರೆ. ಈಗ ಮತ್ತೊಂದು ವಿಷಪಾಶನ ಘಟನೆ ನಡೆದಿರುವುದು ವಿಪರ್ಯಾಸವೇ ಸರಿ.

20 ಕೋತಿಗಳ ಮರಣ

ಐದು ಹುಲಿಗಳ ಸಾವು ಮಾಸುವ ಮುನ್ನವೇ ಮತ್ತೊಂದು ಪ್ರಕರಣದಲ್ಲಿ ಗುಂಡ್ಲುಪೇಟೆ ತಾಲೂಕಿನ ಕಂದೇಗಾಲ ಸಮೀಪ ಕೋತಿಗಳ ಮಾರಣ ಹೋಮದ ಘಟನೆ ನಡೆದಿದೆ. ಎರಡು ಚೀಲಗಳಲ್ಲಿ ಕೋತಿಗಳ ಶವವನ್ನು ಕಟ್ಟಿಟ್ಟು ಬಿಸಾಡಿ ಹೋಗಿದ್ದಾರೆ. ಮೇಲ್ನೋಟಕ್ಕೆ ವಿಷ ಪ್ರಶಾನ ಮಾಡಿರುವ ಶಂಕೆ ವ್ಯಕ್ತವಾಗಿದೆ. ಇದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಬಫರ್ ವಲಯಕ್ಕೆ ಬರಲಿದೆ. ಅರಣ್ಯಾಧಿಕಾರಿಗಳು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಹನೂರು ಭಾಗದ ವಿಷದ ಪ್ರಕರಣ ಇದೀಗ ಬಂಡೀಪುರಕ್ಕೂ ವ್ಯಾಪಿಸಿದ್ದು, ಇಂಥ ಘಟನೆ ನಡೆಯಂತೆ ನೋಡಿಕೊಳ್ಳಬೇಕು ಎಂದು ವನ್ಯಜೀವಿಗಳ ಪ್ರೇಮಿಗಳು ಸರಕಾರವನ್ನ ಒತ್ತಾಯಿಸಿದ್ದಾರೆ.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 05-07-2025 ಶನಿವಾರ

ಚಿತ್ತವಿಹಾರ

ಶಿಲ್ಪಿಯಾಗುವ ವೃತ್ತಿ

● ಮಾಯಾ ಬಾಲಚಂದ್ರ

ನಾವು ಮಾಡುವ ವೃತ್ತಿ, ಉದ್ಯೋಗ, ಕೆಲಸಗಳು ಕೇವಲ ಆದಾಯ ಪಡೆಯ ಲೆಂದಾಗಲಿ, ಜೀವನ ನಿರ್ವಹಣೆಗಾಗಲಿ ಅಲ್ಲ. ಅವು ನಿರಂತರವಾಗಿ ನಮ್ಮ ವ್ಯಕ್ತಿತ್ವಕ್ಕೆ ಆಕಾರ ನೀಡುತ್ತಾ, ಜೀವನವನ್ನು ರೂಪುಗೊಳಿ ಸುವ ಶಿಲ್ಪಿ ಆಗುತ್ತವೆ. ನಮ್ಮ ಕೆಲಸಗಳು ನಮ್ಮ ಗುರುತು ಅಷ್ಟೇ ಅಲ್ಲ, ಅವು ನಮ್ಮ ವ್ಯಕ್ತಿತ್ವದ ಸಮಗ್ರತೆಗೆ ಸಾಕ್ಷಿ ಯಾಗಿಯೂ ನಿಲ್ಲುತ್ತವೆ. ನಾವು ಕೆಲಸವನ್ನು ಹೇಗೆ ಮಾಡುತ್ತೇವೆ? ಎನ್ನುವುದು ಬಹು ಮುಖ್ಯ. ಅದೇ ನಮ್ಮ ಕೆಲಸ ವನ್ನು, ಜೊತೆಗೆ ನಮ್ಮನ್ನು ಶಕ್ತಿಯುತ ಗೊಳಿಸುವುದು.

ಪರ್ವತದಲ್ಲಿ ಉಗಮವಾಗುವ ತೊರೆಯೊಂದು ಕಿರಿದಾಗಿ ಹರಿಯುತ್ತಾ ತನ್ನ ಪ್ರಯಾಣವನ್ನು ಪ್ರಾರಂಭಿಸುತ್ತದೆ. ಮುಂದೆ ಬೆಟ್ಟ - ಗುಡ್ಡಗಳನ್ನು ಇಳಿಯುತ್ತಾ, ಕಂದಕಗಳನ್ನು ದಾಟುತ್ತಾ, ಕಾಡು - ಮೇಡುಗಳನ್ನು ಬಳಸಿಕೊಂಡು ಹರಿಯುತ್ತಾ, ಎಲ್ಲ ಕಡೆಯಿಂದಲೂ ತನ್ನನ್ನು ಸೇರುವ ಕಿರು ತೊರೆಗಳನ್ನು ತನ್ನ ಒಡಲೊಳಗೆ ಸೇರಿಸಿಕೊಳ್ಳುತ್ತಾ, ತನ್ನ ಪಾತ್ರವನ್ನು ಹೆಚ್ಚಿಸಿಕೊಳ್ಳುತ್ತಾ, ತಾನೊಂದು ದೊಡ್ಡ ನದಿಯಾಗಿ ಪ್ರವಹಿಸುತ್ತದೆ. ತಾನು ಪ್ರವಹಿಸುವ ದಾರಿಯಲ್ಲಿ ಜೀವದಾಯಿನಿಯಾಗಿ ಎಲ್ಲರ ದಾಹವನ್ನು ತಣಿಸಿ, ತನ್ನ ಗಮ್ಯವಾದ ಸಮುದ್ರವನ್ನು ಸೇರಿ, ತಾನೂ ಸಮುದ್ರವೇ ಆಗಿಬಿಡುತ್ತದೆ.

ಪ್ರಾರಂಭದಲ್ಲಿದ್ದ ಸಣ್ಣ ತೊರೆಯೊಂದು ಈ ಪ್ರಮಾಣದಲ್ಲಿ ಪ್ರವಹಿಸಿ, ತಾನು ಬೆಳೆದು, ತನ್ನ ಜೊತೆಯಾದವರನ್ನೂ ಬೆಳೆಸುತ್ತಾ, ತಾನು ಹೋದ ಲ್ಲೆಲ್ಲ ಅಭಿವೃದ್ಧಿಗೆ ಕಾರಣವಾಗುತ್ತಾ ಸಾರ್ಥಕತೆ ಪಡೆಯುವುದನ್ನು ಯಾರೂ ಮೊದಲೇ ಊಹಿಸಲೂ ಸಾಧ್ಯವಿಲ್ಲ. ಚಿಕ್ಕ ತೊರೆಯ ಉದ್ದದ ಪಯಣ ನಮ್ಮ ಬದುಕಿ ನುದ್ದಕ್ಕೂ ನಾವು ತೊಡಗಿಸಿಕೊಳ್ಳುವ ಕೆಲಸದಂತೆ ಯೇ. ಚಿಕ್ಕ ಕೆಲಸವಾದರೂ ಎಷ್ಟು ಪ್ರಾಮಾಣಿಕವಾಗಿ ಕೆಲಸವನ್ನು ಮಾಡುತ್ತೇವೆ ಎನ್ನುವುದನ್ನು ಸಮಯ ಸಾಕ್ಷೀಭೂತವಾಗಿ ಗಮನಿಸುತ್ತಿರುತ್ತದೆ. ಕೆಲಸ ಮಾಡುವುದೆಂದರೆ ಶಕ್ತಿಯನ್ನು ವ್ಯಯಿಸುವುದೆಂಬ ಮನೋಭಾವದವರೇ ಅಧಿಕ. ಹಾಗೆಂದುಕೊಂಡರೆ ನಮ್ಮ ಶಕ್ತಿ ಕುಂದುತ್ತಾ ಹೋದಂತೆ ಭಾಸವಾಗಿ, ಕೆಲ ಸಮಯದ ನಂತರ ಬಳಲಿಕೆಯಾದ ಅನುಭವವಾ ಗುತ್ತದೆ. ಬದಲಿಗೆ ಆ ಕೆಲಸಕ್ಕೆ ನಾವು ಶಕ್ತಿ ತುಂಬುತ್ತಿ ದ್ದೇವೆ ಎಂದುಕೊಳ್ಳುತ್ತಾ ಕೆಲಸದಲ್ಲಿ ತಲ್ಲೀನರಾದರೆ, ಹರಿವ ತೊರೆಗೆ ಹಲವು ತೊರೆಗಳು ಬಂದು ಸೇರು ವಂತೆ, ಆ ಕೆಲಸವೇ ವಿವಿಧ ರೀತಿಯಲ್ಲಿ ನಮ್ಮಲ್ಲಿ ಶಕ್ತಿ ತುಂಬುತ್ತಾ ಹೋಗುತ್ತದೆ. ಏರಿಳಿತಗಳಿಗೆ ಹಿಗ್ಗದೆ, ಕುಗ್ಗದೆ, ಕಠಿಣ ಹಾದಿಯನ್ನು ಸಹನೆಯಿಂದ ನಡೆ ಯುತ್ತಾ, ಅನ್ಯರಿಗೂ ಸಹಾಯ ಮಾಡುತ್ತಾ ಕೆಲಸ ಮಾಡುವವರ ಜೀವನ ಸುಂದರವಾಗಿ ರೂಪ ಗೊಳ್ಳು ತ್ತದೆ. ಮಾಡುವ ಕೆಲಸ ನಮ್ಮ ವ್ಯಕ್ತಿತ್ವವನ್ನು ಸ್ಫುಟಗೊ ಳಿಸುತ್ತಾ ಸಾಗುವಂತಾದಾಗ, ಜೀವನವು ಸಾಗರದಂತೆ ವಿಸ್ತಾರಗೊಂಡು ಸಾರ್ಥಕತೆ ಪಡೆಯುತ್ತದೆ.

ಯಕ್ಷಸುಂದರನ ಒಡ್ಡೋಲಗ!

● ಅರುಂಧತಿ ಮಧ್ಯಸ್ಥ, ಸಾಲಿಗ್ರಾಮ

ಗಂಡುಕಲೆಯೆಂದೇ ಖ್ಯಾತವಾಗಿರುವ ಕರಾವಳಿಯ ಪ್ರಸಿದ್ಧ ಕಲೆ ಯಕ್ಷಗಾನ. ಈ ಕ್ಷೇತ್ರದಲ್ಲಿ ಇಂದು ಪ್ರಖರವಾಗಿ ಮಿಂಚುತ್ತಿರುವವರಲ್ಲಿ ಬಡಗಿನ ಪ್ರಧಾನ ವೇಷಧಾರಿ, 'ಯಕ್ಷಸುಂದರ' ಪ್ರಸನ್ನ ಶೆಟ್ಟಿಗಾರ್ ಮಂದಾರ್ತಿ ಪ್ರಮುಖರು. ಪ್ರಸನ್ನ ಅವರು ಜನಿಸಿದ್ದು 1985ರಲ್ಲಿ, ಉಡುಪಿ ಜಿಲ್ಲೆಯ ಮಂದಾರ್ತಿಯಲ್ಲಿ. ತಂದೆ ಗಂಗಾಧರ ಶೆಟ್ಟಿಗಾರ್ ಅವರು ವಿದೇಶದಲ್ಲಿದ್ದ ಕಾರಣ, ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ತಾಯಿ ಸುಲೋಚನಾ ಅವರ ಊರಾದ ಮಂದಾರ್ತಿಗೆ ಆಗಮಿಸಿ, ಸೋದರಮಾವನ ಆಸರೆಯಲ್ಲಿ, ತಾಯಿ-ತಮ್ಮ-ತಂಗಿಯೊಂದಿಗೆ ಬಾಡಿಗೆಮನೆಯಲ್ಲಿ ವಾಸಿಸಿದರು.

ಮಂದಾರ್ತಿಯಲ್ಲಿ ಹೆಸರಾಂತ ಯಕ್ಷಗಾನ ಮೇಳಗಳಿವೆ. ಪುಟ್ಟ ಪ್ರಸನ್ನರನ್ನು ಆಕರ್ಷಿಸಿದ್ದು ಅಲ್ಲಿ ನಡೆಯುತ್ತಿದ್ದ ಮಂದಾರ್ತಿ ಮೇಳದ ಯಕ್ಷಗಾನಗಳು. ಪ್ರತೀ ದಿನ ತಪ್ಪದೇ ಆಟ ನೋಡಲು ಹೋಗುತ್ತಿದ್ದ ಇವರು, ಅಲ್ಲಿ ಕಣ್ಣಿಮನೆ ಗಣಪತಿ ಭಟ್ಟರಲ್ಲಿ ಹೇಳುತ್ತಿದುದೊಂದೇ, 'ಮೇಳಕ್ಕೆ ಸೇರಿಸಿಕೊಳ್ಳಿ, ಹಣ ಕೊಡದಿದ್ದರೂ ಪರವಾಗಿಲ್ಲ' ಎಂದು. ಏಳನೇ ತರಗತಿಯಲ್ಲಿಯೇ ವೇಷ ಹಾಕಲು ಆರಂಭಿಸಿದ್ದ ಇವರಿಗೆ ಮೊದಲ ಗುರು ಮಕ್ಕಳ ಮೇಳ ತಂತ್ರಾಡಿಯ ಹಿರಿಯಣ್ಣ ಶೆಟ್ಟಿಗಾರ್.

ಪಿಯುಸಿಯಲ್ಲಿ ಅನುತ್ತೀರ್ಣನಾಗಬೇಕು, ನಂತರ ಯಕ್ಷಗಾನ ಸೇರಬೇಕು ಎಂಬ ಇವರ ಆಸೆ: ಅದು ನೆರವೇರಿತು! ಪಿಯುಸಿಯಲ್ಲಿರುವಾಗಲೇ 50ಕ್ಕೂ ಹೆಚ್ಚು ವೇಷ ಮಾಡಿದ್ದ ಇವರು, 2004ರಲ್ಲಿ ಮಂದಾರ್ತಿ ಮೇಳಕ್ಕೆ ಸೇರಿ, ತಮ್ಮ ಯಕ್ಷಪಯಣವನ್ನಾರಂಭಿಸಿದರು. ಆಗ, 6 ತಿಂಗಳಿಗೆ ಇವರಿಗಿದ್ದ ಸಂಬಳ 7,500ರೂ! ರಾತ್ರಿ ಮೇಳದಲ್ಲಿ ವೇಷ,

ಗೌರವಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಶಸ್ತಿ, ಡಾ.ಶಾಂತಾರಾಮ್ ಪ್ರಶಸ್ತಿಯೊಂದಿಗೆ ಹಲವು ಪುರಸ್ಕಾರಗಳು, ಸಂಘ-ಸಂಸ್ಥೆಗಳ ಗೌರವ-ಸನ್ಮಾನಗಳು ಇವರ ಮುಡಿಗೇರಿವೆ. ಮೇ 2025ರಂದು ಮಂದಾರ್ತಿಯಲ್ಲಿ ನಡೆದ ಹುಟ್ಟೂರ ಸನ್ಮಾನದೊಂದಿಗೆ, 'ಯಕ್ಷನಂದನ' ಎಂಬ ಬಿರುದು ಇವರ ಮುಕುಟಕ್ಕೆ ಸಿಕ್ಕ ಮತ್ತೊಂದು ಗರಿ.

ಯಕ್ಷನಂದರನ ಒಡ್ಡೋಲಗ!

ಕಿರಿಯ ವಯಸ್ಸಿನಲ್ಲೇ ಹಿರಿಯ ಮತ್ತು ಪ್ರಮುಖ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ಈ ಕಲಾವಿದ, ಯಕ್ಷ ಸುಂದರ ಮತ್ತು ಯಕ್ಷ ನಂದನ ಎಂಬ ಬಿರುದನ್ನು ಗಳಿಸಿದ್ದಾರೆ!

ಹಗಲಿನಲ್ಲಿ ಕಂಪ್ಯೂಟರ್ ಶಿಕ್ಷಣ ಪಡೆಯುತ್ತಾ, ಪಿಯುಸಿ ಮರುಪರೀಕ್ಷೆ ಕಟ್ಟಿ ತೇರ್ಗಡೆ ಹೊಂದಿದರು. 6 ವರ್ಷ ವರ್ಷವೂ ಮಂದಾರ್ತಿ ಮೇಳದಲ್ಲಿ ವೇಷ ಮಾಡಿ, ನಂತರದ 2 ವರ್ಷ ಸಾಲಿಗ್ರಾಮ ಮೇಳದಲ್ಲಿ, ಮತ್ತೆ 1 ವರ್ಷ ಮಂದಾರ್ತಿ ಮೇಳದಲ್ಲಿದ್ದು, ಪುನಃ ಸಾಲಿಗ್ರಾಮ ಮೇಳಕ್ಕೆ ವಾಪಾಸಾದರು. ಅಂದಿನಿಂದ ಇಂದಿನವರೆಗೆ ಒಟ್ಟು 15 ವರ್ಷಗಳಿಂದ ಸಾಲಿಗ್ರಾಮ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಧಾನ ವೇಷ: ಪ್ರಧಾನ ವೇಷಧಾರಿಗಳು ಗೈರಾದಾಗ, ಯಜಮಾನರ ಪ್ರೋತ್ಸಾಹದಿಂದ ಕಿರಿಯ ಪ್ರಾಯದಲ್ಲೇ ಪ್ರಧಾನ ವೇಷ ಮಾಡಿ, ಜನಮನ್ನಣೆ ಗಳಿಸಿದರು. 2023-24ರಿಂದ ಮೇಳದ ಪ್ರಧಾನ ವೇಷಧಾರಿಯಾಗಿದ್ದಾರೆ. ಮೇಳದ ಯಜಮಾನರಾದ ಕಿಶನ್ ಹೆಗ್ಡೆಯವರ ನಿರಂತರ ಬೆಂಬಲ ಇದಕ್ಕೆ ಪ್ರಮುಖ ಕಾರಣ.

'ಯಕ್ಷಸುಂದರ' ಎಂಬ ಬಿರುದಿಗೆ ತಕ್ಕಂತೆ ಆಕರ್ಷಕ ನಿಲುವು, ಶಾರೀರತೆ, ವೇಷಕ್ಕೆ ತಕ್ಕ ಭೂಷಣ, ಅಭಿನಯದಲ್ಲಿ ಪ್ರಬುದ್ಧತೆ, ಸುಂದರ ಲಯಬದ್ಧ ಕುಣಿತ, ಪಾತ್ರೋಚಿತ ಮಾತು ಹೀಗೆ ಎಲ್ಲಾ ರೀತಿಯಲ್ಲೂ ಪೂರ್ಣರೆನಿಸಿಕೊಂಡು ಅಭಿಮಾನಿಗಳ ಮನದಲ್ಲಿ ಜಾಗವನ್ನು ದಕ್ಕಿಸಿಕೊಂಡವರು. ಪೌರಾಣಿಕ, ಸಾಮಾಜಿಕ ಎರಡೂ ವಿಧದ ಪ್ರಸಂಗಗಳಿಗೆ ಅಗತ್ಯವಾದ ರೀತಿಯಲ್ಲಿ ಪಾತ್ರವನ್ನು ಕಟ್ಟಿಕೊಡುವ ಇವರ ಶೈಲಿ ಅದ್ಭುತ. ಸಾಲ್ವ, ದುಷ್ಟಬುದ್ಧಿ, ದುಶ್ಯಾಸನ, ಈಶ್ವರ, ಭೀಮ, ಕೃಷ್ಣ ಇವರ ಪ್ರಸಿದ್ಧ ಪೌರಾಣಿಕ ಪಾತ್ರಗಳು. ಹಿಮ್ಮೇಳದಲ್ಲಿ ಭಾಗವತರಾದ ಚಂದ್ರಕಾಂತ ರಾವ್ ಮೂಡುಬೆಳ್ಳೆಯವರು ಹಾಡುತ್ತಿದ್ದರೆ, ರಂಗದಲ್ಲಿ ಬಡಗಿನ ಖ್ಯಾತ ಸ್ತ್ರೀ ವೇಷಧಾರಿ ಶಶಿಕಾಂತ ಶೆಟ್ಟಿ ಕಾರ್ಕಳ ಹಾಗೂ ಪ್ರಸನ್ನರ ಜೋಡಿ ಮಾಡುವ ಮೋಡಿಯನ್ನು ಒಮ್ಮೆಯಾದರೂ ಸವಿಯಲೇಬೇಕು. 6 ತಿಂಗಳು ಮೇಳದ ತಿರುಗಾಟವಾದರೆ, ಉಳಿದ 6 ತಿಂಗಳಿನಲ್ಲೂ ಬಿಡುವಿಲ್ಲದ ಕಲಾವಿದರು. ಬೇರೆ ಬೇರೆ ಜಿಲ್ಲೆ, ರಾಜ್ಯಗಳಲ್ಲದೆ, ವಿದೇಶಗಳಲ್ಲೂ ಯಕ್ಷಗಾನವನ್ನು ಮಾಡಿ ಜನಮನಗೆದ್ದವರು.

ಇವರಲ್ಲಿರುವ ಕಲಾನಿಷ್ಠೆಯಿಂದಲೇ 'ವೈಶಂಪಾಯನ ತೀರ'ವೆಂಬ ಚಲನಚಿತ್ರದಲ್ಲಿ ಅಭಿನಯಿಸುವ ಅವಕಾಶ ದೊರೆಯಿತು. ಏಪ್ರಿಲ್ 2025ರಲ್ಲಿ ತೆರೆಕಂಡ 'ವೀರ ಚಂದ್ರಹಾಸ'ವೆಂಬ ಯಕ್ಷಗಾನೀಯ ಚಿತ್ರದಲ್ಲಿ ದುಷ್ಟಬುದ್ಧಿ ಎನ್ನುವ ಖಳನಾಯಕರಾಗಿ ನಟಿಸಿದ್ದಾರೆ. ಮುಂದಿನ ದಿನಗಳಲ್ಲಿ ಇವರಿಂದ ಇನ್ನಷ್ಟು ವೈವಿಧ್ಯಮಯ ಪಾತ್ರಗಳನ್ನು ನೋಡುವ ಕಾತರದಲ್ಲಿದ್ದಾರೆ, ಯಕ್ಷಗಾನ ಪ್ರೇಮಿಗಳು!

ಈ ಸೃಷ್ಟಿಯ ಅತ್ಯುತ್ತಮ ಜೀವಿ ಮಾನವ!

ಎಷ್ಟು ಬಗೆ ಯಂತ್ರಗಳೊಳೆಷ್ಟು ರಸಮಿಶ್ರದಿಂ-
ದೆಷ್ಟಾದಿಭೂತಗಳು ಪರಿಪಾಕವೊಂದಿ
ಒಟ್ಟು ಸೇರಿಹವು ನರನೆಂಬ ಸಿದ್ಧಿಯೊಳವನು
ಸೃಷ್ಟಿಶೈಲದ ಶಿಖರ-ಮಂಕುತಿಮ್ಮ॥

ಜಗತ್ತಿನಲ್ಲಿ ಪ್ರಾಣಿಗಳ ಸೃಷ್ಟಿಯ ಕ್ರಮವೊಂದನ್ನು ವಿಶ್ಲೇಷಣೆ ಮಾಡುತ್ತಾ, ಪ್ರಾಣಿಗಳ ದೇಹವು ಪಂಚಭೂತಗಳಿಂದಾದ ಯಂತ್ರಗಳ ಸಮೂಹ, ಈ ದೇಹ ಉತ್ಪತ್ತಿಯಾಗುವುದು, ಬೆಳೆಯುವುದು ಮತ್ತು ಬದುಕುವುದು ಎಲ್ಲ ಈ ಯಂತ್ರಗಳು ಒಸರುವ ರಸಗಳಮಿಶ್ರಣದಿಂದ. ಹೀಗೆ ಆ ಪರಮಾತ್ಮನ ಸೃಷ್ಟಿಯಲ್ಲಿ 'ನರ' ನೆಂಬ ಪ್ರಾಣಿ, ಪ್ರಾಣಿ ಸಂಕುಲದಲ್ಲಿ ಅತ್ಯುತ್ತಮವಾದವನು. ಸೃಷ್ಟಿಯನ್ನು ಒಂದು 'ಬೆಟ್ಟವೆಂದು ಕೊಂಡರೆ' ಮಾನವ ಅದರ ತುತ್ತ ತುದಿಯಲ್ಲಿ ಇದ್ದಾನೆ ಎನ್ನುತ್ತಾರೆ ಮಾನ್ಯ ಗುಂಡಪ್ಪನವರು.

ಮಾನವ ಜನ್ಮ ದೊಡ್ಡದು ಎಂದು ದಾಸರೂ ಸಹ ಹೇಳಿದ್ದಾರೆ. ಅನ್ಯ ಪ್ರಾಣಿಗಳ ಯೋಚನಾ ಶಕ್ತಿ, ಅವುಗಳ ವಂಶಾಭಿವೃದ್ಧಿ, ರಕ್ಷಣೆ ಮತ್ತು ಅಹಾರಾನ್ವೇಷಣೆಗೆ ಮಾತ್ರ ಸೀಮಿತ. ಆದರೆ ಮಾನವನಿಗೆ ಅದಕ್ಕಿಂತ ಹೆಚ್ಚಿನ ಶಕ್ತಿಯನ್ನುಪರಮಾತ್ಮ ಕೊಟ್ಟಿದ್ದಾನೆ. ಹಾಗಾಗಿಯೇ ಮಾನವ ಪ್ರಪಂಚದಲ್ಲಿ ಇಷ್ಟೊಂದು ವೈವಿಧ್ಯ ಮತ್ತು ಬೆಳವಣಿಗೆ. ಮಾನವನ ಉಗಮವಾದಂದಿನಿಂದ ಇಂದಿನವರೆಗಿನ ಇವನ ಬೆಳವಣಿಗೆಯನ್ನು ಅವಲೋಕನ ಮಾಡಿದರೆ ನಮಗದರ ಅರಿವು ಆಗುತ್ತದೆ.ಹಾಗಾಗಿಯೇ ಬೇರೆಲ್ಲಾ ಪ್ರಾಣಿ, ಪಕ್ಷಿ, ಕೀಟ, ಕ್ರಿಮಿಗಳು ಭೂಮಿಗೆ ಸಮಾನಾಂತರವಾಗಿದ್ದರೆ ಮಾನವ ಮಾತ್ರ ಭೂಮಿಗೆ ಲಂಬವಾಗಿ, ಊರ್ಧ್ವ ಮುಖನಾಗಿದ್ದಾನೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ತಾನು ಸೃಷ್ಟಿಸಿದ ಜಗತ್ತನ್ನು ನಡೆಸಿಕೊಂಡು ಹೋಗಲು, ಇನ್ನೂ ಹೆಚ್ಚು ಸುಂದರವನ್ನಾಗಿಸಲು, ವಿಶೇಷವಾದ ಬುದ್ಧಿಯನ್ನು ಕೊಟ್ಟು, ತನ್ನ ಕಾರ್ಯವನ್ನು ಸುಲಭಗೊಳಿಸಿಕೊಳ್ಳಲು ಪ್ರಯತ್ನಿಸಿ, ಈ ಮಾನವನನ್ನು ವಿಶೇಷವಾಗಿ ಸೃಷ್ಟಿಸಿರಬೇಕು, ಆ ಪರಮಾತ್ಮ. ಹಾಗಾಗಿ ಅವನಿಗೆ ಆಲೋಚನಾ ಶಕ್ತಿಯೊಂದಿಗೆ ಭಾಷೆಯನ್ನೂ ಕೊಟ್ಟು, ಮಾತನ್ನೂ ಕೊಟ್ಟು, ಪರಮಾತ್ಮ ಇವನ ಮೇಲೆ ಬಹಳ ಕರುಣೆ ತೋರಿದ್ದಾನೆ. ಜ್ಞಾನ, ಸಾಹಿತ್ಯ, ಸಂಗೀತ, ಕಲೆ, ಭಕ್ತಿ ಮುಂತಾದ ಬದುಕಿಗೆ ಸಾರ್ಥಕ್ಯ ವನ್ನು ನೀಡಲು ಪೂರಕವಾದ ಎಲ್ಲವನ್ನೂ ಕೊಟ್ಟು ಇವನನ್ನು ಅತ್ಯುತ್ತಮವಾಗಿ ಸೃಷ್ಟಿಸಿ ದ್ದಾನೆ. ನಾಯಿಯೋ, ನರಿಯೋ, ಹಂದಿಯೋ, ಕೋತಿಯೋ ಆಗದೆ ನಾವೆಲ್ಲಾ ಮಾನವಾರಾಗಿ ಹುಟ್ಟಿರುವುದೇ ನಮ್ಮ ಸೌಭಾಗ್ಯ

ಆದರೆ ವಿಪರ್ಯಾಸವೆಂದರೆ ಕೊಟ್ಟದ್ದು ಅವನಾದರೂ, ನಾವೇ ಗಳಿಸಿದ್ದೆಂಬ ಅಹಂಕಾರದಿಂದ ಅವನು ಕೊಟ್ಟಾದ್ದನ್ನೆಲ್ಲಾ, ನಮ್ಮ ಸ್ವಾರ್ಥಕ್ಕೆ ಬಳಸುತ್ತಾ ಒಬ್ಬರು ಮತ್ತೊಬ್ಬರೊಡನೆ ಹೋರಾಡುವ ಮತ್ತು ಕಚ್ಚಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ. ಎಷ್ಟೊಂದು ಯುದ್ಧಗಳು, ವೈಮನಸ್ಯ, ವೈಷಮ್ಯ ರಕ್ತಪಾತ! ನಮ್ಮದಲ್ಲದ ಭೂಮಿಗೆ, ಕಡಲಿಗೆ, ಕಿತ್ತಾಟ. ನಮ್ಮ ಕಿಂಚಿತ್ ಪ್ರಯತ್ನವೂ ಇಲ್ಲದೆ, ಆಕಾಶದಿಂದ ಬಿದ್ದ ಮಳೆ ನದಿಯಾಗಿ ಹರಿಯುತ್ತದೆ; ಅದು ಪರಮಾತ್ಮ ನಮಗೆ ಬದುಕಲು ಕೊಟ್ಟ ಬಹುಮಾನ. ಅದನ್ನು ಹಂಚಿಕೊಂಡು ಶಾಂತವಾಗಿ ಬದುಕಲು ಆಗದೆ, ಅದಕ್ಕಾಗಿಯೇ ಕಚ್ಚಾಡುವ ಪ್ರವೃತ್ತಿ ನಮ್ಮದು. ನಮ್ಮ ದುರ್ಬುದ್ಧಿಯಿಂದ, ಯಾವುದು ನಮ್ಮ ಬದುಕಿಗೆ ಪೂರಕವಾಗಬಹುದು ಎಂದು ಪರಮಾತ್ಮ ನಮಗೆ ಕರುಣಿಸಿದ್ದಾನೋ ಅವೆಲ್ಲ ಇಂದು ನಮ್ಮ ಬದುಕಿಗೆ ಮಾರಕವಾಗಿದೆ. ಇದು ವಿಪರ್ಯಾಸವಲ್ಲದೆ ಮತ್ತೇನು?

ಆ ಪರಮಾತ್ಮನೇನೋ ನಮ್ಮನ್ನು ಸೃಷ್ಟಿಯ ಶಿಖರ ದಂತೆ ಸೃಷ್ಟಿಸಿದ. ನಾವು ನಮ್ಮ ದುರ್ಬುದ್ಧಿ ಮತ್ತು ಅಹಂಕಾರದಿಂದ ಆ ಶಿಖರದ ಮೇಲಿಂದ ಪತನವಾಗಿದ್ದೇವೆ. ಇದರಿಂದ ಮುಕ್ತಿಯುಂಟೋ ಅಥವಾ ವಿನಾಶವೇ ಗತಿಯೋ ನಾವು ಯೋಚನೆಮಾಡಬೇಕಾದ ವಿಷಯ.

ನಿಲ್ಲದಿರಲಿ ಬದುಕಿನ ಪಯಣ

● ನಾಗೇಶ್ ಜೆ. ನಾಯಕ

ಬದುಕಿನ ಸುದೀರ್ಘ ಪಯಣದಲ್ಲಿ ಎಲ್ಲರೂ ಒಂದು ಆಪ್ತ ಹೆಗಲನ್ನು ಬಯಸುವುದು ಸಹಜ. ನಿನ್ನ ದಾರಿಯನ್ನು ನೀನೊಬ್ಬನೇ ನಡೆಯಬೇಕು. ಬೇರೆ ಹೆಗಲುಗಳ ಆಸರೆ ಬಯಸಿದೆಯೋ ನಿರಾಸೆ ಕಟ್ಟಿಟ್ಟ ಬುತ್ತಿ ಎಂದು ತಿಳಿದವರು ಹೇಳಿದರೂ, ಅತ್ತು ಹಗುರಾಗಲು, ಎದೆಯ ನೋವುಗಳನ್ನು ಹರವಿಕೊಂಡು ನಿರುಮ್ಮಳವಾಗಲು, ಒಂದರೆಕ್ಷಣವಾದರೂ ಹೆಗಲ ಹೊರೆಯನ್ನು ಆಪ್ತಜೀವದ ಮಡಿಲಿಗೆ ಹೊರೆಸಿ ಸುಧಾರಿಸಿಕೊಳ್ಳಲು, ಖುಷಿಯ ಕ್ಷಣಗಳನ್ನು ಹಂಚಿಕೊಳ್ಳಲು ಆಪ್ತಜೀವದ ಅನಿವಾರ್ಯತೆ ಅವಶ್ಯಕವೆನಿಸುತ್ತದೆ.

ಯಾವುದೋ ಒಂದು ಸಂದರ್ಭದಲ್ಲಿ ನಾನು ಒಬ್ಬಂಟಿ ಎಂಬ ಅನಾಥ ಪ್ರಜ್ಞೆ ಕಾಡತೊಡಗಿದಾಗ ತಕ್ಷಣ ನಾನಿದ್ದೀನಿ ಕಣೋ.. ಎಂದು ಧೈರ್ಯ ತುಂಬುವ ಆ ಜೀವದ ಇರುವಿಕೆ ನೂರಾನೆಯ ಬಲವಿದ್ದಂತೆ. ಅಂತಹ ಒಂದು ಹೆಗಲು ನಮ್ಮ ಜೊತೆ ಇದ್ದು, ಅಗತ್ಯವೆನಿಸಿದಾಗ ಆಸರೆಯಾದರೆ ನಮ್ಮಷ್ಟು ಅದೃಷ್ಟಶಾಲಿ ಮತ್ತೊಬ್ಬರಿಲ್ಲ. ಆ ಜೀವ ಬೇರೆ ಯಾರೂ ಆಗಿರಬೇಕಿಲ್ಲ, ಗೆಳೆಯನೋ, ಆತ್ಮಬಂಧುವೋ, ಅಂತರಂಗದ ಸಖನೋ,

ಎದೆಯ ಹತ್ತಿರದ ನೆಂಟನೋ ಯಾರಾದರೂ ಆಗಿರಬಹುದು. ಸದ್ಯದ ತುರ್ತೆಂದರೆ ಕಾರು, ಬಂಗಲೆ, ದುಡ್ಡು, ಒಡವೆ, ಐಶಾರಾಮಿ ಬದುಕಿಗಿಂತ ನೆಮ್ಮದಿ, ಸಮಾಧಾನ, ಸಂತೈಕೆ ನೀಡುವ ಅಂತಃಕರಣವುಳ್ಳ ಆಪ್ತಜೀವದ ಸಾಂಗತ್ಯ. ಅದಕ್ಕೆಂದೇ ಕವಿಯೊಬ್ಬ ಹೀಗೆ ಅಲವತ್ತುಕೊಳ್ಳುತ್ತಾನೆ...

ತುರ್ತಾಗಿ ಬೇಕಿದೆ ಗೆಳೆಯ...
ದುಃಖಕ್ಕೆ ಕಣ್ಣೀರಾಗುವ
ನೋವಿಗೆ ಸಾಂತ್ವನ ಹೇಳುವ
ಜೀವಕ್ಕಿಂತ ಹೆಚ್ಚು ಪ್ರೀತಿಸುವ
ಒಂದು ಅಂತಃಕರಣದ ಹೃದಯ!

ಬದುಕಿನ ಪಯಣ ಸಾಗಿದಂತೆಲ್ಲಾ ವೈವಿಧ್ಯಮಯ ಅನುಭವಗಳ ಮೂಟೆಯನ್ನೇ ಧಾರೆಯೆರೆಯುವ ಅನೇಕ ವ್ಯಕ್ತಿಗಳು, ಘಟನೆಗಳು ಇದಿರಾಗುತ್ತವೆ. ಕೆಲವು ದಾರಿಯುದ್ದಕ್ಕೂ ಮೆಲುಕು ಹಾಕಿ, ಚಪ್ಪರಿಸಿಕೊಂಡು ಮುನ್ನಡೆಯುವಷ್ಟರ ಮಟ್ಟಿಗೆ ಸಿಹಿಯಾಗಿರುತ್ತವೆ.

ಇನ್ನು ಬಹುಪಾಲು ಅನುಭವಗಳು ಎದೆಯ ಎಡಭಾಗದಲ್ಲಿ ಎಳೆದೆಳೆದು ಹಿಂಡುವ ನೋವಿಗೆ ಕಾರಣವಾಗುತ್ತಾ ಅರಿವಿಲ್ಲದೆ ಕೆನ್ನೆ ತೋಯಿಸುತ್ತವೆ. ಒಂದಷ್ಟು ಜನ ಎಡರು ತೊಡರುಗಳಲ್ಲಿ ಜೊತೆ ನಿಲ್ಲುತ್ತಾರೆ. ಕಣ್ಣು ಹನಿಗೂಡಿದಾಗ ಸುಮ್ಮನೆ ಕೈಹಿಡಿದು ಸಂತೈಸುತ್ತಾರೆ. ಹತಾಶನಾಗಿ ಕೈ ಚೆಲ್ಲಿ ಕೂತಾಗ, ಇನ್ನೇನು ನಡಿಗೆ ಅಸಾಧ್ಯವೆನಿಸಿದಾಗ ಹುರಿದುಂಬಿಸಿ ಕೈಹಿಡಿದು ಜೊತೆ ಕರೆದೊಯ್ಯುತ್ತಾರೆ. ಪ್ರತಿ ಪುಟ್ಟ ಯಶಸ್ಸಿಗೂ ತಾವೇ ಒಡೆಯರೇನೋ ಎನ್ನುವಷ್ಟರಮಟ್ಟಿಗೆ ಖುಷಿಯಿಂದ ಸಂಭ್ರಮಿಸುತ್ತಾರೆ. ಮೇಲೆರಲು ಮೆಟ್ಟಿಲಾಗಿ ನಿಂತಲ್ಲಿಯೇ ಧನ್ಯತೆ ಅನುಭವಿಸುತ್ತಾರೆ. ಇಂತಹವರ ಬಗ್ಗೆ ಹೇಳಲು ಮಾತುಗಳೇ ಬಾರವು: ಕಣ್ಣಲ್ಲೇ ಕೃತಜ್ಞತೆ ಕಡಲಾಗಿ ನಿಲ್ಲುತ್ತದೆ. ಇನ್ನು ಒಂದಷ್ಟು ಜನ ಬದುಕಿನ ಹಾದಿಯಲ್ಲಿ ಬೇಕಂತಲೇ ಕಲ್ಲು-ಮುಳ್ಳು ಎಸೆಯುತ್ತಾರೆ. ಕಂದರಕ್ಕೆ ದೂಡಿ ಮೋಜು ನೋಡುತ್ತಾರೆ. ಹೆಜ್ಜೆ ಕುಸಿದಾಗ ಇನ್ನು ಮುಗಿದೇ ಹೋಯ್ತು ಇವನ ಕಥೆ ಎಂಬಂತೆ ಚಪ್ಪಾಳೆ ತಟ್ಟಿ ಹರ್ಷ ಪಡುತ್ತಾರೆ. ಪ್ರತಿ ನಡಿಗೆಯನ್ನು ನಿಲ್ಲಿಸಲೆಂದೇ ಹೊಂಚು ಹಾಕುತ್ತಾರೆ, ಕಾಲೆಳೆಯಲು ತುದಿಗಾಲ ಮೇಲೆ ನಿಂತು ಕಾಯುತ್ತಾರೆ.

ಬದುಕಿನ ನಿಲ್ಲದ ದೀರ್ಘ ಪಯಣದಲ್ಲಿ ತರಹೇವಾರಿ ಸಂಗತಿಗಳು ಘಟಿಸಿ ನಾವೆಂದಿಗೂ ಊಹಿಸದ ತಿರುವಿಗೆ ತಂದು ನಿಲ್ಲಿಸಿಬಿಡುತ್ತವೆ. ಜೊತೆ ಜೊತೆ ನಡೆದವರು, ನೂರು ಸಂಕಟ ಗಳಿಗೆ ಮಿಡಿದವರು ಒಂದು ಮಾತೂ ಹೇಳದೆ ಕಣ್ಮರೆಯಾಗು ತ್ತಾರೆ. ಕಾರಣ ಹೇಳದೆ ತಲ್ಲಣಗೊಳಿಸಿ ಒಬ್ಬಂಟಿಯಾಗಿಸಿ ಬಿಟ್ಟೆದ್ದು ನಡೆದುಬಿಡು ತ್ತಾರೆ. ಆಗ ಉಂಟಾಗುವ ಅನಾಥಪ್ರಜ್ಞೆ ಊಹಿಸಲ ಸಾಧ್ಯ. ಮನಸ್ಸು ಅದೆಷ್ಟೇ ಸಮಜಾಯಿಷಿ ಕೊಟ್ಟರೂ ಅವರೇ ಬೇಕೆಂದು ಚಿಕ್ಕ ಮಕ್ಕಳಂತೆ ಹಠ ಹಿಡಿದು ಕುಳಿತು ಬಿಡುತ್ತದೆ. ಇನ್ನೆಂದಿಗೂ ಬಾರದ ಅವರನ್ನು ತಂದು ಕೊಡುವುದಾದರೂ ಎಲ್ಲಿಂದ, ಅಲ್ಲವೆ? ಆದರೆ ಒಂದಂತೂ ಸತ್ಯ, ಬದುಕಿನ ಯಾನದ ನಡಿಗೆ ಎಂದಿಗೂ ನಿಲ್ಲದೆ ಇರಲಿ, ಯಾರಿದ್ದರೂ ಇಲ್ಲದಿದ್ದರೂ ಹೆಜ್ಜೆಗಳು ಮುನ್ನಾಗುತಿರಲಿ. ಅಂದುಕೊಂಡ ಗಮ್ಯವ ತಲುಪಿಕೊಳ್ಳಲಿ.

ಹನಿ ಮಳೆ

ನಮ್ಮಲ್ಲೂ ಇದೆ ಶಿಸ್ತು!

ಇಂದು ಎಲ್ಲದರಲ್ಲೂ
ಹುಟ್ಟುತ್ತಿವೆ ನಕಲಿ ವಸ್ತು
ಇದಕ್ಕೆ ಹೊರತಾಗಿಲ್ಲ
ಪಕ್ಷದ ತತ್ವ ಸಿದ್ಧಾಂತಗಳನ್ನು
ಗಾಳಿಗೆ ತೂರುವ
ರಾಜಕಾರಣಿಗಳ ಶಿಸ್ತು

● ಮಹಾಂತೇಶ ಮಾಗನೂರ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	2		3	■	4		5
6			■	7			■	
	■	■	8		■		■	
9	10		■		■	11	12	
■		■	■	■	■	■		■
13		14	■	15	■	16		17
	■		■	18		■	■	
	■	19			■	20		
21			■	22			■	

ಎಡದಿಂದ ಬಲಕ್ಕೆ

2. ಯಕ್ಷಿಣಿಗಾರನಿಗೆ ಇನ್ನೊಂದು ಹೆಸರು (3)
4. ಸ್ವಚ್ಛವಿಲ್ಲದ ಎಂದರ್ಥ (3)
6. ಸಣ್ಣ ಸಣ್ಣ ಮನೆಗಳಿರುವ ಪ್ರದೇಶ ವರದ ನಡುವೆ ಇದೆ (3)
7. ಸಿಟ್ಟಿಗೆ ಹೆಸರಾದ ಒಬ್ಬ ಮುನಿ (3)
8. ಪ್ರಾಣ ತೆಗೆಯಬಹುದಾದ ನಂಜು (2)
9. ವಂಶದೊಂದಿಗೆ ಬಂದಿರುವ ಪಾಂಡವರಲ್ಲೊಬ್ಬ (3)
11. ಕಟಕಟನೆ ಸದ್ದು ಮಾಡುತ್ತಾ ಬಂದಿರುವ ಗಾಡಿ (3)
13. ದನದ ನಡುವೆ ಇದೇನು ಹತೋಟಿ (3)
16. ಮನ ಸೆಳೆಯುವಂಥದು (3)
18. ಭೈರಪ್ಪನವರ ಕಾದಂಬರಿಯೊಂದನ್ನು ನೆನಪಿಸುವ ಗೋಡೆ (2)
19. ಸುಂದರವಾದ ಕಣ್ಣು (3)
21. ಹಣೆಯ ಮೇಲಿಟ್ಟುಕೊಳ್ಳುವ ಬೊಟ್ಟು (3)
22. ಅಸ್ತವ್ಯಸ್ತವಾಗಿ ಬಂದಿರುವ ಪ್ರಾಯ (3)

ಮೇಲಿಂದ ಕೆಳಕ್ಕೆ

1. ಶ್ರೀಕೃಷ್ಣ ತನ್ನ ಕಿರುಬೆರಳಿನಲ್ಲಿ ಎತ್ತಿ ಹಿಡಿದ ಪರ್ವತ (4)
2. ಎರಡೇ ಅಕ್ಷರದ ಮನ್ಮಥ (2)
3. ಯಕ್ಷಗಾನ, ನಾಟಕಗಳಲ್ಲಿ ಬರುವ ಹಾಸ್ಯಗಾರ (4)
4. ಸರಿಸಾಟಿಯಿಲ್ಲದ (4)
5. ರಾಮ 14 ವರ್ಷಗಳ ವನವಾಸ ಅನುಭವಿಸಿದ ಕಾಡು(4)
10. ಮಸುಕಾಗಿ ಕಾಣಿಸಿತೇ ಹೂವು (3)
12. ಹಲವು ಬಗೆಯ ಜಗಳ (3)
13. ನಳಮಹಾರಾಜನ ಪತ್ನಿ (4)
14. ಮಾನವ ಪ್ರಪಂಚ (4)
15. ಭಿನ್ನವಾಗಿ ಮಾಡಿದ ನಟನೆ (4)
17. ಪುಸ್ತಕದಲ್ಲಿ ದಾಖಲಿಸು (4)
20. ಮಾಲೆ (2)

ನಳ ನೀಲರ ಸ್ಪರ್ಶದಿಂದ ತೇಲಿದ ರಾಮಸೇತುವಿನ ಕಲ್ಲುಗಳು!

ರಾಮಾಯಣದಲ್ಲಿ ನಳ ಮತ್ತು ನೀಲರು ಪ್ರಮುಖ ಪಾತ್ರ ವಹಿಸುತ್ತಾರೆ. ಅವರು ವಾನರ ಸೇನೆಯಲ್ಲಿ ಪ್ರಮುಖರಾಗಿದ್ದರು. ರಾಮ ಸೇತುವನ್ನು ನಿರ್ಮಿಸುವುದಲ್ಲೂ ಇಬ್ಬರೂ ಪ್ರಮುಖ ಪಾತ್ರ ವಹಿಸಿದರು. ನಳನು ವಿಶ್ವಕರ್ಮನ ಮಗನೆಂದು ಪರಿಗಣಿಸಲ್ಪಟ್ಟಿದ್ದು, ಸೇತುವೆಯನ್ನು ನಿರ್ಮಿಸುವಲ್ಲಿ ಪ್ರಮುಖ ವಾಸ್ತುಶಿಲ್ಪಿಯಾಗಿದ್ದನು. ನೀಲನು ಅಗ್ನಿ ದೇವನ ಪುತ್ರ, ಕಪಿಶ್ರೇಷ್ಠನೆಂಬ ಬಿರುದೂ ಅವನಿಗಿತ್ತು.

ಬಾಲ್ಯದಲ್ಲಿ ಅವರಿಬ್ಬರೂ ಋಷಿಗಳಿಂದ ಶಾಪಗ್ರಸ್ತರಾದರು, ಅದು ನಂತರ ವರದಾನವಾಗಿ ಪರಿಣಮಿಸಿತು. ನಳ ಮತ್ತು ನೀಲ ತಮ್ಮ ಬಾಲ್ಯದಲ್ಲಿ ತುಂಬಾ ತುಂಟತನ ಮಾಡುತ್ತಿದ್ದರು. ಇಬ್ಬರೂ ಋಷಿಗಳ ಆಶ್ರಮದಲ್ಲಿ ವಿದ್ಯಾರ್ಜನೆಗಾಗಿ ನೆಲೆಸಿದ್ದರು. ಋಷಿಗಳು ಹೋಮ ಹವನ, ದೇವರ ಪೂಜೆಯಲ್ಲಿ ಮಗ್ನರಾಗಿದ್ದಾಗ ಈ ತುಂಟ ಸಹೋದರರಿಬ್ಬರೂ ದೇವರ ವಿಗ್ರಹಗಳನ್ನು ಹೊತ್ತು ನೀರಿಗೆ ಎಸೆಯುತಿದ್ದರು. ಮಕ್ಕಳ ಮೇಲಿನ ಪ್ರೀತಿಯಿಂದಾಗಿ, ತಪಸ್ಸಿಗೆ ಅಡ್ಡಿ ಉಂಟಾದರೂ ಕೂಡ ಋಷಿಗಳು ಇವರ ತುಂಟತನಕ್ಕೆ ಶಿಕ್ಷೆ ನೀಡದೆ ಸಹಿಸಿಕೊಳ್ಳುತ್ತಿದ್ದರು. ಆದರೆ ದಿನೇ ದಿನೇ ಇವರ ತುಂಟತನ ಹದ್ದು ಮೀರುತ್ತಿತ್ತು.

ಒಂದು ದಿನ ಋಷಿಗಳು ಪರಸ್ಪರ ಸಮಾಲೋಚಿಸಿ, ಈ ಇಬ್ಬರ ಕೈಗಳಿಗೆ ಯಾವುದೇ ವಸ್ತು ಸ್ಪರ್ಶಿಸಿದರೂ, ಅದು ಎಷ್ಟೇ ಭಾರವಾಗಿದ್ದರೂ ಅದು ನೀರಿನಲ್ಲಿ ಮುಳುಗಬಾರದು ಎಂದು ಶಾಪದ ರೂಪದಲ್ಲಿ ವರವನ್ನು ನೀಡಿದರು. ಅದಾದ ನಂತರ, ಅವರಿಬ್ಬರೂ ಯಾವುದೇ ವಿಗ್ರಹವನ್ನು ಎತ್ತಿಕೊಂಡು ನೀರಿಗೆ ಎಸೆದರೂ, ಅದು ನೀರಿನ ಮೇಲೆ ತೇಲುತ್ತಲೇ ಇರುತ್ತಿತ್ತು. ಋಷಿಗಳು ಅದನ್ನು ನಂತರ ನೀರಿನಿಂದ ಹೊರತೆಗೆದು ಮತ್ತೆ ಪೂಜೆಗೆ ಪ್ರತಿಷ್ಠಾಪಿಸುತ್ತಿದ್ದರು. ಋಷಿಗಳ ಈ ಶಾಪದಿಂದಾಗಿ ನಳ ಮತ್ತು ನೀಲರು ರಾಮನ ಸೇವೆ ಮಾಡುವಂತಾಯಿತು. ಹನುಮಂತನಿಗೆ ಇವರ ಶಾಪದ ಬಗ್ಗೆ ಚೆನ್ನಾಗಿ ತಿಳಿದಿತ್ತು. ರಾವಣನ ಮೇಲೆ ಯುದ್ಧ ಮಾಡಿ ಸೀತಾಮಾತೆಯನ್ನು ಕರೆತರಲು ಲಂಕೆಗೆ ಹೋಗಲು, ಹನುಮಂತನು ರಾಮನಲ್ಲಿ ವಾನರ ಸೈನ್ಯದಿಂದ ಸೇತುವೆಯನ್ನು ನಿರ್ಮಿಸುವಂತೆ ಕೇಳಿಕೊಂಡನು ಅದನ್ನು ಶ್ರೀರಾಮನು ಒಪ್ಪಿಕೊಂಡನು. ಲಂಕೆಗೆ ಹೋಗಲು ದಾರಿ ಮಾಡಿಕೊಡುವಂತೆ ಶ್ರೀರಾಮನು ಸಮುದ್ರವನ್ನು ಪ್ರಾರ್ಥಿಸಿದನು, ನಂತರ ಅವನು ತನ್ನ ಬಿಲ್ಲು ಮತ್ತು ಬಾಣವನ್ನು ಬಳಸಿ ಸಮುದ್ರವನ್ನು ಒಣಗಿಸಿದನು. ಆಗ ಇದನ್ನು ಕಂಡು ಹೆದರಿದ ಸಮುದ್ರರಾಜನು ಶ್ರೀರಾಮನ ಮುಂದೆ ಪ್ರತ್ಯಕ್ಷನಾದನು.

ಸಮುದ್ರರಾಜನು ಹೀಗೆ ಮಾಡಿದರೆ ಸಮುದ್ರದಲ್ಲಿರುವ ಜೀವಸಂಕುಲವೆಲ್ಲ ಸಾಯಬೇಕಾಗುತ್ತದೆ. ಅದರ ಬದಲಾಗಿ ಸಮುದ್ರದ ಮೇಲೆ ಕಲ್ಲಿನ ಸೇತುವೆಯನ್ನು ನಿರ್ಮಿಸಿ ಲಂಕೆಗೆ ಹೋಗಬಹುದು ಎಂದು ತಿಳಿಸಿದನು. ಅವನೇ ಮುಂದುವರೆದು ನಿಮ್ಮ ಸೈನ್ಯದಲ್ಲಿ ವಿಶ್ವಕರ್ಮನ ಇಬ್ಬರು ವಾನರ ಮಕ್ಕಳಿದ್ದಾರೆ, ನಳ ಮತ್ತು ನೀಲ. ಅವರು ಏನೇ ಮುಟ್ಟಿದರೂ ನೀರಿನಲ್ಲಿ ಮುಳುಗುವುದಿಲ್ಲ. ಸಾಗರದ ಮೇಲೆ ಸೇತುವೆ ಕಟ್ಟಲು ನೀವು ಈ ಇಬ್ಬರ ಸಹಾಯ ಪಡೆಯಬಹುದು ಎಂಬ ಸುಳಿವು ಕೊಟ್ಟನು.

ನಳ ನೀಲರು ಮುಟ್ಟಿದ ಕಲ್ಲುಗಳು ನೀರಿನಲ್ಲಿನೋ ತೇಲುತ್ತಿದ್ದವು, ಆದರೆ ಹಾಗೆ ಚದುರಿ ಕೂಡ ಹೋಗುತ್ತಿದ್ದವು. ಆಗ ಹನುಮಂತನು ಕಲ್ಲುಗಳ ಮೇಲೆ ಜೈ ಶ್ರೀ ರಾಮ್ ಎಂದು ಬರೆದು ತೇಲಿ ಬಿಟ್ಟರೆ ಎಲ್ಲವೂ ಒಂದಕ್ಕೊಂದು ಕಚ್ಚಿಕೊಂಡು ಇರುತ್ತವೆ ಎಂದು ನಿರ್ದೇಶಿಸಿದನು. ಅಂತೆಯೇ ವಾನರ ಸೈನ್ಯ ಕಲ್ಲುಗಳನ್ನು ಸಂಗ್ರಹಿಸಿ ನಳ ನೀಲನ ಮುಂದೆ ಹಾಕುತ್ತಿದ್ದರು. ಅವರು ಜೈ ಶ್ರೀ ರಾಮ್ ಎಂದು ಬರೆದು ಸಮುದ್ರಕ್ಕೆ ಎಸೆಯುತ್ತಿದ್ದರು. ಇದೇ ರೀತಿ ಐದೇ ದಿನದಲ್ಲಿ 80 ಮೈಲಿಯ ಸೇತುವೆ ನಿರ್ಮಿಸಲಾಯಿತು. ಅಂತೂ ಋಷಿಗಳು ನೀಡಿದ ಶಾಪವೇ ನಳ ಮತ್ತು ನೀಲರಿಗೆ ವರದಾನವಾಯಿತು.

ಕೆಲವೊಮ್ಮೆ ನಮ್ಮ ಹಿರಿಯರು ನಮ್ಮನ್ನು ತಿದ್ದಲು ನೀಡುವ ಶಿಕ್ಷೆ, ಮುಂದೆ ಜೀವನದಲ್ಲಿ ನಮಗೆ ವರವಾಗಿ ಪರಿಣಮಿಸುತ್ತದೆ. ಆದ್ದರಿಂದಲೇ ಗುರು ಹಿರಿಯರು ನಮ್ಮನ್ನು ತಿದ್ದಿ ತೀಡಿದಾಗ ಅದನ್ನು ಆಶೀರ್ವಾದವೆಂದು ಪರಿಗಣಿಸಿ ಪಾಲಿಸಬೇಕು. ಹಿರಿಯರ ಶಿಕ್ಷೆಯಲ್ಲೂ ನಮಗೆ ಬದುಕಿನ ಪಾಠವಿರುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಪಾಟ್ ಹೋಲ್ ಸಿಟಿ?

● ಕೆ.ಎಸ್.ಸೋಮೇಶ್ವರ

ಬೆಂಗಳೂರಿಗೆ ಅನೇಕಾನೇಕ ಅನ್ವರ್ಥನಾಮಗಳಿವೆ. ಮೊದಲಿಗೆ 'ಪೆನ್ಷನರ್ಸ್ ಪ್ಯಾರಡೈಸ್' ಎನ್ನುತ್ತಿದ್ದರು. ನಂತರ 'ಗಾರ್ಡನ್ ಸಿಟಿ' ಎಂಬ ಹೆಸರು ಪಡೆದುಕೊಂಡಿತು. ಈ ಸಾಫ್ಟ್‌ವೇರ್ ಸಂಸ್ಥೆಗಳು ಹೇಚ್ಚಾದಂತೆ ನಮ್ಮ ಬೆಂಗಳೂರನ್ನು 'ಸಿಲಿಕಾನ್ ಸಿಟಿ' ಅಂತಲೂ ಹೇಳುತ್ತಾರೆ.

ನಗರ ಎಲ್ಲ ದಿಕ್ಕಿನಲ್ಲೂ ಬೆಳೆಯುತ್ತ ಹೋದಂತೆ ಹಸಿರು ಕಡಿಮೆಯಾಗುತ್ತಾ ಭದ್ರ ಭವ್ಯ ವಾದ ಕಾಂಕ್ರಿಟ್ ಕಟ್ಟಡಗಳು ಬುನಾದಿ ಹಾಕಿದವು. ಅದರಿಂದ ಇದನ್ನು 'ಕಾಂಕ್ರಿಟ್ ಸಿಟಿ' ಎನ್ನಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಇದನ್ನು 'ಗಾರ್ಬೇಜ್ ಸಿಟಿ' ಅಂತಲೂ ಹೆಸರಿಸುತ್ತಾರೆ. ಆದರೆ, ಇದಕ್ಕೆ ಈ ರೀತಿ ಹೆಸರು ತರಲು ಅಂತಹ ಹಲವು ಮಹಾನುಭಾವರುಗಳ ಕೈ ಚಳಕಗಳೇ ಕಾರಣ. ಮೊದಲೆಲ್ಲಾ ರಸ್ತೆ ಬದಿಯಲ್ಲಿ ಒಂದು ಕಸದ ತೊಟ್ಟಿ ಇರುತ್ತಿತ್ತು. ಸುತ್ತ ಮುತ್ತಲಿನವರು ಕೊಳಚೆಯನ್ನು ತುಂಬಿಕೊಂಡು ಅದರಲ್ಲಿ ಸುರಿಯಬೇಕು.ಅದರ ಮುಂದಿನ ದಾರಿ ಅದಕ್ಕಾಗಿ ನಿಯಮಿತ ಮಂದಿ ಸಾಗಿಸುತ್ತಾರೆ. ಈಗ ಆ ತೊಟ್ಟಿಗಳಿಲ್ಲ. ಮನೆ ಮನೆಗೂ ಒಬ್ಬ ಶ್ರಮಿಕ ಬರುತ್ತಾನೆ. ಹಸಿ, ಒಣ ಎಂದು ವಿಭಾಗಿಸಿ ನೀಡಿದ್ದನ್ನು ಸ್ವಚ್ಛಗೊಳಿಸುತ್ತಿರುತ್ತಾನೆ. ಆದರೂ, ಯಾವುದೇ ರಸ್ತೆ ಬದಿಯ ಮೂಲೆಗೆ ಹೋದರೂ ಅಲ್ಲೊಂದಿಷ್ಟು ಕಸದ ಗುಡ್ಡೆ ಬಿದ್ದಿರುತ್ತದೆ. ಕೆಲವೆಡೆ ಇಲ್ಲಿ ಕಸ ಸುರಿದರೆ ಜುಲ್ಮಾನೆ ಅಂತ ದಪ್ಪ ಅಕ್ಷರದಲ್ಲಿ ಬರೆದಿರುತ್ತಾರೆ.

ಇನ್ನು ತೀರ ಇತ್ತೀಚಿನ ನಮ್ಮ ಬೆಂಗಳೂರಿನ ಗುಣವಾಚಕ 'ಗುಂಡಿಗಳ ನಗರ' ಅಥವಾ 'ಪಾಟ್ ಹೋಲ್ ಸಿಟಿ'. ಏಕೆಂದರೆ ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳು! ನೋಡಿ ಹೇಗಿದೆ ನಾಮಬಲ! ಈಗಂತೂ 'ಗ್ರೇಟರ್ ಬೆಂಗಳೂರು' ಆಗಿದೆ. ಮೊದಲು ಇದು ಕೆರೆಗಳ ಬೀಡಾಗಿದ್ದಿತು. ಅದು ಬದಲಾಗಿ, ಇಂದು ಮಳೆ ಬಂದರೆ ರಸ್ತೆಗಳೆಲ್ಲ ಕೆರೆಗಳಾಗಿಬಿಡುತ್ತವೆ! ಇನ್ನು, ಮಳೆ ಬಂದಾಗ, ಇಲ್ಲಿನ ರಸ್ತೆಗಳಲ್ಲಿ ದೋಣಿಗಳು! ಇದನ್ನು 'ದೋಣಿ ನಗರ' ಎನ್ನುವಂತಾಗಿದೆ. ಮುಂದೆ ಯಾವ ಹೆಸರನ್ನು ಬೆಂಗಳೂರು ಹೊರುತ್ತದೋ ಕಾದು ನೋಡಬೇಕು!

ನೀವೂ ಬರೆಯಬಹುದು | ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098 | e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಕಾರ್ಲ್‌ಸನ್ ವಿರುದ್ಧ ಗುಕೇಶ್‌ಗೆ ಗೆಲುವು

ಕ್ರೊಯೇಷಿಯಾ: ಇಲ್ಲಿನ ಜಾಗ್ರೆಬ್‌ನಲ್ಲಿ ನಡೆದ ಗ್ರ್ಯಾಂಡ್ ಚೆಸ್ ಯುನೈಟೆಡ್ ರಾಪಿಡ್ ಟೂರ್ನಿಯ ಆರನೇ ಸುತ್ತಿನಲ್ಲಿ ವಿಶ್ವದ ನಂಬರ್ ಒನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಸೋಲಿಸುವ ಮೂಲಕ ಭಾರತೀಯ ಚೆಸ್ ಚಾಂಪಿಯನ್ ಗುಕೇಶ್ ಮತ್ತೊಂದು ಪ್ರಭಾವಶಾಲಿ ಪ್ರದರ್ಶನ ನೀಡಿದರು.

ಪಂದ್ಯಕ್ಕೂ ಮೊದಲು ಮ್ಯಾಗ್ನಸ್ ಕಾರ್ಲ್‌ಸನ್ ಗುಕೇಶ್ ಅವರನ್ನು ಅವಮಾನಿಸಿ ಮಾತನಾಡಿದ್ದರು, ದುರ್ಬಲ ಆಟಗಾರರಲ್ಲಿ ಒಬ್ಬರು ಎಂದು ಹೇಳಿದ್ದರು. ಕಾರ್ಲ್‌ಸನ್ ವಿರುದ್ಧ ಪಂದ್ಯ ಗೆಲ್ಲುವ ಮೂಲಕವೇ ಗುಕೇಶ್ ಆ ಮೂಲಕ ತಕ್ಕ ಉತ್ತರ ನೀಡಿದ್ದಾರೆ. ಗುರುವಾರ ನಡೆದ ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಬ್ಲಿಟ್ಜ್ ಕ್ರೊಯೇಷಿಯಾದ ಸೂಪರ್ ಯುನೈಟೆಡ್ ರಾಪಿಡ್‌ನ ಆರನೇ ಸುತ್ತಿನಲ್ಲಿ 18 ವರ್ಷದ ಗುಕೇಶ್ ಕಪ್ಪು ಕಾಯಿಗಳಿಂದ ಸೋಲಿಸಿದರು. ಇದು ಕಾಲ್ರ್‌ಸನ್ ವಿರುದ್ಧ ಅವರ ಸತತ ಎರಡನೇ ಗೆಲುವು ಆಗಿದೆ. ಈ ಗೆಲುವಿನೊಂದಿಗೆ ಆರು ಪಂದ್ಯಗಳಿಂದ 10 ಅಂಕಗಳೊಂದಿಗೆ ಏಕೈಕ ನಾಯಕನಾಗಿ ಅಂಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ತಲುಪಿದರು. ಪಂದ್ಯದ ಬಳಿಕ ಮಾತನಾಡಿದ ಕಾರ್ಲ್ಸನ್, ಈ ಟೂರ್ನ್‌ಮೆಂಟ್‌ನಲ್ಲಿ ನಾನು ತುಂಬಾ ಕಳಪೆಯಾಗಿ ಆಡಿದೆ, ಈಗ ಗುಕೇಶ್ ಅವರಿಂದ ನನಗೆ ಭಾರೀ ಹೊಡೆತ ಬಿದ್ದಿದೆ. ಮೊದಲಿಗೆ ನಾನು ಉತ್ತಮ ಸ್ಥಿತಿಯಲ್ಲಿದ್ದೇನೆಂದು ಭಾವಿಸಿದ್ದೆ, ಆದರೆ ಗುಕೇಶ್ ತನ್ನದೇ ಆದ ಅವಕಾಶಗಳನ್ನು ಸೃಷ್ಟಿಸಿಕೊಂಡರು. ಸಮಯ ಕಡಿಮೆ ಇದ್ದ ಕಾರಣ ಒತ್ತಡವನ್ನು ನಿಭಾಯಿಸಲು ಸಾಧ್ಯವಾಗಲಿಲ್ಲ. ಅವರು ಕೆಲವು ಉತ್ತಮ ಪ್ರದರ್ಶನ ನೀಡಿದರು. ನನಗೆ ಒಂದು ಅಥವಾ ಎರಡು ಅವಕಾಶಗಳು ಸಿಕ್ಕವು, ಆದರೆ ಅದನ್ನು ಸರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದರು.

ಸ್ನೂಕರ್: ಕ್ವಾರ್ಟರ್‌ಗೆ ಪಂಕಜ್ ಅಡ್ವಾಣಿ

ಮಾರಿಷಸ್: ಭಾರತದ ಪಂಕಜ್ ಅಡ್ವಾಣಿ ಶುಕ್ರವಾರ ಇಲ್ಲಿ ನಡೆದ ಕಾಮನ್‌ವೆಲ್ತ್ ಬಿಲಿಯರ್ಡ್ಸ್ ಚಾಂಪಿಯನ್‌ಶಿಪ್‌ನ 6-ರೆಡ್ ಸ್ನೂಕರ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ತಲುಪಿದರು.



ವಿಶ್ವ ಚಾಂಪಿಯನ್ ಅಡ್ವಾಣಿ ಪುರುಷರ ವಿಭಾಗದ ಸ್ಪರ್ಧೆಯಲ್ಲಿ 3-1ರಿಂದ ಆಸ್ಟ್ರೇಲಿಯಾದ ಕ್ಸೇವಿಯರ್ ಡಾವ್ ಅವರನ್ನು ಸೋಲಿಸಿದರು. ಭಾರತದ ಮತ್ತೊಬ್ಬ ಸ್ಪರ್ಧಿ ಬ್ರಿಜೇಶ್ ದಮಾನಿ 1-3ರಿಂದ ಸೈಪ್ರಸ್‌ನ ಮೈಕೆಲ್ ಜಾರ್ಜಿಯೊ ವಿರುದ್ಧ ಸೋತರು. ಮಹಿಳಾ ವಿಭಾಗದಲ್ಲಿ ಕೀರ್ತನಾ ಪಾಂಡಿಯನ್ ಮತ್ತು ಏಷ್ಯನ್ ಚಾಂಪಿಯನ್ ಅನುಪಮಾ ರಾಮಚಂದ್ರನ್ ಕ್ವಾರ್ಟರ್ ಫೈನಲ್ ತಲುಪಿದರು.

ಹ್ಯಾರಿ-ಸ್ಮಿತ್ ತ್ರಿಶತಕದ ಜತೆಯಾಟ | ಬೌಲಿಂಗ್‌ನಲ್ಲಿ ಮಿಂಚಿದ ಸಿರಾಜ್‌ಗೆ 6 ವಿಕೆಟ್

ಭಾರತದ ಹಿಡಿತದಲ್ಲಿ 2ನೇ ಟೆಸ್ಟ್

ಎಜ್‌ಬಾಸ್ಟನ್: ಇಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ಮತ್ತು ಟೀಮ್ ಇಂಡಿಯಾ ನಡುವಿನ 2ನೇ ಟೆಸ್ಟ್ ಪಂದ್ಯದ ಮೂರನೇ ದಿನ ಭಾರತವು ಮೇಲುಗೈ ಸಾಧಿಸಿದೆ. 180 ರನ್‌ಗಳ ಮೊದಲ ಇನ್ನಿಂಗ್ಸ್ ಪಡೆದ ಭಾರತವು ಶುಕ್ರವಾರ ದಿನದಾಂತ್ಯಕ್ಕೆ 1 ವಿಕೆಟ್ ನಷ್ಟಕ್ಕೆ 64 ರನ್ ಗಳಿಸಿದ್ದು, ಒಟ್ಟಾರೆಯಾಗಿ 244 ರನ್‌ಗಳ ಮುನ್ನಡೆಯಲ್ಲಿದೆ. ಭಾರತದ ಪರ ಯಶಸ್ವಿ ಜೈಸ್ವಾಲ್ 27 ರನ್ ಗಳಿಸಿ ಔಟ್ ಆದರೆ, ಕೆ.ಎಲ್ ರಾಹುಲ್ 28 ರನ್ ಗಳಿಸಿ ಮತ್ತು ಕರುಣ್ ನಾಯರ್ 7 ರನ್ ಗಳಿಸಿ ಕ್ರೀಸ್‌ನಲ್ಲಿ ಇದ್ದಾರೆ. ಇನ್ನೂ 2 ದಿನ ಬಾಕಿ ಇದ್ದು ಸದ್ಯ ಭಾರತವು ಟೆಸ್ಟ್‌ನಲ್ಲಿ ಬಿಗಿ ಹಿಡಿತ ಸಾಧಿಸಿದೆ.

ಪಂದ್ಯದ ಮೂರನೇ ದಿನದ ಆರಂಭದ ಒಂದು ಹಂತದಲ್ಲಿ ಭಾರತ ತಂಡದ ಬೌಲರ್‌ಗಳು ಇಂಗ್ಲೆಂಡ್ ತಂಡ 4 ರನ್‌ಗಳಾಗುವಷ್ಟರಲ್ಲಿ 5 ವಿಕೆಟ್ ಪಡೆದು 200ರೊಳಗೆ ನಿಯಂತ್ರಿಸುವ ಅವಕಾಶ ಪಡೆದಿತ್ತು. ಆದರೆ ಜೇಮೀ ಸ್ಮಿತ್ ಮತ್ತು ಹ್ಯಾರಿ ಬ್ರೂಕ್ ಭಾರತೀಯ ಬೌಲರ್‌ಗಳನ್ನು ಕಾಡಿ 303 ರನ್‌ಗಳ ಜತೆಯಾಟ ನಡೆಸಿ ತಂಡದ ಮೊತ್ತವನ್ನು 400ರ ಗಡಿ ದಾಟಿಸಿದರು. ಜೇಮೀ ಸ್ಮಿತ್ 184 ರನ್ ಗಳಿಸಿ ಅಜೇಯರಾಗಿ ಉಳಿದುಕೊಂಡರು. ಭಾರತದ ಪರ ಮೊಹಮ್ಮದ್ ಸಿರಾಜ್ 6 ವಿಕೆಟ್ ಪಡೆಯುವ ಮೂಲಕ ಮಿಂಚಿದರು.

ಇಂಗ್ಲೆಂಡ್‌ಗೆ ಆರಂಭಿಕ ಆಘಾತ: ಶುಕ್ರವಾರ ಬೆಳಿಗ್ಗೆ ಇಂಗ್ಲೆಂಡ್ 3 ವಿಕೆಟ್‌ಗೆ 77 ರನ್‌ನಿಂದ ಆಟ ಆರಂಭಿಸಿತು. ಆದರೆ ಆ ಮೊತ್ತಕ್ಕೆ 7 ರನ್ ಸೇರಿಸುವಷ್ಟರಲ್ಲಿ ಜೋ ರೂಟ್ (22) ಹಾಗೂ ನಾಯಕ ಬೆನ್ ಸ್ಟೋಕ್ಸ್ (0) ವಿಕೆಟ್ ಅನ್ನು ಇಂಗ್ಲೆಂಡ್ ಕಳೆದುಕೊಂಡಿತು. ಮೊಹಮ್ಮದ್ ಸಿರಾಜ್ ಸತತ 2 ಎಸೆತಗಳಲ್ಲಿ ಅವರಿಬ್ಬರನ್ನೂ ಪೆವಿಲಿಯನ್‌ಗಟ್ಟಿದರು. ಹಾಗಾಗಿ 3 ವಿಕೆಟ್‌ಗೆ 77 ಸ್ಕೋರ್ ಇದ್ದ ಅತಿಥೇಯ ತಂಡ 84ಕ್ಕೆ 5 ವಿಕೆಟ್ ಕಳೆದುಕೊಂಡಿತು.

ಹ್ಯಾರಿ-ಸ್ಮಿತ್ ತ್ರಿಶತಕದ ಜೊತೆಯಾಟ: ಆದರೆ ಭಾರತದ ಪಾಳಯದಲ್ಲಿದ್ದ ಖುಷಿಯನ್ನು ಹ್ಯಾರಿ ಬ್ರೂಕ್ ಹಾಗೂ ಜೇಮೀ ಸ್ಮಿತ್ ದೂರ ಮಾಡಿದರು. ಅವರಿಬ್ಬರೂ 6ನೇ ವಿಕೆಟ್ ಜತೆಯಾಟದಲ್ಲಿ 300 ರನ್ ಗಳಿಸಿ ಭಾರತೀಯ ಬೌಲರ್‌ಗಳನ್ನು ಕಾಡಿದರು. ಹ್ಯಾರಿ ಬ್ರೂಕ್ 234 ಎಸೆತಗಳಲ್ಲಿ 17 ಬೌಂಡರಿ, 1 ಸಿಕ್ಸರ್ ಸಹಿತ 158 ರನ್ ಗಳಿಸಿದರೆ, ಜೇಮೀ ಸ್ಮಿತ್ 207 ಎಸೆತಗಳಲ್ಲಿ 21 ಬೌಂಡರಿ, 4 ಸಿಕ್ಸರ್‌ಗಳ ಸಹಿತ ಅಜೇಯ 184 ರನ್ ಗಳಿಸಿದರು. ಅವರಿಬ್ಬರೂ ಸೇರಿ 368 ಎಸೆತಗಳಲ್ಲಿ 303 ರನ್ ಸೇರಿಸಿದರು.

ಸಿರಾಜ್, ಆಕಾಶ್‌ದೀಪ್ ಪರಾಕ್ರಮ

158 ರನ್ ಗಳಿಸಿದ್ದ ಹ್ಯಾರಿ ಬ್ರೂಕ್‌ರನ್ನು ಆಕಾಶ್ ದೀಪ್ ಬೌಲ್ಡ್ ಮಾಡುವ ಮೂಲಕ ಭಾರತಕ್ಕೆ ಪಂದ್ಯದಲ್ಲಿ ತಿರುವು ಕೊಟ್ಟರು. ಈ ವಿಕೆಟ್ ನಂತರ ಇಂಗ್ಲೆಂಡ್‌ನ ಉಳಿದ 4 ವಿಕೆಟ್‌ಗಳನ್ನು ಕೇವಲ 20 ರನ್‌ಗಳಾಗುಷ್ಟರಲ್ಲಿ ಕಳೆದುಕೊಂಡಿತು

ಸಿರಾಜ್ ಮಾರಕ ಬೌಲಿಂಗ್ ದಾಳಿಯ ಮುಂದೆ ಇಂಗ್ಲೆಂಡ್ ಬಾಲಂಗೋಚಿಗಳು ಕ್ರೀಸ್‌ನಲ್ಲ ನಿಲ್ಲಲು ವಿಫಲರಾದರು. ಕ್ರಿಸ್ ವೋಕ್ಸ್ 5ರನ್ ಗಳಿಸಿ ಆಕಾಶ್ ದೀಪ್‌ಗೆ 4ನೇ ಬಲಿಯಾದರೆ, ಕೊನೆಯ ಮೂವರು ಬ್ಯಾಟರ್‌ಗಳಾದ ಬ್ರೈಡನ್ ಕಾರ್ಸ್, ಜೋಶ್ ಟಂಗ್ ಹಾಗೂ ಶೋಯಬ್ ಬಷೀರ್ ಖಾತೆ ತೆರೆಯದೇ ಸಿರಾಜ್ ಬೌಲಿಂಗ್‌ನಲ್ಲಿ ಔಟ್ ಆದರು.

ಭಾರತದ ಪರವಾಗಿ ಮೊಹಮ್ಮದ್ ಸಿರಾಜ್ 70ಕ್ಕೆ 6 ವಿಕೆಟ್ ಪಡೆದರೆ, ಆಕಾಶ್ ದೀಪ್ 88ಕ್ಕೆ 4 ವಿಕೆಟ್ ಪಡೆದರು.

ಭಾರತೀಯ ಅಥ್ಲೆಟಿಕ್ಸ್ ಇತಿಹಾಸದಲ್ಲಿ ಹೊಸ ಅಧ್ಯಾಯ: ನೀರಜ್ ಚೋಪ್ರಾ

ನಗರದಲ್ಲಿ ಇಂದಿನಿಂದ ಎನ್ಸಿ ಜಾವೆಲಿನ್ ಟೂರ್ನಿ

ಬೆಂಗಳೂರು: ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಚೊಚ್ಚಲ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಟೂರ್ನಿಗೆ ಚಾಲನೆ ದೊರೆಯಲಿದೆ. ಭಾರತದಲ್ಲೂ ಜಾವೆಲಿನ್ ಕ್ರೀಡೆಗೆ ಪ್ರೋತ್ಸಾಹ ನೀಡುವ ಉದ್ದೇಶದೊಂದಿಗೆ ತಮ್ಮದೇ ಹೆಸರಿನ ಜಾವೆಲಿನ್ ಸ್ಪರ್ಧೆಯನ್ನು ನೀರಜ್ ಈ ಮೂಲಕ ಆರಂಭಿಸಿದ್ದಾರೆ. ಈ ಸ್ಪರ್ಧೆಯಲ್ಲಿ ಜಗತ್ತಿನ ಪ್ರಮುಖ ತಾರೆಗಳು ಭಾಗವಹಿಸಲಿದ್ದಾರೆ.

ಸ್ಪರ್ಧೆಗಳ ಬಗ್ಗೆ ಪ್ರತಿಕ್ರಿಯೆ ನೀಡಿರುವ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತ ನೀರಜ್ ಚೋಪ್ರಾ, 'ಈ ಸ್ಪರ್ಧೆಯು ಭಾರತೀಯ ಅಥ್ಲೆಟಿಕ್ಸ್ ಇತಿಹಾಸದಲ್ಲಿ ಹೊಸ ಅಧ್ಯಾಯದ ಆರಂಭ' ಎಂದು ಹೇಳಿದ್ದಾರೆ.

'ನಾನು ಕನಸಿನಲ್ಲಿ ಇದ್ದಂತೆ ಭಾಸವಾಗುತ್ತಿದೆ, ಭಾರತ ಹಾಗೂ ಭಾರತೀಯ ಕ್ರೀಡಾಪಟುಗಳಿಗೆ ಇಂತಹದೊಂದು ವೇದಿಕೆ ಒದಗಿಸಿರುವುದು ಅತ್ಯಂತ ಖುಷಿ ತಂದಿದೆ, ಇದು ಹೊಸ ಅಧ್ಯಾಯದ ಆರಂಭವಾಗಿದೆ' ಎಂದು ಹೇಳಿದ್ದಾರೆ.

'ಎಲ್ಲರಿಂದಲೂ ನನಗೆ ಬೆಂಬಲ ಸಿಗುತ್ತಿದೆ. ಕರ್ನಾಟಕ ಸರಕಾರ, ಕರ್ನಾಟಕ ಒಲಿಂಪಿಕ್ ಸಂಸ್ಥೆ, ವಿಶ್ವ ಅಥ್ಲೆಟಿಕ್ಸ್ ಹಾಗೂ ಪ್ರಾಯೋಜಕರು ನನ್ನನ್ನು ಬೆಂಬಲಿಸಿದ್ದಾರೆ. ಈ ಕ್ರೀಡಾಕೂಟವನ್ನು ಮುಂದಿನ ವರ್ಷಗಳಲ್ಲಿ ಇನ್ನಷ್ಟು ಉತ್ತಮಗೊಳಿಸ ಬಹುದು ಎಂದು ನಂಬಿದ್ದೇನೆ' ಎಂದು ತಿಳಿಸಿದ್ದಾರೆ.

ಅಮೆರಿಕ, ಯುರೋಪ್‌ನ ಪ್ರದೇಶಗಳಿಗೆ ಮಾತ್ರ ಇಂತಹ ಕ್ರೀಡೆಗಳು ಸೀಮಿತವಾಗಿದೆ. ಕ್ರೀಡಾಪಟುಗಳಿಗೆ ಅವ ಕಾಶ ಸಿಗಬೇಕು ಮತ್ತು ಅಭಿಮಾನಿಗಳು ಅದನ್ನು ನೋಡಬೇಕು, ಇದು ನಮ್ಮ ಕ್ರೀಡೆಯ ಬೆಳವಣಿಗೆಗೆ ಅಗತ್ಯವಾಗಿದೆ' ಎಂದಿದ್ದಾರೆ.

ಹಾಲಿ-ಮಾಜಿ ಚಾಂಪಿಯನ್‌ಗಳು ಭಾಗಿ

ಎರಡು ಬಾರಿಯ ವಿಶ್ವ ಚಾಂಪಿಯನ್ ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್, ರಿಯೊ ಒಲಿಂಪಿಕ್ಸ್ 2016ರ ಚಿನ್ನದ ಪದಕ ವಿಜೇತ ಜರ್ಮನಿಯ ಥಾಮಸ್ ರೋಹ್ಲರ್, 2015ರ ವಿಶ್ವ ಚಾಂಪಿಯನ್ ಮತ್ತು ರಿಯೊ ಒಲಿಂಪಿಕ್ಸ್ 2016ರ ಬೆಳ್ಳಿ ಪದಕ ವಿಜೇತ ಕೀನ್ಯಾದ ಜೂಲಿಯಸ್ ಯೆಗೊ, ಪ್ಯಾನ್ ಅಮೆರಿಕನ್ ಗೇಮ್ಸ್ ಚಾಂಪಿಯನ್ ಅಮೆರಿಕದ ಕರ್ಟಿಸ್ ಥಾಂಪ್ಸನ್, ಬ್ರೆಜಿಲ್‌ನ ಲೂಯಿಜ್ ಮೌರಿಸಿಯೊ ಡಿ.ಸಿಲ್ವಾ ಮತ್ತು ಶ್ರೀಲಂಕಾದ ರುಮೇಶ್ ತರಂಗ ಪತಿರಣಗೆ ಕೂಡಾ ಎನ್.ಸಿ. ಕ್ಲಾಸಿಕ್ ಜಾವೆಲಿನ್ ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದಾರೆ. ಏಷ್ಯನ್ ಕ್ರೀಡಾಕೂಟದ ಪದಕ ವಿಜೇತ ಕಿಶೋರ್ ಜೆನಾ, ಸಚಿನ್ ಯಾದವ್, ರೋಹಿತ್ ಯಾದವ್ ಮತ್ತು ಸಾಹಿಲ್ ಸಿಲ್ವಾಲ್ ಅವರು ನೀರಜ್ ಚೋಪ್ರಾರನ್ನು ಎದುರಿಸಲಿದ್ದಾರೆ.

ಲೆಜೆಂಡ್ಸ್ ಟೂರ್ನಿಗೆ ನಾಲ್ವರು ಕನ್ನಡಿಗರು

ಭಾರತಕ್ಕೆ ಯುವರಾಜ್ ಸಿಂಗ್ ನಾಯಕತ್ವ, ಪಾಕಿಸ್ತಾನ ಮೊದಲ ಎದುರಾಳಿ

ದೆಹಲಿ: ಎರಡನೇ ಆವೃತ್ತಿಯ ವಿಶ್ವ ಚಾಂಪಿಯನ್ಸ್ ಲೆಜೆಂಡ್ಸ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ಚಾಂಪಿಯನ್ಸ್ ತಂಡವನ್ನು ಯುವರಾಜ್ ಸಿಂಗ್ ಮುನ್ನಡೆಸಲಿದ್ದಾರೆ. ಜುಲೈ 18 ರಂದು ಈ ಟೂರ್ನಿ ಆರಂಭವಾಗಲಿದ್ದು, ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನ ಎಜ್‌ಬಾಸ್ಟನ್, ನಾರ್ಥ್‌ಹ್ಯಾಂಪ್ಟನ್‌ನ ಕೌಂಟಿ ಗ್ರೌಂಡ್, ಲೀಸೆಸ್ಟರ್‌ನ ಗ್ರೇಸ್ ರೋಡ್ ಹಾಗೂ ಲೀಡ್ಸ್ ಹೆಡಿಂಗ್ಲೆನಲ್ಲಿ ಪಂದ್ಯಗಳು ನಡೆಯಲಿವೆ. ಭಾರತ ಚಾಂಪಿಯನ್ಸ್ ತಂಡದಲ್ಲಿ ರಾಬಿನ್ ಉತ್ತಪ್ಪ, ಸ್ಟುವರ್ಟ್ ಬಿನ್ನಿ, ವಿನಯ್ ಕುಮಾರ್ ಹಾಗೂ ಅಭಿಮನ್ಯು ಮಿಥುನ್ ಸೇರಿ ನಾಲ್ವರು ಕನ್ನಡಿಗರು ಸ್ಥಾನ ಪಡೆದುಕೊಂಡಿದ್ದಾರೆ.

ಭಾರತ ಚಾಂಪಿಯನ್ಸ್ ತಂಡದ ಬ್ಯಾಟಿಂಗ್ ವಿಭಾಗದಲ್ಲಿ ಶಿಖರ್ ಧವನ್, ರಾಬಿನ್ ಉತ್ತಪ್ಪ, ಅಂಬಾಟಿ ರಾಯುಡು, ಯೂಸಫ್ ಪಠಾಣ್, ಗುರುಕೀರತ್ ಮಾನ್ ಮತ್ತು ಯುವರಾಜ್ ಸಿಂಗ್ ಕಾಣಿಸಿಕೊಳ್ಳಲಿದ್ದಾರೆ. ಇರ್ಫಾನ್ ಪಠಾಣ್ ಮತ್ತು ಸ್ಟುವರ್ಟ್ ಬಿನ್ನಿ ಆಲ್‌ರೌಂಡರ್‌ಗಳಾಗಿದ್ದರೆ, ಹರ್ಭಜನ್ ಸಿಂಗ್, ವಿನಯ್ ಕುಮಾರ್, ಸಿದ್ಧಾರ್ಥ್ ಕೌಲ್, ವರುಣ್ ಆ್ಯರನ್, ಅಭಿಮನ್ಯು ಮಿಥುನ್, ಪಿಯೂಷ್ ಚಾವ್ಲಾ ಮತ್ತು ಪವನ್ ನೇಗಿ ಬೌಲಿಂಗ್ ದಾಳಿಯ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ. ಈ ಟೂರ್ನಿಯ ಮೊದಲ ಆವೃತ್ತಿ ಯಶಸ್ವಿಯಾದ ಬಳಿಕ ಎರಡನೇ ಆವೃತ್ತಿಯು ಕೂಡ ತೀವ್ರ ಕುತೂಹಲವನ್ನು ಕೆರಳಿಸಿದೆ.

ಭಾರತಕ್ಕೆ ಮೊದಲ ಎದುರಾಳಿ ಪಾಕಿಸ್ತಾನ: ಜುಲೈ 20 ರಂದು ಭಾರತ ಚಾಂಪಿಯನ್ಸ್ ತಂಡ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ಚಾಂಪಿಯನ್ಸ್ ವಿರುದ್ಧ ಸೆಣಸುವ ಮೂಲಕ ಈ ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಆರಂಭಿಸಲಿದೆ. ಇದಾದ ಬಳಿಕ ಜುಲೈ 22 ರಂದು ದಕ್ಷಿಣ ಆಫ್ರಿಕಾ ಎದುರು ಕಾದಾಟ ನಡೆಸಲಿದೆ. ಜುಲೈ 26 ರಂದು ಆಸ್ಟ್ರೇಲಿಯಾ ಚಾಂಪಿಯನ್ಸ್ ಎದುರು ಯುವರಾಜ್ ಸಿಂಗ್ ಪಡೆ ಕಾದಾಟ ನಡೆಸಲಿದೆ. ಜುಲೈ 27 ಮತ್ತು ಜುಲೈ 29 ರಂದು ಕ್ರಮವಾಗಿ ಭಾರತ ತಂಡ ಇಂಗ್ಲೆಂಡ್ ಚಾಂಪಿಯನ್ಸ್ ಹಾಗೂ ವೆಸ್ಟ್ ಇಂಡೀಸ್ ಚಾಂಪಿಯನ್ಸ್ ವಿರುದ್ಧ ಸೆಣಸಲಿದೆ.

ಆರು ತಂಡಗಳ ಈ ಟೂರ್ನಿಯನ್ನು ರೌಂಡ್ ರಾಬಿನ್ ಮಾದರಿಯಲ್ಲಿ ಆಡಿಸಲಾಗುತ್ತದೆ. ಪಾಯಿಂಟ್ಸ್ ಟೇಬಲ್‌ನಲ್ಲಿ ಅಗ್ರ ನಾಲ್ಕು ತಂಡಗಳು ಸೆಮಿಫೈನಲ್ಸ್‌ಗೆ ಪ್ರವೇಶ ಮಾಡಲಿವೆ. ಹಾಲಿ ಚಾಂಪಿಯನ್ ಆಗುವ ಮೂಲಕ ಭಾರತ ತಂಡ ಈ ಟೂರ್ನಿಗೆ ಪ್ರವೇಶ ಮಾಡಲಿದೆ. ಮೊದಲನೇ ಆವೃತ್ತಿಯ ಟೂರ್ನಿಯ ಫೈನಲ್‌ನಲ್ಲಿ ಪಾಕಿಸ್ತಾನವನ್ನು ಮಣಿಸಿ ಭಾರತ ಚಾಂಪಿಯನ್ ಆಗಿತ್ತು.

ಬಾಂಗ್ಲಾ ಪ್ರವಾಸ ರದ್ದು ಸಂಭವ

ಢಾಕಾ: ಬಾಂಗ್ಲಾದೇಶದ ನಡುವೆ ಹೆಚ್ಚುತ್ತಿರುವ ರಾಜತಾಂತ್ರಿಕ ಉದ್ವಿಗ್ನತೆ ನಡುವೆ ಮುಂದಿನ ತಿಂಗಳು ನಡೆಯಬೇಕಿದ್ದ ಭಾರತ ಏಕದಿನ ಮತ್ತು ಟಿ-20 ತಂಡದ ಪ್ರವಾಸ ರದ್ದಾಗುವ ಸಾಧ್ಯತೆ ಇದೆ. ಭಾರತ ಆಗಸ್ಟ್ 17 ರಿಂದ 23 ರವರೆಗೆ ಮೂರು ಏಕದಿನ ಪಂದ್ಯಗಳನ್ನು ಆಡಬೇಕಿತ್ತು. ನಂತರ ಆಗಸ್ಟ್ 26 ರಿಂದ 31 ರವರೆಗೆ ಟಿ 20 ಪಂದ್ಯಗಳನ್ನು ಆಡಬೇಕಿತ್ತು.

ಬಿಸಿಸಿಐ ಮತ್ತು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಈ ಬಗ್ಗೆ ಅಧಿಕೃತ ದೃಢೀಕರಣ ನೀಡಿಲ್ಲವಾದರೂ, 3 ಏಕದಿನ ಮತ್ತು 3 ಟಿ20ಗಳನ್ನು ಒಳಗೊಂಡ 6 ಪಂದ್ಯಗಳ ಸರಣಿಯು ಯೋಜಿಸಿದಂತೆ ನಡೆಯುವುದು ಅನುಮಾನ ಎನ್ನಲಾಗಿದೆ. ಟೆಸ್ಟ್ ತಂಡ ಮತ್ತು ಟಿ-20ಗೆ ವಿದಾಯ ಹೇಳಿರುವ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಈ ಸರಣಿಯಲ್ಲಿ ಆಡಬೇಕಿತ್ತು. ಆದರೆ ಈಗ ಇವರ ಪುನರಾಗಮನ ಇನ್ನಷ್ಟು ವಿಳಂಬವಾಗುವ ಸಾಧ್ಯತೆ ಇದೆ.

ಕ್ರಿಕ್‌ಬಜ್ ವರದಿ ಪ್ರಕಾರ, ಬಾಂಗ್ಲಾ ಕ್ರಿಕೆಟ್ ಮಂಡಳಿಯು ತನ್ನ ಮಾಧ್ಯಮ ಹಕ್ಕುಗಳ ಟೆಂಡರ್ ಅನ್ನು ಸದ್ದಿಲ್ಲದೆ ನಿಲ್ಲಿಸಿದೆ. ಈ ಟೆಂಡರ್ 2025-2027ರ ಅವಧಿಯ ಪಂದ್ಯಗಳ ಪ್ರಸಾರ ಹಕ್ಕನ್ನು ಒಳಗೊಂಡಿತ್ತು. 'ಭಾರತದ ಸರಣಿ ಇಲ್ಲ ಎಂದು ಅವರು ನಮಗೆ ತಿಳಿಸಿದ್ದಾರೆ. ಇನ್ವಿಟೇಷನ್ ಟು ಟೆಂಡರ್ ಘೋಷಿಸಿದ ನಂತರ, ಅವರು ಐಟಿಟಿಯನ್ನು ಒದಗಿಸಿಲ್ಲ. ಅವರು ಇದೀಗ ಪಾಕಿಸ್ತಾನ ಸರಣಿಗೆ ಮಾತ್ರ ಮಾರಾಟ ಮಾಡುತ್ತಿದ್ದಾರೆ' ಎಂದು ಭಾರತೀಯ ಪ್ರಸಾರಕರೊಬ್ಬರು ಕ್ರಿಕ್‌ಬಜ್‌ಗೆ ತಿಳಿಸಿದ್ದಾರೆ. ಒಂದು ವೇಳೆ ಭಾರತ ತಂಡದ ಬಾಂಗ್ಲಾದೇಶ ಪ್ರವಾಸ ರದ್ದಾದರೆ, ಎರಡೂ ತಂಡಗಳಿಗೆ ಭಾರಿ ಹಿನ್ನಡೆಯಾಗಲಿದೆ. ಜನವರಿ-ಫೆಬ್ರವರಿಯಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ತಂಡ ಕೊನೆಯ ಬಾರಿ ಟಿ20ಐ ಸರಣಿಯನ್ನು ಆಡಿತ್ತು. ಅಂದಿನಿಂದ ಇಲ್ಲಿಯವರೆಗೂ ಭಾರತ ವೈಟ್ ಬಾಲ್ ಸರಣಿಯನ್ನು ಇನ್ನೂ ಆಡಿಲ್ಲ.

ವಿಟಾಕೀಸ್



ಕುಣಿದು ಕುಪ್ಪಳಿಸಿದ ಶ್ರೀಲೀಲಾ

ಕಿರೀಟಿ ಚಿತ್ರರಂಗದಲ್ಲಿ ಛಾಪು ಮೂಡಿಸಲು ಸಜ್ಜಾಗಿದ್ದು, ಜೂನಿಯರ್ ಚಿತ್ರದ ಮೂಲಕ ತೆರೆಗೆ ಭರ್ಜರಿಯಾಗಿ ಎಂಟ್ರಿಕೊಡಲು ಸಿದ್ಧವಾಗಿದ್ದಾರೆ. ಟೀಸರ್‌ನಲ್ಲಿ ಸದ್ದು ಮಾಡುತ್ತಿರುವ ಜೂನಿಯರ್ ಹಾಡಿನ ಮೂಲಕವೂ ಸಂಗೀತ ಪ್ರಿಯರ ಮನಗೆದ್ದಿದೆ. ಇದೀಗ ಜೂನಿಯರ್ ಸಿನಿಮಾದ ಎರಡನೆ ಹಾಡು ಬಿಡುಗಡೆಯಾಗಿದ್ದು, ಮನಸೆಳೆಯುತ್ತಿದೆ. ವೈರಲ್ ವಯ್ಯಾರಿ.. ಎಂಬ ಹಾಡು ಇದಾಗಿದ್ದು, ಪವನ್ ಭಟ್ ಸಾಹಿತ್ಯದ ಈ ಗೀತೆಗೆ ದೇವಿಶ್ರೀ ಪ್ರಸಾದ್ ಸಂಗೀತ ಸಂಯೋಜಿಸಿದ್ದಾರೆ. ಹರಿಪ್ರಿಯಾ ಮತ್ತು ದೀಪಕ್ ದನಿಯಾಗಿದ್ದಾರೆ. ಈ ಹಾಡಿನಲ್ಲಿ ಕಿರೀಟಿ ಹಾಗೂ ಶ್ರೀಲೀಲಾ ಭರ್ಜರಿಯಾಗಿ ಹೆಜ್ಜೆ ಹಾಕಿದ್ದಾರೆ. ಕ್ರೇಜಿಸ್ಟಾರ್ ರವಿಚಂದ್ರನ್, ಜೆನಿಲಿಯಾ ಡಿಸೋಜಾ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಪುನೀತ್ ರಾಜ್‌ಕುಮಾರ್ ನಿರ್ಮಿಸಿದ್ದ ಮಾಯಾಬಜಾರ್ ಸಿನಿಮಾದ ನಿರ್ದೇಶಕ ರಾಧಾಕೃಷ್ಣ ರೆಡ್ಡಿ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಜೂನಿಯರ್ ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ನಿರ್ಮಾಣವಾಗಿದ್ದು ಜುಲೈ 18 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.

ರೆಟ್ರೋ ಲುಕ್‌ನಲ್ಲಿ ಡಾಲಿ ಧನಂಜಯ

ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್ ಹಾಗೂ ಡಾಲಿ ಧನಂಜಯ ಮತ್ತೆ ಒಂದಾಗಿದ್ದಾರೆ. ಈ ಇಬ್ಬರ ಕಾಂಬಿನೇಷನ್‌ನಲ್ಲಿ 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರ ಸೆಟ್ಟೇರಿದ್ದು ಶೂಟಿಂಗ್ ಹೊರಡಲು ಅಣಿಯಾಗಿದೆ. ಸದ್ಯ ಚಿತ್ರತಂಡ ಡಾಲಿ ಧನಂಜಯ ಅವರ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆ ಮಾಡಿದೆ. ಈ ಹಿಂದಿನ ಸಿನಿಮಾಗಳಲ್ಲಿ ರಗಡ್ ಲುಕ್‌ನಲ್ಲಿ ಮಾಸ್ ಆಗಿ ಮಿಂಚುತ್ತಿದ್ದ ಧನಂಜಯ, 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರದಲ್ಲಿ ಹಿಂದೆಂದೂ ಕಾಣದ ರೀತಿಯಲ್ಲಿ ಕಂಗೊಳಿಸಿರುವುದು ವಿಶೇಷ. ಡಾಲಿ ರೆಟ್ರೋ ಲುಕ್‌ನಲ್ಲಿ ಪ್ರತ್ಯಕ್ಷರಾಗಿದ್ದಾರೆ. ಒಂದು ಪೋಸ್ಟರ್‌ನಲ್ಲಿ ಕಾರ್ ಮುಂದೆ ನಿಂತು ಗನ್ ಹಿಡಿದಿರುವ ಡಾಲಿ, ಮತ್ತೊಂದು ಪೋಸ್ಟರ್‌ನಲ್ಲಿ ಹೊಸ ಹೇರ್‌ಸ್ಟೈಲ್‌ನಲ್ಲಿ ಕಂಗೊಳಿಸಿದ್ದಾರೆ. 666 ಆಪರೇಷನ್ ಡ್ರೀಮ್ ಥಿಯೇಟರ್‌ನಲ್ಲಿ ಶಿವರಾಜ್ ಕುಮಾರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಅವರ ಲುಕ್ ಹೇಗಿರಲಿದೆ ಎಂಬುದನ್ನು ತಿಳಿಯಲು ಸಿನಿಪ್ರಿಯರು ಕಾತರರಾಗಿದ್ದಾರೆ. 666 ಆಪರೇಷನ್ ಡ್ರೀಮ್ ಥಿಯೇಟರ್ ಸಿನಿಮಾವನ್ನು ಹೇಮಂತ್.ಎಂ. ರಾವ್ ನಿರ್ದೇಶಿಸುತ್ತಿದ್ದು, ವೈಶಾಕ್ ಫಿಲಂಸ್ ಬ್ಯಾನರ್‌ನಲ್ಲಿ ಡಾ.ವೈಶಾಕ್.ಜೆ.ಗೌಡ ನಿರ್ಮಾಣ ಮಾಡುತ್ತಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಜುಲೈನಲ್ಲಿ ಚಿತ್ರೀಕರಣ ಆರಂಭವಾಗಲಿದೆ.

ಉತ್ಸಾಹಿ ತಂಡದೊಂದಿಗೆ ಕೆಲಸ ಮಾಡುತ್ತಿರುವುದು ಸಂತಸ ತಂದಿದೆ. ಹೇಮಂತ್.ಎಂ.ರಾವ್ ಕ್ರಿಯಾ ಶೀಲ ನಿರ್ದೇಶಕರು, ಅವರು ಈ ಚಿತ್ರವನ್ನು ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಿದ್ದಾರೆ. ವಿಭಿನ್ನ ಕಥೆಯ ಈ ಸಿನಿಮಾ ಸಿನಿಪ್ರಿಯರಲ್ಲಿ ಅಚ್ಚರಿಗಳನ್ನು ಮೂಡಿಸುತ್ತಾ ಸಾಗುತ್ತದೆ.

-ಡಾಲಿ ಧನಂಜಯ

ಫ್ಯಾಷನ್ ಜಗತ್ತಿನ ಕರಾಳ ಮುಖ

ಬಣ್ಣದ ಜಗತ್ತೇ ಹಾಗೇ ಎಲ್ಲರನ್ನು ಬೇಗ ಸೆಳೆಯುತ್ತದೆ. ಫ್ಯಾಷನ್ ಜಗತ್ತಿನ ಒಳಗೆ ಹೊಕ್ಕರೆ ಅಲ್ಲಿಮದ ಬಿಡಿಸಿಕೊಂಡು ಬರುವುದು ಸಾಧ್ಯವೇ ಇಲ್ಲ, ಅಲ್ಲಿ ಯಾವೆಲ್ಲಾ ಸಮಸ್ಯೆಗಳು ಎದುರಾಗುತ್ತವೆ ಎಂಬುದನ್ನು ತಪಸ್ಸಿ ಚಿತ್ರದಲ್ಲಿ ಹೇಳಲಾಗಿದೆ. ಸೌಂದರ್ಯದ ಖನಿಯಾಗಿದ್ದ ನಾಯಕಿ ತಪಸ್ಸಿಗೆ ಸಿನಿಮಾರಂದ ಜತೆಗೆ ಫ್ಯಾಷನ್ ಜಗತ್ತಿನಲ್ಲಿ ಮಿಂಚಬೇಕು ಎಂಬ ಆಸೆಯಾಗುತ್ತದೆ. ಹಾಗಾಗಿ ಬಹುಬೇಗ ಫ್ಯಾಷನ್ ಜಗತ್ತಿಗೆ ಮಾರು ಹೋಗುತ್ತಾಳೆ. ಹುಡುಗಾಟದ ಹುಡುಗಿ, ದುರ್ಬಲ ಮನಸ್ಥಿತಿಯ ಆಕೆ ದುಶ್ಚಟಗಳ ದಾಸಿಯಾಗುತ್ತಾಳೆ, ಆಕೆಯ ದುಶ್ಚಟಗಳೆ ಆಕೆಯನ್ನು ಅಡ್ಡ ದಾರಿಗೆ ತಳ್ಳುತ್ತವೆ. ಬಣ್ಣದ ಲೋಕದ ಬಲೆ ಆಕೆಯನ್ನು ಹೆಣೆದುಕೊಳ್ಳುತ್ತದೆ. ಆ ಸಂಕೋಲೆಯಿಂದ ಹೊರಗೆ ಬರಲು ಆಕೆ ಎಷ್ಟೇ ಪಾಡು ಪಟ್ಟರು ಸಾಧ್ಯವಾಗುವುದಿಲ್ಲ. ಆಗ ಇವರ ನೆರವಿಗೆ ಧಾವಿಸುವುದೇ ವೈದ್ಯನಾಥ್. ಮನೋವೈದ್ಯ ವೈದ್ಯನಾಥ್ ಕರಾಳ ಸಂಕೋಲೆಯಿಂದ ತಪಸ್ಸಿಯನ್ನು ಹೇಗೆ ಪಾರು ಮಾಡುತ್ತಾನೆ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ತಪಸ್ಸಿ ಮಹಿಳಾ ಪ್ರಧಾನ ಕಥೆಯನ್ನು ಒಳಗೊಂಡಿದ್ದು ಅದನ್ನು ಕಮರ್ಷಿಯಲ್ ಸ್ಪರ್ಶ ನೀಡಲಾಗಿದೆ. ಫ್ಯಾಷನ್ ಲೋಕದಲ್ಲಿ ಯುವತಿಯರಿಗೆ ಎದುರಾಗುತ್ತಿರುವ ಸಮಸ್ಯೆಗಳ ಸುತ್ತ ಕಥೆ ಹೆಣೆದು ಅದನ್ನು ಎಲ್ಲರಿಗೂ ಮನಮುಟ್ಟುವಂತೆ ಕಟ್ಟಿಕೊಡುವಲ್ಲಿ ನಿರ್ದೇಶಕ ಸ್ಪೆನ್ಸರ್ ಮ್ಯಾಥ್ಯುಸ್ ಯಶಸ್ವಿಯಾಗಿದ್ದಾರೆ.

ತಪಸ್ಸಿಯಾಗಿ ಅಮೆಯ್ರಾ, ಗೋಸ್ವಾಮಿ ಮೆಚ್ಚುವ ಅಭಿನಯ ತೋರಿದ್ದಾರೆ, ಅವರು ತೆರೆಯಲ್ಲಿ ಪ್ರತ್ಯಕ್ಷವಾದಾಗಲೆಲ್ಲ ಗಮನಸೆಳೆಯುತ್ತಾರೆ. ಮನೋವೈದ್ಯ ವೈದ್ಯಾನಾಥನಾಗಿ ರವಿಮಾಮ ಇಷ್ಟವಾಗುತ್ತಾರೆ. ಉಳಿದಂತೆ ಅನುಷಾ, ಸಚಿನ್ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಚಿತ್ರದ ಹಿನ್ನೆಲೆ ಸಂಗೀತ, ಛಾಯಾಗ್ರಹಣಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. ತಪಸ್ಸಿ ಚಿತ್ರವನ್ನು ನೋಡುತ್ತಿದ್ದರೆ ಫ್ಯಾನ್ ಲೋಕದ ವಿಸ್ತಾರ, ಅಲ್ಲಿನ ಸವಾಲುಗಳು ತಿಳಿಯುತ್ತಾ ಹೋಗುತ್ತವೆ. ಅಗತ್ಯವಾದ ಸಂದೇಶವನ್ನು ಹೊತ್ತು ಬಂದಿರುವ ತಪಸ್ಸಿಯನ್ನು ಒಮ್ಮೆಯಾದರೂ ನೋಡಲೇಬೇಕು.

ಚಿತ್ರ: ತಪಸ್ಸಿ
ನಿರ್ದೇಶನ: ಸ್ಪೆನ್ಸರ್ ಮ್ಯಾಥ್ಯುಸ್
ನಿರ್ಮಾಣ: ಸ್ಪೆನ್ಸರ್ ಮ್ಯಾಥ್ಯುಸ್
ತಾರಾಗಣ: ಅಮೆಯ್ರಾ, ಗೋಸ್ವಾಮಿ, ರವಿಚಂದ್ರನ್, ಅನುಷಾ ಮುಂತಾದವರು
ರೇಟಿಂಗ್: ★★★

ಸಂಘರ್ಷಕ್ಕೆ ಕಾರಣವಾದ ಮಾಯಾವಿ

ಕೆಲವರು ಸ್ವಾರ್ಥಕ್ಕಾಗಿ ಸಮಾಜದಲ್ಲಿ ಶಾಂತಿ ಕದಡುವ, ಜಾತಿ, ಧರ್ಮಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಾರೆ. ಈ ವಾರ ತೆರೆಕಂಡಿರುವ ಕಪಟ ನಾಟಕ ಸೂತ್ರಧಾರಿ ಚಿತ್ರ ಇದೇ ಅಂಶಗಳನ್ನು ಹೊತ್ತುಬಂದಿದೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಹಲವು ವಿಷಯವನ್ನು ಧ್ವನಿಸುತ್ತಾ ಸಾಗುತ್ತದೆ.

ನಾಯಕ ಶಾಲಾ ಶಿಕ್ಷಕ ರಾಯಭಾಗಕ್ಕೆ ವಧು ನೋಡಲು ತಮ್ಮ ಸ್ನೇಹಿತನೊಂದಿಗೆ ತೆರಳುತ್ತಿರುತ್ತಾರೆ. ಇದೇ ಸಂದರ್ಭದಲ್ಲಿ ಐತಿಹಾಸಿಕ ಹಿನ್ನೆಲೆಯ ವರ್ಷಕ್ಕೆ ಎರಡೇ ದಿನ ಬಾಗಿಲು ತೆರೆದು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ದೇವಸ್ಥಾನದ ಜಾತ್ರೆ ನಡೆಯುತ್ತಿರುತ್ತದೆ. ಅಲ್ಲಿಗೆ ಶಿಕ್ಷಕರು ತಮ್ಮ ಸ್ನೇಹಿತನೊಂದಿಗೆ ಬರುತ್ತಾರೆ, ಇಲ್ಲಿಂದ ಚಿತ್ರ ತಿರುವು ಪಡೆದುಕೊಳ್ಳುತ್ತದೆ. ಕೆಲವರು ಧರ್ಮದ ಹೆಸರಿನಲ್ಲಿ ಸಮಾಜದಲ್ಲಿ ಶಾಂತಿ ಕದಡುವ ಕಾರ್ಯಕ್ಕೆ ಮುಂದಾಗುತ್ತಾರೆ. ಇದರಿಂದ ಆ ಶಿಕ್ಷಕರು ಮತ್ತು ತನ್ನ ಜತೆಗೆ ಬಂದಿದ್ದ ಅನ್ಯ ಧರ್ಮದ ಸ್ನೇಹಿತ ಇಬ್ಬರು ಹೇಗೆ ಸಂಕಷ್ಟದಲ್ಲಿ ಸಿಲುಕಿಕೊಳ್ಳುತ್ತಾರೆ ಎಂಬುದನ್ನು ಚಿತ್ರ ನೋಡಿಯೇ ತಿಳಿಯಬೇಕು.

ಚಿತ್ರ: ಕಪಟ ನಾಟಕ ಸೂತ್ರಧಾರಿ
ನಿರ್ದೇಶನ: ಧೀರಜ್
ನಿರ್ಮಾಣ: ವಿಎಸ್‌ಕೆ ಸಿನಿಮಾಸ್
ತಾರಾಗಣ: ಅಭಿರಾಮ ಅರ್ಜುನ, ಹರ್ಷಿತಾ, ಗ್ರೀಷ್ಮಾ ಮುಂತಾದವರು.
ರೇಟಿಂಗ್: ★★★

ನಿರ್ದೇಶಕ ಧೀರಜ್ ಇಂದು ಸಮಾಜದಲ್ಲಿ ನಡೆಯುತ್ತಿರುವ ಸೂಕ್ಷ್ಮ ವಿಚಾರಗಳನ್ನು ಆಯ್ದುಕೊಂಡು ಕಥೆ ಹೆಣೆದು ತೆರೆಗೆ ತಂದಿದ್ದಾರೆ. ಸಮಾಜದಲ್ಲಿ ನಡೆಯುತ್ತಿರುವ ಧರ್ಮ ಸಂಘರ್ಷ, ಅದರ ಹಿಂದೆ ಇರುವವರ ಅಸಲಿ ಮುಖ, ಬಲಿಯಾಗುವ ಅಮಾಯಕರು, ಸತ್ಯ ಹೇಳುವವರನ್ನು ದೂರ ತಳ್ಳುವ ಮನಸ್ಥಿತಿ... ಹೀಗೆ ಹಲವು ಅಂಶಗಳು ಚಿತ್ರದಲ್ಲಿ ಅಡಕವಾಗಿವೆ. ಹಾಡು, ಫೈಟ್‌ಗಿಂತ ಇಲ್ಲಿ ಕಥೆಯೇ ಮುಖ್ಯವಾಗಿದ್ದು ಸಿನಿಪ್ರಿಯರನ್ನು ಸೆಳೆಯುತ್ತದೆ, ನೈಜತೆಗೆ ಒರೆ ಹಚ್ಚುವಂತೆ ಮಾಡುತ್ತದೆ. ಅಭಿರಾಮ ಅರ್ಜುನ ಮುಖ್ಯ ಪಾತ್ರದಲ್ಲಿ ನಟಿಸಿದ್ದು ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಉಳಿದಂತೆ ಗ್ರೀಷ್ಮಾ, ಹರ್ಷಿತಾ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಒಟ್ಟಾರೆ ಕಪಟ ನಾಟಕ ಸೂತ್ರಧಾರಿ ಮನೆಮಂದಿಯೆಲ್ಲಾ ಕುಳಿತು ನೋಡುವ ಸಿನಿಮಾವಾಗಿದೆ.